ಮಂಗಳೂರು
ಬುಧವಾರ, 3 ಜೂನ್ 2026
ಸಂಪುಟ 48, ಸಂಚಿಕೆ 76 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕಾಶ್ಮೀರ ಕುರಿತ ಪಾಕ್, ಇಯು ಹೇಳಿಕೆಗೆ ಕಿಡಿ | 02
ಪರಿಷ್ಕೃತ ವಲಸೆ ನೀತಿ ಜಾರಿಗೆ ಅಧಿಸೂಚನೆ | 02
ಸೇನೆಗೆ ದೇಸಿ ದಿವ್ಯಾಸ್ತ್ರದ ದಿವ್ಯಶಕ್ತಿ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ದಾನವಿತ್ತವನ ಪುಣ್ಯಶರೀರವೂ, ಐಶ್ವರ್ಯವೂ ಹಾಳಾಗುವುದಿಲ್ಲ.

▲ ಲೋಕೋಕ್ತಿ

ದೇಹ ದಹನದವರೆಗಿನ ಕ್ರಿಯೆಗಳು ಮತ್ತು ಅವುಗಳ ವೈಶಿಷ್ಟ್ಯ

ಪದಸಂಚಲನ

◆ ಡಾ. ವಿಶ್ವನಾಥ ಸುಂಕಸಾಳ

◆ ಪುಟ ೬

ಕಿರುಸುದ್ದಿ

ಮಹಾರಾಷ್ಟ್ರದಲ್ಲಿ ರೈತರ ₹2 ಲಕ್ಷ ಸಾಲ ಮನ್ನಾ

◆ **ಮುಂಬೈ:** ರೈತರ 2 ಲಕ್ಷ ರೂ.ವರೆಗಿನ ಸಾಲವನ್ನು ಸಂಪೂರ್ಣ ಮನ್ನಾ ಮಾಡಲು ಮಹಾರಾಷ್ಟ್ರದ ಬಿಜೆಪಿ ಶಿವಸೇನೆ (ಶಿಂದೆ) ಸರ್ಕಾರ ನಿರ್ಧರಿಸಿದೆ. ಇದರಿಂದ ಸುಮಾರು 56 ಲಕ್ಷ ರೈತರಿಗೆ ಲಾಭವಾಗಲಿದೆ. ರೈತರಿಗೆ ಮಹತ್ವದ ನೆರವು ನೀಡುವ ಉದ್ದೇಶದಿಂದ ಪುಣ್ಯಶ್ಲೋಕ ಅಹಲ್ಯಾದೇವಿ ಹೋಳ್ಕರ್ ಶೇತ್ಕರಿ ಕರ್ಜಮುಕ್ತಿ ಯೋಜನೆಗೆ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

◆ ಪುಟ 0೭

ನಾಯಕರ ವಾಗ್ವಾದ: ದಾಳಿ ಪುನರಾರಂಭ!

◆ **ವಾಷಿಂಗ್ಟನ್:** ಇಸ್ರೇಲ್ ಪ್ರಧಾನಿಯೊಂದಿಗೆ ಅಮೆರಿಕ ಅಧ್ಯಕ್ಷರ ದೂರವಾಣಿ ಕರೆ ವಾಗ್ವಾದದ ಬಳಿಕ ದಕ್ಷಿಣ ಲೆಬನಾನ್ ಮೇಲಿನ ದಾಳಿಯನ್ನು ಇಸ್ರೇಲ್ ಮಂಗಳವಾರ ಪುನರಾರಂಭಿಸಿದೆ. ದಕ್ಷಿಣ ಲೆಬನಾನ್ ಮೇಲಿನ ಇಸ್ರೇಲ್ ದಾಳಿಯಿಂದ ಅಮೆರಿಕ ಜತೆಗಿನ ಶಾಂತಿ ಮಾತುಕತೆಯನ್ನು ಇರಾನ್ ಸ್ಥಗಿತಗೊಳಿಸಿದ ಹಿನ್ನೆಲೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಅಧ್ಯಕ್ಷ ಟ್ರಂಪ್ ಕರೆ ಮಾಡಿದ್ದರು.

◆ ಪುಟ 0೭

ಮನೆ ಖರೀದಿದಾರರಿಗೆ ವಂಚನೆ; ನಾಲ್ವರ ಸೆರೆ

◆ ಪುಟ 0೭

ಕಾಂಗೋದಲ್ಲಿ 321 ಇಬೋಲಾ ಕೇಸ್ ದೃಢ

◆ ಪುಟ 0೭

3 ಮದರಸಾಗಳಿಗೆ ಬೀಗ, ಸಂತ್ರಸ್ತ ಕುಟುಂಬಕ್ಕೆ ನೆರವು

◆ ಪುಟ 0೭



ರೈತರ ಹಿತಕ್ಕಾಗಿ ಸಮಗ್ರ ರಾಷ್ಟ್ರೀಯ ಅಭಿಯಾನ

◆ ಪುಟ 0೭

ಸುದ್ದಿ ಸಮಗ್ರ

ಲೋಕಭವನದಲ್ಲಿಂದು ಸಂಜೆ 4ಕ್ಕೆ ಸಮಾರಂಭ | 25ನೇ ಮುಖ್ಯಮಂತ್ರಿಯಾಗಿ ಡಿಕೆಶಿ ಪ್ರಮಾಣವಚನ | ರಾಹುಲ್ ಸೇರಿ ಹಲವು ಸಿಎಂ, ಸ್ವಾಮೀಜಿಗಳು ಭಾಗಿ

ಶಿವಕುಮಾರ್ ಎಂಬ ನಾನು...

◆ **ಬೆಂಗಳೂರು:** ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ನಾಯಕ ಡಿ.ಕೆ. ಶಿವಕುಮಾರ್ ಅವರು ಬುಧವಾರ (ಜೂ.3) ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಈ ಮೂಲಕ ಡಿಕೆಶಿ ತಮ್ಮ ದಶಕಗಳ ಕನಸನ್ನು ನನಸಾಗಿಸಿಕೊಳ್ಳಲಿದ್ದಾರೆ.

ಸಂಜೆ 4.05ಕ್ಕೆ ಲೋಕಭವನದ ಗಾಜಿನ ಮನೆಯಲ್ಲಿ ನಡೆಯುವ ಈ ಪದಗ್ರಹಣ ಸಮಾರಂಭವು ಸರಳವಾಗಿರಲಿದೆ. ಈ ಬಾರಿ ಯಾವುದೇ ಆಡಂಬರವಿಲ್ಲದೆ, ಸರಳತೆಗೆ ಒತ್ತು ನೀಡಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕಾರ್ಯಕ್ರಮಕ್ಕೆ ಆಗಮಿಸುವ ಅತಿಥಿಗಳಿಗೆ ಮೂರು ಬಗೆಯ ಪಾಸ್‌ಗಳನ್ನು ವಿತರಿಸುವ ವ್ಯವಸ್ಥೆ ಮಾಡಲಾಗಿದೆ. ಅತಿ ಗಣ್ಯರು, ಗಣ್ಯರು ಮತ್ತು ಸಾಮಾನ್ಯ ಅತಿಥಿಗಳಿಗೆ ಪ್ರತ್ಯೇಕ ಆಸನ ವ್ಯವಸ್ಥೆ ರೂಪಿಸಲಾಗಿದೆ. ಅತಿಥಿಗಳು ಮಧ್ಯಾಹ್ನ 2 ಗಂಟೆ ಒಳಗಾಗಿ ಲೋಕಭವನಕ್ಕೆ ಆಗಮಿಸುವಂತೆ ಸೂಚಿಸಲಾಗಿದೆ.



ಪ್ರಮಾಣವಚನಕ್ಕೆ ಗಣ್ಯರ ದಂಡು: ಪ್ರಮಾಣವಚನ ಸ್ವೀಕಾರ ಸಮಾರಂಭದ ಸಿದ್ಧತೆ ಪೂರ್ಣಗೊಂಡಿದ್ದು, ಸರಳವಾಗಿ ನಡೆಯುವ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಹಂಗಾಮಿ ಸಿಎಂ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ, ತೆಲಂಗಾಣ ಸಿಎಂ ರೇವಂತ ರೆಡ್ಡಿ ಸೇರಿದಂತೆ ಕಾಂಗ್ರೆಸ್ ಅಧಿಕಾರದಲ್ಲಿ ಇರುವ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಇಂಡಿಯಾ ಒಕ್ಕೂಟದ ನಾಯಕರು ಭಾಗವಹಿಸಲಿದ್ದು ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ.

ಸ್ವಾಮೀಜಿಗಳು ಭಾಗಿ: ಸಮಾರಂಭದಲ್ಲಿ ಸ್ವಾಮೀಜಿಗಳು, ಸಿನಿಮಾ ತಾರೆಯರು, ಶಾಸಕರು, ಮಾಜಿ ಸಚಿವರು, ಹಿರಿಯ ರಾಜಕೀಯ ನಾಯಕರು ಸೇರಿದಂತೆ ಅನೇಕ ಗಣ್ಯರು ಭಾಗವಹಿಸುವ ನಿರೀಕ್ಷೆಯಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಾಗೂ ಮಾಜಿ ಸಂಸದ ಡಿ.ಕೆ.ಸುರೇಶ್ ಅವರು ಕಾರ್ಯಕ್ರಮದ ಸಿದ್ಧತೆಗಳನ್ನು ವೀಕ್ಷಿಸಿದ್ದಾರೆ.

➡ಪುಟ ೪



ಸಿಎಂ ಕಚೇರಿ ವಾಸ್ತು ಪರಿಶೀಲನೆ

ಡಿ.ಕೆ ಶಿವಕುಮಾರ್ ಅವರ ಜ್ಯೋತಿಷಿ ಹಾಗೂ ವಾಸ್ತು ತಜ್ಞ ವಿ.ವಿ.ಆರಾಧ್ಯ ಗುರೂಜಿ ಅವರು ಮಂಗಳವಾರ ವಿಧಾನಸೌಧದ ಮುಖ್ಯಮಂತ್ರಿ ಕಚೇರಿಗೆ ಭೇಟಿ ನೀಡಿ ಸುಮಾರು ಅರ್ಧ ಗಂಟೆ ಕಾಲ ವಾಸ್ತು ಪರಿಶೀಲನೆ ನಡೆಸಿದರು. ಆಸನ ವ್ಯವಸ್ಥೆ, ಸಿಎಂ ಕೊಠಡಿಯ ಉಪ ಕೋಣೆ, ಶೌಚಗೃಹ ಹಾಗೂ ವಿಶ್ರಾಂತಿ ಕೋಣೆ ದಿಕ್ಕು ಹಾಗೂ ಸ್ಥಳ ಬದಲಾವಣೆಯ ಬಗ್ಗೆ ವಾಸ್ತುಶಾಸ್ತ್ರಜ್ಞರು ಪರಿಶೀಲಿಸಿದರು. ಸಿದ್ದರಾಮಯ್ಯ ಸಿಎಂ ಆಗಿದ್ದಾಗ ಕುರ್ಚಿ, ಟೇಬಲ್ ಪೂರ್ವ ದಿಕ್ಕಿಗೆ ಇತ್ತು. ಅದನ್ನು ಬದಲಾಯಿಸುವ ಬಗ್ಗೆ ಪರಿಶೀಲನೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಬಗ್ಗೆ ಮಾಧ್ಯಮಗಳ ಜತೆ ಮಾತನಾಡಿದ ಜ್ಯೋತಿಷಿ ಆರಾಧ್ಯ ಅವರು, ಸಿಎಂ ಕಚೇರಿಯಲ್ಲಿ ಕೆಲವು ವಾಸ್ತು ಪ್ರಕಾರ ಬದಲಾವಣೆ ಮಾಡಲು ಹೇಳಿದ್ದೇನೆ ಎಂದು ತಿಳಿಸಿದರು.

ಕಾಂಗ್ರೆಸ್ ಕಚೇರಿ ಮರು ನಿರ್ಮಾಣಕ್ಕೆ ಶಂಕು

ಬುಧವಾರ ಸಂಜೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಡಿ.ಕೆ. ಶಿವಕುಮಾರ್ ಅವರು ನಂತರ ರೇಸ್ ಕೋರ್ಸ್ ರಸ್ತೆಯಲ್ಲಿ ಕಾಂಗ್ರೆಸ್ ಹಳೇ ಕಟ್ಟಡದ ಜಾಗದಲ್ಲಿ ಮರುನಿರ್ಮಾಣ ಆಗಲಿರುವ ಕಾಂಗ್ರೆಸ್ ಭವನದ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಅಧಿಕಾರಿ, ಸಿಬ್ಬಂದಿಗೆ ಮಧ್ಯಾಹ್ನ ರಜೆ

ಸಂಜೆ 4.05 ಗಂಟೆಗೆ ಕರ್ನಾಟಕ ಲೋಕಭವನದಲ್ಲಿ ಪ್ರಮಾಣ ವಚನ ಸಮಾರಂಭ ನಡೆಯಲಿರುವ ಹಿನ್ನಲೆಯಲ್ಲಿ ಲೋಕಭವನ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ಜನಸಂದಣಿ ಸೇರುವ ಹಾಗೂ ವಾಹನ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇರುವುದರಿಂದ ಭದ್ರತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ವಿಧಾನಸೌಧ, ವಿಕಾಸಸೌಧ ಹಾಗೂ ಬಹುಮಹಡಿಗಳ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ, ಸಿಬ್ಬಂದಿಗೆ ಬುಧವಾರ ಮಧ್ಯಾಹ್ನದ ಬಳಿಕ ರಜೆ ಘೋಷಿಸಲಾಗಿದೆ.

ಸಂಪುಟ ರಚನೆಗೆ ಕಸರತ್ತು



◆ **ಹೊಸದಿಲ್ಲಿ:** ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಮೊದಲ ಹಂತದ ಸಂಪುಟದಲ್ಲಿ 10 ರಿಂದ 12 ಮಂದಿಗೆ ಅವಕಾಶ ಸಿಗುವುದು ಖಾತ್ರಿಯಾಗಿದ್ದು, ಸೋಮವಾರ ತಡರಾತ್ರಿಯಿಂದ ಮಂಗಳವಾರ ಇಡೀ ದಿನದ ಮಾತುಕತೆ, ಚರ್ಚೆಯಿಂದ ಮೊದಲ ಪಟ್ಟಿ ಅಂತಿಮಗೊಂಡಿದೆ. ಬಹುತೇಕ ಹಿರಿಯ ನಾಯಕರಿಗೆ ಸಂಪುಟದಲ್ಲಿ ಅವಕಾಶ ಸಿಕ್ಕಿದೆ.ದಿಲ್ಲಿಯಿಂದ ಸಿದ್ದರಾಮಯ್ಯ ಅವರು ಬೆಂಗಳೂರಿಗೆ ಆಗಮಿಸಿದ್ದು, ಬುಧವಾರ ಬೆಳಗ್ಗೆಯೇ ರಾಹುಲ್ ಗಾಂಧಿ ಜತೆಗೆ ಡಿ.ಕೆ. ಶಿವಕುಮಾರ್ ಆಗಮಿಸಲಿದ್ದಾರೆ. ಪ್ರಮಾಣವಚನ ಸ್ವೀಕರಿಸಲಿರುವ ಸದಸ್ಯರಿಗೆ ಹೈಕಮಾಂಡ್‌ನಿಂದ ಮಾಹಿತಿ ನೀಡಲಾಗಿದ್ದು, ಬುಧವಾರ ಬೆಳಗ್ಗೆ ಅಧಿಕೃತ ಪಟ್ಟಿ ಹೊರಬೀಳಲಿದೆ. ಮೊದಲ ಹಂತದಲ್ಲಿ ಹಿರಿಯರಿಗೆ ಹೈಕಮಾಂಡ್ ಮಣೆ ಹಾಕಿದೆ ಎಂದು ತಿಳಿದುಬಂದಿದೆ.

➡ಪುಟ ೪

> **ನನಗೆ ಸಚಿವ ಸ್ಥಾನದ ಅಧಿಕೃತ ಮಾಹಿತಿ ಇನ್ನೂ ಬಂದಿಲ್ಲ. ಸದ್ಯಕ್ಕೆ ನಾನು ಸ್ಪೀಕರ್ ಆಗಿದ್ದೇನೆ. ಸಂದೇಶ ಬಂದ ತಕ್ಷಣ ಮಾಹಿತಿ ಕೊಡುತ್ತೇನೆ.**
> ■ ಯು.ಟಿ. ಖಾದರ್, ಸ್ಪೀಕರ್

ಎಐಸಿಸಿಗೆ ಸಿದ್ದರಾಮಯ್ಯ

◆ **ಬೆಂಗಳೂರು:** ಮುಖ್ಯಮಂತ್ರಿ ಸ್ಥಾನದಿಂದ ಬಿಡುಗಡೆಗೊಂಡ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಪಕ್ಷ ಹೊಸ ಜವಾಬ್ದಾರಿ ನೀಡಿದ್ದು, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸೂಚನೆ ಮೇರೆಗೆ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಅವರು ಆದೇಶ ಹೊರಡಿಸಿದ್ದು, ತಕ್ಷಣವೇ ಜಾರಿಗೆ ಬರುವಂತೆ ಹೊಸ ಜವಾಬ್ದಾರಿ ವಹಿಸಲಾಗಿದೆ, ಈ ಹಿಂದೆ ರಾಷ್ಟ್ರ ರಾಜಕಾರಣಕ್ಕೆ ಹೋಗುವುದಿಲ್ಲ ಎಂದಿದ್ದ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಪಕ್ಷವು ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ಮಾಡುವ ಮೂಲಕ ಪಕ್ಷದಲ್ಲಿ ಹೊಸ ಹುದ್ದೆ ನೀಡಲಾಗಿದೆ.

ಸಿಬಿಎಸ್‌ಇ ಆನ್‌ಸ್ಕ್ರೀನ್ ಮೌಲ್ಯಮಾಪನ ವ್ಯವಸ್ಥೆ ವಿವಾದ ಹಿನ್ನೆಲೆ

ಸಿಬಿಎಸ್‌ಇಗೆ ನೂತನ ಅಧ್ಯಕ್ಷರು

◆ **ಹೊಸದಿಲ್ಲಿ :** ಹೊಸ ಆನ್ ಸ್ಕ್ರೀನ್ ಮಾರ್ಕಿಂಗ್(ಒಎಸ್‌ಎಂ) ವ್ಯವಸ್ಥೆ ಬಗ್ಗೆ ವಿವಾದ ಸೃಷ್ಟಿಸಲಾಗಿರುವಂತೆಯೇ, ಕೇಂದ್ರ ಸರಕಾರವು ಹಿರಿಯ ಐಎಎಸ್ ಅಧಿಕಾರಿ ಲೊಖಂಡೆ ಪ್ರಶಾಂತ್ ಸೀತಾರಾಮ್ ಅವರನ್ನು ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್‌ನ(ಸಿಬಿಎಸ್‌ಇ) ನೂತನ ಅಧ್ಯಕ್ಷರನ್ನಾಗಿ ಮಂಗಳವಾರ ನೇಮಿಸಿದೆ.



ಲೊಖಂಡೆ ಅವರು ಇದಕ್ಕೂ ಮುನ್ನ ಗೃಹಸಚಿವಾಲಯದಲ್ಲಿ ಅಡಿಶನಲ್ ಸೆಕ್ರೇಟರಿ ಆಗಿ ಸೇವೆ ಸಲ್ಲಿಸುತ್ತಿದ್ದರು. ಅವರು ಹಾಲಿ ಅಧ್ಯಕ್ಷ ರಾಹುಲ್ ಸಿಂಗ್ ಅವರ ಉತ್ತರಾಧಿಕಾರಿಯಾಗಿರುತ್ತಾರೆ. ಇದಕ್ಕೂ ಮುನ್ನ ರಾಹುಲ್ ಸಿಂಗ್ ಮತ್ತು ಸಿಬಿಎಸ್‌ಇಯ ಕಾರ್ಯದರ್ಶಿ ಹಿಮಾಂಶು ಗುಪ್ತಾ ಅವರನ್ನು ಸರ್ಕಾರ ವರ್ಗಾವಣೆಗೊಳಿಸಿತ್ತು.

➡ಪುಟ ೪

15 ಲಕ್ಷ ಸೈಬರ್ ದಾಳಿ!

ಸಿಬಿಎಸ್‌ಇ ಹೇಳುವ ಪ್ರಕಾರ, ಒಂದು ಹಂತದಲ್ಲಿ ಅದರ ಪೋರ್ಟಲ್ ಮೇಲೆ ಕೇವಲ 2 ನಿಮಿಷಗಳಲ್ಲಿ ದೊಡ್ಡ ಮಟ್ಟದ 15 ಲಕ್ಷ ಸೈಬರ್ ದಾಳಿ ನಡೆದಿದೆ. ವಿದ್ಯಾರ್ಥಿಗಳು ಸಿಬಿಎಸ್‌ಇ ಪೋರ್ಟಲ್ ಬಳಸುವುದನ್ನು ತಡೆಯಬೇಕೆಂಬ ಉದ್ದೇಶದಿಂದ ಸೈಬರ್ ದಾಳಿ ನಡೆಸಲಾಗಿದೆ ಎಂದು ಆರೋಪಿಸಿದೆ. 1 ಲಕ್ಷಕ್ಕೂ ಹೆಚ್ಚು ಬಾರಿ ಪೋರ್ಟಲ್‌ನಿಂದ ದಾಖಲೆ(ಫೈಲ್)ಗಳನ್ನು ಕದಿಯುವ ಅನಧಿಕೃತ ಪ್ರಯತ್ನಗಳು ನಡೆದಿವೆ. ಸುಮಾರು 8,000 ಬಳಕೆದಾರರಿಗೆ ನಮ್ಮ ಮರುಮೌಲ್ಯಮಾಪನ ಪೋರ್ಟಲ್ ಲಭ್ಯವಿದ್ದು, 16000 ವಿದ್ಯಾರ್ಥಿಗಳು ತಮ್ಮ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ ಎಂದಿದೆ.

ಆಳಂದ ಚೈತನ್ಯ ಮಂದಿರ ದಾಳಿ ಪ್ರಕರಣ | ರಾಜ್ಯಪಾಲರ ಭೇಟಿ

ದಾಳಿಕೋರರ ರಕ್ಷಣೆಗೆ ಬಿಜೆಪಿ ಕಿಡಿ

◆ **ಬೆಂಗಳೂರು:** ವೋಟ್ ಬ್ಯಾಂಕ್ ರಾಜಕಾರಣ ಮತ್ತು ಅಲ್ಪಸಂಖ್ಯಾತರನ್ನು ಓಲೈಸಲು ಆಳಂದದ ರಾಘವ ಚೈತನ್ಯ ಮಂದಿರದ ಮೇಲೆ ದಾಳಿ ಮಾಡಿದವರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಸರ್ಕಾರ ವಾಪಸ್ ಪಡೆದಿದೆ ಎಂದು ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ.

ಆಳಂದ ರಾಘವ ಚೈತನ್ಯ ಮಂದಿರ ದಾಳಿ ಪ್ರಕರಣ ವಾಪಸ್ ಪಡೆಯದಂತೆ ಮಂಗಳವಾರ ಬಿಜೆಪಿ ನಿಯೋಗದ ಜತೆಗೆ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ ನಂತರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಘಟನೆಯ ವಿಚಾರಣೆ ಕೋರ್ಟಿನಲ್ಲಿ ಬಾಕಿ ಇರುವಾಗಲೇ ಸರ್ಕಾರ ದಾಳಿಕೋರರ ಮೇಲಿನ ಪ್ರಕರಣವನ್ನು ವಾಪಸ್ ಪಡೆದಿದೆ. ಇದನ್ನು ವಾಪಸ್ ಪಡೆಯಬಾರದು ಎಂದು ಆಗ್ರಹಿಸಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದೇವೆ ಎಂದು ಹೇಳಿದರು.

➡ಪುಟ ೪



ಅಣ್ಣಾಮಲೈ ರಾಜೀನಾಮೆ



ನಿತಿನ್ ನವೀನ್, ಬಿ.ಎಲ್. ಸಂತೋಷ್‌ಗೆ ಪತ್ರ ಸಲ್ಲಿಕೆ

◆ **ಹೊಸದಿಲ್ಲಿ/ಚೆನ್ನೈ:** ತಮಿಳುನಾಡಿನ ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಕೆ. ಅಣ್ಣಾಮಲೈ ಅವರು ಮಂಗಳವಾರ ದಿಲ್ಲಿಯಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಮತ್ತು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರನ್ನು ಭೇಟಿಯಾಗಿ ತಮ್ಮ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಈ ಮೂಲಕ ಅಣ್ಣಾಮಲೈ ಅವರ ರಾಜಕೀಯ ಭವಿಷ್ಯದ ಬಗ್ಗೆ ಇದ್ದಂತಹ ತೀವ್ರ ಊಹಾಪೋಹಗಳಿಗೆ ತೆರೆಬಿದ್ದಿದೆ. ತಮ್ಮ ರಾಜೀನಾಮೆ ಪತ್ರದ ಜತೆಗೆ ಅಣ್ಣಾಮಲೈ ಅವರು, ಇತ್ತೀಚಿನ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಸಾಧನೆ ವಿವರಿಸುವ 5 ಪುಟಗಳ ಟಿಪ್ಪಣಿಯನ್ನೂ ಕೇಂದ್ರ ನಾಯಕರಿಗೆ ಹಸ್ತಾಂತರಿಸಿದ್ದಾರೆ.

➡ಪುಟ ೪



ಕನ್ನಡ ಬೋಧನೆಗೆ ಮಹತ್ವ | ವಿದೇಶಿ ಭಾಷೆಗೆ ಅಭದ್ರತೆ

ಸಿಬಿಎಸ್‌ಇ ತ್ರಿಭಾಷಾ ನೀತಿ ಕನ್ನಡ ಶಿಕ್ಷಕರಿಗೆ ಬಲು ಬೇಡಿಕೆ

▶ ನಂದಿನಿ ಎನ್.

◆ **ಬೆಂಗಳೂರು:** ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಜಾರಿಗೆ ತರಲಿರುವ ತ್ರಿಭಾಷಾ ನೀತಿಯು ವಿದೇಶಿ ಭಾಷಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿದ್ದರೆ, ಮತ್ತೊಂದೆಡೆ ಕನ್ನಡ ಸೇರಿದಂತೆ ಭಾರತೀಯ ಭಾಷಾ ಶಿಕ್ಷಕರಿಗೆ ಹೊಸ ಅವಕಾಶಗಳ ಬಾಗಿಲು ತೆರೆದಿದೆ. ವಿಶೇಷವಾಗಿ ಕರ್ನಾಟಕದ ಸಿಬಿಎಸ್‌ಇ ಶಾಲೆಗಳಲ್ಲಿ ಕನ್ನಡ ಶಿಕ್ಷಕರ ಬೇಡಿಕೆ ಗಮನಾರ್ಹವಾಗಿ ಹೆಚ್ಚತೊಡಗಿದೆ.



ಹೊಸ ನಿಯಮದ ಪ್ರಕಾರ, ವಿದ್ಯಾರ್ಥಿಗಳು ಮೂರು ಭಾಷೆಗಳಲ್ಲಿ ಕನಿಷ್ಠ ಎರಡು ಭಾರತೀಯ ಭಾಷೆಗಳನ್ನು ಕಡ್ಡಾಯವಾಗಿ ಕಲಿಯಬೇಕು. ಇದುವರೆಗೆ ಮೂರನೇ ಭಾಷೆಯಾಗಿ ವಿದೇಶಿ ಭಾಷೆಗಳಾದ ಫ್ರೆಂಚ್, ಜರ್ಮನ್ ಅಥವಾ ಸ್ಪ್ಯಾನಿಷ್ ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದ ವಿದ್ಯಾರ್ಥಿಗಳು ಈಗ ಕನ್ನಡ, ಹಿಂದಿ, ಸಂಸ್ಕೃತ ಅಥವಾ ಇತರೆ ಭಾರತೀಯ ಭಾಷೆಗಳನ್ನೂ ಕಲಿಯಬೇಕಾಗಿದೆ.

➡ಪುಟ ೪

ಕನ್ನಡ ಶಿಕ್ಷಕರ ನೇಮಕಾತಿಗೆ ಕ್ರಮ

ಬೆಂಗಳೂರು ಸೇರಿದಂತೆ ರಾಜ್ಯದ ಅನೇಕ ಸಿಬಿಎಸ್ ಶಾಲೆಗಳು ಈಗಾಗಲೇ ಹೆಚ್ಚುವರಿ ಕನ್ನಡ ಶಿಕ್ಷಕರ ನೇಮಕಾತಿಗೆ ಮುಂದಾಗಿವೆ. 9ನೇ ತರಗತಿಯಿಂದ ಜು.1 ರಿಂದ ಹೊಸ ನಿಯಮ ಜಾರಿಯಾಗಲಿರುವ ಹಿನ್ನೆಲೆ ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಕನ್ನಡ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುವ ನಿರೀಕ್ಷೆ ಇದೆ. ಅಲ್ಲದೆ, ಶಾಲಾ ಆಡಳಿತ ಮಂಡಳಿಗಳ ಪ್ರಕಾರ, ಇದುವರೆಗೆ ಸೀಮಿತ ಸಂಖ್ಯೆಯಲ್ಲಿ ಕನ್ನಡ ಬೋಧನೆ ನಡೆಯುತ್ತಿದ್ದರೆ, ಈಗ ಹೆಚ್ಚಿನ ವಿಭಾಗಗಳು ಮತ್ತು ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವ ಅಗತ್ಯ ಉಂಟಾಗಿದೆ. ಇದರಿಂದ ಅರ್ಹ ಕನ್ನಡ ಶಿಕ್ಷಕರಿಗೆ ಬೇಡಿಕೆ ಹೆಚ್ಚುತ್ತಿದೆ.

ಕೊಡಗಿಗೆ ರೈಲು ಸಂಪರ್ಕ: ಯಾವುದೇ ಪ್ರಸ್ತಾವನೆ ಇಲ್ಲ

◆ **ಮಡಿಕೇರಿ:** ಕೊಡಗು ಜಿಲ್ಲೆಯ ಮೂಲಕ ಹಾದುಹೋಗುವ ಯಾವುದೇ ರೈಲು ಮಾರ್ಗದ ಪ್ರಸ್ತಾವನೆ ರೈಲ್ವೆ ಸಚಿವಾಲಯದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿ ಮಾಡಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ರೈಲ್ವೆ ಮೂಲಸೌಕರ್ಯ ಮತ್ತು ಸಂಪರ್ಕ ವ್ಯವಸ್ಥೆಗಳ ಕುರಿತು ಚರ್ಚೆ ನಡೆಸಿದ ಬಳಿಕ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಈ ಬಗ್ಗೆ ಸ್ಪಷ್ಟಪಡಿಸಿದ್ದಾರೆ. ಕೊಡಗಿನ ವಿಶಿಷ್ಟ ಪರಿಸರ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ತನ್ನ ಬದ್ಧತೆಯನ್ನು ಯದುವೀರ್ ಅವರು ಪುನರುಚ್ಚರಿಸಿದ್ದಾರೆ.

ಸಚಿವ ಅಶ್ವಿನಿ ವೈಷ್ಣವ್ ಭೇಟಿ ಬಳಿಕ ಸಂಸದ ಯದುವೀರ್ ಹೇಳಿಕೆ

➡ಪುಟ ೯

ಕಿರುಸುದ್ದಿ

ಇಂದು ಡಾ.ಹರಿಶ್ಚಂದ್ರ ಪಿ.ಸಾಲ್ಯಾನ್‌ರವರ 'ನುಡಿಮುತ್ತು' ಕೃತಿ ಬಿಡುಗಡೆ

• **ಮುಲ್ಕಿ:** ಹೊಸ ಅಂಗಣ ಪ್ರಕಟಣಾಲಯ ವತಿಯಿಂದ ಸಂಪಾದಕ ಡಾ.ಹರಿಶ್ಚಂದ್ರ ಪಿ. ಸಾಲ್ಯಾನ್‌ರವರ 'ನುಡಿಮುತ್ತು' 23ನೇ ಕೃತಿ ಬಿಡುಗಡೆ ಸಮಾರಂಭ ಜೂ.3ನೇ ಬುಧವಾರ ಸಂಜೆ ಗಂಟೆ 4ಕ್ಕೆ ಪುನರೂರು ಟೂರಿಸ್ಟ್ ಹೋಮ್ ಸಭಾಂಗಣದಲ್ಲಿ ನಡೆಯಲಿದೆ. ಮಾಜಿ ಸಚಿವ ಅಭಯಚಂದ್ರ ಜೈನ್ ಕೃತಿ ಬಿಡುಗಡೆ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಸಾಪ ಮಾಜಿ ರಾಜ್ಯಾಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ. ತಲ್ಲೂರು ಶಿವರಾಮ್ ಶೆಟ್ಟಿ, ಕಿನ್ನಿಗೋಳಿ ಯುಗಪುರುಷ ಸಂಪಾದಕ ಭುವನಾಭಿರಾಮ ಉಡುಪ, ಮುಂಬೈ ಪತ್ರಕರ್ತ ಉಮೇಶ್ ಕೆ. ಅಂಚನ್, ನಿವೃತ್ತ ಪೊಲೀಸ್ ಉಪನಿರೀಕ್ಷಕ ಕೆ. ಎನ್. ಕೋಟ್ಯಾನ್, ಹಳೆಯಂಗಡಿ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಚ್. ವಸಂತ್ ಬೆರ್ನಾರ್ಡ್, ಅತಿಕಾರಿಬೆಟ್ಟು ಗ್ರಾಮ ಮಾಜಿ ಅಧ್ಯಕ್ಷ ಮನೋಹರ್ ಕೋಟ್ಯಾನ್ ಉಪಸ್ಥಿತರಿರುವರು ಎಂದು ಹೊಸ ಅಂಗಣ ಪ್ರಕಾಶನದ ಡಾ.ಹರಿಶ್ಚಂದ್ರ ಪಿ. ಸಾಲ್ಯಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಲಕನ ಸಮಯ ಪ್ರಜ್ಞೆ: ತಪ್ಪಿದ ಭೀಕರ ಅಪಘಾತ

• **ಮಡಿಕೇರಿ:** ಚಲಿಸುತ್ತಿದ್ದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆ.ಎಸ್.ಆರ್.ಟಿ.ಸಿ) ಬಸ್ ಚಾಲಕನ ಸಮಯ ಪ್ರಜ್ಞೆಯಿಂದಾಗಿ ಭೀಕರ ರಸ್ತೆ ಅಪಘಾತವೊಂದು ಕೂದಲೆಳೆ ಅಂತರದಲ್ಲಿ ತಪ್ಪಿದ ಘಟನೆ ಮಂಗಳವಾರ ಮರಗೋಡುವಿನಲ್ಲಿ ನಡೆದಿದೆ.



ಮಂಗಳವಾರ ಬೆಳಗ್ಗೆ ಮರಗೋಡು ಗೌಡ ಸಮಾಜದ ಸಮೀಪ ಚಲಿಸುತ್ತಿದ್ದ ಸಾರಿಗೆ ಬಸ್‌ನ ಬ್ರೇಕ್ ವ್ಯವಸ್ಥೆಯಲ್ಲಿ ದಿಢೀರ್ ತಾಂತ್ರಿಕ ದೋಷ ಕಾಣಿಸಿಕೊಂಡು ಬ್ರೇಕ್ ವಿಫಲವಾಗಿದೆ. ಪರಿಸ್ಥಿತಿಯನ್ನು ತಕ್ಷಣವೇ ಅರಿತ ಚಾಲಕ, ಧೃತಿಗೆಡದೆ ಅತ್ಯಂತ ಜಾಣ್ಮೆಯಿಂದ ಬಸ್ಸನ್ನು ನಿಯಂತ್ರಿಸಿ ರಸ್ತೆ ಬದಿಗೆ ಚಲಿಸುವಂತೆ ಮಾಡಿದ್ದಾರೆ. ಈ ಸಂದರ್ಭ ಬಸ್ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ತಾಗಿ ನಿಂತಿದೆ. ಘಟನೆಯ ಸಂದರ್ಭ ಬಸ್ಸಿನಲ್ಲಿದ್ದ ಪ್ರಯಾಣಿಕರೆಲ್ಲರೂ ಯಾವುದೇ ಅಪಾಯವಿಲ್ಲದೆ ಸುರಕ್ಷಿತವಾಗಿ ಹೊರಬಂದಿದ್ದಾರೆ. ಅದೃಷ್ಟವಶಾತ್ ಘಟನೆಯಲ್ಲಿ ಯಾರಿಗೂ ಯಾವುದೇ ರೀತಿಯ ಗಂಭೀರ ಗಾಯಗಳಾಗಿಲ್ಲ ಹಾಗೂ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಘಟನೆಯಿಂದ ಆತಂಕಗೊಂಡಿದ್ದ ಪ್ರಯಾಣಿಕರು ನಿಟ್ಟುಸಿರು ಬಿಟ್ಟಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ.

ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಮಾದಕ ವಸ್ತು ಸೇವನೆ : ನಾಲ್ವರ ಬಂಧನ

• **ಮಂಗಳೂರು:** ನಗರ ಪೊಲೀಸ್ ಕಮಿಷನರೇಟ್‌ನ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಮಾದಕ ವಸ್ತು ಸೇವನೆ ಪ್ರಕರಣಕ್ಕೆ ಸಂಬಂಧಿಸಿದಂತೆ 4 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಕದ್ರಿ ಠಾಣೆ ಪೊಲೀಸರು ಯೆಯ್ಯಾಡಿ ಕ್ರಾಸ್ ಬಳಿಯಿಂದ ನಿಸಾದ್ ಕೋಟ್ಯಾನ್ ಎಂಬಾತನನ್ನು ವಿಚಾರಿಸಿ, ಠಾಣೆಗೆ ಕರೆದುಕೊಂಡು ಬಂದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಮಾದಕ ವಸ್ತು ಸೇವನೆ ದೃಢಪಟ್ಟಿದೆ. ಬಂದರು ಠಾಣೆ ಪೊಲೀಸರು ಅಂಬೇಡ್ಕರ್ ವೃತ್ತದ ಬಳಿ ತೂರಾಡಿಕೊಂಡು ಹೋಗುತ್ತಿದ್ದ ಕುಲಶೇಖರ ನಿವಾಸಿ ಪ್ರತೀಕ್ ಅಲಿಯಾಸ್ ಪ್ರತೀಕ್ ಕೊಟ್ಟಾರಿ (30) ಎಂಬಾತನನ್ನು ಬಂಧಿಸಿದ್ದಾರೆ. ಆತನ ಬಾಯಿಯಿಂದ ಘಾಟು ವಾಸನೆ ಬಂದಿದ್ದು, ಗಾಂಜಾ ಸೇವನೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಉಳ್ಳಾಲ ಪೊಲೀಸರು ಸೋಮೇಶ್ವರ ಗ್ರಾಮದ ಪಿಲಾರ್ ಗ್ರೌಂಡ್ ಬಳಿ ಮಾದಕ ವಸ್ತು ಸೇವಿಸಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದ ಕಲಂದರ್ ಶಾಫಿ (33) ಎಂಬಾತನನ್ನು ಬಂಧಿಸಿದ್ದಾರೆ. ಪಾಂಡೇಶ್ವರ ಠಾಣೆ ಪೊಲೀಸರು ಶಿವ ನಗರದ ಮುಳಿಹಿತ್ಲು ಸಾರ್ವಜನಿಕ ಸ್ಥಳದಲ್ಲಿ ಮಾದಕ ವಸ್ತು ಸೇವನೆ ಮಾಡಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದ ಮುಳಿಹಿತ್ಲು ನಿವಾಸಿ ಪವನ್ ಜೆರಾಲ್ಡ್ (29) ಎಂಬಾತನನ್ನು ಬಂಧಿಸಿದ್ದಾರೆ. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಕಾರಿಗೆ ಲಾರಿ ಡಿಕ್ಕಿ: ಐವರಿಗೆ ಗಂಭೀರ ಗಾಯ

• **ಉಪ್ಪಿನಂಗಡಿ :** ಇಲ್ಲಿನ ಕೂಟೇಲು ಎಂಬಲ್ಲಿ ಕಾರೊಂದಕ್ಕೆ ಲಾರಿ ಡಿಕ್ಕಿ ಹೊಡೆದ ಘಟನೆ ಸೋಮವಾರ ರಾತ್ರಿ ಸಂಭವಿಸಿದ್ದು, ಕಾರಿನಲ್ಲಿದ್ದ 5 ಮಂದಿ ಗಂಭೀರವಾಗಿ ಗಾಯಗೊಂಡ ಘಟನೆ ವರದಿಯಾಗಿದೆ. ಕಾರ್ಕಳದ ನಕ್ರೆ ಎಂಬಲ್ಲಿನ ಕುಟುಂಬವೊಂದರ ಸದಸ್ಯರು ಸುಬ್ರಹ್ಮಣ್ಯಕ್ಕೆ ವ್ಯಾಗನಾರ್ ಕಾರಿನಲ್ಲಿ ಯಾತ್ರೆ ಕೈಗೊಂಡಿದ್ದು, ಉಪ್ಪಿನಂಗಡಿಯ ಕೂಟೇಲು ಸಮೀಪ ಕಾರು ಸಂಚರಿಸುತ್ತಿದ್ದ ವೇಳೆ ಅಡುಗೆ ಅನಿಲದ ಜಾಡಿಗಳನ್ನು ಹೊತ್ತೊಯ್ಯುತ್ತಿದ್ದ ಲಾರಿಯೊಂದು ಕಾರಿಗೆ ಡಿಕ್ಕಿ ಹೊಡೆಯಿತು. ಪರಿಣಾಮ ಕಾರಿನಲ್ಲಿದ್ದ ಚಾಲಕ ದೀಪಕ್ (45), ಯಾತ್ರಾರ್ಥಿಗಳಾಗಿದ್ದ ಗುರುರಾಜ್ (46), ಧನುಷ್ (15) , ಭಾರತಿ (48), ಗೀತಾ (55) ಎಂಬವರು ಗಂಭೀರವಾಗಿ ಗಾಯಗೊಂಡು ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಗಾಯಾಳುಗಳ ಸ್ಥಿತಿ ಚಿಂತಾಜನಕವಾಗಿದೆ. ಲಾರಿ ಚಾಲಕ ದಾಮೋದರ್ ಯಾವುದೇ ಅಪಾಯವಿಲ್ಲದೆ ಪಾರಾಗಿದ್ದಾರೆ. ಘಟನೆ ಸಂಭವಿಸಿದಾಗ ಗಾಯಾಳುಗಳನ್ನು ನಜ್ಜುಗುಜ್ಜಾದ ಕಾರಿನಿಂದ ಹೊರ ತರುವಲ್ಲಿ ಸ್ಥಳೀಯರಾದ ಯು. ಟಿ. ಫಾಯಾಜ್, ವಿದ್ಯಾಧರ ಜೈನ್, ಝುಕಾರಿಯಾ ಮತ್ತಿತರರು ಶ್ರಮಿಸಿ ಆಸ್ಪತ್ರೆಗೆ ಸಾಗಿಸುವಲ್ಲಿ ನೆರವಾದರು. ಪುತ್ತೂರು ಸಂಚಾರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.





ಮಂಜೇಶ್ವರ ತಾಲೂಕಿನ ಕೋಳ್ಯೂರು ಸ್ಪಂದನ ಟ್ರಸ್ಟ್‌ನ 117ನೇ ಮಾಸಿಕ ಸೇವಾ ಯೋಜನೆಯ ಫಲಾನುಭವಿಯಾಗಿ ಶಿವಪ್ಪ (ಶಿವರಾಜ್) ಅವರ ಚಿಕಿತ್ಸೆಗಾಗಿ ಭಾನುವಾರ ಮನೆಗೆ ತೆರಳಿ ಸಹಾಯಧನದ ಚೆಕ್‌ನ್ನು ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಗುರುಪ್ರಸಾದ್ ಕೋಟ್ಯಾನ್ ಕೋಳ್ಯೂರು, ಲೋಕೇಶ ಬಿ. ಕೋಳ್ಯೂರು, ತೇಜಪ್ರಕಾಶ್ ಕೋಳ್ಯೂರು, ಪ್ರವೀಣ್ ಕಳಿಯೂರು, ಲೋಕೇಶ ಕೋಳ್ಯೂರುಪದವು, ಬಾಲಕೃಷ್ಣ ಅಮಿತಾ ಬಾಲಕೃಷ್ಣ ಕೋಳ್ಯೂರುಪದವು ಉಪಸ್ಥಿತರಿದ್ದರು.

ಹಾಸನ ಹಾಲು ಒಕ್ಕೂಟ: ಪ್ರತಿನಿತ್ಯ 16 ಲಕ್ಷ ಲೀಟರ್ ಹಾಲು ಸಂಗ್ರಹ

• **ಕುಶಾಲನಗರ:** ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಯನ್ನೊಳಗೊಂಡ ಹಾಸನ ಹಾಲು ಒಕ್ಕೂಟವು ಮೂರು ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಪ್ರತಿನಿತ್ಯ 16 ಲಕ್ಷ ಲೀಟರ್ ಹಾಲು ಸಂಗ್ರಹಿಸುತ್ತಿದೆ. ಆದರ ಮೂಲಕ ರೈತರ ಅಭಿವೃದ್ಧಿ, ಸಹಕಾರ, ಮತ್ತು ಸಹಕಾರ ಸಂಘಗಳ ಪ್ರಗತಿಗೆ ಪೂರಕವಾದ ಯೋಜನೆಗಳನ್ನು ಹಮ್ಮಿಕೊಂಡು ಒಕ್ಕೂಟವು ಪ್ರಗತಿಯತ್ತ ಸಾಗುತ್ತಿದೆ ಎಂದು ಹಾಸನ ಹಾಲು ಒಕ್ಕೂಟದ ಜಿಲ್ಲಾ ನಿರ್ದೇಶಕ, ಕೂಡುಮಂಗಳೂರು ಸಹಕಾರ ಸಂಘದ ಅಧ್ಯಕ್ಷ ಕೆ.ಕೆ. ಹೇಮಂತ್ ಕುಮಾರ್ ಅವರು ತಿಳಿಸಿದ್ದಾರೆ.



ವಿಶ್ವ ಹಾಲು ದಿನಾಚರಣೆ ಅಂಗವಾಗಿ ಶಿರಂಗಾಲ ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ರೈತರು ಗುಣಮಟ್ಟದ ಹಾಲನ್ನು ಸಂಘಕ್ಕೆ ಹಾಕಬೇಕೆಂದು ಮನವಿ ಮಾಡಿದರು.

ಹೆಚ್ಚು ಹಾಲು ಸಂಗ್ರಹದಿಂದ ಹೆಚ್ಚು ಉತ್ಪನ್ನಗಳನ್ನು ತಯಾರಿಸುವ ಹಿನ್ನೆಲೆಯಲ್ಲಿ ಈಗಾಗಲೇ ಒಕ್ಕೂಟದ ಅಧ್ಯಕ್ಷ ಹೆಚ್.ಡಿ. ರೇವಣ್ಣ ಅವರ ಪ್ರಯತ್ನದಲ್ಲಿ 900 ಕೋಟಿ ವೆಚ್ಚದ ಅಧುನಿಕ ತಂತ್ರಜ್ಞಾನದ ಮೆಘಾ ಡೈರಿ ಮುಂದಿನ ದಿನಗಳಲ್ಲಿ ಆರಂಭಗೊಳ್ಳಲಿದೆ. ಇದರ ಮೂಲಕ ರೈತರ ಹಾಲು ಉತ್ಪಾದನೆಗೆ ಹೆಚ್ಚಿನ ಪ್ರೋತ್ಸಾಹ ಧನದೊಂದಿಗೆ ಎಲ್ಲಾ ರೀತಿಯ ಸಹಕಾರವನ್ನು ಒಕ್ಕೂಟದ ವತಿಯಿಂದ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಹಾಜರಿದ್ದ ನೂರಾರು ರೈತರಿಗೆ ಒಕ್ಕೂಟದ ಉತ್ಪನ್ನಗಳಾದ ಸಿಹಿ ತಿನಿಸುಗಳನ್ನು ನೀಡಲಾಯಿತು. ಈ ಸಂದರ್ಭ ಕೊಡಗು ಡೈರಿ ವ್ಯವಸ್ಥಾಪಕ ನಂದೀಶ್, ಮಾರುಕಟ್ಟೆ ವಿಭಾಗದ ಉಪ ವ್ಯವಸ್ಥಾಪಕ ಮಲ್ಲೇಶ್, ಸಹಾಯಕ ವ್ಯವಸ್ಥಾಪಕ ಸಂತೋಷ್ , ಶಿರಂಗಾಲ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಂ.ಪಿ.ಸುರೇಶ್, ನಿರ್ದೇಶಕರಾದ ಮನುಕುಮಾರ್, ಗಂಗಾಧರ, ವಿಷಕಂಠ, ಕುಮಾರಸ್ವಾಮಿ, ಸೇರಿದಂತೆ ನೂರಾರು ಹಾಲು ಉತ್ಪಾದಕ ರೈತರು ಹಾಜರಿದ್ದರು.

ಮಂಗಳೂರು–ಮೂಡಬಿದ್ರೆ ಹೆದ್ದಾರಿ ಕಾಮಗಾರಿ ಅವಾಂತರ | ಮಳೆಗಾಲದಲ್ಲಿ ಜಲದಿಗ್ಬಂಧನಕ್ಕೆ ಒಳಗಾಗುವ ಭೀತಿ

ಮುಳುಗಡೆ ಭೀತಿಯಲ್ಲಿ ಮಿಜಾರಿನ ಕುಟುಂಬ

ದಿಗಂತ ವಿಶೇಷ





• **ಕೈಕಂಬ:** ಮಂಗಳೂರು–ಮೂಡಬಿದ್ರೆ ರಾಷ್ಟ್ರೀಯ ಹೆದ್ದಾರಿ 169ರ ವಿಸ್ತರಣೆಯ ಅವೈಜ್ಞಾನಿಕ ಕಾಮಗಾರಿಯ ಫಲವಾಗಿ ಕಳೆದ ಮಳೆಗಾಲದಲ್ಲಿ ಸಂಪೂರ್ಣ ಮುಳುಗಡೆಯಾಗಿ ಜಲದಿಗ್ಬಂಧನ ಅನುಭವಿಸಿದ್ದ ಬಡಗ ಎಡಪದವು ಪಂಚಾಯತ್ ವ್ಯಾಪ್ತಿಯ ಮಿಜಾರಿನ ಶ್ರೀನಿವಾಸ ಭಟ್ ಕುಟುಂಬ ಈ ಬಾರಿಯೂ ಮಳೆಗಾಲದಲ್ಲಿ ಮತ್ತೆ ಜಲದಿಗ್ಬಂಧನ ಭೀತಿ ಎದುರಿಸುತ್ತಿದೆ.

ಶ್ರೀನಿವಾಸ್ ಭಟ್ ಅವರು ಕಳೆದ 18 ವರ್ಷಗಳ ಹಿಂದೆ ಮಿಜಾರು ಬೈತ್ತಾರಿ ಎಂಬಲ್ಲಿ 50 ಸೆಂಟ್ಸ್ ಜಾಗದಲ್ಲಿ ಮನೆ ನಿರ್ಮಿಸಿದ್ದರು.

ಹೆದ್ದಾರಿ ವಿಸ್ತರಣಾ ಕಾಮಗಾರಿ ಪ್ರಾರಂಭ ಆಗುವವರೆಗೆ ಯಾವುದೇ ಸಮಸ್ಯೆ ಇರಲಿಲ್ಲ. ಹೆದ್ದಾರಿ ವಿಸ್ತರಣಾ ಕಾಮಗಾರಿ ವೇಳೆ ಶ್ರೀನಿವಾಸ್ ಭಟ್ಟರ ಮನೆಯ ಪಕ್ಕದಲ್ಲಿ ಹಾದು ಹೋಗಿರುವ ಪರಂಬೋಕು ತೋಡಿಗೆ ಅವೈಜ್ಞಾನಿಕವಾಗಿ ನಿರ್ಮಿಸಿದ ಕಿರು ಸೇತುವೆಯಿಂದಾಗಿ ಮಳೆಗಾಲದಲ್ಲಿ ತೋಡಿನಲ್ಲಿ ನೀರು ಹರಿವಿಗೆ ತಡೆ ಉಂಟಾಗಿ ಮಳೆ ನೀರು ಮನೆಯ ಸುತ್ತ ತುಂಬಿ ಮನೆಯೊಳಗೆ ನುಗ್ಗುತ್ತದೆ.

ಕಳೆದ ಮಳೆಗಾಲದಲ್ಲಿ ಮನೆಯಿಂದ ಹೊರಗೆ ಹೋಗಲು ಸಾಧ್ಯವಾಗದ ಪರಿಸ್ಥಿತಿ ಎದುರಾಗಿತ್ತು. ಮನೆಗೆ ತಾಗಿಕೊಂಡೆ ಇರುವ ದನದ ಕೊಟ್ಟಿಗೆ ಕಳೆದ ಮಳೆಗಾಲದಲ್ಲಿಸಂಪೂರ್ಣ ನೀರಿನಿಂದತುಂಬಿತ್ತು. ಈ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಹೆದ್ದಾರಿ ಇಲಾಖೆಯ ಅಧಿಕಾರಿಗಳಿಗೆ ಲಿಖಿತ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲವೆನ್ನುತ್ತಾರೆ ಶ್ರೀನಿವಾಸ್ ಭಟ್ಟರು. ನೀರಿನ ಪ್ರವಾಹ ವಿಪರೀತವಾದಾಗ ಭಯದಿಂದ ಇಂಜನಿಯರ್‌ಗೆ ಕರೆ ಮಾಡಿದರೆ ಕರೆ ಮಾಡಿ ಯಾಕೆ ತೊಂದರೆ ಕೊಡುತ್ತೀರಿ ಎಂದು ದಬಾಯಿಸುತ್ತಾರೆ. ಗ್ರಾಮ ಪಂಚಾ ಯತ್ ಅಧಿಕಾರಿಗೆ ದೂರು ನೀಡಿದರೆ, ನೀವು ಗಂಜಿಕೇಂದ್ರಕ್ಕೆ ಹೋಗಿ ನಾವು ಬೇಕಾದರೆ ದೋಣಿ ಕಳುಹಿಸುತ್ತೇವೆ ಎಂದು ವ್ಯಂಗ್ಯವಾಗಿ ಉತ್ತರಿಸುತ್ತಾರೆ ಎಂದು ಶ್ರೀನಿವಾಸ್ ಭಟ್ಟರ ಪತ್ನಿ ಸುಕನ್ಯಾ ಭಟ್ ನೋವಿನಿಂದ ಹೇಳುತ್ತಾರೆ.

> ಕಳೆದ ವರ್ಷ ಮಳೆಗಾಲದಲ್ಲಿ ನೀರು ತುಂಬಿದ ಪರಿಣಾಮ ರಾತ್ರಿ 12 ಗಂಟೆಗೆ ನಾವು ಶ್ರೀನಿವಾಸ್ ಭಟ್ಟರ ಕುಟುಂಬವನ್ನು ಮನೆಯಿಂದ ತೆರವು ಮಾಡಿದ್ದೇವೆ. ಕಿರು ಸೇತುವೆ ಕಾಮಗಾರಿ ಸಂಪೂರ್ಣ ಅವೈಜ್ಞಾನಿಕವಾಗಿದೆ. ಹಳೆಯ ಹೆದ್ದಾರಿ ಇರುವಾಗ ತೋಡಿನ ನೀರು ಸರಾಗವಾಗಿ ಹರಿದು ಹೋಗುತ್ತಿತ್ತು. ಈಗ ಹೆದ್ದಾರಿ ಎತ್ತರಿಸಲಾಗಿದೆ. ತೋಡು ಆಗಲವಾಗಿದ್ದು, ಕಿರು ಸೇತುವೆ ಸಣ್ಣದಾಗಿ ಬೇಕಾಬಿಟ್ಟಿಯಾಗಿ ಕಟ್ಟಲಾಗಿದೆ. ಹೆದ್ದಾರಿ ಇಲಾಖೆ ಸಮಸ್ಯೆ ಬಗೆಹರಿಸದಿದ್ದಲ್ಲಿ, ಕಳೆದ ಬಾರಿಯಂತೆ ಈ ಮಳೆಗಾಲದಲ್ಲಿಯೂ ನೀರು ತುಂಬಿದರೆ ಸ್ಥಳೀಯರು ಹೆದ್ದಾರಿ ತಡೆದು ಪ್ರತಿಭಟನೆ ನಡೆಸುವುದು ಅನಿವಾರ್ಯವಾಗಿದೆ
>
> ■ **ಸುಧಾಕರ ಪೂಂಜಾ,** ಸಾಮಾಜಿಕ ಹೋರಾಟಗಾರ.

ಹೆದ್ದಾರಿ ಕಾಮಗಾರಿಯಿಂದ ಸಮಸ್ಯೆ ಎದುರಿಸುವಂತಾಗಿರುವ ಭಟ್ಟರು ಯಾಕೆ ಗಂಜಿಕೇಂದ್ರಕ್ಕೆ ಹೋಗಬೇಕು. ಪಂಚಾಯತ್ ಅಧಿಕಾರಿಯನ್ನೇ ಗಂಜಿ ಕೇಂದ್ರಕ್ಕೆ ಕಳುಹಿಸುವ ಅಗತ್ಯ ಇದೆ.

ಶಾಸಕ ಭರತ್ ಶೆಟ್ಟಿಯವರಿಗೆ ದೂರು ನೀಡಿದ್ದು, ಶಾಸಕರು ಸ್ಥಳಕ್ಕೆ ಬಂದು ಸಮಸ್ಯೆ ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಬಳಿಕ ಹಿಂದೆ ನಿರ್ಮಿಸಿದ್ದ ಕಿರು ಸೇತುವೆ ಬಳಿ ಇನ್ನೊಂದು ಕಿರು ಸೇತುವೆ ನಿರ್ಮಾಣ ಮಾಡಲಾಯಿತು. ಅದು ಕೂಡಾ ಅವೈಜ್ಞಾನಿಕ ಕಾಮಗಾರಿಯಾಗಿದ್ದು, ತೋಡು ಅಗಲವಾಗಿದ್ದು ಕಿರು ಸೇತುವೆ ತೋಡಿಗಿಂತ ಕಿರಿದಾಗಿರುವ ಕಾರಣ ಮಳೆ ನೀರು ಹರಿಯಲು ಸಾಧ್ಯವಿಲ್ಲದಂತೆ ಆಗಿದೆ.

ಅಲ್ಲದೇ ಇಲ್ಲಿರುವ ಗೋಪಾಲಕೃಷ್ಣ ದೇವಸ್ಥಾನಕ್ಕೂ ಮಳೆ ನೀರು ನುಗ್ಗುವ ಭೀತಿ ಇದ್ದು, ಕಳೆದ ಮಳೆಗಾಲದಲ್ಲಿ ಮಳೆ ನೀರಿನ ಜೊತೆ ತ್ಯಾಜ್ಯ ಕೂಡಾ ದೇವಸ್ಥಾನದ ಆವರಣದ ಒಳಗೆ ನುಗ್ಗಿತ್ತು ಎಂದು ಇಲ್ಲಿನ ಪುರೋಹಿತರು ಹೇಳಿದ್ದಾರೆ.

ಹೆದ್ದಾರಿ ವಿಸ್ತರಣೆಯ ಕಾಮಗಾರಿ ವೇಳೆ ಆಗಿರುವ ಅವಾಂತರದಿಂದಾಗಿ ಕಳೆದ ಮಳೆಗಾಲದಂತೆ ಈ ಬಾರಿಯೂ ಜಲದಿಗ್ಬಂಧಕ್ಕೆ ಒಳಗಾಗುವ ಭೀತಿಯನ್ನು ಶ್ರೀನಿವಾಸ್ ಭಟ್ಟರು ವ್ಯಕ್ತಪಡಿಸಿದ್ದು, ತನ್ನದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವಂತೆ ಆಗಿದೆ. ಹೆದ್ದಾರಿ ಅಧಿಕಾರಿಗಳು ಮಳೆಗಾಲಕ್ಕೂ ಮುನ್ನ ಸೂಕ್ತ ವ್ಯವಸ್ಥೆ ಮಾಡಬೇಕಾಗಿದೆ.

> ಜಿಲ್ಲಾಧಿಕಾರಿಗಳು, ಹೆದ್ದಾರಿ ಇಲಾಖೆ ಅಧಿಕಾರಿಗಳಿಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ. ಈ ಬಾರಿಯೂ ಮಳೆಗಾಲದಲ್ಲಿ ನೀರು ನುಗ್ಗುವ ಭೀತಿ ಇದೆ. ನಾವು ಹೇಗೆ ಬದುಕಬೇಕು
>
> ■ **ಶ್ರೀನಿವಾಸ್ ಭಟ್.**

> ಕಳೆದ ಮಳೆಗಾಲದ ನಾಲ್ಕೈದು ತಿಂಗಳು ನರಕ ಅನುಭವವಾಗಿದೆ. ಇಂಜಿನಿಯರ್‌ಗೆ ಕರೆ ಮಾಡಿದರೆ ದಬಾಯಿಸುತ್ತಾರೆ. ಪಂಚಾಯತ್‌ಗೆ ಕರೆ ಮಾಡಿದರೆ ಗಂಜಿ ಕೇಂದ್ರಕ್ಕೆ ಹೋಗಿ, ದೋಣಿ ಕಳುಹಿಸಬೇಕಾ ಎನ್ನುತ್ತಾರೆ.ಮಳೆಗಾಲದಲ್ಲಿ ಮನೆಯಿಂದ ಹೊರಗೆ ಬರಲು ಸಾಧ್ಯವಾಗದ ಪರಿಸ್ಥಿತಿ ಎದುರಾಗುತ್ತದೆ. ರಾತ್ರಿ ಇಡೀ ಪ್ರವಾಹದ ಭೀತಿಯಿಂದ ನಿದ್ದೆ ಇಲ್ಲದಂತಾಗುತ್ತದೆ
>
> ■ **ಸುಕನ್ಯಾ ಭಟ್.**

ಫಿಲೋಮಿನಾ ಪ.ಪೂ. ಕಾಲೇಜಿನಲ್ಲಿ 2025–26ರ ಸಾಲಿನ

ದ್ವಿತೀಯ ಪಿಯುಸಿ ರ್‍ಯಾಂಕ್ ವಿಜೇತರಿಗೆ ಸನ್ಮಾನ



• **ಪುತ್ತೂರು:** ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜಿನಲ್ಲಿ 2025–26ರ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ರ್‍ಯಾಂಕ್ ಹಾಗೂ ಉನ್ನತ ಶ್ರೇಣಿಯನ್ನು ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸುವ ಕಾರ್ಯಕ್ರಮವು ಸೋಮವಾರ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಅಬ್ದುಲ್ ಸಮದ್ ಎಂ. ಮಾತನಾಡಿ, ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸುತ್ತಾ, ನಿಮ್ಮ ಸಾಧನೆಯ ಹಿಂದೆ ನಿಮಗೆ ಸಹಾಯಕರಾಗಿ ನಿಂತ, ಹೆತ್ತವರು, ಅಧ್ಯಾಪಕರು ಮತ್ತು ಸಂಸ್ಥೆಗೆ ಚಿರ ಋಣಿಗಳಾಗಿರಬೇಕು. ಜೀವನದಲ್ಲಿ ಪ್ರತಿಯೊಬ್ಬರಿಗೂ ಅವಕಾಶಗಳು ಲಭ್ಯವಿದ್ದು, ಅವಕಾಶಗಳನ್ನು ಬಳಸಿಕೊಂಡುಉತ್ತಮಸಾಧನೆಗೈಯುವತ್ತ ಗಮನಹರಿಸಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ರೆ.ಫಾ. ಅಶೋಕ್ ರಾಯನ್ ಕ್ರಾಸ್ತಾ ಮಾತನಾಡಿ, ಶೈಕ್ಷಣಿಕ ಸಾಧನೆಯ ಜೊತೆಗೆ, ಸಾಂಸ್ಕೃತಿಕ ಮತ್ತು ಇತರ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕು. ಯಶಸ್ಸು ಸತತ ಪರಿಶ್ರಮದಿಂದಷ್ಟೇ ಸಾಧ್ಯವಾಗಿದ್ದು, ಉತ್ತಮ ಚಾರಿತ್ರ್ಯ ಮತ್ತು ಮೌಲ್ಯಾಧಾರಿತ ನಡತೆಗಳು ನಿಮ್ಮ ಸಾಧನೆಗೆ ಪೂರಕ ಎಂದು ತಿಳಿಸಿದರು.

ರಕ್ಷಕ ಶಿಕ್ಷಕ ಸಂಘದ ಉಪಾಧ್ಯಕ್ಷೆ ದಿವ್ಯಾ ಅನಿಲ್ ರೈ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. 2025–26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಅಪೂರ್ವ 595 ಅಂಕಗಳನ್ನು ಪಡೆದು ರಾಜ್ಯದಲ್ಲಿ 4ನೇ ರ್‍ಯಾಂಕ್ ಮತ್ತು ವಾಣಿಜ್ಯ ವಿಭಾಗದಲ್ಲಿ ಸಫೀದಾ 595 ಅಂಕಗಳನ್ನು ಪಡೆದು ರಾಜ್ಯದಲ್ಲಿ 6ನೇ ರಾಂಕ್, ಸೋನಿಕಾ ಕುಟಿನ್ಹಾ 592 ಅಂಕಗಳನ್ನು ಪಡೆದು ರಾಜ್ಯದಲ್ಲಿ 9ನೇ ರ್‍ಯಾಂಕ್, ದೀಪ್ತಿ ಕೆ.ಎಸ್. 591 ಅಂಕಗಳನ್ನು ಪಡೆದು ರಾಜ್ಯದಲ್ಲಿ 10ನೇ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಬಪ್ಪಳಿಗೆ ಅಂಬಿಕಾ ಸಿಬಿಎಸ್‌ಇ ವಿದ್ಯಾಲಯದಲ್ಲಿ ಶಿಕ್ಷಕರ ಪುನಶ್ಚೇತನ ಕಾರ್ಯಕ್ರಮ

ವಿದ್ಯಾರ್ಥಿಗಳ ಅಭಿವೃದ್ಧಿಗೆ ಶಿಕ್ಷಕರ ವಿಶೇಷ ಕೊಡುಗೆ

• **ಪುತ್ತೂರು:** ವಿವಿಧ ಭಾಷೆ, ಸಂಸ್ಕೃತಿ, ಸಾಮಾಜಿಕ ಹಿನ್ನೆಲೆ ಹಾಗೂ ಜೀವನಾನುಭವಗಳನ್ನು ಹೊಂದಿರುವ ವಿದ್ಯಾರ್ಥಿಗಳು ದೇಶದ ಉತ್ತಮ ಪ್ರಜೆಯಾಗಿ ಮೂಡಿ ಬರುವಂತೆ ಮಾಡುವುದು ಶಿಕ್ಷಕರ ಕರ್ತವ್ಯವಾಗಿದೆ. ಪರಸ್ಪರ ಗೌರವ, ಸಹಿಷ್ಣುತೆ ಹಾಗೂ ಸಮಾವೇಶಾತ್ಮಕ ಶಿಕ್ಷಣದ ಮೌಲ್ಯಗಳನ್ನು ಬೆಳೆಸಿದಾಗ ವಿದ್ಯಾರ್ಥಿಗಳು ಸರ್ವತೋಮುಖ ಅಭಿವೃದ್ಧಿ ಹೊಂದುತ್ತಾರೆ ಎಂದು ಸಂಪನ್ಮೂಲ ವ್ಯಕ್ತಿ ಪ್ರೀತಿ ಶೆಣೈ ಹೇಳಿದರು.



ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಮುನ್ನಡೆಸುತ್ತಿರುವ ಬಪ್ಪಳಿಗೆಯಲ್ಲಿನ ಅಂಬಿಕಾ ಸಿಬಿಎಸ್‌ಇ ವಿದ್ಯಾಲಯದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಶಿಕ್ಷಕರ ಪುನಶ್ಚೇತನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತರಬೇತಿಯಲ್ಲಿ ಶಿಕ್ಷಕರಿಗೆ ಒತ್ತಡ ನಿರ್ವಹಣೆ, ತರಗತಿ ನಿರ್ವಹಣೆ, ತರಗತಿಯ ಸಾಮರ್ಥ್ಯ ವಿಕಸನ ಕಾರ್ಯತಂತ್ರಗಳು ಹಾಗೂ ಭಾರತೀಯ ಶಾಲೆಗಳ ಸಾಂಸ್ಕೃತಿಕ ವಾಸ್ತವತೆಗಳು ಮೊದಲಾದ ವಿಚಾರಗಳ ಕುರಿತು ತರಬೇತಿಯನ್ನು ಪಡೆಯುತ್ತಿರುವುದರಿಂದ ಪರಿಣಾಮಕಾರಿ ಬೋಧನಾ ವಿಧಾನ ಅಳವಡಿಸಿಕೊಳ್ಳಬಹುದು ಎಂದರು.

ಶಿಕ್ಷಕರು ತಮ್ಮ ವೃತ್ತಿ ಜೀವನದಲ್ಲಿ ಒತ್ತಡಗಳನ್ನು ಸಮರ್ಥವಾಗಿ ನಿಭಾಯಿಸುವುದು ಅವಶ್ಯ. ಮಾನಸಿಕ ಸಮತೋಲನ ಕಾಪಾಡಿಕೊಳ್ಳುವುದು ಹಾಗೂ ಸಕಾರಾತ್ಮಕ ಮನೋಭಾವನೆ ತೋರಬೇಕು. ಸಾಮರ್ಥ್ಯ ವಿಕಸನ ಕಾರ್ಯತಂತ್ರಗಳ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ವಿಶೇಷ ಪ್ರತಿಭೆ, ಆಸಕ್ತಿ ಹಾಗೂ ಸಾಮರ್ಥ್ಯಗಳನ್ನು ಗುರುತಿಸಿ ಅವುಗಳನ್ನು ಅಭಿವೃದ್ಧಿಪಡಿಸುವ ಮೂಲಕ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಬೇಕು ಎಂದರು.

ಅಂಬಿಕಾ ಸಿಬಿಎಸ್‌ಇ ವಿದ್ಯಾಲಯದ ಪ್ರಾಂಶುಪಾಲೆ ಮಾಲತಿ ಡಿ., ಉಪಪ್ರಾಂಶುಪಾಲೆ ಸುಜನಿ ಬೋರ್ಕರ್ ಉಪಸ್ಥಿತರಿದ್ದರು. ವಿದ್ಯಾಲಯದ ಶಿಕ್ಷಕಿ ಶರಣ್ಯ ಪ್ರಾರ್ಥಿಸಿದರು. ಕೃತಿಕಾ ಸ್ವಾಗತಿಸಿ, ದೀಪ್ತಿ ವಂದಿಸಿದರು. ಸ್ವಾತಿ ಕಾರ್ಯಕ್ರಮ ನಿರ್ವಹಿಸಿದರು.

ಯು ಎ ಇ.ಯಲ್ಲಿ ಮಕ್ಕಳ ಕಿರು ತಾಳಮದ್ದಳೆ ಅಭಿಯಾನ | ಅಭ್ಯಾಸಿಗಳಿಗೆ ವೇದಿಕೆ ನಿರ್ಮಾಣ ಇದರ ಉದ್ದೇಶ

'ಪಡಸಾಲೆಯಲ್ಲಿ ಯಕ್ಷಗಾನ ವಾಚಿಕಾರಾಧನೆ' ಉದ್ಘಾಟನೆ

• **ಮಂಗಳೂರು:** ಯುಎಇಯ ಸರ್ವಪ್ರಥಮ ಸಮಗ್ರ ಮತ್ತು ಏಕೈಕ ಯಕ್ಷಗಾನ ಕಲಿಕಾ ಕೇಂದ್ರ ಎಂದು ಮರಳುಗಾಡಿನ ಉದ್ದಕ್ಕೂ ಹೆಸರುವಾಸಿಯಾದ ಯಕ್ಷಗಾನ ಅಭ್ಯಾಸ ಕೇಂದ್ರ ಯುಎಇ ಇದರ ನೂತನ ಕಾರ್ಯಕ್ರಮ ಸರಣಿಯ ಅಂಗವಾಗಿ ಮಕ್ಕಳ ಕಿರು ತಾಳಮದ್ದಲೆ ಅಭಿಯಾನ 'ಪಡಸಾಲೆಯಲ್ಲಿ ಯಕ್ಷಗಾನ ವಾಚಿಕಾರಾಧನೆ' ಎಂಬ ವಿನೂತನ ಯೋಜನೆಗೆ ಚಾಲನೆ ನೀಡಲಾಯಿತು.



ಕೇಂದ್ರದ ಸಂಚಾಲಕ ಕೊಟ್ಟಿಂಜ ದಿನೇಶ ಶೆಟ್ಟಿ ಅವರ ದುಬೈನ ಮನೆ ಪಡಸಾಲೆಯಲ್ಲಿ ಕಾರ್ಯಕ್ರಮ ಉದ್ಘಾಟನೆಗೊಂಡಿತು. ಕೇಂದ್ರದ ಹಿರಿಯ ಕಲಾವಿದ ಪ್ರಭಾಕರ ಡಿ.ಸುವರ್ಣ, ಹಿರಿಯ ಸದಸ್ಯರಾದ ಜಯಾನಂದ ಪಕ್ಕಳ, ವಾಸು ಶೆಟ್ಟಿ ಶುಭ ಹಾರೈಸಿದರು.

ಕೇಂದ್ರದ ನಿರ್ದೇಶಕ ಶೇಖರ್ ಡಿ. ಶೆಟ್ಟಿಗಾರ್ ಕಿನ್ನಿಗೋಳಿ ಮಾತನಾಡಿ, ಕೇಂದ್ರದ ವಿವಿಧ ಚಟುವಟಿಕೆಗಳಾದ ಯಕ್ಷಗಾನ ನಾಟ್ಯ, ಭಾಗವತಿಕೆ, ಚೆಂಡೆ–ಮದ್ದಳೆ, ಕನ್ನಡ ಅಭ್ಯಾಸ ಕೇಂದ್ರ ಇತ್ಯಾದಿ ಎಲ್ಲದರ ಫಲಶ್ರುತಿಯಾಗಿ ಮಕ್ಕಳ ಕಿರು ತಾಳಮದ್ದಳೆ ಅಭಿಯಾನದ ನಡೆಸಲಾಗುತ್ತಿದೆ. ಅಭ್ಯಾಸಿಗಳಿಗೆ ವೇದಿಕೆ ನಿರ್ಮಾಣ ಇದರ ಉದ್ದೇಶ ಎಂದರು.

ಮಕ್ಕಳ ಕಿರು ತಾಳಮದ್ದಳೆ ಅಭಿಯಾನದ ಪ್ರಥಮ ಪ್ರದರ್ಶನವಾಗಿ ಯಕ್ಷಗಾನ ಕವಿ ಹಟ್ಟಿಯಂಗಡಿ ರಾಮಭಟ್ಟ ವಿರಚಿತ 'ಸುಭದ್ರಾ ಕಲ್ಯಾಣದ ಶ್ರೀಕೃಷ್ಣ ಸತ್ಯಭಾಮ ಸಂವಾದ ಮತ್ತು ರತಿ ಕಲ್ಯಾಣದ ಶ್ರೀಕೃಷ್ಣ ರುಕ್ಮಿಣಿ ಸಂವಾದ'ದ ತಾಳಮದ್ದಳೆ ನಡೆಯಿತು. ಕೇಂದ್ರದ ಬಾಲ ಕಲಾವಿದರು ಈ ಆಖ್ಯಾನಗಳನ್ನು ನಡೆಸಿಕೊಟ್ಟರು. ಹಿಮ್ಮೇಳದಲ್ಲಿಯೂ ಕೇಂದ್ರದ ಬಾಲ ಕಲಾವಿದರು ಕಾಣಿಸಿಕೊಂಡರು.

ಭಾಗವತರಾಗಿ ಗುರು ಭವ್ಯಶ್ರೀ ಕುಲ್ಕುಂದ ಅವರ ಶಿಷ್ಯೆಯರಾದ ನಯೋಮಿ ಸಾಯಿನಾಥ ಶೆಟ್ಟಿ, ಶ್ರೀಶ ಪ್ರಭಾಕರ ಪೂಜಾರಿ, ಐಶಾನಿ ದೀಪಕ್ ಸುಳ್ಯ, ವೈಷ್ಣವಿ ಪದ್ಮಶಾಲಿ ಭಾಗವಹಿಸಿದರು. ಚೆಂಡೆ – ಮದ್ದಳೆಯಲ್ಲಿ ಗುರು ಸವಿನಯ ನೆಲ್ಲಿತೀರ್ಥ ಅವರ ಜೊತೆ ಅವರ ಶಿಷ್ಯಂದಿರಾದ ಆದಿತ್ಯ ದಿನೇಶ ಶೆಟ್ಟಿ ಕೊಟ್ಟಿಂಜ, ಹೃಷಿಕೇಶ ಎಸ್., ಐಶಾನಿ ದೀಪಕ್ ಸುಳ್ಯ ಭಾಗವಹಿಸಿದರು.

> ಮುಂದಿನ ದಿನಗಳಲ್ಲಿ ಯುಎಇಯ ಉದ್ದಗಲಕ್ಕೆ ಮಕ್ಕಳ ಕಿರು ತಾಳಮದ್ದಳೆ ಅಭಿಯಾನದಡಿ 'ಪಡಸಾಲೆಯಲ್ಲಿ ಯಕ್ಷಗಾನ ವಾಚಿಕಾರಾಧನೆ' ಎಂಬ ಯೋಜನೆಯಡಿ ಮತ್ತಷ್ಟು ಮಕ್ಕಳ ತಾಳಮದ್ದಳೆ ಪ್ರದರ್ಶಿಸುವ ಆಲೋಚನೆಯಿದೆ. ಯುಎಇಯ ಕಲಾಭಿಮಾನಿ ಪೋಷಕರು ಈ ಯೋಜನೆಯನ್ನು ಪ್ರೋತ್ಸಾಹಿಸುವ ಮೂಲಕ ಯುಎಇಯ ಉದ್ದಗಲಕ್ಕೆ ಕನ್ನಡ ಮತ್ತು ಯಕ್ಷಗಾನದ ಕಂಪನ್ನು ಪಸರಿಸುವ ಯೋಜನೆಗೆ ಸಹಕರಿಸಬೇಕು.
>
> ■ **ಕೊಟ್ಟಿಂಜ ದಿನೇಶ ಶೆಟ್ಟಿ ,** ಯಕ್ಷಗಾನ ಅಭ್ಯಾಸ ಕೇಂದ್ರ, ಯುಎಇ ಸಂಚಾಲಕರು

ಮುಮ್ಮೇಳದಲ್ಲಿ ಶ್ರೀಕೃಷ್ಣನಾಗಿ ಐಶಾನಿ ದೀಪಕ್ ಸುಳ್ಯ, ನಯೋಮಿ ಸಾಯಿನಾಥ ಶೆಟ್ಟಿ, ಸತ್ಯಭಾಮೆಯಾಗಿ ರತಿಕ ರತೀಶ್ ಕಾಡುಮನೆ, ರುಕ್ಮಿಣಿಯಾಗಿ ಶೈವಿ ಪ್ರಭಾಕರ ಪೂಜಾರಿ ರಂಜಿಸಿದರು.

ಕೇಂದ್ರದ ಹಿರಿ–ಕಿರಿಯ ಕಲಾವಿದರ ಕೂಡುವಿಕೆಯಿಂದ ಕವಿ ಹಟ್ಟಿಯಂಗಡಿ ರಾಮಭಟ್ಟ ವಿರಚಿತ ದ್ರೌಪದೀ ಸ್ವಯಂವರ ಆಧಾರಿತ 'ಹಿಡಿಂಬಾ ವಿವಾಹ' ವಿಶೇಷ ತಾಳಮದ್ದಳೆ ಕೂಟ ನಡೆಯಿತು. ಭಾಗವತರಾಗಿ ಚರಣ್ ರಾಜ್ ಅರ್ಲಪದವು, ಸಾಗರ್ ಆಚಾರ್ಯ ಬ್ರಹ್ಮಾವರ, ಐಶಾನಿ ದೀಪಕ್ ಸುಳ್ಯ, ಚೆಂಡೆ ಮದ್ದಳೆಯಲ್ಲಿ ಸವಿನಯ ನೆಲ್ಲಿತೀರ್ಥ ಸಹಕರಿಸಿದರು. ಮುಮ್ಮೇಳದಲ್ಲಿ ಅರ್ಥಧಾರಿಗಳಾಗಿ ಧರ್ಮರಾಯ– ಜೀವನ್ ಕ್ರಾಸ್ತ ಪುತ್ತೂರು, ಕುಂತಿ–ಶ್ರೀಶ ಪ್ರಭಾಕರ ಪೂಜಾರಿ, ಭೀಮ– ರವೀಂದ್ರ ಕುಕ್ಯಾನ್ ಹೊಸಬೆಟ್ಟು, ಅರ್ಜುನ– ಸಾತ್ವಿಕ್ ಕೊಂಚಾಡಿ, ನಕುಲ–ಯಶ್ವಿನಿ ಶೇಖರ್ ಪೂಜಾರಿ, ಸಹದೇವ– ಇಷಿತಾ ಶೇಖರ್ ಪೂಜಾರಿ, ಹಿಡಿಂಬಾಸುರ ಪೂರ್ವ ಭಾಗ – ಬಾಲಕೃಷ್ಣ ಡಿ. ಶೆಟ್ಟಿಗಾರ್ ಕಿನ್ನಿಗೋಳಿ, ಉತ್ತರಭಾಗದ ಹಿಡಿಂಬಾಸುರನಾಗಿ– ಚರಣ್ ರಾಜ್ ಅರ್ಲಪದವು, ಘೋರ ಹಿಡಿಂಬೆಯಾಗಿ– ಸತೀಶ ಶೆಟ್ಟಿಗಾರ್ ಪೊರ್ಲಪಾಡಿ, ಮಾಯಾ ಹಿಡಿಂಬೆಯಾಗಿ ಕೇಂದ್ರದ ನಾಟ್ಯ ಗುರು ಶರತ್ ಕುಡ್ಲ, ವೇದವ್ಯಾಸ–ಮಮತಾ ವಿಪಿನ್ ಪಾಲ್ಗೊಂಡರು.

ಕಿರುಸುದ್ದಿ

ಮಡಿಕೇರಿಯ ಜಿಲ್ಲಾ ಕಾರಾಗೃಹದಲ್ಲಿ ಚೂರಿ ಇರಿತ: ಓರ್ವ ಗಂಭೀರ

ಮಡಿಕೇರಿ: ನಗರದ ಹೊರವಲಯದ ಕರ್ಣಂಗೇರಿಯಲ್ಲಿರುವ ಜಿಲ್ಲಾ ಕಾರಾಗೃಹದಲ್ಲಿ ಕೈದಿಗಳಿಬ್ಬರ ನಡುವೆ ನಡೆದ ಮಾರಾಮಾರಿ ಸಂದರ್ಭ ಓರ್ವ ಮತ್ತೊಬ್ಬನಿಗೆ ಚೂರಿಯಿಂದ ಇರಿದ ಪರಿಣಾಮ ಗಂಭೀರ ಗಾಯಗೊಂಡಿರುವ ಗಾಯಾಳುವನ್ನು ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಶ್ರೀಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯ ಟಿ. ಶೆಟ್ಟಿಗೇರಿಯ ನಾಲ್ವರು ಸಿವಿಲ್ ಪ್ರಕರಣದಲ್ಲಿ ಬಂಧಿಗಳಾಗಿ ಕಾರಾಗೃಹದಲ್ಲಿದ್ದರು. ಈ ಪೈಕಿ ಅಡುಗೆ ಕೋಣೆಯಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭ ಹೇಮಂತ್ ಹಾಗೂ ರಾಜೇಶ್ ಎಂಬವರ ನಡುವೆ ಜಗಳವೇರ್ಪಟ್ಟು ಮಾರಾಮಾರಿ ನಡೆದಿದೆ. ಈ ಸಂದರ್ಭ ರಾಜೇಶ್ ಚೂರಿಯಿಂದ ಹೇಮಂತ್‌ಗೆ ಇರಿದಿದ್ದಾನೆ. ಗಂಭೀರ ಗಾಯಗೊಂಡಿರುವ ಹೇಮಂತ್‌ನನ್ನು ಕಾರಾಗೃಹದ ಅಧಿಕಾರಿಗಳು ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಜೂ.7ರಂದು ಬಂಟಕಲ್ಲು ಸಾಲ್ಮರ – ಉಚಿತ ಆರೋಗ್ಯ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ

ಶಿರ್ವ: ಕೃಷ್ಣವೇಣಿ ಆಯುರ್ವೇದ,ಚಿಕಿತ್ಸಾ ಮತ್ತು ಸ್ವಾಸ್ಥ್ಯ ಕೇಂದ್ರ,ಜೇಸಿಐ ಶಂಕರಪುರ ಜಾಸ್ಮಿನ್ ಜಂಟಿ ಆಶ್ರಯದಲ್ಲಿ ಜೂ.7 ರವಿವಾರ ಸಾಲ್ಮರ ಕೃಷ್ಣವೇಣಿ ಆಯುರ್ವೇದ,ಚಿಕಿತ್ಸಾಲಯದಲ್ಲಿ ಬೆಳಿಗ್ಗೆ 9.30ರಿಂದ ಮಧ್ಯಾಹ್ನ 1.30ರ ಪರ್ಯಂತ "ಉಚಿತ ಆರೋಗ್ಯ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ" ಜರುಗಲಿದೆ. ಹಿರಿಯ ಮೂಳೆ ತಜ್ಞ ಡಾ.ಪ್ರಕಾಶ್ ಭಟ್ ಮರ್ಣೆ ಆರ್ಥೋಪೆಡಿಕ್ ಕ್ಲಿನಿಕ್ ಉಡುಪಿ ಇವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಆಯುರ್ವೇದ ಸರ್ಜನ್ ಡಾ.ಸುಕೇಶ್ ಎ. ಮೂಡಬಿದ್ರೆ ಭಾಗವಹಿಸುವರು. ಅಧ್ಯಕ್ಷತೆಯನ್ನು ಸಾಲ್ಮರ ಗೋವಿಂದ ಭಟ್ ಫ್ಯಾಮಿಲಿ ಟ್ರಸ್ಟ್ ಶಂಕರಪುರ ಇದರ ಟ್ರಸ್ಟಿ ಹರಿದಾಸ್ ಭಟ್ ವಹಿಸುವರು. ಜೇಸಿಐ ಅಧ್ಯಕ್ಷ ರಾಜೇಶ್ ಆಚಾರ್ಯ, ಕಾರ್ಯದರ್ಶಿ ಭವ್ಯ ಸುವರ್ಣ, ಬಂಟಕಲ್ಲು ಗಾಯತ್ರಿ ವೃಂದದ ಅಧ್ಯಕ್ಷೆ ವಿದ್ಯಾ ಹರೀಶ್, ಕೃಷ್ಣವೇಣಿ ಆಯುರ್ವೇದ ಮತ್ತು ಆಶ್ರಯಧಾಮದ ಮುಖ್ಯ ವೈದ್ಯಾಧಿಕಾರಿ ಡಾ.ಕೆ.ಲಕ್ಷ್ಮೀಶ ಉಪಾಧ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ರಮೇಶ್ ಮಿತ್ತಾಂತಾಯ ಉಪಸ್ಥಿತರಿರುವರು. ಶಿಬಿರದಲ್ಲಿ ನುರಿತ ವೈದ್ಯರುಗಳಿಂದ ಮಂಡಿನೋವು, ಸೊಂಟನೋವು, ನರದೌರ್ಬಲ್ಯ, ಶೀತ,ಕೆಮ್ಮು,ಉಬ್ಬಸ ಸಹಿತ ವಿವಿಧ ಕಾಯಿಲೆಗಳ ತಪಾಸಣೆ, ಹಾಗೂ ಔಷಧಿ ನೀಡಲಾಗುವುದು, ರಕ್ತಹೀನತೆ, ಡಯಾಬಿಟಿಸ್ ರೋಗಕ್ಕೆ ಉಚಿತ ಚಿಕಿತ್ಸೆ,ರಕ್ತತಪಾಸಣೆ ಮಾಡಲಾಗುವುದು ಎಂದು ಸಂಘಟಕರ ಪ್ರಕಟನೆ ತಿಳಿಸಿದೆ.

ಶಾಲಾ ವಿದ್ಯಾರ್ಥಿಗಳಿಗೆ ಮಾದಕ ಮಾತ್ರೆಗಳನ್ನು ಪೂರೈಸಿದ ವ್ಯಕ್ತಿ ಸೆರೆ

ಕಾಸರಗೋಡು: ವಿದ್ಯಾರ್ಥಿಗಳಿಗೆ ಮಾದಕ ಮಾತ್ರೆಗಳನ್ನು ಪೂರೈಸುತಿದ್ದ ಯುವಕನನ್ನು ಮೇಲ್ಪರಂಬ ಠಾಣೆಯ ಎಸ್‌ಐ ಪಿ.ಕೆ.ಅಬ್ಬಾಸ್ ನೇತೃತ್ವದ ಪೊಲೀಸರ ತಂಡವು ಬಂಧಿಸಿದೆ. ಉತ್ತರಪ್ರದೇಶದ ಅಂರೋಬಾ ವ್ಯಾರ್ಸಿ ನಿವಾಸಿ ಮೊಹಮ್ಮದ್ ನಸೀರ್ (19) ಬಂಧಿತ ಆರೋಪಿ. ಕಳನಾಡಿನ 14ರ ಹರೆಯದ ವಿದ್ಯಾರ್ಥಿಗೆ ಮಾದಕ ಮಾತ್ರೆಗಳನ್ನು ನೀಡುತ್ತಿದ್ದ ವೇಳೆ ಆರೋಪಿಯನ್ನು ಪೊಲೀಸರು ಕೈಯಾರೆ ಸೆರೆ ಹಿಡಿದಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ಕೇಂದ್ರೀಕರಿಸಿ ನಡೆಸುತ್ತಿರುವ ಮಾದಕ ದ್ರವ್ಯ ದಂಧೆಯನ್ನು ಪತ್ತೆಹಚ್ಚಿ ಅದನ್ನು ಬೇರು ಸಹಿತ ಕಿತ್ತು ಹಾಕಲು ರಾಜ್ಯ ಗೃಹ ಇಲಾಖೆಯು ರಾಜ್ಯಾದ್ಯಂತ ಸೋಮವಾರದಿಂದ ತೂಫಾನ್ ನಾರ್ಕೋ ಹಂಟ್ ಆಪರೇಶನ್ ಕಾರ್ಯಾಚರಣೆ ಆರಂಭಿಸಿದೆ. ಅದರಂತೆ ಮೇಲ್ಪರಂಬ ಪೊಲೀಸರು ಈ ದಾಳಿ ನಡೆಸಿದ್ದಾರೆ. ಆರೋಪಿಯು ವಿದ್ಯಾರ್ಥಿಗೆ ನೀಡಿದ ಮಾದಕ ಮಾತ್ರೆಗಳು ಬಿಳಿ ಮತ್ತು ಕೆಂಪು ಬಣ್ಣದಿಂದ ಕೂಡಿದ್ದು, ಹೀಗೆ ಮೂರು ಮಾತ್ರೆಗಳನ್ನು ಆತ ವಿದ್ಯಾರ್ಥಿಗೆ ಪೂರೈಸಿದ್ದಾನೆ. ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವವರಿಗೆ ವೈದ್ಯರ ನಿರ್ದೇಶನ ಪ್ರಕಾರ ನೀಡಲಾಗುವ ಮಾತ್ರೆಗಳು ಇದಾಗಿವೆಯೆಂದು ಪೊಲೀಸರು ತಿಳಿಸಿದ್ದಾರೆ. ಮಾತ್ರವಲ್ಲದೆ ಆರೋಪಿಯ ದೇಹ ತಪಾಸಣೆ ನಡೆಸಿದಾಗ ಆತನ ಪ್ಯಾಂಟ್‌ನ ಜೇಬಿನಿಂದಲೂ ಇಂತಹ 8 ಸ್ಟ್ರಿಪ್ ಮಾತ್ರೆಗಳು ಪತ್ತೆಯಾಗಿವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಬಂಧಿತ ಆರೋಪಿಯ ವಿರುದ್ಧ ಜುವೈನಲ್ ಜಸ್ಟಿಸ್ ಕೇರ್ ಆ್ಯಂಡ್ ಪ್ರೊಟೆಕ್ಷನ್ ಆಫ್ ಚಿಲ್ಡ್ರನ್ಸ್ ಆ್ಯಕ್ಟ್ ಪ್ರಕಾರ ಪ್ರಕರಣ ದಾಖಲಿಸಿ ಆತನನ್ನು ನಂತರ ಹೊಸದುರ್ಗ ಪ್ರಥಮ ದರ್ಜೆ ಮೆಜಿಸ್ಟ್ರೇಟ್ ನ್ಯಾಯಾಲಯ (ದ್ವಿತೀಯ)ದ ಆದೇಶ ಪ್ರಕಾರ ನ್ಯಾಯಾಂಗ ಬಂಧನದಲ್ಲಿರಿಸಲಾಗಿದೆ. ಈ ಮಾತ್ರೆ ಪಡೆದ ವಿದ್ಯಾರ್ಥಿಯ ಹೆತ್ತವರನ್ನು ಪೊಲೀಸರು ಕರೆಸಿ ವಿಷಯ ತಿಳಿಸಿದ ಬಳಿಕ ಅವರೊಂದಿಗೆ ಕಳುಹಿಸಿಕೊಡಲಾಗಿದೆ.

ಮಾದ ವಸ್ತು ಸೇವನೆ: ಆರು ಮಂದಿ ಬಂಧನ

ಮಂಗಳೂರು: ಇತ್ತೀಚಿನ ದಿನಗಳಲ್ಲಿ ಮಂಗಳೂರು ನಗರದಲ್ಲಿ ಮಾದಕ ವಸ್ತು ಮಾರಾಟ ಮತ್ತು ಸೇವನೆ ಪ್ರಕರಣಗಳು ಹೆಚ್ಚಾಗುತ್ತಿವೆ. ಮಂಗಳೂರು ಪೊಲೀಸ್ ಕಮಿಷನರೇಟ್ ನ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಮಾದಕ ವಸ್ತು ಸೇವನೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ 6 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಮಂಗಳೂರು ಗ್ರಾಮಾಂತರ ಠಾಣೆ ಪೊಲೀಸರು ಶಕ್ತಿನಗರದ ಕಲಾಂಗಣ್ ಹಾಲ್ ಬಳಿ ಮಾದಕ ವಸ್ತುವನ್ನು ಸೇವನೆ ಮಾಡಿದ್ದ ಕಾರ್ಕಳ ಬೈಲೂರು ನಿವಾಸಿ ವಿಲ್ಫ್ರೆಡ್ ಡಿ'ಸೋಜಾ (37), ಕೊಣಾಜೆ ಠಾಣೆ ಪೊಲೀಸರು ಉಳ್ಳಾಲ ತಾಲೂಕು ಹರೇಕಳ ಗ್ರಾಮದ ಬೈತಾರುವಿನ ನದಿಯ ಬಳಿ ಮಾದಕ ವಸ್ತು ಸೇವನೆ ನಶೆಯಲ್ಲಿದ್ದ ಹರೇಕಳ ದೇರಣ್ಣದ ಫಯಾಜ್ (34), ಮಾರ್ಗನ್ಸ್‌ಗೇಟ್ ಬಳಿ ಮಾದಕ ವಸ್ತು ಸೇವನೆ ಮಾಡಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದ ಕೇರಳದ ಕಾಸರಗೋಡು ಜಿಲ್ಲೆಯ ಅರ್ಫಾಜ್ ಅಬ್ದುಲ್ಲಾ (34) ಮತ್ತು ಮೆಹರೂಫ್ (30), ಕೈಕಂಬ ಜಂಕ್ಷನ್ ಬಳಿ ಮಾದಕ ವಸ್ತು ಸೇವನೆಯ ನಶೆಯಲ್ಲಿದ್ದ ಅಲನ್ ಡೇವಿಡ್ ಸಿಕ್ವೇರಾ (21) ಮತ್ತು ಕಲಂದರ್ (34) ಇವರುಗಳನ್ನು ಆಯಾ ಠಾಣಾ ವ್ಯಾಪ್ತಿಯಲ್ಲಿ ಬಂಧಿಸಲಾಗಿದೆ.

ನಾಪತ್ತೆ

ಮಂಗಳೂರು: ಮಂಗಳೂರು ತಾಲೂಕಿನ ಕಣ್ಣೂರು ವೀರನಗರ ನಿವಾಸಿ ಸುರೇಶ್ ಎಂಬವರು ಮೇ 29ರಿಂದ ಕಾಣೆಯಾಗಿದ್ದಾರೆ. ಅಂದು ಬೆಳಗ್ಗೆ ಮನೆಯಿಂದ ತೆರಳಿದವರು ಮರಳಿ ಮನೆಗೆ ಬಂದಿಲ್ಲ ಎಂದು ಪತ್ನಿ ಕಂಕನಾಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಉತ್ತರ ಪ್ರದೇಶದ ಲಕ್ನೋದಲ್ಲಿ ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲಿ ಕನ್ಯಾಡಿ ಶ್ರೀರಾಮ ಕ್ಷೇತ್ರ ಮಹಾಸಂಸ್ಥಾನದ ಪೀಠಾಧೀಶರಾದ ಮಹಾಮಂಡಲೇಶ್ವರ 1008 ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಮತ್ತು ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ಅವರು ಮೇ 31 ರಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಭೇಟಿಯಾಗಿ ತಮ್ಮ ಅಯೋಧ್ಯೆ ಸನಿಹ ನಿರ್ಮಾವಾಗುತ್ತಿರುವ ಶಾಖಾಮಠದ ಆಶ್ರಮದ ಬಗ್ಗೆ ಸವಿವರ ಮಾಹಿತಿ ನೀಡಿ , ವಿಚಾರ ವಿಮರ್ಶೆ ಮಾಡಿದರು. ಈ ಸಂದರ್ಭದಲ್ಲಿ ಶ್ರೀರಾಮ ಕ್ಷೇತ್ರದ ಶಿಷ್ಯ ವರ್ಗ, ಅಯೋಧ್ಯೆಯ ಸ್ವಾಮಿಗಳ ಶಿಷ್ಯ ವರ್ಗ ಉಪಸ್ಥಿತರಿದ್ದರು.

ಸಿಎ ವಿದ್ಯಾರ್ಥಿಗಳಿಗಾಗಿ ಮಂಗಳೂರಿನಲ್ಲಿ ಆಯೋಜನೆ

ಜೂ. 5, 6: ರಾಷ್ಟ್ರೀಯ ಸಮ್ಮೇಳನ

ಮಂಗಳೂರು: ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ)ನ ದಕ್ಷಿಣ ಭಾರತ ಚಾರ್ಟರ್ಡ್ ಅಕೌಂಟೆಂಟ್ಸ್ ಸ್ಟೂಡೆಂಟ್ಸ್ ಅಸೋಸಿಯೇಶನ್ (ಎಸ್‌ಐಸಿಎಎಸ್‌ಎ)ನ ಮಂಗಳೂರು ಶಾಖೆಯು ಜೂ.5 ಮತ್ತು 6ರಂದು ಸಿಎ ವಿದ್ಯಾರ್ಥಿಗಳಿಗಾಗಿ ನಗರದ ಕುದ್ಮುಲ್ ರಂಗರಾವ್ ಪುರಭವನದಲ್ಲಿ ರಾಷ್ಟ್ರೀಯ ಸಮ್ಮೇಳನ ಆಯೋಜಿಸಿದೆ.

ಎರಡು ದಿನಗಳ ಸಮ್ಮೇಳನದಲ್ಲಿ ಲೆಕ್ಕಪರಿಶೋಧನೆ ಮತ್ತು ತೆರಿಗೆಯಲ್ಲಿ ಕೃತಕ ಬುದ್ಧಿ ಮತ್ತೆ ಮತ್ತು ತಂತ್ರಜ್ಞಾನ, ಉದಯೋನ್ಮುಖ ತೆರಿಗೆ ಕಾನೂನು, ಜಿಎಸ್‌ಟಿಯಲ್ಲಿನ ನವೀಕರಣಗಳು, ನವೋದ್ಯಮ ಪರಿಸರ ವ್ಯವಸ್ಥೆಗಳು ಬಂಡವಾಳ ಮಾರುಕಟ್ಟೆಗಳು, ಮಾನಸಿಕ ಸ್ವಾಸ್ಥ್ಯ, ಪರೀಕ್ಷಾ ತಂತ್ರ ಮತ್ತು ವೃತ್ತಿಪರ ಬ್ರ್ಯಾಂಡಿಗ್ ಬಗ್ಗೆ ಚರ್ಚೆ ನಡೆಯಲಿದೆ. ಐಸಿಎಐನ ಅಧ್ಯಕ್ಷರು ಸೇರಿದಂತೆ ಇತರ ಹಲವು ತಜ್ಞರು ವಿಷಯ ಮಂಡಿಸಲಿದ್ದು, ಸಮ್ಮೇಳನದ ಉದ್ಘಾಟನೆ ಜೂ.5ರಂದು ಬೆಳಗ್ಗೆ 9.30ಕ್ಕೆ ನಡೆಯಲಿದೆ. ಮೊದಲ ದಿನದ ಸಂಜೆ 5.30ರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ಸಮ್ಮೇಳನ ಸಂಯೋಜಕ ಹಾಗೂ ಐಸಿಎಐನ ಮಂಗಳೂರು ಶಾಖೆಯ ಅಧ್ಯಕ್ಷ ಡೇನಿಯಲ್ ಮಾರ್ಷ್ ಪೆರೇರಾ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಾಯೋಗಿಕ ತರಬೇತಿ ಅಥವಾ ಕೈಗಾರಿಕಾ ತರಬೇತಿಯನ್ನು ಪಡೆಯುತ್ತಿರುವ ವಿದ್ಯಾರ್ಥಿಗಳು ವಿವಿಧ ಜ್ಞಾನ ಅಧಿವೇಶನಗಳ ಕುರಿತು ತಮ್ಮ ಸಂಶೋಧನಾ ಪ್ರಬಂಧ ಮಂಡಿಸಿದ್ದು, 2ನೆ ದಿನದ ಸಮಾರೋಪ ಅಧಿವೇಶನದಲ್ಲಿ ಅತ್ಯುತ್ತಮ ಪ್ರಬಂಧ ನಿರೂಪಕರನ್ನು ಗೌರವಿಸಲಾಗುವುದು ಎಂದರು.

ಸಮ್ಮೇಳನದ ಸಂಯೋಜಕ ಗೌರವ್ ರಾಮಚಂದ್ರ ಹೆಗ್ಡೆ ಮಮತಾ ರಾವ್, ಬಾಲಸುಬ್ರಹ್ಮಣ್ಯ ಎನ್., ಬಿ. ಕೃಷ್ಣಾನಂದ ಪೈ ಪ್ರಶಾಂತ್ ಪೈ ಕೆ., ಸೌಪರ್ಣಿಕಾ ಭಕ್ತ ಅಭಿಷ್ಯಾಂ ಉಪಸ್ಥಿತರಿದ್ದರು.

ದ.ಕ. ಜಿಲ್ಲಾ ಬಿಜೆಪಿ ಪ್ರಶಿಕ್ಷಣ ವರ್ಗ ಸಮಾರೋಪದಲ್ಲಿ ರಾಧಾಮೋಹನ್‌ದಾಸ್

ಸವಾಲಿದ್ದರೂ ಸಿದ್ಧಾಂತ ಬಿಟ್ಟಿಲ್ಲ

ಮಂಗಳೂರು: ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವಾಗಿರುವ ಭಾರತೀಯ ಜನತಾ ಪಾರ್ಟಿ ಹುಟ್ಟಿನಿಂದ ಇದುವರೆಗೆ ವೈಚಾರಿಕ ಶುದ್ಧತೆಯನ್ನು ಕಾಪಾಡಿಕೊಂಡಿದೆ. ಯಾವುದೇ ಸಂದರ್ಭದಲ್ಲಿ ಪಕ್ಷದ ಸಿದ್ಧಾಂತದ ಜತೆ ರಾಜಿ ಮಾಡಿಕೊಂಡಿಲ್ಲ. ಯಾವುದೇ ಸವಾಲು ಎದುರಾದರೂ ಸಿದ್ಧಾಂತ ಬಿಟ್ಟು ಹೋಗಿಲ್ಲ. ಇದು ಬಿಜೆಪಿಯ ವಿಶೇಷತೆಯಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರವಾಲ್ ಹೇಳಿದರು.

ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ 2026 ಅಂಗವಾಗಿ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲೆ ವತಿಯಿಂದ ನಗರದ ಸಂಘನಿಕೇತನದಲ್ಲಿ ಮಂಗಳವಾರ ಎರಡು ದಿನಗಳ ದ.ಕ. ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗ ಸಮಾರೋಪದಲ್ಲಿ ಅವರು ಮಾತನಾಡಿದರು.

ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಏಕಾತ್ಮತಾ ಮಾನವತಾವಾದ ಸಿದ್ಧಾಂತದ ಅಡಿಯಲ್ಲಿ ಪಕ್ಷ ಮುನ್ನಡೆಯುತ್ತಿದೆ. ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷಕ್ಕಿಂತ ದೇಶ ಮುಖ್ಯ ಎಂಬ ಮಾತಿನಂತೆ ದೇಶದ ಹಿತಕ್ಕಾಗಿ ಪಕ್ಷ ಕೆಲಸ ಮಾಡುತ್ತಿದೆ. ಶ್ಯಾಮ ಪ್ರಸಾದ್ ಮುಖರ್ಜಿ ಅವರ ಆಶಯದಂತೆ ಜಮ್ಮು ಮತ್ತು ಕಾಶ್ಮೀರ ಕ್ಕೆ ನೀಡಲಾಗಿದ್ದ ಆರ್ಟಿಕಲ್ 370 ತೆಗೆದುಹಾಕಲಾಗಿದೆ. ಪಕ್ಷದ ಆರಂಭದ ದಿನಗಳಿಂದ ಇದುವರೆಗೆ ಅನೇಕ ಹಿರಿಯರು ಪಕ್ಷಕ್ಕಾಗಿ ತ್ಯಾಗ ಮಾಡಿದ್ದಾರೆ. ಅದನ್ನು ನಾವೆಲ್ಲರೂ ನೆನಪಿನಲ್ಲಿಡಬೇಕು ಎಂದರು.

ಪಕ್ಷ ಸಂಘಟನೆಗೆ ಪ್ರಶಿಕ್ಷಣ ವರ್ಗ ಪೂರಕ

ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿ, ಎರಡು ದಿನಗಳ ಕಾಲ ಮಾದರಿಯಾಗಿ, ಅತ್ಯಂತ ಶಿಸ್ತಿನಿಂದ ಪ್ರಶಿಕ್ಷಣ ವರ್ಗ ನಡೆದಿದೆ. ಜಿಲ್ಲೆಯ ಸಂಸದರು, ಆರು ಮಂದಿ ಶಾಸಕರು, ಇಬ್ಬರು ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು, ಮಾಜಿ ಶಾಸಕರು, ಪಕ್ಷದ ಪದಾಧಿಕಾರಿಗಳು ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಪಕ್ಷದ ಸಂಘಟನೆಗೆ ಈ ಪ್ರಶಿಕ್ಷಣ ವರ್ಗ ಪೂರಕ ಆಗಲಿದೆ ಎಂದರು.




> ದಕ್ಷಿಣ ಕನ್ನಡ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಆರರಲ್ಲಿ ಬಿಜೆಪಿ ಶಾಸಕರಿದ್ದಾರೆ. ಮುಂದಿನ ಚುನಾವಣೆಯಲ್ಲಿ ಮಂಗಳೂರು ಹಾಗೂ ಪುತ್ತೂರು ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿಗಳು ಗೆಲ್ಲಬೇಕು. ಎಂಟೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲಲು ಕಾರ್ಯಕರ್ತರು ದುಡಿಯಬೇಕು. ಇದಕ್ಕಾಗಿ ನಾನೂ ಕೆಲಸ ಮಾಡುತ್ತೇನೆ.
>
> ■ **ರಾಧಾಮೋಹನ್‌ದಾಸ್ ಅಗರವಾಲ್,** ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ರಾಜ್ಯ ಉಸ್ತುವಾರಿ

ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕರಾದ ರಾಜೇಶ್ ನ್ಯಾಕ್, ಉಮಾನಾಥ ಕೋಟ್ಯಾನ್, ಡಾ. ವೈ. ಭರತ್ ಶೆಟ್ಟಿ, ಭಾಗೀರಥಿ ಮುರುಳ್ಯ, ವೇದವ್ಯಾಸ ಕಾಮತ್, ಹರೀಶ್ ಪೂಂಜ, ಜಿಲ್ಲಾ ಪ್ರಶಿಕ್ಷಣ ಪ್ರಭಾರಿ, ಶಾಸಕ ಯಶ್‌ಪಾಲ್ ಸುವರ್ಣ, ವಿಧಾನ ಪರಿಷತ್ ಸದಸ್ಯ ಪ್ರತಾಪ ಸಿಂಹ ನಾಯಕ್, ವಿಭಾಗ ಪ್ರಭಾರಿ ಭಾರತೀಶ್, ಸಹ ಪ್ರಭಾರಿ ಜಯಂತ್ ಕೋಟ್ಯಾನ್, ವಿಕಾಸ್ ಪುತ್ತೂರು ಉಪಸ್ಥಿತರಿದ್ದರು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಯತೀಶ್ ಆರ್ವಾರ್, ಪ್ರೇಮಾನಂದ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಡಾ. ಮಂಜುಳಾ ರಾವ್ ವಂದಿಸಿದರು.

ಉಡುಪಿ–ಕರಿಂದಳಂ ಅಂತಾರಾಜ್ಯ ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ ಅಂತಿಮ ಹಂತದಲ್ಲಿ

ಕಾಸರಗೋಡು: ಉತ್ತರ ಮಲಬಾರ್ ಪ್ರದೇಶದ ವಿದ್ಯುತ್ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕೇರಳದ 400 ಕೆ.ವಿ. ಉಡುಪಿ – ಕರಿಂದಳಂ ಅಂತಾರಾಜ್ಯ ವಿದ್ಯುತ್ ಪ್ರಸರಣ ಮಾರ್ಗದ ನಿರ್ಮಾಣ ಕಾರ್ಯವು ಅಂತಿಮ ಹಂತದಲ್ಲಿದೆ. ಯೋಜನೆಯ ಅಂಗವಾಗಿ ಕಾಸರಗೋಡು ಜಿಲ್ಲೆಯ ಮೂಲಕ ಹಾದುಹೋಗುವ ವಿಭಾಗಗಳಲ್ಲಿನ ಎಲ್ಲಾ ಗೋಪುರಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ.



ಜಿಲ್ಲೆಯಲ್ಲಿ ಹಾದುಹೋಗುವ 47.26 ಕಿಲೋ ಮೀಟರ್ ಮಾರ್ಗದಲ್ಲಿ ಟವರ್ ನಿರ್ಮಾಣ ಕಾರ್ಯವು ಶೇಕಡಾ 100ರಷ್ಟು ಪೂರ್ಣಗೊಂಡಿದ್ದು, ಟವರ್‌ಗಳನ್ನು ಸಂಪರ್ಕಿಸುವ ವಿದ್ಯುತ್ ತಂತಿ ಅಳವಡಿಸುವ ಕೆಲಸ ಪ್ರಸ್ತುತ ಪ್ರಗತಿಯಲ್ಲಿದೆ. ಒಟ್ಟು 47.26 ಕಿಲೋ ಮೀಟರ್ ಮಾರ್ಗದಲ್ಲಿ 42.759 ಕಿಲೋ ಮೀಟರ್ ವರೆಗೆ ಈಗಾಗಲೇ ವಿದ್ಯುತ್ ತಂತಿ ಅಳವಡಿಸುವ ಕೆಲಸ ಪೂರ್ಣಗೊಂಡಿದೆ. ಉಳಿದ ಕೆಲಸ ಪೂರ್ಣಗೊಂಡ ನಂತರ ಯೋಜನೆ ಕಾರ್ಯಾರಂಭಗೊಳ್ಳಲಿದೆ.

ಕೇರಳ ಸರಕಾರವು ಅನುಮೋದಿಸಿದ ವಿಶೇಷ ಪ್ಯಾಕೇಜ್ ಪ್ರಕಾರ ಯೋಜನೆಗಾಗಿ ಭೂಮಿ ಬಿಟ್ಟುಕೊಟ್ಟವರಿಗೆ ಪರಿಹಾರ ವಿತರಣಾ ಕಾರ್ಯವೂ ನಡೆಯುತ್ತಿದ್ದು, ವಿದ್ಯುತ್ ಟವರ್ ಹಾದುಹೋಗುವ ಪ್ರದೇಶಗಳಲ್ಲಿ ತೆರವುಗೊಳಿಸಿದ ಮರಗಳಿಗೆ ಪರಿಹಾರವಾಗಿ ಸಂಬಂಧಪಟ್ಟ ಭೂಮಾಲಕರಿಗೆ 90 ಕೋಟಿ ರೂ. ವಿತರಿಸಲಾಗಿದೆ. ಈ ನಿಟ್ಟಿನಲ್ಲಿ 5 ಕೋ. ರೂ. ನೀಡಲು ಬಾಕಿಯಿರುವುದಾಗಿ ಸಂಬಂಧಪಟ್ಟ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಯೋಜನೆಗಾಗಿ ವಶಪಡಿಸಿ ಕೊಳ್ಳಲಾಗಿರುವ ಭೂಮಿಯ ಒಟ್ಟು ಮೌಲ್ಯ 40 ಕೋಟಿ ರೂ. ಅಂದಾಜಿಸಲಾಗಿದ್ದು ಅದರಲ್ಲಿ 70 ಲಕ್ಷ ರೂ.ಗಳನ್ನು ಭೂಮಾಲಕರಿಗೆ ವರ್ಗಾಯಿಸಲಾಗಿದೆ. ಕೇಂದ್ರ ವಿದ್ಯುತ್ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ಈ ಯೋಜನೆಯ ನಿರ್ಮಾಣವನ್ನು ಸ್ಟಾಟ್ ಪವರ್ ಟ್ರಾನ್ಸ್‌ಮಿಷನ್ ಲಿಮಿಟೆಡ್ ಅಧೀನದಲ್ಲಿ ವಿಶೇಷ ಕಂಪೆನಿಯಾದ ಉಡುಪಿ ಕಾಸರಗೋಡು ಟ್ರಾನ್ಸ್‌ಮಿಷನ್ ಲಿಮಿಟೆಡ್ (ಯುಕೆಟಿಎಲ್) ನಿರ್ವಹಿಸುತ್ತಿದೆ.

ಒಟ್ಟು 115 ಕಿಲೋ ಮೀಟರ್ ಉದ್ದದ ಉಡುಪಿ – ಕರಿಂದಳಂ ಅಂತಾರಾಜ್ಯ ವಿದ್ಯುತ್ ಪ್ರಸರಣ ಮಾರ್ಗದ ಪೈಕಿ 47 ಕಿಲೋ ಮೀಟರ್ ಕೇರಳದಲ್ಲಿ ಹಾದುಹೋಗುತ್ತಿದೆ. ಕರಿಂದಳಂನಲ್ಲಿ ಸಬ್ ಸ್ಟೇಷನ್ ನಿರ್ಮಾಣವೂ ಪೂರ್ಣಗೊಂಡಿದೆ ಎಂದು ವಿದ್ಯುತ್ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಆಳ್ವಾಸ್ ಕಾಲೇಜ್ | ಜೆಇಇ ಅಡ್ವಾನ್ಸ್ 2026 ಫಲಿತಾಂಶ ಪ್ರಕಟ

ವಿದ್ಯಾರ್ಥಿಗಳ ಅಭೂತಪೂರ್ವ ಸಾಧನೆ

ಮೂಡುಬಿದಿರೆ: ದೇಶದ ಪ್ರತಿಷ್ಠಿತ ಐಐಟಿಗಳಲ್ಲಿ ಇಂಜಿನಿಯರಿಂಗ್ ಶಿಕ್ಷಣದ ಪ್ರವೇಶಕ್ಕಾಗಿ ನಡೆಯುವ ಅಖಿಲ ಭಾರತ ಮಟ್ಟದ ಜೆಇಇ ಅಡ್ವಾನ್ಸ್ 2026 ಪರೀಕ್ಷೆಯ ಫಲಿತಾಂಶದಲ್ಲಿ ಆಳ್ವಾಸ್ ಪದವಿಪೂರ್ವ ಕಾಲೇಜಿನ 17 ವಿದ್ಯಾರ್ಥಿಗಳು ಅಖಿಲ ಭಾರತ ಮಟ್ಟದಲ್ಲಿ ಶ್ರೇಷ್ಠ ಸಾಧನೆ ಮೆರೆದು ಗಮನ ಸೆಳೆದಿದ್ದಾರೆ.

ಜನರಲ್ ಹಾಗೂ ಕೆಟಗರಿ ವಿಭಾಗದ ಅಖಿಲ ಭಾರತ ಮಟ್ಟದಲ್ಲಿ ಸ್ವಾತಿ ತಲವಾರ್ (1513 ರ‍್ಯಾಂಕ್) ಹರ್ಷವರ್ಧನ್ ಕೆಪಿ (1698 ರ‍್ಯಾಂಕ್), ಮೆಲ್ರೋಯ್ ಕ್ಯಾಸ್ಟಲಿನೋ (1733 ರ‍್ಯಾಂಕ್), ಕೃತಿಕ್ ಬಿ. (1795 ರ‍್ಯಾಂಕ್), ನೀಲಾಂಬಿಕ (2223 ರ‍್ಯಾಂಕ್), ಮಾನಸ ಕೆಎಸ್ (2935 ರ‍್ಯಾಂಕ್), ಪಿಯೂಷ್ ಎಚ್. (3131 ರ‍್ಯಾಂಕ್), ಸುಪ್ರಜ್ ಶೆಟ್ಟಿ (3216 ರ‍್ಯಾಂಕ್), ಪ್ರಥಮ್ (3523 ರ‍್ಯಾಂಕ್), ಹರ್ಷಿತಾ ಬಂಡಿಗೇರಿ (4119 ರ‍್ಯಾಂಕ್), ಪ್ರಣವ್ (4580 ರ‍್ಯಾಂಕ್), ವಿಜಯ್ ಕುಮಾರ್ (5134 ರ‍್ಯಾಂಕ್), ಹರ್ಷಿತಾ ಎನ್. ಆರ್. (5191 ರ‍್ಯಾಂಕ್), ರಾಹುಲ್ (5512 ರ‍್ಯಾಂಕ್), ಶರತ್ಚಂದ್ರ (6457 ರ‍್ಯಾಂಕ್), ಶಶಾಂಕ್ (6392 ರ‍್ಯಾಂಕ್), ಈಶಾನ್ (25722 ರ‍್ಯಾಂಕ್) ಗಳಿಸಿದ್ದಾರೆ.





ಜೆಇಇ ಮೇನ್ಸ್ ಹಾಗೂ ಅಡ್ವಾನ್ಸ್ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ಆಳ್ವಾಸ್ ಪದವಿಪೂರ್ವ ಕಾಲೇಜು ಅನುಭವಿ ಬೋಧಕರ ಮಾರ್ಗದರ್ಶನ, ನಿಯಮಿತ ಪರೀಕ್ಷೆಗಳು, ವೈಯಕ್ತಿಕ ಶೈಕ್ಷಣಿಕ ಸಲಹೆ ಹಾಗೂ ಸ್ಪರ್ಧಾತ್ಮಕ ತರಬೇತಿಯನ್ನು ಒದಗಿಸುತ್ತಿದ್ದು, ಇದರ ಫಲವಾಗಿ ಪ್ರತಿವರ್ಷ ವಿದ್ಯಾರ್ಥಿಗಳು ರಾಷ್ಟ್ರಮಟ್ಟದಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ.

ಒಟ್ಟು ಸಂಸ್ಥೆಯ 17 ವಿದ್ಯಾರ್ಥಿಗಳು ಐಐಟಿ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ. ಸಾಧನೆ ಮೆರೆದ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಅಭಿನಂದಿಸಿದ್ದಾರೆ.

ಕರ್ಣಾಟಕ ಬ್ಯಾಂಕ್ | ಹೊಸ ಸವಾಲುಗಳ ಕುರಿತು ಅಭಿಪ್ರಾಯ ಹಂಚಿಕೆ

ಲೆಕ್ಕಪರಿಶೋಧಕರ ವಾರ್ಷಿಕ ಸಮ್ಮೇಳನ

ಮಂಗಳೂರು: ಕರ್ಣಾಟಕ ಬ್ಯಾಂಕ್ ವತಿಯಿಂದ 2026–27ನೇ ಹಣಕಾಸು ವರ್ಷದ ಸಮಕಾಲೀನ ಲೆಕ್ಕಪರಿಶೋಧಕರು ಹಾಗೂ ಆಂತರಿಕ ಲೆಕ್ಕಪರಿಶೋಧಕರ ವಾರ್ಷಿಕ ಸಮ್ಮೇಳನವು ಮಂಗಳೂರಿನ ಸೆಂಟಿನರಿ ಕಟ್ಟಡದಲ್ಲಿ ಇತ್ತೀಚೆಗೆ ನಡೆಯಿತು.

'ಮುನ್ನೆಚ್ಚರಿಕೆ, ಬಲಪಡಿಕೆ, ತಡೆಗಟ್ಟಿಕೆ" ಎಂಬ ಘೋಷ ವಾಕ್ಯದಡಿ ಹಮ್ಮಿಕೊಳ್ಳಲಾದ ಈ ಸಮ್ಮೇಳನವನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸಲಾಗಿದ್ದು, ದೇಶದ ವಿವಿಧ ಭಾಗಗಳಿಂದ ಲೆಕ್ಕಪರಿಶೋಧಕರು ಹಾಗೂ ಬ್ಯಾಂಕ್ ಅಧಿಕಾರಿಗಳು ಭಾಗವಹಿಸಿದರು.

ಸಮ್ಮೇಳನವು ಲೆಕ್ಕಪರಿಶೋಧನಾ ಕ್ರಮಗಳನ್ನು ಮತ್ತಷ್ಟು ಬಲಪಡಿಸುವುದು, ಅಪಾಯ ನಿರ್ವಹಣೆಯನ್ನು ಸುಧಾರಿಸುವುದು, ನಿಯಂತ್ರಣಾತ್ಮಕ ಅನುಸರಣೆ ಖಚಿತಪಡಿಸಿಕೊಳ್ಳುವುದು ಹಾಗೂ ಆಂತರಿಕ ನಿಯಂತ್ರಣ ಮತ್ತು ಆಡಳಿತ ವ್ಯವಸ್ಥೆಯ ಉತ್ತಮ ಪದ್ಧತಿಗಳನ್ನು ಹಂಚಿಕೊಳ್ಳುವ ಪ್ರಮುಖ ವೇದಿಕೆಯಾಯಿತು.

ಬ್ಯಾಂಕ್ ಆಡಿಟ್ ಸಮಿತಿಯ ಅಧ್ಯಕ್ಷ ಕೆ. ಗುರುರಾಜ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ವಿಶೇಷ ಅತಿಥಿಯಾಗಿ ಚಾರ್ಟರ್ಡ್ ಅಕೌಂಟೆಂಟ್ ಹಾಗೂ ವಕೀಲ ಎಂ.ಆರ್. ವೆಂಕಟೇಶ್ ಭಾಗವಹಿಸಿ, ಲೆಕ್ಕಪರಿಶೋಧನೆ ಮತ್ತು ನಿಯಂತ್ರಣ ಕ್ಷೇತ್ರದ ಹೊಸ ಸವಾಲುಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.



ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ರಾಘವೇಂದ್ರ ಎಸ್. ಭಟ್ ಮಾತನಾಡಿ, ಬ್ಯಾಂಕಿನ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ಶಾಶ್ವತ ಬೆಳವಣಿಗೆಯಲ್ಲಿ ಲೆಕ್ಕಪರಿಶೋಧಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು.

ಅತಿಥಿಉಪನ್ಯಾಸಕರಾಗಿಭಾಗವಹಿಸಿದ್ದ ಚಾರ್ಟರ್ಡ್ ಅಕೌಂಟೆಂಟ್ ನಂದನ್ ರಾವ್ ಇಡ್ಯಾ ಅವರು ಬದಲಾಗುತ್ತಿರುವ ಲೆಕ್ಕಪರಿಶೋಧನಾ ಪದ್ಧತಿಗಳು ಹಾಗೂ ಆಡಳಿತ ಮಾನದಂಡಗಳ ಕುರಿತು ಮಾಹಿತಿ ನೀಡಿದರು. ಬ್ಯಾಂಕಿನ ಆಂತರಿಕ ಲೆಕ್ಕಪರಿಶೋಧನಾ ವಿಭಾಗದ ಮುಖ್ಯಸ್ಥ ಹಾಗೂ ಮುಖ್ಯ ಜಾಗೃತಾಧಿಕಾರಿ ಜಯನಗರಾಜ ರಾವ್ ಎಸ್. ಅವರು ಬ್ಯಾಂಕಿನ ಬೆಳವಣಿಗೆ ಮತ್ತು ಅನುಸರಣೆ ಗುರಿಗಳಿಗೆ ಬಲವಾದ ಲೆಕ್ಕಪರಿಶೋಧನಾ ವ್ಯವಸ್ಥೆಯ ಅಗತ್ಯವನ್ನು ಒತ್ತಿಹೇಳಿದರು.

ದೇಶದ ವಿವಿಧ ಪ್ರದೇಶಗಳಿಂದ ಸಮಕಾಲೀನ ಮತ್ತು ಆಂತರಿಕ ಲೆಕ್ಕಪರಿಶೋಧಕರು, ಪ್ರಾದೇಶಿಕ ಮುಖ್ಯಸ್ಥರು, ಉಪ ಪ್ರಾದೇಶಿಕ ಮುಖ್ಯಸ್ಥರು ಹಾಗೂ ಶಾಖಾ ಮುಖ್ಯಸ್ಥರು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಜೂ.5ರಿಂದ 21ರ ವರೆಗೆ ನಡೆಯುವ ಅಭಿಯಾನ ಕಾರ್ಯಕ್ರಮ ಯಶಸ್ವಿಗೊಳಿಸಿ: ಕುತ್ಯಾರು ನವೀನ್ ಶೆಟ್ಟಿ

ಮೋದಿ ಸರಕಾರಕ್ಕೆ 12 ವರ್ಷ: ಉಡುಪಿ ಜಿಲ್ಲೆಯಾದ್ಯಂತ ಅಭಿಯಾನ

ಉಡುಪಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ ಐತಿಹಾಸಿಕ ಸಾಧನೆಗಳೊಂದಿಗೆ ಜೂ.7ರಂದು ಯಶಸ್ವೀ 12 ವರ್ಷಗಳನ್ನು ಪೂರೈಸಲಿದೆ. ಈ ನಿಟ್ಟಿನಲ್ಲಿ ಜೂ.5ರಿಂದ 21ರ ವರೆಗೆ ಜಿಲ್ಲೆಯಾದ್ಯಂತ ನಡೆಯಲಿರುವ 'ವಿಶ್ವಾಸ, ಅಭಿವೃದ್ಧಿ ಮತ್ತು ಜನ ಕಲ್ಯಾಣದ 12 ವರ್ಷಗಳು' ಅಭಿಯಾನವನ್ನು ಯಶಸ್ವಿಗೊಳಿಸುವಂತೆ ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರು ಕರೆ ನೀಡಿದರು.

ಅವರು ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆದ ಅಭಿಯಾನದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜೂ.5ರಂದು ಬೆಳಿಗ್ಗೆ ಗಂಟೆ 9.30ಕ್ಕೆ ಉಡುಪಿ ಜಿಲ್ಲಾ ಬಿಜೆಪಿ ನೇತೃತ್ವದಲ್ಲಿ ಜಿಲ್ಲಾ ರೈತ ಮೋರ್ಚಾದ ಸಹಯೋಗದೊಂದಿಗೆ ನೀಲಾವರದ ಗೋಶಾಲೆಯಲ್ಲಿ ಅಭಿಯಾನದ ಉದ್ಘಾಟನೆ ನಡೆಯಲಿದೆ. ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರುಗಳಾದ ವಿ.ಸುನೀಲ್ ಕುಮಾರ್, ಗುರ್ಮೆ ಸುರೇಶ್ ಶೆಟ್ಟಿ, ಯಶ್‌ಪಾಲ್ ಎ. ಸುವರ್ಣ, ಕಿರಣ್ ಕುಮಾರ್ ಕೊಡ್ಗಿ, ಗುರುರಾಜ್ ಗಂಟಿಹೊಳೆ ಹಾಗೂ ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್. ಪಾಟೀಲ್ ನಡಹಳ್ಳಿ ಅವರ ಉಪಸ್ಥಿತಿಯಲ್ಲಿ ಗೋಪೂಜೆಯೊಂದಿಗೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ 'ಏಕ್ ಪೇಡ್ ಮಾ ಕೆ ನಾಮ್' ಶೀರ್ಷಿಕೆಯಡಿ ಔಷಧೀಯ ಗಿಡಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ನಡೆಯಲಿದೆ. ಜಿಲ್ಲೆಯ ಎಲ್ಲಾ ಮಂಡಲಗಳು ಮತ್ತು ಬೂತ್ ಮಟ್ಟದಲ್ಲಿ ಗಿಡ ನೆಡುವ ಕಾರ್ಯಕ್ರಮ ನಡೆಯಲಿದೆ ಎಂದು ಅವರು ತಿಳಿಸಿದರು.



ಅಭಿಯಾನದ ಜಿಲ್ಲಾ ಸಹ ಸಂಚಾಲಕ ಶಿವಕುಮಾರ್ ಅಂಬಲಪಾಡಿ ಅಭಿಯಾನದ ಅಂಗವಾಗಿ ಜಿಲ್ಲಾ, ಮಂಡಲ ಮತ್ತು ಬೂತ್ ಮಟ್ಟದಲ್ಲಿ ನಡೆಸಬೇಕಾಗಿರುವ ಕಾರ್ಯಕ್ರಮಗಳ ಕುರಿತು ವಿಸ್ತೃತ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್, ಅಭಿಯಾನದ ಜಿಲ್ಲಾ ಸಂಚಾಲಕ ಮಹಾವೀರ ಹೆಗ್ಡೆ ಸಹಿತ ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾ ಮೋರ್ಚಾ ಹಾಗೂ ಮಂಡಲಗಳ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು, ಜಿಲ್ಲಾ ಪ್ರಕೋಷ್ಠಗಳ ಸಂಯೋಜಕರು, ಅಭಿಯಾನದ ಮಂಡಲ ತಂಡದ ಸಂಚಾಲಕರು ಮತ್ತು ಸದಸ್ಯರು ಉಪಸ್ಥಿತರಿದ್ದರು.

ಅಭಿಯಾನದ ಜಿಲ್ಲಾ ಸಹ ಸಂಚಾಲಕ ಕಮಲಾಕ್ಷ ಹೆಬ್ಬಾರ್ ಸ್ವಾಗತಿಸಿ, ಅಭಿಯಾನದ ಉದ್ಘಾಟನೆಯ ಕುರಿತು ಮಾಹಿತಿ ನೀಡಿ, ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಉಪಾಧ್ಯಕ್ಷೆ ನಳಿನಿ ಪ್ರದೀಪ್ ರಾವ್ ವಂದಿಸಿದರು.

> 17 ದಿನಗಳ ಅಭಿಯಾನದ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮ, ಮಾಧ್ಯಮ ಸಂವಾದ, ವಿಶೇಷ ಸಂಪರ್ಕ ಅಭಿಯಾನ, ಸ್ವಚ್ಛತಾ ಅಭಿಯಾನ, ಪ್ರಗತಿ ಪಥ ಯಾತ್ರೆ, ವಿಕಸಿತ ಭಾರತ ಸಂಕಲ್ಪ ಸಮಾವೇಶ, ಸಭಾಂಗಣದ ಸಭೆಗಳು, ಕಲ್ಯಾಣ ಶಿಬಿರ, ಮೋದಿ ಸರಕಾರದ ಸಾಧನೆಗಳ ಪ್ರದರ್ಶಿನಿ, ಸಾವಯವ ಕೃಷಿ ಕಾರ್ಯಾಗಾರ ಹಾಗೂ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮಗಳನ್ನು ಜಿಲ್ಲೆಯಾದ್ಯಂತ ಪಕ್ಷದ ಪ್ರಮುಖರು, ಬಿಜೆಪಿ ಜಿಲ್ಲಾ, ಮೋರ್ಚಾ, ಪ್ರಕೋಷ್ಠ, ಮಂಡಲ ಸಹಿತ ವಿವಿಧ ಸ್ತರದ ಪದಾಧಿಕಾರಿಗಳು, ಸಮಿತಿ ಸದಸ್ಯರು ಮತ್ತು ಕಾರ್ಯಕರ್ತರು ಸಂಘಟಿತ ಪರಿಶ್ರಮದ ಮೂಲಕ ಯಶಸ್ವಿಗೊಳಿಸಬೇಕು.
>
> ■ **ಕುತ್ಯಾರು ನವೀನ್ ಶೆಟ್ಟಿ**

ಬಿಜೆಪಿ ರಾಷ್ಟ್ರೀಯ ಸಂಘಟಕರಾಗಿ ನಾಗೇಂದ್ರ ನಾಥ್ ತ್ರಿಪಾಠಿ ನೇಮಕ

ಹೊಸದಿಲ್ಲಿ: ಬಿಜೆಪಿಯ ಹಿರಿಯ ನಾಯಕರಾದ ನಾಗೇಂದ್ರ ನಾಥ್ ತ್ರಿಪಾಠಿ ಅವರನ್ನು ಬಿಜೆಪಿಯ ರಾಷ್ಟ್ರೀಯ ಸಂಘಟಕರನ್ನಾಗಿ (ವರಿಷ್ಠ ಕಾರ್ಯಕರ್ತ ಸಂಪರ್ಕ) ನೇಮಿಸಲಾಗಿದೆ. ಪಕ್ಷದ ಹಿರಿಯ ಕಾರ್ಯಕರ್ತರನ್ನು ಮತ್ತೊಮ್ಮೆ ಪಕ್ಷದ ಮುಖ್ಯವಾಹಿನಿಯಲ್ಲಿ ಜೋಡಿಸುವ ನಿಟ್ಟಿನಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಈ ನೇಮಕ ಮಾಡಿದ್ದಾರೆ.


ಬಿಹಾರ, ಜಾರ್ಖಂಡ್ ಒಳಗೊಂಡಂತೆ ಬಿಜೆಪಿಯ ವಲಯ ಪ್ರಧಾನ ಕಾರ್ಯದರ್ಶಿಯಾಗಿ 2021ರಿಂದ ಸೇವೆ ಸಲ್ಲಿಸುತ್ತಿರುವ ನಾಗೇಂದ್ರ ತ್ರಿಪಾಠಿಯವರನ್ನು, ನಿತಿನ್ ನವೀನ್ ಅವರೀಗ ಬಿಜೆಪಿಯ ರಾಷ್ಟ್ರೀಯ ಸಂಘಟಕರನ್ನಾಗಿ (ವರಿಷ್ಠ ಕಾರ್ಯಕರ್ತ ಸಂಪರ್ಕ) ನೇಮಿಸಿರುವುದಾಗಿ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ. ರಾಜಧಾನಿ ದಿಲ್ಲಿ ಅವರ ಕೇಂದ್ರವಾಗಿರಲಿದೆ.

ರಾಜಕೀಯ ವಲಯದಲ್ಲಿ ''ನಾಗೇಂದ್ರಜೀ''ಎಂದೇ ಗೌರವಾನ್ವಿತರಾಗಿರುವ ತ್ರಿಪಾಠಿಯವರು ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಬಿಜೆಪಿ ನಡುವಣ ಸಂಪರ್ಕ ಸೇತುವಾಗಿದ್ದು, ಬಿಹಾರದಲ್ಲಿ 2011ರಿಂದ 2021ರವರೆಗೆ ಬಿಜೆಪಿ ಸಂಘಟನಾ ಪ್ರಧಾನ ಕಾರ್ಯದರ್ಶಿಯಾಗಿ ಬಿಜೆಪಿಯನ್ನು ಬಲಿಷ್ಠವಾಗಿ ಬೆಳೆಸುವಲ್ಲಿ ಪ್ರಧಾನ ಪಾತ್ರ ವಹಿಸಿದ್ದಾರೆ.

ತ್ರಿಪಾಠಿಯವರು ಬಿಹಾರ, ಜಾರ್ಖಂಡ್, ಉ.ಪ್ರದೇಶಗಳಲ್ಲಿ ಹಳೆಯ, ಹೊಸಕಾರ್ಯಕರ್ತರೆಲ್ಲರ ನೆಚ್ಚಿನ ನಾಯಕರಲ್ಲೊಬ್ಬರಾಗಿದ್ದಾರೆ. ಬಿಜೆಪಿ ಕಾರ್ಯಕರ್ತರ ಪಾಲಿಗೆ ಅವರೊಬ್ಬ ಪೋಷಕರಂತೆ ಕಾರ್ಯನಿರ್ವಹಿಸಿದವರು ಇದೀಗ ರಾಷ್ಟ್ರೀಯ ಮಟ್ಟದಲ್ಲಿ ಅವರ ಸೇವೆ ಸಲ್ಲಲಿದೆ ಎಂದು ಬಿಜೆಪಿಯ ಹಿರಿಯ ನಾಯಕ ನಿಖಿಲ್ ಆನಂದ್ ತಿಳಿಸಿದ್ದಾರೆ. 2003–2011ರವರೆಗೆ ಅವರು ಉತ್ತರಪ್ರದೇಶದಲ್ಲೂ ಪ್ರಧಾನ ಸಂಘಟನಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಅನೇಕ ವರ್ಷಗಳ ಕಾಲ ಎಬಿವಿಪಿ ನಾಯಕರಾಗಿಯೂ ಕಾರ್ಯನಿರ್ವಹಿಸಿದ್ದರು.

ಇವರು ಮೂಲತಃ ಉತ್ತರಪ್ರದೇಶದ ಸಂತ ಕಬೀರ್ ನಗರದ ಬೆಳೌಳಿ ಗ್ರಾಮದ ರೈತ ಕುಟುಂಬದಿಂದ ಬಂದಿದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪೂರ್ಣಾವಧಿ ಪ್ರಚಾರಕರಾಗಿ, ಸಮುದಾಯ ಅಭಿವೃದ್ಧಿ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ರಾಮ ಬಾಣ



₹2 ಕೋಟಿ ಹಣಕ್ಕಾಗಿ ಒತ್ತಡ

ಮಾಜಿ ಎಂಎಲ್‌ಸಿ ದಯಾನಂದ ರೆಡ್ಡಿ ಅಪಹರಣ

ಆನೇಕಲ್: ತಾಲೂಕಿನ ಹೀಲಲಿಗೆ ಬಳಿಯ ಗೋಲ್ಡ್ ಕಾಯಿನ್ ಕ್ಲಬ್ ಬಳಿ ಮಾಜಿ ಎಂಎಲ್‌ಸಿ ದಯಾನಂದರೆಡ್ಡಿ ಅವರಿಗೆ ಸೋಮವಾರ ರಾತ್ರಿ 12 ಗಂಟೆ ಸಮಯದಲ್ಲಿ ನಾಲ್ವರು ಗನ್ ತೋರಿಸಿ ದಯಾನಂದರೆಡ್ಡಿ ಅವರನ್ನು ಕಾರಿನಲ್ಲಿ ಕಿಡ್ನಾಪ್ ಮಾಡಿ 2 ಕೋಟಿ ರೂಪಾಯಿ ಹಣಕ್ಕೆ ಬೇಡಿಕೆ ಇಟ್ಟಿರುವ ಪ್ರಕರಣ ಅತ್ತಿಬೆಲೆ ಪೋಲಿಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕಳೆದ ಸೋಮವಾರ ರಾತ್ರಿ ಗೋಲ್ಡ್ ಕಾಯಿನ್ ಕ್ಲಬ್‌ನಿಂದ ದಯಾನಂದರೆಡ್ಡಿ ಹೊರಟಿದ್ದರು. ಈ ವೇಳೆ ಬೈಕ್‌ನಲ್ಲಿ ಬಂದ ಅಪಹರಣಕಾರರು ದಯಾನಂದರೆಡ್ಡಿ ಕಾರು ಅಡ್ಡಗಟ್ಟಿದ್ದ ದುಷ್ಕರ್ಮಿಗಳು ನಿಮಗೆ ಗಿಫ್ಟ್ ಬಂದಿದೆ ಎಂದು ಕಾಟನ್ ಬಾಕ್ಸ್ ತೋರಿಸಿದ್ದರು. ಡೋರ್ ಲಾಕ್ ಓಪನ್ ಮಾಡುತ್ತಿದ್ದಂತೆ ಕಾರಿಗೆ ನುಗ್ಗಿರುವ ಓರ್ವ ಗನ್ ತೋರಿಸಿ ತಾನು ಹೇಳಿದ ಕಡೆ ಕಾರು ಚಲಾಯಿಸಲು ಸೂಚನೆ ನೀಡಿದ್ದಾನೆ. ಬಳಿಕ ಕೆಂಪು ಬಣ್ಣದ ಕಾರಿನಲ್ಲಿ ಮತ್ತಿಬ್ಬರು ಇವರನ್ನು ಹಿಂಬಾಲಿಸಿದ್ದಾರೆ. ಅತ್ತಿಬೆಲೆ ಕೆಎಚ್‌ಬಿ ಬಡಾವಣೆ ಬಳಿ ಕರೆದೊಯ್ದು ಕೊಲೆ ಬೆದರಿಕೆ ಹಾಕಲಾಗಿದೆ. ನಿನ್ನ ಹತ್ಯೆಗೆ 10 ಕೋಟಿ ರೂ. ಸುಪಾರಿ ಕೊಟ್ಟಿದ್ದಾರೆ ಎಂದರು. ಈ ವೇಳೆ ಆ ಹಣವನ್ನು ತಾನೇ ಕೊಡುತ್ತೇನೆ ಕೊಲ್ಲಬೇಡಿ ಎಂದು ದಯಾನಂದರೆಡ್ಡಿ ಅವರು ಮನವಿ ಮಾಡಿದ್ದಾರೆ. ಮೊದಲು 3ಕೋಟಿ ಹಣ ಬೇಡಿಕೆ ಇಟ್ಟಿದ್ದ ಅಪಹರಣಕಾರರ ಗುಂಪು ಅಂತಿಮವಾಗಿ 2 ಕೋಟಿಗೆ ಒಪ್ಪಿಕೊಂಡಿದ್ದಾರೆ. ಈಗ ಹಣ ಇಲ್ಲ ಬೆಳಗ್ಗೆ ಬ್ಯಾಂಕ್ ಟೈಮ್‌ಗೆ ನೀಡುವುದಾಗಿ ದಯಾನಂದರೆಡ್ಡಿ ಕೇಳಿಕೊಂಡಿದ್ದಾರೆ. ಹಣ ಡ್ರಾ ಮಾಡಿದ ಬಳಿಕ ಕರೆ ಮಾಡುವಂತೆ ತಿಳಿಸಿ ಅಪಹರಣಕಾರರು ದಯಾನಂದರೆಡ್ಡಿ ಅವರನ್ನು ಬಿಟ್ಟು ಕಳುಹಿಸಿದ್ದಾರೆ ಎನ್ನಲಾಗಿದೆ. ಅತ್ತಿಬೆಲೆ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಅಪಹರಣಕಾರರ ಬಂಧಕ್ಕಾಗಿ ಶೋಧ ನಡೆಸಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

◈ ಕೇಂದ್ರ ಸರಕಾರದ ಒಂದು ದೇಶ ಒಂದು ಚುನಾವಣೆ ಪ್ರಸ್ತಾವನೆಯು ರಾಜಕೀಯ ಪ್ರೇರಿತ – ಡಿಕೆಶಿ

– ರಾಜಕೀಯದವರು ರಾಜಕೀಯ ಮಾಡುವುದು ತಪ್ಪಲ್ಲ, ಸಾಕ್ಷಾತ್ ಶ್ರೀ ಕೃಷ್ಣನೂ ದುಷ್ಟ ಸಂಹಾರಕ್ಕಾಗಿ ಸಜ್ಜನರ ಸಂರಕ್ಷಣೆಗಾಗಿ ರಾಜಕೀಯ ಮಾಡಿದ್ದ. ದೇಶಕ್ಕೆ ಅನುಕೂಲವಾಗುವ ರಾಜಕೀಯ ಮಾಡಿದಾಗ ತಪ್ಪು ಅಂತ ಹೇಳುವುದು ಮಹಾ ತಪ್ಪು!

ದಿನ ಭವಿಷ್ಯ

ಮೇಷ ವೃತ್ತಿ ಸಮಸ್ಯೆ ಇತ್ಯರ್ಥ. ನವ ವಿವಾಹಿತರಿಗೆ ಹರ್ಷದ ಸುದ್ದಿ. ಉನ್ನತ ಶಿಕ್ಷಣ ಬಯಸುವ ವಿದ್ಯಾರ್ಥಿಗಳಿಗೆ ಶುಭ ದಿನ.

ವೃಷಭ ನಿಮ್ಮನ್ನು ಉತ್ತೇಜಿಸುವ ವ್ಯಕ್ತಿ ಸಿಗುವರು. ಪರಿಸ್ಥಿತಿಗೆ ಹೊಂದಿಕೊಂಡು ಬಾಳಿ, ಅದನ್ನು ಬದಲಿಸಲು ಹೋಗಬೇಡಿ.

ಮಿಥುನ ವೃತ್ತಿಕ್ಷೇತ್ರದಲ್ಲಿ ಅಧಿಕಾರ ಪೈಪೋಟಿ ನಡೆದೀತು. ಸಹನೆಯಿಂದ ನಿಭಾಯಿಸಿ. ಹಳೆಯ ತಪ್ಪು ನಿಮ್ಮನ್ನು ಕಾಡಲು ಅವಕಾಶ ನೀಡಬೇಡಿ.

ಕಟಕ ಮನಸ್ಸು ಪ್ರಕ್ಷುಬ್ಧ. ಧ್ಯಾನ ನಿಮಗೆ ಸಹಕಾರಿ. ಆರೋಗ್ಯದ ಕಡೆ ಗಮನ ಕೊಡಿ. ವಿದ್ಯಾರ್ಥಿಗಳಿಗೆ ಗ್ರಹಗತಿ ಅನುಕೂಲಕರ. ಉನ್ನತ ಶಿಕ್ಷಣ ಪ್ರಾಪ್ತಿ.

ಸಿಂಹ ಹೆತ್ತವರು ಮಕ್ಕಳ ಕಡೆ ಹೆಚ್ಚು ಗಮನ ಕೊಡಿ. ಋತುಮಾನ ಸಂಬಂಧಿ ಅನಾರೋಗ್ಯ ಸಂಭವ. ನಿಮ್ಮ ವ್ಯವಹಾರ ಸಕಾಲದಲ್ಲಿ ಮುಗಿಸಿ.

ಕನ್ಯಾ ಜಡ ಸ್ವಭಾವ ಬಿಡಿ. ಉತ್ಸಾಹ ತುಂಬಿಕೊಳ್ಳಿ. ಆಪ್ತರ ಸಂಗದಲ್ಲಿ ಖುಷಿ ಪಡುವ ಬೆಳವಣಿಗೆ. ಆರ್ಥಿಕ ಬಿಕ್ಕಟ್ಟು ಇತ್ಯರ್ಥ. ಕೌಟುಂಬಿಕ ಸಾಮರಸ್ಯ.

ತುಲಾ ನಿಮ್ಮ ಜತೆ ಇರುವವರೆಲ್ಲ ನಿಮ್ಮ ಹಿತೈಷಿಗಳಲ್ಲ, ಅರಿಯಿರಿ. ಹಿರಿಯರ ಜತೆ ತುಸು ಕಾಲ ಕಳೆಯಿರಿ. ಆರ್ಥಿಕ ವ್ಯವಹಾರ ಸುಗಮ.

ವೃಶ್ಚಿಕ ಇಂದು ಹೆಚ್ಚು ಉತ್ಸಾಹ, ಕ್ರಿಯಾಶೀಲತೆ. ಅದನ್ನು ಸದುಪಯೋಗ ಮಾಡಿಕೊಳ್ಳಿ. ವೃತ್ತಿಯಲ್ಲಿ ಮೂಡಿದ್ದ ಬಿಕ್ಕಟ್ಟು ಪರಿಹಾರ ಸನ್ನಿಹಿತ.

ಧನು ಕಾರ್ಯಕ್ಷಮತೆ ಎಲ್ಲರ ಮೆಚ್ಚುಗೆ ಪಡೆಯಲಿದೆ. ನಿಮ್ಮಿಂದ ಕೆಲವರು ಹೆಚ್ಚು ಹಣ ಖರ್ಚು ಮಾಡಿಸುವರು. ಆ ಬಗ್ಗೆ ಎಚ್ಚರದಿಂದಿರಿ.

ಮಕರ ಕೆಲ ಸಮಯದಿಂದ ಕಾಡುತ್ತಿದ್ದ ಸಂಧಿ ನೋವು ನಿವಾರಣೆ. ಆರ್ಥಿಕ ಯೋಜನೆಗೆ ಉತ್ತೇಜನ ಸಿಗಲಿದೆ. ಪ್ರಮುಖ ಗುರಿ ಈಡೇರುವ ಸಾಧ್ಯತೆ.

ಕುಂಭ ಕನಸು ಕಂಡರಷ್ಟೆ ಸಾಲದು. ಅದಕ್ಕೆ ತಕ್ಕ ಶ್ರಮವೂ ಬೇಕು. ಕೌಟುಂಬಿಕ ಪರಿಸರ ಉಲ್ಲಾಸದಾಯಕ. ವೃತ್ತಿಯಲ್ಲಿ ಯಶಸ್ಸು.

ಮೀನ ಗ್ರಹಗತಿ ನಿಮಗೆ ಪೂರಕ. ಸಂಬಂಧದಲ್ಲಿ ಸುಧಾರಣೆ. ಮಾನಸಿಕ ಶಾಂತಿ. ಆರ್ಥಿಕ ಸಂಕಷ್ಟ ಪರಿಹಾರ. ಉದ್ದೇಶವೊಂದು ಈಡೇರಲಿದೆ.

ರಾಹುಕಾಲ: 12.00–1.30
ಗುಳಿಕಕಾಲ: 10.30–12.00

ಅದೃಷ್ಟ ಸಂಖ್ಯೆ : 4,9,6,3

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ವಿಡಿಯೊ ಪೋಸ್ಟ್

ಸೋನಿಯಾ ಕುಟುಂಬಕ್ಕೆ ಶಿವಕುಮಾರ್ ಕೃತಜ್ಞತೆ

ಬೆಂಗಳೂರು: ತಮ್ಮ ರಾಜಕೀಯ ಪಯಣದಲ್ಲಿ ಇಲ್ಲಿಯವರೆಗೆ ತಲುಪಲು ಸಹಾಯ ಮಾಡಿದ ಗಾಂಧಿ ಕುಟುಂಬಕ್ಕೆ ಕರ್ನಾಟಕದ ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ವಿಡಿಯೊ ಪೋಸ್ಟ್ ಹಂಚಿಕೊಂಡಿರುವ ಅವರು, ತಮ್ಮ ಮೇಲೆ ನಂಬಿಕೆ ಇಟ್ಟಿದ್ದಕ್ಕಾಗಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರಿಗೆ ಧನ್ಯವಾದ ತಿಳಿಸಿದ್ದಾರೆ. ನನ್ನ ಸಾಮರ್ಥ್ಯದ ಬಗ್ಗೆ ನನಗೆ ಅರಿವಾಗುವ ಮುನ್ನವೇ, ಅದನ್ನು ಗುರುತಿಸಿದವರು ದಿ.ರಾಜೀವ್ ಗಾಂಧಿ. ಅವರನ್ನು ಆಗಾಗ್ಗೆ ನೆನಪಿಸಿಕೊಳ್ಳುತ್ತೇನೆ. ಅವರ ಪ್ರೋತ್ಸಾಹವು ನನಗೆ ದೊಡ್ಡದಾಗಿ ಯೋಚಿಸಲು ಮತ್ತು ನನ್ನನ್ನು ಸಾರ್ವಜನಿಕ ಸೇವೆಗೆ ಮುಡಿಪಾಗಿಟ್ಟುಕೊಳ್ಳಲು ಆತ್ಮವಿಶ್ವಾಸವನ್ನು ನೀಡಿತ್ತು' ಎಂದು ಹೇಳಿದ್ದಾರೆ.

ಸೋನಿಯಾ ಗಾಂಧಿ ಅವರು ನಾಯಕತ್ವದ ಮತ್ತೊಂದು ಪ್ರಮುಖ ಪಾಠವನ್ನು ನನಗೆ ಕಲಿಸಿದವರು. ನಿಜವಾದ ನಾಯಕ ನಿಮ್ಮ ಯಶಸ್ವಿನ ಸಮಯದಲ್ಲಿ ಮಾತ್ರ ಜೊತೆಗೆ ನಿಲ್ಲುವುದಿಲ್ಲ, ಅವರು ನಿಮ್ಮ ಕಷ್ಟದ ಸಮಯದಲ್ಲಿಯೂ ಜೊತೆಗೆ ನಿಲ್ಲುತ್ತಾರೆ ಎಂದು ಹೇಳಿಕೊಟ್ಟವರು. ನನ್ನ ಜೀವನದ ಅತ್ಯಂತ ಸವಾಲಿನ ಸಮಯದಲ್ಲಿ ಅವರು ನನ್ನ ಮೇಲಿಟ್ಟ ನಂಬಿಕೆಯನ್ನು ನಾನು ಯಾವಾಗಲೂ ಗೌರವಿಸುತ್ತೇನೆ ಎಂದು ಶಿವಕುಮಾರ್ ಹೇಳಿದ್ದಾರೆ.

ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ಅವರಿಗಿರುವ ದೃಢ ನಂಬಿಕೆ, ಭಾರತದ ಕುರಿತಾದ ಅವರ ದೃಷ್ಟಿಕೋನವು ನನ್ನಂತಹ ಅನೇಕ ನಾಯಕರಿಗೆ ನಿರಂತರವಾಗಿ ಪ್ರೇರಣೆ ನೀಡುತ್ತಲೇ ಇವೆ. ನನ್ನ ಸಾರ್ವಜನಿಕ ಜೀವನದುದ್ದಕ್ಕೂ ಅವರು ನೀಡಿದ ಬೆಂಬಲವನ್ನು ಮರೆಯುವುದಿಲ್ಲ ಎಂದು ಡಿಕೆಶಿ ಹೇಳಿದ್ದಾರೆ. ಪ್ರಿಯಾಂಕಾ ಗಾಂಧಿ ಅವರು ಆತ್ಮೀಯ ವ್ಯಕ್ತಿಯಾಗಿದ್ದಾರೆ. ಪ್ರತಿಯೊಬ್ಬ ಕಾರ್ಯಕರ್ತರನ್ನು ಗೌರವ ಮತ್ತು ಘನತೆಯಿಂದ ನಡೆಸಿಕೊಳ್ಳುತ್ತಾರೆ. ರಾಜಕೀಯ ಎಂದರೆ ಅಂತಿಮವಾಗಿ ಜನರೊಂದಿಗೆ ಸಂಪರ್ಕ ಸಾಧಿಸುವುದು ಮತ್ತು ಅವರ ಆಕಾಂಕ್ಷೆಗಳನ್ನು ಅರ್ಥಮಾಡಿಕೊಳ್ಳುವುದು ಎಂಬುದನ್ನು ನಮಗೆ ನೆನಪಿಸಿದ್ದಾರೆ ಎಂದು ತಿಳಿಸಿದ್ದಾರೆ.

ಸೇವೆಯ ಮೂಲಕ ಇತರರಿಗೆ ಸ್ಫೂರ್ತಿ



ಒಬ್ಬರ ಸಾಮರ್ಥ್ಯವನ್ನು ಗುರುತಿಸುವುದು, ಕಷ್ಟದ ಸಮಯದಲ್ಲಿ ಜೊತೆಗೆ ನಿಲ್ಲುವುದು, ಸಹಾನುಭೂತಿಯಿಂದ ಆಲಿಸುವುದು ಮತ್ತು ಸೇವೆಯ ಮೂಲಕ ಇತರರಿಗೆ ಸ್ಫೂರ್ತಿ ನೀಡುವುದು ಗಾಂಧಿ ಕುಟುಂಬ ನನಗೆ ಸೇರಿದಂತೆ ಅನೇಕ ಕಾಂಗ್ರೆಸ್ ಕಾರ್ಯಕರ್ತರಿಗೆ ಕಲಿಸಿದ ಪಾಠಗಳು ಎಂದಿದ್ದಾರೆ.ನಾನೊಬ್ಬ ತಳಮಟ್ಟದ ಕಾರ್ಯಕರ್ತನಾಗಿ ಇದೀಗ ಕರ್ನಾಟಕವನ್ನು ಮುನ್ನಡೆಸುವ ಜವಾಬ್ದಾರಿ ಹೊತ್ತಿರುವ ನಾನು, ಗಾಂಧಿ ಟುಂಬ ನನ್ನ ಮೇಲೆ ಇಟ್ಟಿರುವ ನಂಬಿಕೆಗೆ ಕೃತಜ್ಞನಾಗಿದ್ದೇನೆ ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ರಾಜ್ಯದಲ್ಲಿ ಯುವ ಯುಗಾರಂಭ: ಡಿಕೆಶಿ

ಹೊಸದಿಲ್ಲಿ: ಕರ್ನಾಟಕದ ಜನರು ನನ್ನ ಮೇಲೆ ವಿಶ್ವಾಸ ಹೊಂದಿದ್ದಾರೆ. ರೈತರು, ಮಹಿಳೆಯರು ಹಾಗೂ ಯುವ ಪೀಳಿಗೆಯನ್ನು ಸೇರಿ ನಾನು ಸಮಾಜದ ಪ್ರತಿಯೊಂದು ವರ್ಗವನ್ನು ಒಟ್ಟಿಗೆ ತೆಗೆದುಕೊಂಡು ಹೋಗುತ್ತೇನೆ. ಕರ್ನಾಟಕದಲ್ಲಿ ಹೊಸ ಯುವ ಯುಗ ಪ್ರಾರಂಭವಾಗಲಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ ಶಿವಕುಮಾರ್ ಹೇಳಿದರು.

ದಿಲ್ಲಿಯಲ್ಲಿ ಸುದ್ದಿ ಸಂಸ್ಥೆಯೊಂದಕ್ಕೆ ಮಂಗಳವಾರ ಪ್ರತಿಕ್ರಿಯೆ ನೀಡಿದ ಅವರು, ನಾನು ಯಾವುದನ್ನೂ ಕನಸು ಎಂದು ಹೇಳುವುದಿಲ್ಲ. ಕಠಿಣ ಪರಿಶ್ರಮದ ಜೊತೆಗೆ ಸಮರ್ಪಣೆ ಎಂದು ಕರೆಯುತ್ತೇನೆ. ಇದು ಕಠಿಣ ಸಮಯ, ವಿಳಂಬವಾಗಿರಬಹುದು ಆದರೆ ನಿರಾಕರಣೆಗೆ ಒಳಗಾಗಿಲ್ಲ ಎಂದರು.

ಇಲ್ಲಿ ಶಿವಕುಮಾರ್ ಒಬ್ಬನ ವಿಚಾರವಲ್ಲ, ಕಾಂಗ್ರೆಸ್ ಪಕ್ಷದ ಇತಿಹಾಸದೊಂದಿಗೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ನಂಬಿಕೆಯಿಟ್ಟಿರುವ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರ ಪರಿಶ್ರಮದ ಫಲವಾಗಿದೆ. ಗಾಂಧಿ ಕುಟುಂಬ ನನ್ನ ಮೇಲೆ ನಂಬಿಕೆಯನ್ನಿಟ್ಟಿತ್ತು. ಅವರು ನನಗೆ ವಿವಿಧ ಅವಕಾಶಗಳನ್ನು ನೀಡಿದರು. ರಾಜೀವ್ ಗಾಂಧಿ ಅವರಿಂದ ಹಿಡಿದು ಇಲ್ಲಿಯವರೆಗೆ ಕುಟುಂಬಕ್ಕೆ ತುಂಬಾ ನಿಷ್ಠನಾಗಿದ್ದೇನೆ ಎಂದರು.

ನಂಬಿಕೆಗೆ ಬದ್ಧ: ನನ್ನ ಮೇಲೆ ಇಟ್ಟಿರವ ನಂಬಿಕೆ ಮತ್ತು ವಿಶ್ವಾಸಕ್ಕೆ ನಾನು ತುಂಬಾ ಬದ್ಧನಾಗಿದ್ದೇನೆ ಮತ್ತು ನಾನು ಬಹಳಷ್ಟು ಕಷ್ಟಪಟ್ಟು ಕೆಲಸ ಮಾಡಿ ಎಲ್ಲರ ಆಶೋತ್ತರಗಳನ್ನು ಈಡೇರಿಸುತ್ತೇನೆ. ದಾರಿ ಅಷ್ಟು ಸುಲಭವಾಗಿಲ್ಲ. ಆದರೂ ಇದನ್ನು ನಿರ್ವಹಿಸಬೇಕು. ನಾನು ನನ್ನ ಕೆಲಸವನ್ನು ತುಂಬಾ ಪ್ರಾಮಾಣಿಕವಾಗಿ, ಸಮರ್ಪಣಾಭಾವದಿಂದ ಮಾಡುತ್ತೇನೆ ಎಂದರು. ನನ್ನ ಕೆಲಸಗಳ ಮೂಲಕ ನಾನು ಏನು ಎಂಬುದನ್ನು ಮರು ನಿರೂಪಿಸಬೇಕಿದೆ. ಏಕೆಂದರೆ ಜಗತ್ತು ಬೆಂಗಳೂರು ಮತ್ತು ಕರ್ನಾಟಕದ ಮೂಲಕ ಭಾರತವನ್ನು ನೋಡು ತ್ತದೆ. ಕರ್ನಾಟಕ ಸುಂದರ ರಾಜ್ಯ. ನಾನು ಯಾರನ್ನು ಭೇಟಿಯಾದರೂ, ಅವರು ಕರ್ನಾಟಕ ದೇಶದ ಪ್ರಮುಖ ರಾಜ್ಯ ಎಂದು ಹೇಳುತ್ತಾರೆ. ಆದ್ದರಿಂದ ಜವಾಬ್ದಾರಿ ಹೆಚ್ಚಿದೆ ಎಂದರು.

ಇಂದಿನಿಂದ ಹೆಚ್ಚುವರಿ ರೈಲುಗಳ ಸೇರ್ಪಡೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಬಣ್ಣದ ಮಾರ್ಗಕ್ಕೆ ಜೂ.3ರಿಂದ ಹೆಚ್ಚುವರಿ ರೈಲುಗಳ ಸೇರ್ಪಡೆಯಾಗಲಿದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಹಳದಿ ಮಾರ್ಗದಲ್ಲಿ ಆರ್‌ವಿ ರಸ್ತೆ – ಬೊಮ್ಮಸಂದ್ರವರೆಗೆ ಬುಧವಾರದಿಂದ ಎರಡು ಹೆಚ್ಚುವರಿ ರೈಲುಗಳನ್ನು ಪ್ರಯಾಣಿಕರ ಸೇವೆಗೆ ಸೇರ್ಪಡೆಗೊಳಿಸಲಾಗುತ್ತಿದೆ. ಈ ಹೆಚ್ಚುವರಿ ರೈಲುಗಳ ಸೇರ್ಪಡೆಯೊಂದಿಗೆ, ಪ್ರತಿದಿನ ಒಟ್ಟು 10 ರೈಲುಗಳು ಕಾರ್ಯನಿರ್ವಹಿಸಲಿದ್ದು, ಇದರಿಂದ ಸೇವಾ ಆವರ್ತನೆಯನ್ನು ಹೆಚ್ಚಿಸಲು ಹಾಗೂ ನಿರೀಕ್ಷಾ ಸಮಯವನ್ನು ಕಡಿಮೆ ಮಾಡಲು ಸಾಧ್ಯವಾಗಲಿದೆ. ಸೋಮವಾರದಿಂದ ಶುಕ್ರವಾರದವರೆಗೆ ಗರಿಷ್ಠ ದಟ್ಟಣೆಯ ಸಮಯದಲ್ಲಿ ಪ್ರಸ್ತುತ 9 ನಿಮಿಷಗಳಿಗೊಮ್ಮೆ ಸಂಚರಿಸುತ್ತಿರುವ ರೈಲುಗಳು ಇನ್ನು ಮುಂದೆ 7 ನಿಮಿಷಗಳ ಅಂತರದಲ್ಲಿ ಸಂಚರಿಸಲಿವೆ. 14 ನಿಮಿಷಗಳಿಗೊಮ್ಮೆ ಸಂಚರಿಸುತ್ತಿರುವ ರೈಲುಗಳು ಇನ್ನು ಮುಂದೆ 10 ನಿಮಿಷಗಳ ಅಂತರದಲ್ಲಿ ಸಂಚರಿಸಲಿವೆ. ದಿನವಿಡೀ 10 ನಿಮಿಷಗಳ ಅಂತರದಲ್ಲಿ ಸಂಚರಿಸಲಿವೆ. ವಾರದ ಯಾವುದೇ ದಿನದಲ್ಲಿಯೂ ಆರ್‌ವಿ ರಸ್ತೆ, ಬೊಮ್ಮಸಂದ್ರ ಟರ್ಮಿನಲ್ ನಿಲ್ದಾಣ ಗಳಿಂದ ಹೊರಡುವ ಮೊದಲ ಹಾಗೂ ಕೊನೆಯ ರೈಲುಗಳ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಿಬಿಎಸ್‌ಇ ತ್ರಿಭಾಷಾ ನೀತಿ: ಕನ್ನಡ ಶಿಕ್ಷಕರಿಗೆ ಬಲು ಬೇಡಿಕೆ

ಪುಟ ೧➡ ಇನ್ನೊಂದೆಡೆ ಫ್ರೆಂಚ್, ಜರ್ಮನ್ ಹಾಗೂ ಸ್ಪ್ಯಾನಿಷ್ ಭಾಷೆಗಳನ್ನು ಬೋಧಿಸುತ್ತಿದ್ದ ಶಿಕ್ಷಕರು ಉದ್ಯೋಗ ಭದ್ರತೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗುವ ಸಾಧ್ಯತೆ ಇರುವುದರಿಂದ ಕೆಲವು ಶಾಲೆಗಳು ವಿದೇಶಿ ಭಾಷಾ ವಿಭಾಗಗಳನ್ನು ಮರುಸಂರಚಿಸುತ್ತಿವೆ. ಆದರೆ, ಹಲವಾರು ಶಾಲೆಗಳು ಈ ಶಿಕ್ಷಕರನ್ನು ವಾರಾಂತ್ಯದ ತರಗತಿಗಳು, ಭಾಷಾ ಕ್ಲಬ್‌ಗಳು ಹಾಗೂ ಪಠ್ಯೇತರ ಚಟುವಟಿಕೆಗಳ ಮೂಲಕ ಉಳಿಸಿಕೊಳ್ಳುವ ಪ್ರಯುತ್ನ ನಡೆಸುತ್ತಿವೆ.

ಕನ್ನಡ ಭಾಷೆಗೆ ಹೊಸ ಉತ್ತೇಜನ: ತ್ರಿಭಾಷಾ ನೀತಿಯ ಪರಿಣಾಮವಾಗಿ ಕನ್ನಡ ಭಾಷಾ ಕಲಿಕೆಗೆ ಹೊಸ ಉತ್ತೇಜನ ದೊರೆಯಲಿದೆ. ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಸಿಬಿಎಸ್‌ಇ ಶಾಲೆಗಳಲ್ಲೂ ಕನ್ನಡದ ಬಳಕೆ ಮತ್ತು ಅಧ್ಯಯನ ವ್ಯಾಪ್ತಿಯು ವಿಸ್ತಾರಗೊಳ್ಳುವ ಸಾಧ್ಯತೆ ಇದೆ. ಇದುವರೆಗೆ ಕೆಲವು ಶಾಲೆಗಳಲ್ಲಿ ಕನ್ನಡವನ್ನು ಕೇವಲ ಔಪಚಾರಿಕ ವಿಷಯವಾಗಿ ಪರಿಗಣಿಸಲಾಗುತ್ತಿತ್ತು. ಆದರೆ, ಹೊಸ ನಿಯಮದಿಂದ ಭಾಷಾ ಬೋಧನೆಗೆ ಹೆಚ್ಚಿನ ಮಹತ್ವ ಸಿಗಲಿದ್ದು, ಕನ್ನಡ ಶಿಕ್ಷಕರಿಗೆ ಉದ್ಯೋಗಾವಕಾಶಗಳು ಹೆಚ್ಚಾಗಲಿವೆ ಎಂದು ಶಿಕ್ಷಣ ವಲಯದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

> **ನಮ್ಮ ಶಾಲೆಯಲ್ಲಿ ವಿದೇಶಿ ಭಾಷಾ ಶಿಕ್ಷಕರನ್ನು ಕೆಲಸದಿಂದ ತೆಗೆದುಹಾಕುವ ಪ್ರಶ್ನೆಯೇ ಇಲ್ಲ. ವಾರಾಂತ್ಯದ ಕೋರ್ಸ್‌ಗಳು, ಕೌಶಲಾಭಿವೃದ್ಧಿ ಕಾರ್ಯಕ್ರಮಗಳು ಮತ್ತು ಪಠ್ಯೇತರ ಚಟುವಟಿಕೆಗಳ ಮೂಲಕ ಅವರಿಗೆ ಅವಕಾಶ ಕಲ್ಪಿಸಲಾಗುತ್ತದೆ. ಹಲವರು ಇತರೆ ವಿಷಯಗಳನ್ನೂ ಬೋಧಿಸುತ್ತಿರುವುದರಿಂದ ಅವರ ಸೇವೆಯನ್ನು ವಿವಿಧ ರೀತಿಯಲ್ಲಿ ಬಳಸಿಕೊಳ್ಳಬಹುದು.**
>
> ■ **ಶೆಫಾಲಿ ತ್ಯಾಗಿ, ಪ್ರಾಂಶುಪಾಲೆ, ಎಚ್‌ಎಸ್‌ಆರ್ ಲೇಔಟ್‌ನ ಖಾಸಗಿ ಶಾಲೆ (ಸಿಬಿಎಸ್‌ಇ)**

ದಾಳಿಕೋರರ ರಕ್ಷಣೆಗೆ ಬಿಜೆಪಿ ಕಿಡಿ

ಪುಟ ೧➡ ಶಿವಲಿಂಗದ ಮೇಲೆ ಮಲಮೂತ್ರ ಮಾಡಿದ್ದನ್ನು ಸ್ವಚ್ಛಗೊಳಿಸುತ್ತಿದ್ದವರ ಮೇಲೆ, ಪೂಜೆ ಮಾಡಲು ಸೇರಿದ್ದ ಹಿಂದುಗಳ ಮೇಲೆ ಸಾವಿರಾರು ಸಂಖ್ಯೆಯಲ್ಲಿ ಜನರು ತಲವಾರು ಮಚ್ಚಿನಿಂದ ದಾಳಿ ಮಾಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರಿಗೂ ರಕ್ತ ಬರುವಂತೆ ಹಲ್ಲೆ ಮಾಡಿದ್ದಾರೆ. ಡಿಸಿ ಮೇಲೂ ದಾಳಿ ನಡೆದಿದೆ. ಆದರೆ ರಾಜ್ಯ ಸರ್ಕಾರ ಇಷ್ಟೆಲ್ಲ ಆದರೂ ಏನೂ ಆಗಿಲ್ಲ ವೆಂಬಂತೆ ಪ್ರಕರಣವನ್ನು ಹಿಂದಕ್ಕೆ ಪಡೆದಿದೆ ಎಂದು ದೂರಿದರು.

ದಾಳಿಕೋರರಿಗೆ ಶಿಕ್ಷೆ ಕೊಡಿಸುವ ಬದಲು ಸರ್ಕಾರ ಪ್ರೋತ್ಸಾಹ ನೀಡಿದೆ. ಇದು ಜನರಿಗೆ ಮತ್ತು ಹಿಂದುತ್ವಕ್ಕೆ ಮಾಡಿದ ಅವಮಾನ. ಹಿಂದು, ಮುಸ್ಲಿಂ ಎನ್ನುವುದಕ್ಕಿಂತ ಜನರು ನೆಮ್ಮದಿಯಿಂದ ಬದುಕಬೇಕು. ಎಲ್ಲರಿಗೂ ನ್ಯಾಯಕೊಡುವ ಬದಲು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಮೂಲಕ ಪತ್ರ ಕೊಡಿಸಿ ಪ್ರಕರಣ ವಾಪಸ್ ಪಡೆದಿದ್ದಾರೆ. ಇದು ಖಂಡನೀಯ ಕ್ರಮ ಎಂದರು. ಇಂತಹ ಸಮಾಜ ವಿರೋಧಿ ಹಾಗೂ ಕ್ರಿಮಿನಲ್ ತತ್ವಗಳ ಬೆನ್ನಿಗೆ ನಿಲ್ಲುವ ಮೂಲಕ ಸರ್ಕಾರ ತಾನು ಜನವಿರೋಧಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಈ ಹಿನ್ನೆಲೆಯಲ್ಲಿ ಸಂವಿಧಾನವಿರೋಧಿ ಹಾಗೂ ಜನವಿರೋಧಿಯಾದ ಈ ಆದೇಶವನ್ನು ತಕ್ಷಣವೇ ರದ್ದುಪಡಿಸುವಂತೆ ಗೌರವಾನ್ವಿತ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗಿದೆ ಎಂದರು.

ಸಿಬಿಎಸ್‌ಇಗೆ ನೂತನ ಅಧ್ಯಕ್ಷರು

ಪುಟ ೧➡ ಸಿಬಿಎಸ್‌ಇಯ ನೂತನ ಕಾರ್ಯದರ್ಶಿಯಾಗಿ ಕೇಂದ್ರ ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ವರುಣ್ ಭಾರದ್ವಾಜ್ ಅವರನ್ನು ನೇಮಿಸಲಾಗಿದೆ. ರಾಹುಲ್ ಸಿಂಗ್ ಅವರನ್ನು ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದಲ್ಲಿ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಯ ಅಡಿಶನಲ್ ಸೆಕ್ರೇಟರಿಯಾಗಿ ನೇಮಿಸಲಾಗಿದೆ.

ಅಧ್ಯಕ್ಷ, ಕಾರ್ಯದರ್ಶಿ ಎತ್ತಂಗಡಿ, ತನಿಖೆಗೆ ಸಮಿತಿ

ಹೊಸದಿಲ್ಲಿ: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ(ಸಿಬಿಎಸ್‌ಇ) ಆನ್‌ಸ್ಕ್ರೀನ್ ಮೌಲ್ಯಮಾಪನ ವ್ಯವಸ್ಥೆ ವಿವಾದ ಬೆನ್ನಲ್ಲೇ ಸಿಬಿಎಸ್‌ಇ ಅಧ್ಯಕ್ಷ ರಾಹುಲ್ ಸಿಂಗ್ ಮತ್ತು ಕಾರ್ಯದರ್ಶಿ ಹಿಮಾಂಶು ಗುಪ್ತಾರನ್ನು ವರ್ಗಾವಣೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ಇದರೊಂದಿಗೆ ಸಿಬಿಎಸ್‌ಇ ತನ್ನ ಆನ್‌ಸ್ಕ್ರೀನ್ ಮೌಲ್ಯಮಾಪನ ಸೇವೆಗಳ ಖರೀದಿ ಪ್ರಕ್ರಿಯೆ ಕುರಿತು ತನಿಖೆ ನಡೆಸಲು ಕೇಂದ್ರ ಸರ್ಕಾರ ವಿಶೇಷ ಸಮಿತಿಯನ್ನು ರಚಿಸುತ್ತಿದೆ. ಸಾಮರ್ಥ್ಯ ನಿರ್ಮಾಣ ಆಯೋಗ (ಸಿಬಿಸಿ) ಅಧ್ಯಕ್ಷ ಎಸ್.ರಾಧಾ ಚೌಹಾಣ್‌ರನ್ನು ತನಿಖಾ ಸಮಿತಿಯ ಏಕ ಸದಸ್ಯೆಯನ್ನಾಗಿ ನೇಮಿಸಲಾಗಿದೆ. ಆದರೆ, ರಾಧಾ ಚೌಹಾಣ್ ಇತರ ಅಧಿಕಾರಿಗಳ ನೆರವು ಪಡೆಯಬಹುದು. ಏಕ ಸದಸ್ಯೆ ಇರುವ ಸಮಿತಿ ತಿಂಗಳೊಳಗೆ ತನಿಖಾ ವರದಿಯನ್ನು ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ಸಲ್ಲಿಸಬೇಕಿದೆ. ಸಿಬಿಎಸ್‌ಇ ಮರುಮೌಲ್ಯಮಾಪನ ಪೋರ್ಟಲ್ ಮತ್ತೆ ಸಕ್ರಿಯಗೊಂಡ ತಕ್ಷಣವೇ ಕೇಂದ್ರ ಸರ್ಕಾರ ಇಬ್ಬರು ಪ್ರಮುಖ ಅಧಿಕಾರಿಗಳನ್ನು ವರ್ಗಾವಣೆ ಮಾಡಿದೆ.

ಕೆಪೆಕ್ ಸಂಸ್ಥೆ ಸ್ವಾಧೀನಕ್ಕೆ ಶೀತಲ ಘಟಕ

ಬೆಂಗಳೂರು: ಪೂಜೇನಹಳ್ಳಿ ಸಮಗ್ರ ಶೀತಲ ಸರಪಳಿ ಘಟಕವನ್ನು ಕೆಪೆಕ್ ಸಂಸ್ಥೆಯ ಸ್ವಾಧೀನಕ್ಕೆ ಪಡೆದಿದು ಕೊಂಡಿದೆ. ಪೂಜೇನಹಳ್ಳಿ, ತೋಟಗಾರಿಕಾ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ಸಂಸ್ಥೆಯು ಸಮಗ್ರ ಶೀತಲ ಸರಪಳಿ ಘಟಕವನ್ನು ಸ್ಥಾಪಿಸಿದ್ದು, ಸದರಿ ಘಟಕವು ಮಾವು, ಬಾಳೆ, ದಾಳಿಂಬೆ, ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆ ಮತ್ತು ರಫ್ತಿಗಾಗಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ. ಈ ಘಟಕದ ಕಾರ್ಯಾಚರಣೆ ಹಾಗೂ ನಿರ್ವಹಣೆಯನ್ನು ಅನುಸಾರ ಮೆ. ಫಿಜಾ ಗ್ಲೋಬಲ್ ಆಗ್ರೋವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ವಹಿಸಲಾಗಿತ್ತು.

ಸದರಿ ಸಂಸ್ಥೆಯು ಸಮಗ್ರ ಶೀತಲ ಸರಪಳಿ ಘಟಕದ ಒಡಂಬಡಿಕೆ ಅನುಸಾರ ಕಾಲಕಾಲಕ್ಕೆ ಬಾಡಿಗೆ ಪಾವತಿಸಿರುವುದಿಲ್ಲ ಮತ್ತು ಘಟಕವನ್ನು ಒಪ್ಪಂದದ ಹೊರತಾಗಿ ಅನ್ಯ ಉದ್ದೇಶಕ್ಕೆ ಬಳಸಿಕೊಂಡಿರುವ ಹಿನ್ನೆಲೆಯಲ್ಲಿ ಹಲವು ನೋಟೀಸ್ ನೀಡಿದ ನಂತರ ಸದರಿ ಸಮಗ್ರ ಶೀತಲ ಸರಪಳಿ ಘಟಕವನ್ನು ಕೆಪೆಕ್ ಸಂಸ್ಥೆಗೆ ಹಿಂದಿರುಗಿಸಲು ಸೂಚಿಸಲಾಗಿತ್ತು. ಆದರೆ ಸದರಿ ಸಂಸ್ಥೆಯು ಘಟಕವನ್ನು ಕೆಪೆಕ್ ಸಂಸ್ಥೆಗೆ ಹಸ್ತಾಂತರಿಸಿರುವುದಿಲ್ಲ.

ಇದಾದ ಬಳಿಕ ಸಾರ್ವಜನಿಕ ಆವರಣಗಳಿಂದ ಅನಧಿಕೃತ ನಿವೇಶನಗಳ ತೆರವು ಕಾಯ್ದೆ, 1974ರ ಸೆಕ್ಷನ್ 5(1)ರ ಅಡಿಯಲ್ಲಿ ಏ.10, 2026ರಂದು ಹೊರಡಿಸಲಾದ ಭೂಮಿ ತೆರವು ಆದೇಶದ ಅನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ. ಅದರಂತೆ ಜೂ.2ರಂದು ಕೆಪೆಕ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಭೂಮಿಯನ್ನು ತಮ್ಮ ಸ್ವಾಧೀನಕ್ಕೆ ಪಡೆಯುವ ಕಾರ್ಯಾಚರಣೆ ಆರಂಭಿಸಿದ್ದಾರೆ.

ಶಿವಕುಮಾರ್ ಎಂಬ ನಾನು...

ಪುಟ ೧➡ ಈ ಸಮಾರಂಭವು ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಮತ್ತೊಂದು ಮೈಲುಗಲ್ಲಾಗಲಿದೆ ಎಂದು ರಾಜಕೀಯ ವಲಯಗಳಲ್ಲಿ ಚರ್ಚೆ ನಡೆಯುತ್ತಿದೆ. ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಹೊಸ ಜವಾಬ್ದಾರಿ ಸ್ವೀಕರಿಸುತ್ತಿರುವುದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರವಲ್ಲದೆ ರಾಜ್ಯದ ರಾಜಕೀಯದಲ್ಲಿ ದೊಡ್ಡ ಬದಲಾವಣೆಯ ಸಂಕೇತವಾಗಿದೆ. ಸರಳತೆ ಮತ್ತು ಜನಸ್ನೇಹಿ ಆಡಳಿತವನ್ನು ಮುಂದುವರಿಸುವ ನಿರೀಕ್ಷೆಯನ್ನು ಜನರು ಹೊಂದಿದ್ದಾರೆ. ಈ ಸಮಾರಂಭವು ಕರ್ನಾಟಕ ರಾಜಕೀಯಕ್ಕೆ ಹೊಸ ದಿಕ್ಕು ನೀಡುವ ಸಾಧ್ಯತೆಯಿದೆ. ಒಟ್ಟಾರೆಯಾಗಿ, ಡಿ.ಕೆ. ಶಿವಕುಮಾರ್ ಅವರ ಪದಗ್ರಹಣ ಸಮಾರಂಭವು ಸರಳತೆಯ ಮಾದರಿಯನ್ನು ಪ್ರದರ್ಶಿಸುವ ಮೂಲಕ ಜನಸಾಮಾನ್ಯರಿಗೆ ಹತ್ತಿರವಾಗುವ ನಿರೀಕ್ಷೆಯನ್ನು ಮೂಡಿಸಿದೆ. ಈ ಕಾರ್ಯಕ್ರಮವನ್ನು ರಾಜ್ಯದ ಜನರು ಉತ್ಸುಕತೆಯಿಂದ ನಿರೀಕ್ಷಿಸುತ್ತಿದ್ದಾರೆ.

ಸಂಪುಟ ರಚನೆಗೆ ಕಸರತ್ತು

ಪುಟ ೧➡ ಪ್ರತ್ಯೇಕ ಪಟ್ಟಿಯನ್ನು ತಗೆದುಕೊಂಡು ಸೋಮವಾರ ದಿಲ್ಲಿಗೆ ತೆರಳಿದ್ದ ಡಿ.ಕೆ ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರಿಗೆ ಪಕ್ಷದ ವರಿಷ್ಠರು ಸಿಗದ ಕಾರಣ ಮಂಗಳವಾರ ಸಭೆ ನಡೆಸಲಾಯಿತು. ಸಂಪುಟ ಸೇರ್ಪಡೆ ಬಗ್ಗೆ ಸಂಜೆವರೆಗೆ ನಡೆದ ಸಭೆಯಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ ಶಿವಕುಮಾರ್ ಅವರೊಂದಿಗೆ ಪ್ರತ್ಯೇಕ ಸಭೆ ನಡೆಸಿದ ಕೆ.ಸಿ ವೇಣುಗೋಪಾಲ್ ಅವರು, ವಿವಿಧ ಮಾನದಂಡಗಳ ಅನ್ವಯ ರಾಹುಲ್ ಗಾಂಧಿ ಜತೆ ಮಾತುಕತೆ ನಡೆಸಿ ಮೊದಲ ಹಂತದ ಪಟ್ಟಿ ಸಿದ್ಧಪಡಿಸಿದ್ದಾರೆ ಎಂದು ದಿಲ್ಲಿ ಮೂಲಗಳು ತಿಳಿಸಿವೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಕುರಿತು ಚರ್ಚೆ

ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾದ ನಂತರ ಖಾಲಿಯಾಗಲಿರುವ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಹಲವರ ಹೆಸರುಗಳು ಕೇಳಿಬಂದಿದ್ದು, ಮುಂಬರುವ ಚುನಾವಣೆಗಳ ದೃಷ್ಟಿಯಿಂದ ಯಾರಿಗೆ ಸಾರಥ್ಯ ವಹಿಸಬೇಕೆಂಬುದರ ಕುರಿತು ಪ್ರಮುಖವಾಗಿ ದಿಲ್ಲಿ ವರಿಷ್ಠರು ಚರ್ಚೆ ನಡೆಸಿದ್ದಾರೆ. ಈ ಹಿಂದೆ ಸತೀಶ್ ಜಾರಕಿಹೊಳಿ ಅವರು ಪ್ರಬಲ ಆಕಾಂಕ್ಷಿಯಾಗಿದ್ದರು. ಇದೀಗ ಬಿ.ಕೆ ಹರಿಪ್ರಸಾದ್ ಅವರ ಹೆಸರು ಕೇಳಿಬಂದಿದ್ದು, ಅಧ್ಯಕ್ಷ ಆಯ್ಕೆ ಕುರಿತಂತೆ ಶೀಘ್ರದಲ್ಲೇ ನಿರ್ಧಾರಕ್ಕೆ ಬರಲು ಸಭೆಯಲ್ಲಿ ನಿರ್ಧರಿಸಲಾಗಿದೆ.

ಇಬ್ಬರು ಹೊಸಬರಿಗೆ ಅವಕಾಶ?

ಸಭೆಯಲ್ಲಿ ರಾಜ್ಯದಲ್ಲಿನ ಹೊಸ ಸಂಪುಟ ರಚನೆ ಕುರಿತು ರೂಪುರೇಷೆಗಳ ಕುರಿತು ಪ್ರಮುಖವಾಗಿ ಚರ್ಚಿಸಲಾಗಿದೆ. ಸಿದ್ದರಾಮಯ್ಯ ಸಂಪುಟದಲ್ಲಿದ್ದ ಸಚಿವರಾಗಿದ್ದವರು ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಉಳಿಯಲು ಕಸರತ್ತು ನಡೆಸಿದ್ದಾರೆ. ಕಳೆದ ಬಾರಿ ಅವಕಾಶ ವಂಚಿತರು ಈ ಬಾರಿ ಅವಕಾಶ ಕಲ್ಪಿಸುವಂತೆ ಬೇಡಿಕೆ ಸಲ್ಲಿಸಿದ್ದು, ಮೊದಲ ಹಂತದ ಸಂಪುಟದಲ್ಲಿ ಇಬ್ಬರು ಹೊಸಬರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ಅಣ್ಣಾಮಲೈ ರಾಜೀನಾಮೆ

ಪುಟ ೧➡ ತಮಿಳುನಾಡು ವಿಧಾನಸಭಾ ಚುನಾವಣೆ ನಡೆದ ಒಂದು ತಿಂಗಳೊಳಗೆ ಈ ಬೆಳವಣಿಗೆಗಳು ನಡೆದಿವೆ. ರಾಜ್ಯದಲ್ಲಿ 234 ಸದಸ್ಯರ ಸದನದಲ್ಲಿ ಬಿಜೆಪಿ ಕೇವಲ ಒಂದು ಸ್ಥಾನವನ್ನು ಗಳಿಸಿತ್ತು. ಈ ಮಧ್ಯೆ ಸೆಕ್ಯುಲರ್ (ಜಾತ್ಯತೀತ) ಮತ್ತು ತಮಿಳು–ಫಸ್ಟ್(ತಮಿಳು–ಮೊದಲು) ಧ್ಯೇಯದೊಂದಿಗೆ ಹೊಸ ಪ್ರಾದೇಶಿಕ ರಾಜಕೀಯ ಪಕ್ಷ ಪ್ರಾರಂಭಿಸಲು ಯೋಜಿಸುತ್ತಿದ್ದಾರೆ ಎಂಬ ವಿಚಾರ ಕೂಡ ಎಲ್ಲೆಡೆ ಹರಿದಾಡುತ್ತಿದೆ. ಇನ್ನೂ ಈ ಬಗ್ಗೆ ಎಲ್ಲೂ ಸ್ಪಷ್ಟ ಮಾಹಿತಿ ಬಹಿರಂಗಗೊಂಡಿಲ್ಲ.

ಇಂದು ಘೋಷಣೆ ಸಾಧ್ಯತೆ: ಅಣ್ಣಾಮಲೈ ಅವರನ್ನು ಬಿಜೆಪಿಯಲ್ಲಿ ಉಳಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ ಎಂದು ವರದಿಯಾಗಿದೆ. ಮುಂದಿನ ಯಾವುದೇ ಸೂಚನೆಗಳಿಲ್ಲದೆ ದಿಲ್ಲಿ ತೊರೆಯದಂತೆ ಅಣ್ಣಾಮಲೈ ಅವರಿಗೆ ತಿಳಿಸಲಾಗಿದೆ ಎಂದು ಕೆಲವು ಮೂಲಗಳು ತಿಳಿಸಿದ್ದರೆ, ಬಿಜೆಪಿ ಹೈಕಮಾಂಡ್ ಅಣ್ಣಾಮಲೈ ಅವರ ನಿರ್ಧಾರ ಒಪ್ಪಿಕೊಂಡಿದೆ. ಅವರು ಬುಧವಾರ ಅಧಿಕೃತ ಘೋಷಣೆ ಮಾಡುವ ಸಾಧ್ಯತೆಯಿದೆ ಎಂದೂ ಹೇಳಲಾಗಿದೆ.

ಅಮಿತ್ ಶಾ ಭೇಟಿಯಾಗಿ ಚರ್ಚೆ: ಈ ಮಧ್ಯೆ ಅಣ್ಣಾಮಲೈ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ದಿಲ್ಲಿಯ ಅವರ ನಿವಾಸದಲ್ಲಿ ಭೇಟಿಯಾಗಿದ್ದಾರೆ. ಮೂಲಗಳ ಪ್ರಕಾರ, ಶಾ ಅವರೊಂದಿಗಿನ ಅಣ್ಣಾಮಲೈ ಅವರ ಭೇಟಿಯು ಸುಮಾರು 30 ನಿಮಿಷಗಳ ಕಾಲ ನಡೆಯಿತು. ಆದರೆ ಸಭೆಯಲ್ಲಿ ಏನೆಲ್ಲಾ ಚರ್ಚೆಯಾಯಿತು ಎಂಬುದರ ಮಾಹಿತಿ ಬಹಿರಂಗಗೊಂಡಿಲ್ಲ.

ಕಾವೇರಿ ಮಾತೆಗೆ 159ನೇ ಹುಣ್ಣಿಮೆ ಪೂಜೆ

ಕುಶಾಲನಗರ : ಬಾರವಿ ಕಾವೇರಿ ಕನ್ನಡ ಸಂಘದ ವತಿಯಿಂದ ಹುಣ್ಣಿಮೆ ಅಂಗವಾಗಿ ಕೊಡಗು–ಮೈಸೂರು ಗಡಿ ಸೇತುವೆ ಬಳಿಯ ಕಾವೇರಿ ಕ್ಷೇತ್ರದಲ್ಲಿ 159ನೇ ಹುಣ್ಣಿಮೆ ಪೂಜಾ ಕೈಂಕರ್ಯ ಜರುಗಿತು. ಅರ್ಚಕ ಪುರುಷೋತ್ತಮ ಭಟ್ ನೇತೃತ್ವದಲ್ಲಿ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು.

ಕಾವೇರಿ ಮಾತೆಗೆ ಅಲಂಕಾರ ಮಾಡಿ ವಿಶೇಷ ಪೂಜೆ ನೆರವೇರಿಸಿ ಮಹಾಮಂಗಳಾರತಿ ಬಳಿಕ ನೆರೆದಿದ್ದ ಭಕ್ತರಿಗೆ ಪ್ರಸಾದ, ಅನ್ನಸಂತರ್ಪಣೆ ನೆರವೇರಿಸಲಾಯಿತು. ಉತ್ತಮ ಮಳೆ ಬೆಳೆ, ನಾಡಿನ ಸಮೃದ್ಧಿಗಾಗಿ ಪ್ರಾರ್ಥಿಸಲಾಯಿತು. ಬೆಂಗಳೂರಿನ ಸುನಂದಾ ಕೌಶಿಕ್ ದಿನದ ಪೂಜಾ ಸೇವಾರ್ಥ ನೆರವೇರಿಸಿದರು. ಈ ಸಂದರ್ಭ ಬಾರವಿ ಸಂಘದ ರವೀಂದ್ರ ಪ್ರಸಾದ್, ಎಸ್.ಎಲ್.ಎನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವೇಲಾಯುಧಂ ಮೊದಲಾದವರು ಉಪಸ್ಥಿತರಿದ್ದರು.

ಲಭ್ಯವಿಲ್ಲದ ಪುಸ್ತಕ ಮರು ಮುದ್ರಣ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಳೆದ ಹಲವಾರು ವರ್ಷಗಳಿಂದ ಪ್ರಕಟಿಸಿರುವ ಅತ್ಯುತ್ತಮ ಮತ್ತು ಅಮೂಲ್ಯ ಕೃತಿಗಳ ಪೈಕಿ, ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿಲ್ಲದ ಪುಸ್ತಕಗಳನ್ನು ಮರು ಮುದ್ರಣ ಮಾಡಲು ಇಲಾಖೆ ನಿರ್ಧರಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟಿಸಿರುವ ಅನೇಕ ಜನಪ್ರಿಯ ಪುಸ್ತಕಗಳ ಪ್ರತಿಗಳು ಸದ್ಯ ಮುಕ್ತಾಯಗೊಂಡಿದ್ದು, ಅವುಗಳಿಗಾಗಿ ಸಾಹಿತ್ಯಾಸಕ್ತರು ನಿರಂತರವಾಗಿ ಇಲಾಖೆಗೆ ಭೇಟಿ ನೀಡಿ ಕೋರಿಕೆ ಸಲ್ಲಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಬೇಡಿಕೆಯನ್ನು ಪುರಸ್ಕರಿಸಿರುವ ಇಲಾಖೆಯು, ಪ್ರಸ್ತುತ ಸಾಲಿನಲ್ಲಿ ಈ ಹಿಂದೆ ಮುದ್ರಿತವಾಗಿ ಈಗ ಲಭ್ಯವಿಲ್ಲದಿರುವ ಪ್ರಮುಖ ಕೃತಿಗಳನ್ನು ಮರು ಮುದ್ರಣ ಮಾಡುವ ಮಹತ್ವಾಕಾಂಕ್ಷಿ ಯೋಜನೆಯೊಂದನ್ನು ಸಿದ್ಧಪಡಿಸಿದೆ.

ನಿಮ್ಮ ನೆಚ್ಚಿನ ಪುಸ್ತಕದ ಮರು ಮುದ್ರಣಕ್ಕೆ ಯಾವ ಕೃತಿಗಳನ್ನು ಮೊದಲು ಮರು ಮುದ್ರಣ ಮಾಡಬೇಕು ಎಂಬುದರ ಕುರಿತು ಸಾರ್ವಜನಿಕರಿಂದ ಹಾಗೂ ಸಾಹಿತ್ಯಾಸಕ್ತರಿಂದ ನೇರ ಅಭಿಪ್ರಾಯ ಮತ್ತು ಕೋರಿಕೆಗಳನ್ನು ಪಡೆಯಲು ಇಲಾಖೆ ನಿರ್ಧರಿಸಿದೆ. ಇದಕ್ಕಾಗಿ ಸಾಹಿತ್ಯಾಸಕ್ತರು ಇಲಾಖೆಯ ಅಧಿಕೃತ ವೆಬ್‌ಸೈಟ್ https://kannadasiri.karnataka.gov.in ಗೆ ಭೇಟಿ ನೀಡಿ, ಅಲ್ಲಿರುವ ಪಟ್ಟಿಯನ್ನು ಪರಿಶೀಲಿಸಬಹುದು.

ಆರೋಗ್ಯಕರ ಪರಿಸರ ಅತ್ಯಗತ್ಯ: ಶಾಲಿನಿ



• **ಬೆಂಗಳೂರು:** ವಿಶ್ವ ಪರಿಸರ ದಿನಾಚರಣೆಯು ಕೇವಲ ಒಂದು ದಿನದ ಆಚರಣೆಯಾಗಬಾರದು. ನಮ್ಮ ಜಂಟಿ ಜವಾಬ್ದಾರಿಯನ್ನು ನೆನಪಿಸುವ ಮತ್ತು ವರ್ಷಪೂರ್ತಿ ಕಾರ್ಯನಿರ್ವಹಿಸುವ ಯೋಜನೆಯಾಗಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ತಿಳಿಸಿದರು.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ದಿವೇಚಾ ಹವಾಮಾನ ಬದಲಾವಣೆ ಕೇಂದ್ರದ ವತಿಯಿಂದ ಜೂನ್ 2, 3 ರಂದು ಆಯೋಜಿಸಲಾಗಿರುವ ಹವಾಮಾನ, ಮಾಲಿನ್ಯ ಮತ್ತು ಆರೋಗ್ಯ: ಭಾರತದಲ್ಲಿ ಸುಸ್ಥಿರ ಭವಿಷ್ಯದ ಹಾದಿಗಳು ಎಂಬ 2 ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಕಲುಷಿತ ಗಾಳಿ ಮತ್ತು ನೀರು ಸಮಾಜದ ದುರ್ಬಲ ವರ್ಗದವರಾದ ಮಹಿಳೆಯರು, ಮಕ್ಕಳು ಮತ್ತು ರೈತರ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಆದ್ದರಿಂದ, ಭಾರತವು ಅಭಿವೃದ್ಧಿ ಹೊಂದಿದ ಭಾರತ ಆಗಬೇಕಾದರೆ, ಮೊದಲು ವಿಕಸಿತ್ ಪರಿಸರವನ್ನು ನಿರ್ಮಿಸುವುದು ಅನಿವಾರ್ಯವಾಗಿದೆ. ಆರೋಗ್ಯಕರ ರಾಷ್ಟ್ರದ ನಿರ್ಮಾಣಕ್ಕೆ ಆರೋಗ್ಯಕರ ಪರಿಸರ ಅತ್ಯಗತ್ಯ ಎಂದರು.

ಪರಿಸರ ಸಂರಕ್ಷಣೆ ಕೇವಲ ಸರ್ಕಾರದ ಕೆಲಸವಲ್ಲ. ಇದಕ್ಕಾಗಿ ಜನರು, ಗ್ರಹ ಮತ್ತು ಕಾರ್ಯಕ್ರಮ ಎಂಬ ಸೂತ್ರವನ್ನು ಅಳವಡಿಸಿಕೊಳ್ಳಬೇಕಿದೆ. ಸಾರ್ವ ಜನಿಕರು ಕೇವಲ ಗ್ರಾಹಕರ ಮನಸ್ಥಿತಿಯಿಂದ ಹೊರಬಂದು ಪರಿಸರದ ರಕ್ಷಕರಾಗಿ ಬದಲಾಗಬೇಕು. ತ್ಯಾಜ್ಯ ವಿಂಗಡಣೆ, ನೀರಿನ ಸಂರಕ್ಷಣೆ, ಸುಸ್ಥಿರ ಜೀವನಶೈಲಿಯನ್ನು ರೂಢಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದರು.

ಸರ್ಕಾರ, ವಿಜ್ಞಾನ, ಸಮಾಜ ಒಟ್ಟಾಗಿ ಸಾಗಬೇಕಿದೆ

ಜನಸಂಖ್ಯೆಯ ಒತ್ತಡ, ಮಿತಿಮೀರಿದ ಬಳಕೆ, ಮಾಲಿನ್ಯ ಮತ್ತು ವಿಜ್ಞಾನ-ನೀತಿಗಳ ನಡುವಿನ ಕೊಂಡಿಯ ಕೊರತೆಯಿಂದಾಗಿ ಇಂದು ಪರಿಸರ ಹಾಳಾಗುತ್ತಿದೆ. ಇದಕ್ಕೆ ಪರಿಹಾರವಾಗಿ ಹಸಿರು ತಂತ್ರಜ್ಞಾನ, ಸುಸ್ಥಿರ ನಗರೀಕರಣ ಮತ್ತು ಪರಿಸರ ಶಿಕ್ಷಣವನ್ನು ಬಲಪಡಿಸಬೇಕಾಗಿದೆ. ಪರಿಸರ ರಕ್ಷಣೆ ಎನ್ನುವುದು ಪ್ರಗತಿಗೆ ಅಡ್ಡಿಯಲ್ಲ, ಬದಲಿಗೆ ಅದು ದೀರ್ಘಕಾಲದ ಸಮೃದ್ಧಿಗೆ ಅಡಿಪಾಯವಾಗಿದೆ. ಭಾರತವು ಸುಸ್ಥಿರ ಅಭಿವೃದ್ಧಿಯಲ್ಲಿ ಜಾಗತಿಕ ನಾಯಕನಾಗಿ ಹೊರಹೊಮ್ಮಲು ಸರ್ಕಾರ, ವಿಜ್ಞಾನ ಮತ್ತು ಸಮಾಜ ಒಟ್ಟಾಗಿ ಸಾಗಬೇಕಿದೆ ಎಂದು ಶಾಲಿನಿ ರಜನೀಶ್ ಹೇಳಿದರು.

ಶೃಂಗಸಭೆ



ಕಿರ್ಗಿಜ್ ಗಣರಾಜ್ಯದಲ್ಲಿ (ಕಿರ್ಗಿಸ್ತಾನ್) ಬುಧವಾರದಿಂದ ಆರಂಭವಾಗಲಿರುವ ನಾಲ್ಕು ದಿನಗಳ ಶಾಂಘೈ ಸಹಕಾರ ಸಂಸ್ಥೆಯ ವಿವಿಧ ರಾಷ್ಟ್ರಗಳ ಕೈಗಾರಿಕಾ ಸಚಿವರ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ರಾಜಧಾನಿ ಬಿಷ್ಕೇಕ್ ನಗರದಲ್ಲಿ ಭಾರತ ಮತ್ತು ಕಿರ್ಗಿಸ್ತಾನದ ರಾಜತಾಂತ್ರಿಕ ಅಧಿಕಾರಿಗಳು ಬರಮಾಡಿಕೊಂಡರು.

ಕಾಶಪ್ಪನವರ್ ಮಂತ್ರಿಯಾಗಲಿ

• **ಬೆಂಗಳೂರು:** ಹುನಗುಂದ ವಿಧಾನಸಭಾ ಕ್ಷೇತ್ರದ ಶಾಸಕ ವಿಜಯಾನಂದ್ ಎಸ್.ಕಾಶಪ್ಪನವರ್ ಅವರಿಗೆ ನೂತನ ಮಂತ್ರಿ ಮಂಡಲದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಇಲಕಲ್ ಬ್ಲಾಕ್ ಕಾಂಗ್ರೆಸ್ ಸಮಿತಿ ಒತ್ತಾಯಿಸಿದೆ.



ಪ್ರೆಸ್ ಕ್ಲಬ್ ಸಭಾಂಗಣದಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿ ಇಲಕಲ್, ಹುನಗುಂದ ಮತಕ್ಷೇತ್ರ, ಬಾಗಲಕೋಟೆ ಜಿಲ್ಲೆ ವತಿಯಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷ ಅಬ್ದುಲ್ ರಜಾಕ್ ತಟಗಾರ ಮಾತನಾಡಿ, ವಿಜಯಾನಂದ್ ಎಸ್ ಕಾಶಪ್ಪನವರ್ ಅವರು ಕೃಷ್ಣನದೀ ನೀರು ಯೋಜನೆ ಜಾರಿಗೆ ತಂದಿದ್ದು, 60 ಸಾವಿರ ಎಕರೆ ಇಸ್ರೇಲ್ ಮಾದರಿ ನೀರಾವರಿ ಯೋಜನೆ, ಶಿಕ್ಷಣಕ್ಕೆ ಒತ್ತು ಸ್ಮಾರ್ಟ್ ಕ್ಲಾಸ್ ಬೋರ್ಡ್ ಒದಗಿಸಿ ದರು. ಸರ್ಕಾರಿ ಶಾಲೆಗಳನ್ನು ಉನ್ನತಿಕರಿಸಿದರು. ಹುನಗುಂದ್-ಇಲಕಲ್ ಅವಳಿ ನಗರದಲ್ಲಿ ನೂರು ಹಾಸಿಗೆ ಆಸ್ಪತ್ರೆ ನಿರ್ಮಾಣ, ಸಮುದಾಯ ಭವನ ಹಾಗೂ ಉತ್ತಮ ರಸ್ತೆಗಳ ನಿರ್ಮಾಣ, ಮರೋಳ್‌ನಲ್ಲಿ ಏತ ನೀರಾವರಿ, ನಂದವಾಡಗಿ ಏತ ನೀರಾವರಿ, ಹನಿ ನೀರಾವರಿಗೆ ಒತ್ತು ನೀಡಿ ರೈತರ ಬಾಳಿಗೆ ಬೆಳಕಾದರು. ಯುವ ನಾಯಕ, ಕ್ರಿಯಾಶೀಲರಾಗಿರುವ ಮತ್ತು ಕಾಂಗ್ರೆಸ್ ಪಕ್ಷ ಉತ್ತಮ ಸಂಘಟಕರಾಗಿರುವ ವಿಜಯಾನಂದ್ ಕಾಶಪ್ಪನವರ್ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಪಕ್ಷದ ಮುಖಂಡರುಗಳಾದ ವಿಶ್ವನಾಥಪಾಟೀಲ್, ಮಲ್ಲಣ್ಣ ಎಲೆಗಾರ , ಅಮರೇಶ್ ನಾಗೂರ್, ಮುತ್ತಣ್ಣ ಕಲಗುಡಿ, ಮಹಾಂತೇಶ್ ನರಗುಂದ, ರವಿ ಹುಚ್ಚನೂರು, ಶಾಂತಣ್ಣ ರಾಘವೇಂದ್ರ ಧಾರವಾಡ, ಮೌನೇಶ್ ಬಂಡಿವಡ್ಡರ್, ನೀಲಪ್ಪ ಅಸೋಲಿ, ವಿಠ್ಠಲ್ ಜಕ್ಕ, ಸಿದ್ದ ಭದ್ರಶೆಟ್ಟಿ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಜೂ.28ರಂದು ಪಲ್ಸ್ ಪೋಲಿಯೋ ಕಾರ್ಯಕ್ರಮ

• **ಬೆಂಗಳೂರು:** ರಾಜ್ಯದಲ್ಲಿ ಜೂ.28 ರಂದು ನಡೆಯಲಿರುವ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸುವಂತೆ ಎಲ್ಲಾ ಶಾಲೆಗಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್ ಸೂಚನೆ ನೀಡಿದ್ದಾರೆ. ಪಲ್ಸ್ ಪೋಲಿಯೋಕಾರ್ಯಕ್ರಮದ ಬಗ್ಗೆ ಸರ್ಕಾರಿ ಶಾಲೆಗಳಲ್ಲಿ ಅರಿವು ಮೂಡಿಸಲು ಎಲ್ಲಾ ಶಾಲೆಗಳಲ್ಲಿ ಜೂ. 25ರಂದು ಜಾಥಾವನ್ನು ನಡೆಸಬೇಕು. ಜೂ. 28 ರಂದು ಬೆಳಗ್ಗೆ 8 ಗಂಟೆಗೆ ಲಸಿಕಾ ಕಾರ್ಯಕ್ರಮವನ್ನು ನಡೆಸಲು ಅನುಕೂಲವಾಗುವಂತೆ ಖಾಸಗಿ ಶಾಲೆಗಳು ಸೇರಿದಂತೆ ಎಲ್ಲಾ ಶಾಲೆಗಳನ್ನು ತೆರೆದಿಟ್ಟು, ಸಜ್ಜುಗೊಳಿಸಬೇಕು ಎಂದು ಸೂಚಿಸಲಾಗಿದೆ. ಪ್ರೌಢಶಾಲೆ, ಪದವಿಪೂರ್ವ ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಎನ್‌ಎಸ್‌ಎಸ್, ಎನ್‌ಸಿಸಿ ವಿದ್ಯಾರ್ಥಿಗಳನ್ನು ಆರೋಗ್ಯ ಇಲಾಖೆ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಕಾರ್ಯಕ್ರಮದ ಅನುಷ್ಠಾನಕ್ಕೆ ನಿಯೋಜಿಸಬೇಕು. ಶಾಲಾ ವಿದ್ಯಾರ್ಥಿಗಳ ಮೂಲಕ 5 ವರ್ಷದೊಳಗಿನ ಮಕ್ಕಳ ಪೋಷಕರನ್ನು ಲಸಿಕೆ ಹಾಕಿಸಲು ಪ್ರೇರೇಪಿಸಬೇಕು. ಖಾಸಗಿ ಶಾಲೆಗಳಲ್ಲಿರುವ (ಪ್ಲೇ ಸ್ಕೂಲ್, ಎಲ್‌ಕೆಜಿ, ಯುಕೆಜಿ) ಮಕ್ಕಳ ಪೋಷಕರಿಗೂ ಈ ಕುರಿತು ಮಾಹಿತಿ ನೀಡಿ ಲಸಿಕೆ ಹಾಕಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ.

ಪುಸ್ತಕ ಖರೀದಿಗೆ ಅರ್ಜಿ

• **ಬೆಂಗಳೂರು:** ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ಚಿತ್ರಕಲಾ ಲೇಖಕರಿಂದ ಪ್ರಕಟಿತ ಪುಸ್ತಕ ಖರೀದಿಗೆ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ಲಲಿತ ಕಲಾ ಅಕಾಡೆಮಿಯು ವತಿಯಿಂದ ದೃಶ್ಯಕಲಾ ಲೇಖಕರಿಗೆ ಪ್ರೋತ್ಸಾಹ ನೀಡಲು ಪುಸ್ತಕಗಳ ಖರೀದಿಯನ್ನು ಅಕಾಡೆಮಿಯು ಮಾಡುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಜನವರಿ 2024 ರಿಂದ ಡಿಸೆಂಬರ್ 2024 ವರೆಗೆ ಪ್ರಕಟವಾದ ಪುಸ್ತಕಗಳನ್ನು ಒಂದು ಶೀರ್ಷಿಕೆಗೆ ಐದು ಸಾವಿರ ರೂ. ಮಿತಿಯಲ್ಲಿ ಖರೀದಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಒಬ್ಬ ಲೇಖಕರಿಂದ ಗರಿಷ್ಠ ರೂ.5,000 ಮೌಲ್ಯದ ಪುಸ್ತಕಗಳನ್ನು ಖರೀದಿಸಲಾಗುವುದು, ಪುಸ್ತಕಗಳು ಜನವರಿ 2024 ರಿಂದ ಡಿಸೆಂಬರ್ 2024ರ ಅವಧಿಯಲ್ಲಿ ಪ್ರಕಟಣೆಯಾಗಿರಬೇಕು, ಇಲ್ಲವೇ ಆ ಅವಧಿಯಲ್ಲಿ ಮರು ಮುದ್ರಣಗೊಂಡಿರಬೇಕು, ಕಲಾ ಬರಹಗಾರರು ಎಷ್ಟು ಪುಸ್ತಕಗಳನ್ನು ಬೇಕಿದ್ದರೂ ಆಯ್ಕೆ ಕೋರಿ ಅರ್ಜಿ ಸಲ್ಲಿಸಬಹುದು, ಅಕಾಡೆಮಿ ಖರೀದಿಸಬಹುದಾದ ಪುಸ್ತಕಗಳನ್ನು ಆಯ್ಕೆ ಸಮಿತಿಯವರು ಆಯ್ಕೆ ಮಾಡಿ ಅಕಾಡೆಮಿಗೆ ಶಿಫಾರಸ್ಸು ಮಾಡುತ್ತಾರೆ. ಅಂತಿಮ ನಿರ್ಧಾರ ಅಕಾಡೆಮಿಯದ್ದಾಗಿರುತ್ತದೆ. ಕನಿಷ್ಠ 2 ಪುಸ್ತಕಗಳನ್ನು ಮಾತ್ರ ಖರೀದಿಗೆ ಪರಿಗಣಿಸಲಾಗುವುದು. ಕಲಾ ಲೇಖಕರು ಜೂ.25 ಒಳಗಾಗಿ ಅರ್ಜಿಯೊಂದಿಗೆ ಪ್ರಕಟವಾದ ಪುಸ್ತಕಗಳ ತಲಾ 3 ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560 002 ಇವರಿಗೆ ಕಳುಹಿಸಿ ಕೊಡಬೇಕು ಎಂದು ಪ್ರಕಟಣೆ ತಿಳಿಸಿದೆ.

ಜಮೀರ್ ಆಡಿಯೋ ವೈರಲ್: ದೂರು ದಾಖಲು

• **ದಾವಣಗೆರೆ:** ಮಾಜಿ ಸಚಿವ ಜಮೀರ್ ಅಹಮ್ಮದ್ ಜೊತೆಗಿನ ತಮ್ಮ ಆಡಿಯೋ ವೈರಲ್‌ಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡ ಮಹಮ್ಮದ್ ಸಿರಾಜ್ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ವಿದ್ಯಾನಗರ ಪೊಲೀಸ್ ಠಾಣೆ ಕಟ್ಟಡದಲ್ಲಿರುವ ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ಸೋಮವಾರ ರಾತ್ರಿ ತೆರಳಿದ ಮಹಮ್ಮದ್ ಸಿರಾಜ್, ಅದು ತಮ್ಮ ಹಾಗೂ ಜಮೀರ್ ಅಹಮ್ಮದ್ ಆಡಿಯೋ ಅಲ್ಲವೆಂದು ಸ್ಪಷ್ಟಪಡಿಸಿದ್ದು, ವೈರಲ್ ಆದ ಆಡಿಯೋ ವಿಚಾರಕ್ಕೆ ಸಂಬಂಧಿಸಿದಂತೆ ದೂರು ದಾಖಲಿಸಿ ತನಿಖೆಗೆ ಒತ್ತಾಯಿಸಿದ್ದಾರೆ.

ಲೋಕಭವನಕ್ಕೆ ಆಹ್ವಾನಿತರಿಗೆ ಮಾತ್ರ ಪ್ರವೇಶ: ಆಯುಕ್ತ ಸೀಮಂತ್ ಕುಮಾರ್ ಸಿಂಗ್

ಡಿಕೆಶಿ ಪದಗ್ರಹಣಕ್ಕೆ ಬಂದೋಬಸ್ತ್

• **ಬೆಂಗಳೂರು:** ಲೋಕಭವನದಲ್ಲಿ (ಜೂ.3) ರಂದು ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಹಾಗೂ ಕೆಲ ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿರುವ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಮಂಗಳವಾರ ಅಧಿಕಾರಿಗಳ ಜತೆ ಸಭೆ ನಡೆಸಿ ಸೂಕ್ತ ಬಂದೋಬಸ್ತ್ ಬಗ್ಗೆ ಸೂಚನೆ ನೀಡಿದ್ದಾರೆ.

ಈ ಸಭೆ ಬಳಿಕ ಮಾಹಿತಿ ನೀಡಿದ ಅವರು, ಲೋಕಭವನಕ್ಕೆ ಆಹ್ವಾನಿತರಿಗೆ ಮಾತ್ರ ಪ್ರವೇಶವಿರಲಿದೆ. ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗಿಯಾಗಲು ಅವಕಾಶವಿರುವುದಿಲ್ಲ. ಡಿ.ಕೆ.ಶಿವಕುಮಾರ್ ಅವರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಯಾವುದೇ ರೀತಿಯ ಸಣ್ಣ ಅಹಿತಕರ ಘಟನೆಗಳು ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ವಿಧಾನಸೌಧ ಹಾಗೂ ಲೋಕ ಭವನ ಸುತ್ತ ಯಾವುದೇ ರೀತಿ ಸಂಚಾರ ದಟ್ಟಣೆಯಾಗದಂತೆ ಕರ್ತವ್ಯ ನಿರ್ವಹಿಸುವಂತೆ ಸಂಚಾರ ವಿಭಾಗದ ಅಧಿಕಾರಿಗಳಿಗೆ ಹೇಳಿದ್ದೇನೆ ಎಂದು ತಿಳಿಸಿದರು.

ವಿವಿಧ ವಿಭಾಗಗಳಲ್ಲಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ಪಾಸ್ ಹಂಚಿಕೆ ಮಾಡಲಾಗಿದ್ದು, ಆ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡಿದ್ದೇವೆ. ಸಂಚಾರ ಮಾರ್ಗದಲ್ಲಿ ಕೆಲವೊಂದು ಬದಲಾವಣೆ ಮಾಡಿದ್ದು, ರೋಡ್ ಶೋ ನಡೆಸುವುದರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಹೊರ ರಾಜ್ಯದಿಂದಲೂ ಗಣ್ಯರು ಕಾರ್ಯಕ್ರಮಕ್ಕೆ ಬರುತ್ತಿರುವ ಹಿನ್ನೆಲೆ ಗಣ್ಯರ ಭದ್ರತೆಗೂ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ ಎಂದು ಹೇಳಿದರು.



ನಾಲ್ಕು ಗಂಟೆಗೆ ಪ್ರಮಾಣವಚನ ಸ್ವೀಕಾರ

ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಲೋಕಭವನದ ಗಾಜಿನ ಮನೆಯಲ್ಲಿ ಜೂ.3ರಂದು ಸಂಜೆ ನಾಲ್ಕು ಗಂಟೆಗೆ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ಹಾಗೂ ರೇಸ್‌ಕೋರ್ಸ್ ರಸ್ತೆ ಬಳಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದೆ. ಆ ನಿಟ್ಟಿನಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಜೂ.3 ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 8 ರ ವರೆಗೆ ಕೆಲ ರಸ್ತೆಗಳಲ್ಲಿ ಸಂಚಾರ ಮಾರ್ಪಾಡು ಮಾಡಲಾಗಿದೆ ಎಂದು ಬೆಂಗಳೂರಿನ ಸಂಚಾರ ಪೊಲೀಸರು ತಿಳಿಸಿದ್ದಾರೆ. ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ದೇಶ ಹಾಗೂ ರಾಜ್ಯದ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಇನ್ನು ಲೋಕಭವನಕ್ಕೆ ಆಹ್ವಾನಿತರಿಗೆ ಮಾತ್ರ ಕಾರ್ಯಕ್ರಮಕ್ಕೆ ಭಾಗವಹಿಸಬಹುದಾಗಿದೆ. ಸಾರ್ವಜನಿಕರಿಗೆ ಪ್ರವೇಶವಿರುವುದಿಲ್ಲ.

ರಾಹುಲ್ ಗಾಂಧಿ ಭಾಗಿ

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಲೋಕಭವನದಲ್ಲಿ ನಡೆಯಲಿರುವ ಪ್ರಮಾಣ ವಚನ ಕಾರ್ಯಕ್ರಮಕ್ಕೆ ಭಾಗವಹಿಸಲಿದ್ದಾರೆ. ಅವರ ಭದ್ರತೆ ದೃಷ್ಟಿಯಿಂದ ರಾಹುಲ್ ಗಾಂಧಿ ಅವರು ನೆಲೆಸಲಿರುವ ಶಾಂಗ್ರಿಲಾ ಹೋಟೆಲ್‌ನ 1 ಕಿ.ಮೀ.ವ್ಯಾಪ್ತಿಯಲ್ಲಿ ತಾತ್ಕಾಲಿಕವಾಗಿ ನೋ ಫ್ಲೈ ವಲಯ ಎಂದು ಘೋಷಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಆದೇಶ ಹೊರಡಿಸಿದ್ದಾರೆ.



ಹಲವೆಡೆ ಸಂಚಾರ ಮಾರ್ಪಾಡು

• **ಬೆಂಗಳೂರು:** ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಲೋಕಭವನದ ಗಾಜಿನ ಮನೆಯಲ್ಲಿ ಜೂ.3ರಂದು ಸಂಜೆ ನಾಲ್ಕು ಗಂಟೆಗೆ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ಹಾಗೂ ರೇಸ್‌ಕೋರ್ಸ್ ರಸ್ತೆ ಬಳಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದೆ. ಆ ನಿಟ್ಟಿನಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಜೂ.3 ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 8 ರ ವರೆಗೆ ಕೆಲ ರಸ್ತೆಗಳಲ್ಲಿ ಸಂಚಾರ ಮಾರ್ಪಾಡು ಮಾಡಲಾಗಿದೆ ಎಂದು ಬೆಂಗಳೂರಿನ ಸಂಚಾರ ಪೊಲೀಸರು ತಿಳಿಸಿದ್ದಾರೆ. ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ದೇಶ ಹಾಗೂ ರಾಜ್ಯದ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಇನ್ನು ಲೋಕಭವನಕ್ಕೆ ಆಹ್ವಾನಿತರಿಗೆ ಮಾತ್ರ ಕಾರ್ಯಕ್ರಮಕ್ಕೆ ಭಾಗವಹಿಸಬಹುದಾಗಿದೆ, ಸಾರ್ವಜನಿಕರಿಗೆ ಪ್ರವೇಶವಿರುವುದಿಲ್ಲ.

ಸಂಚಾರ ನಿರ್ಬಂಧ

ಕಬ್ಬನ್ ರಸ್ತೆಯ ಬಿ.ಆರ್.ವಿ ಜಂಕ್ಷನ್‌ನಿಂದ ಸಿ.ಟಿ.ಓ. ಜಂಕ್ಷನ್‌ವರೆಗೆ, ಸಿ.ಟಿ.ಓ. ವೃತ್ತದಿಂದ ಲೋಕಭವನದವರೆಗೆ, ಬಾಳೇಕುಂದ್ರಿ ಜಂಕ್ಷನ್‌ನಿಂದ ಅಂಬೇಡ್ಕರ್ ರಸ್ತೆ ಕಡೆಗೆ, ಕೆ.ಆರ್.ಸರ್ಕಲ್ ಕಡೆಯಿಂದ ಕಾಫಿಬೋರ್ಡ್ ಜಂಕ್ಷನ್‌ವರೆಗೆ, ರೇಸ್ ಕೋರ್ಸ್ ರಸ್ತೆಯ ಟ್ರಿಲೈಟ್ ಜಂಕ್ಷನ್‌ನಿಂದ ಸುಬ್ಬಣ್ಣ ಜಂಕ್ಷನ್‌ವರೆಗೆ, ಕ್ವೀನ್ಸ್ ಜಂಕ್ಷನ್ ಕಡೆಯಿಂದ ಸಿ.ಟಿ.ಓ ಕಡೆಗೆ. ಈ ಮಾರ್ಗಗಳ ಪೈಕಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿರುವ ವಾಹನಗಳನ್ನು ಹೊರತುಪಡಿಸಿ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ

ಕಬ್ಬನ್ ರಸ್ತೆಯ ಬಿ.ಆರ್.ವಿ ಜಂಕ್ಷನ್‌ನಿಂದ ಸಿ.ಟಿ.ಓ.ಜಂಕ್ಷನ್ ವರೆಗೆ ಹಾಗೂ ಸಿ.ಟಿ.ಓ. ವೃತ್ತದಿಂದ ಲೋಕಭವನದವರೆಗೆ ಸಂಚರಿಸುವ ವಾಹನಗಳು, ಬಿ.ಆರ್.ವಿ. ಜಂಕ್ಷನ್ ಬಳಿ ಶಿವಾಜಿನಗರ ಕಡೆಗೆ ಬಲತಿರುವು ಹಾಗೂ ಅನಿಲ್ ಕುಂಬ್ಳೆ ಜಂಕ್ಷನ್ ಕಡೆಗೆ ಎಡತಿರುವು ಪಡೆದು ಸಂಚರಿಸಬಹುದಾಗಿದೆ. ಕ್ವೀನ್ಸ್ ರಸ್ತೆ ಹಾಗೂ ಶಿವಾಜಿನಗರ ಕಡೆಯಿಂದ ಬರುವ ವಾಹನಗಳು ಬಾಳೇಕುಂದ್ರಿ ಜಂಕ್ಷನ್ ಬಳಿ ಕನ್ನಿಂಗ್ ಹ್ಯಾಮ್ ರಸ್ತೆಯ ಮುಖಾಂತರ ಸಂಚರಿಸಬಹುದಾಗಿದೆ. ಕೆ.ಆರ್.ಸರ್ಕಲ್ ಕಡೆಯಿಂದ ಕಾಫಿಬೋರ್ಡ್ ಜಂಕ್ಷನ್ ಕಡೆಗೆ ಸಂಚರಿಸುವ ವಾಹನಗಳು ನೃಪತುಂಗ ರಸ್ತೆಯ ಮುಖಾಂತರ ಸಂಚರಿಸಬಹುದಾಗಿದೆ.

ಎಲ್ಲೆಲ್ಲಿ ವಾಹನಗಳ ನಿಲುಗಡೆ ನಿಷೇಧ

ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ, ಬಾಳೇಕುಂದ್ರಿ ವೃತ್ತದಿಂದ ಕೆ.ಆರ್. ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ, ಲೋಕಭವನ ರಸ್ತೆ ಬಿ.ಆರ್.ವಿ.ವೃತ್ತದಿಂದ – ಲೋಕಭವನ ಜಂಕ್ಷನ್‌ವರೆಗೆ, ಎಲ್.ಎಚ್. ರಸ್ತೆ, ಲೋಕಭವನ ಜಂಕ್ಷನ್‌ನಿಂದ – ಚಾಲುಕ್ಯ ವೃತ್ತದವರೆಗೆ, ಕ್ವೀನ್ಸ್ ರಸ್ತೆ, ಬಾಳೇಕುಂದ್ರಿ ಜಂಕ್ಷನ್‌ನಿಂದ – ಕೀನ್ಸ್ ವೃತ್ತದವರೆಗೆ, ಪ್ಯಾಲೇಸ್ ರಸ್ತೆ, ಮೈಸೂರು ಬ್ಯಾಂಕ್ ವೃತ್ತದಿಂದ – ವಸಂತನಗರ ಕೆಳಸೇತುವೆ ವರೆಗೆ ಮುಂತಾದ ಕಡೆಗಳಲ್ಲಿ ವಾಹನ ನಿಲ್ಲಿಸುವುದು ನಿಷೇಧಿಸಲಾಗಿದೆ.


ಬ್ಯಾನರ್ ತೆರವು



ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಹಿನ್ನೆಲೆ ಡಿಕೆಶಿಗೆ ಶುಭಕೋರಿ ನಗರದಲ್ಲಿ ಹಾಕಲಾಗಿದ್ದ ಅನಧಿಕೃತ ಹಾಕಲಾಗಿದ್ದ ಫ್ಲೆಕ್ಸ್,ಬ್ಯಾನರ್‌ಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮೂಲಾಜಿಲ್ಲದೆ ತೆರವುಗೊಳಿಸಿದೆ. ಜಿಬಿಎಯಿಂದ ಅನುಮತಿ ಪಡೆದು ಹಾಕಲಾದ ಫ್ಲೆಕ್ಸ್, ಬ್ಯಾನರ್‌ಗಳನ್ನು ಮಾತ್ರ ಉಳಿಸಿದೆ. ವಿಧಾನಸೌಧ, ಹೈಕೋರ್ಟ್ ಮುಂಭಾಗ, ಲೋಕಭವನ ಸೇರಿದಂತೆ ನಗರದ ವಿವಿಧೆಡೆ ಅನಧಿಕೃತವಾಗಿ ಅಳವಡಿಸಿದ್ದ ಡಿ.ಕೆ.ಶಿವಕುಮಾರ್‌ಗೆ ಶುಭಕೋರುವ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ ಜೊತೆಗೆ ಒತ್ತುವರಿಯಾಗಿದ್ದ ಪಾದಚಾರಿ ಮಾರ್ಗವನ್ನು ಅಧಿಕಾರಿ ಹಾಗೂ ಸಿಬ್ಬಂದಿ ಕಾರ್ಯಾಚರಣೆ ಮೂಲಕ ತೆರವುಗೊಳಿಸಿದ್ದಾರೆ.

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

• **ಬೆಂಗಳೂರು:** ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿ ದೇವಸ್ಥಾನಕ್ಕೆ ವ್ಯವಸ್ಥಾಪನಾ ಸಮಿತಿ ರಚಿಸಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾದ ಅರ್ಜಿ ಸಂಬಂಧ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.



ಮೇಲುಕೋಟೆ ನಿವಾಸಿ, ದೇವಸ್ಥಾನದ ಭಕ್ತರಾದ ವಿದ್ವಾನ್ ಡಾ.ಎಂ.ಪಿ. ನರ ಸಿಂಹನ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ವಾದ ಆಲಿಸಿದ ಪೀಠವು ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್, ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಿತು. ಅಲ್ಲದೇ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುವಂತೆ ನಿರ್ದೇಶನ ನೀಡಿ ವಿಚಾರಣೆಯನ್ನು ಸೆ.2ಕ್ಕೆ ಮುಂದೂಡಿತು.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಕಾಯಿದೆ-1977ರ ಪ್ರಕಾರ ಚೆಲುವ ನಾರಾಯಣಸ್ವಾಮಿ ದೇವಸ್ಥಾನ ಎ ದರ್ಜೆ ದೇವಸ್ಥಾನವಾಗಿದ್ದು, ವಾರ್ಷಿಕ 25 ಲಕ್ಷ ರೂ.ಆದಾಯ ಹೊಂದಿದೆ. ಕಾಯಿದೆಯ ಸೆಕ್ಷನ್ 25ರ ಪ್ರಕಾರ ದೇವಸ್ಥಾನಕ್ಕೆ ವ್ಯವಸ್ಥಾಪನಾ ಸಮಿತಿ ರಚಿಸಬೇಕು. ಕೊನೆಯ ಬಾರಿಗೆ ರಚಿಸಲಾಗಿದ್ದ ಸಮಿತಿಯ ಅವಧಿಯು 2013-14ನೇ ಸಾಲಿಗೆ ಮುಗಿದಿದೆ. ಕಳೆದ 12-13 ವರ್ಷಗಳಿಂದ ಆಡಳಿತಾಧಿಕಾರಿಯೇ ದೇವಸ್ಥಾನದ ನಿರ್ವಹಣೆ ಮಾಡುತ್ತಿದ್ದಾರೆ. 2023ರಲ್ಲಿ ವ್ಯವಸ್ಥಾಪನಾ ಸಮಿತಿ ರಚನೆಗೆ ಅಧಿಸೂಚನೆ ಹೊರಡಿಸಲಾಗಿದ್ದರೂ, ಈವರೆಗೆ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಅರ್ಜಿಯಲ್ಲಿ ದೂರಲಾಗಿದೆ.

ಕಾರ್ಮಿಕರ ಕನಿಷ್ಠ ವೇತನ: ಹೈ ನಿರ್ದೇಶನ

• **ಬೆಂಗಳೂರು:** ಕಾರ್ಮಿಕರ ಕನಿಷ್ಠ ವೇತನ ಹೆಚ್ಚಿಸಿರುವ ಸರ್ಕಾರದ ಆದೇಶ ಪ್ರಶ್ನಿಸಿ ಕರ್ನಾಟಕ ಎಂಪ್ಲಾಯರ್ಸ್ ಅಸೋಸಿಯೇಶನ್ ಸಲ್ಲಿಸಿರುವ ಅರ್ಜಿಯಲ್ಲಿ ಕೇಂದ್ರ ಸರ್ಕಾರವನ್ನು ಪ್ರತಿವಾದಿಯನ್ನಾಗಿಸುವಂತೆ ಹೈಕೋರ್ಟ್ ನಿರ್ದೇಶಿಸಿದೆ.

ರಾಜ್ಯ ಕಾರ್ಮಿಕ ಇಲಾಖೆಯು ಮೇ 22ರಂದು ಕನಿಷ್ಠ ವೇತನ ಪರಿಷ್ಕರಿಸಿ ಹೊರಡಿಸಿರುವ ಅಧಿಸೂಚನೆ ಪ್ರಶ್ನಿಸಿ ಕರ್ನಾಟಕ ಎಂಪ್ಲಾಯರ್ಸ್ ಅಸೋಸಿಯೇಶನ್ ಮತ್ತು ಎತಿರಿಯಲ್ ಮಷೀನ್ಸ್ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ ಜ್ಯೋತಿ ಮೂಲಿಮನಿ ಅವರ ಏಕಸದಸ್ಯ ಪೀಠ ನಡೆಸಿತು.

ಅರ್ಜಿದಾರರು ಕೇಂದ್ರ ಸರ್ಕಾರದ ಕಾಯಿದೆಯನ್ನು ಉಲ್ಲೇಖಿಸುತ್ತಿರುವುದರಿಂದ ಕೇಂದ್ರ ಸರ್ಕಾರವನ್ನು ಪಕ್ಷಕಾರರನ್ನಾಗಿ ಮಾಡಬೇಕು. ಕೇಂದ್ರ ಸರ್ಕಾರ ಏನು ಹೇಳುತ್ತದೆ ಎಂಬುದನ್ನು ನೋಡಬೇಕಿದೆ ಎಂದು ಪೀಠ ಹೇಳಿತು. ಅರ್ಜಿದಾರರ ಪರ ಹಿರಿಯ ವಕೀಲ ಎಸ್ಎಸ್ ನಾಗಾನಂದ್ ಅವರ ವಾದ ಆಲಿಸಿದ ಪೀಠವು ಕೇಂದ್ರ ಸರ್ಕಾರವನ್ನು ಪ್ರತಿವಾದಿಯನ್ನಾಗಿಸಲು ನಿರ್ದೇಶಿಸಿ, ವಿಚಾರಣೆಯನ್ನು ಜೂ.9ಕ್ಕೆ ಮುಂದೂಡಿತು.

ನಾಗಾನಂದ್ ಅವರು ಶೇ.60ರಷ್ಟು ವೇತನ ಹೆಚ್ಚಳ ಮಾಡಲಾಗಿದೆ. ಇದರಿಂದಾಗಿ ನರ್ಸಿಂಗ್ ಹೋಮ್, ಕಾಲೇಜುಗಳು ಮುಚ್ಚುತ್ತವೆ. ಅಷ್ಟು ಸಂಬಳವನ್ನು ಅವರು ಪಾವತಿಸಲಾಗದು. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟದಲ್ಲಿ ಅತ್ಯಂತ ಹೆಚ್ಚು ಕನಿಷ್ಠ ವೇತನ ನಿಗದಿಯಾಗಿದೆ. ಮಧ್ಯಂತರ ಆದೇಶ ಮಾಡದೇ ಇದ್ದರೆ ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆಗಳು, ಸಾವಿರಾರು ಕೈಗಾರಿಕೆಗಳು ಲಕ್ಷಾಂತರ ಕಾರ್ಮಿಕರಿಗೆ ಹೊಸ ಆದೇಶದ ಅನ್ವಯ ವೇತನ ಪಾವತಿಸಬೇಕಾಗುತ್ತದೆ. ಮುಂದುವರಿದು, ಹಿಂಪಡೆಯಲಾಗಿರುವ ಕಾಯಿದೆಯನ್ನು ಆಧರಿಸಿ ವೇತನ ಹೆಚ್ಚಿಸಲು ಅಧಿಸೂಚನೆ ಹೊರಡಿಸಬಹುದೇ? ಎಂದು ಪ್ರಶ್ನಿಸಿದರು. ಅಖಿಲ ಭಾರತ ಟ್ರೇಡ್ ಯೂನಿಯನ್‌ಗಳ ಕೇಂದ್ರೀಯ ಒಕ್ಕೂಟ ಪ್ರತಿನಿಧಿಸಿದ್ದ ಹಿರಿಯ ವಕೀಲ ವಿಕ್ರಮ್ ಹುಯಿಲಗೋಳ ಅವರು, 2017ರಲ್ಲಿ ಕೊನೆಯ ಬಾರಿಗೆ ವೇತನ ಪರಿಷ್ಕರಣೆ ಮಾಡಲಾಗಿದೆ.

ಉದಯನಿಧಿ ಸ್ಟಾಲಿನ್ ಹೆಸರಿನಲ್ಲಿ ತಾಯಿಯಿಂದ ದೇವಿಗೆ ವಿಶೇಷ ಅರ್ಚನೆ

ಚಾಮುಂಡಿಗೆ ದುರ್ಗಾ ಸ್ಟಾಲಿನ್ ಪೂಜೆ

• **ಮೈಸೂರು:** ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಪತ್ನಿ ದುರ್ಗಾ ಸ್ಟಾಲಿನ್ ಅವರು ಮೈಸೂರಿನ ಚಾಮುಂಡೇಶ್ವರಿ ಹಾಗೂ ನಿಮಿಷಾಂಬಾ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಸನಾತನ ಧರ್ಮದ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿ ದೇಶಾದ್ಯಂತ ಆಕ್ರೋಶಕ್ಕೆ ಗುರಿ ಯಾಗಿದ್ದ ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಅವರ ತಾಯಿಯೇ ಈಗ ಮಗ ಹಾಗೂ ಪತಿಯ ಹೆಸರಿನಲ್ಲಿ ಶಕ್ತಿ ದೇವತೆಗಳಿಗೆ ಅರ್ಚನೆ ಮಾಡಿಸಿರುವುದು ಸಾರ್ವಜನಿಕ ವಲಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಮೈಸೂರಿನ ಚಾಮುಂಡಿಬೆಟ್ಟ ಹಾಗೂ ಮಂಡ್ಯದ ಗಂಜಾಂನ ನಿಮಿಷಾಂಬಾ ದೇವ ಸ್ಥಾನಕ್ಕೆ ತಮಿಳುನಾಡು ಮಾಜಿ ಸಿಎಂ ಎಂಕೆ ಸ್ಟಾಲಿನ್ ಪತ್ನಿ ದುರ್ಗಾ ಸ್ಟಾಲಿನ್ ಭೇಟಿ ನೀಡಿದರು. ಸನಾತನ ಧರ್ಮ ವಿರೋಧಿಸಿದ್ದ ಪುತ್ರ ಉದಯ ನಿಧಿ ಸ್ಟಾಲಿನ್ ಹೆಸರಿನಲ್ಲಿ ತಾಯಿಯಿಂದ ದೇವಿಗೆ ವಿಶೇಷ ಅರ್ಚನೆ ಮತ್ತು ಮಡಿಲು ತುಂಬಿಸುವ ಉಡಿಸೇವೆ ಸಲ್ಲಿಕೆ ಮಾಡಿ ಪ್ರಾರ್ಥಿಸಿದ್ದಾರೆ. ಇತ್ತೀಚೆಗಷ್ಟೇ ತಮಿಳುನಾಡಿನಲ್ಲಿ ಎಂ.ಕೆ. ಸ್ಟಾಲಿನ್ ಪುತ್ರ ಹಾಗೂ ವಿಪಕ್ಷ ನಾಯಕ ಉದಯ ನಿಧಿ ಸ್ಟಾಲಿನ್, 'ಸನಾತನ ಧರ್ಮ ಎಂಬುದು ಸೊಳ್ಳೆ, ಡೆಂಗ್ಯೂ, ಮಲೇರಿಯಾ ಇದ್ದಂತೆ. ಅದನ್ನು ಕೇವಲ ವಿರೋಧಿಸಿದರೆ ಸಾಲದು, ಸಮಾಜದಿಂದ ಸಂಪೂರ್ಣವಾಗಿ ಕಿತ್ತೊಗೆಯಬೇಕು' ಎಂದು ಹೇಳಿಕೆ ನೀಡಿದ್ದರು. ಈ ಹೇಳಿಕೆಯು ದೇಶಾದ್ಯಂತ ಭಾರಿ ವಿವಾದ ಸೃಷ್ಟಿಸಿತ್ತು.



ಮಗ ಇಷ್ಟೊಂದು ದೊಡ್ಡ ಮಟ್ಟದಲ್ಲಿ ಸನಾತನ ಧರ್ಮವನ್ನು ವಿರೋಧಿಸಿದ್ದರೂ, ತಾಯಿ ದುರ್ಗಾ ಸ್ಟಾಲಿನ್ ಮಾತ್ರ ತಮ್ಮ ಧಾರ್ಮಿಕ ನಂಬಿಕೆ ಯನ್ನು ಮುಂದುವರಿಸಿದ್ದಾರೆ. ಮಗನ ಒಳಿತಿಗಾಗಿ ಹಾಗೂ ಕುಟುಂಬದ ಸುಖ-ಶಾಂತಿಗಾಗಿ ಅವರು ಹಿಂದೂ ಸಂಪ್ರದಾಯದಂತೆ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನೆರವೇರಿಸುವ ಮೂಲಕ ಮಗನ ಹೇಳಿಕೆಗೆ ತದ್ವಿರುದ್ಧವಾಗಿ ನಡೆದುಕೊಂಡಿದ್ದಾರೆ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದ ದುರ್ಗಾ ಸ್ಟಾಲಿನ್, ಕುಟುಂಬದ ಒಳಿತಿಗಾಗಿ ಪ್ರಾರ್ಥಿಸಿದರು. ಧಾರ್ಮಿಕ ದರ್ಶನದ ಬಳಿಕ ಮೈಸೂರಿನಲ್ಲಿರುವ ಶಾಸಕ ಜಿ.ಟಿ. ದೇವೇಗೌಡ ಅವರ ನಿವಾಸಕ್ಕೆ ಭೇಟಿ ನೀಡಿದ ಅವರು, ಜಿ.ಟಿ.ಡಿ ಪತ್ನಿ ಲಲಿತಾ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಿದರು.

ಕೇಂದ್ರ ರಾಜ್ಯ ಖಾತೆ ಸಚಿವ ರಾಮದಾಸ್ ಅಠವಲೆ

ಯುಪಿಎ ಅವಧಿಯಲ್ಲೇ 10 ಬಾರಿ ಬೆಲೆ ಏರಿಕೆ

• **ಕಲಬುರಗಿ:** ಕಳೆದ 12 ವರ್ಷಗಳ ಅವಧಿಯಲ್ಲಿ ಒಂದೇ ಒಂದು ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗಿಲ್ಲ.



ಮಧ್ಯ ಪ್ರಾಚ್ಯದಲ್ಲಿ ಯುದ್ಧದ ಕಾರ್ಮೋಡ ಇರುವುದರಿಂದ ಹಾಗೂ ದೇಶದ ಆರ್ಥಿಕತೆ ಕುಸಿಯ ಬಾರದು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡುವ ನಿರ್ಧಾರ ಕೈಗೊಂಡಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ರಾಮದಾಸ ಅಠವಲೆ ಹೇಳಿದರು.

ನಗರದ ಐವಾನ್-ಎ-ಶಾಹಿ ಅತಿಥಿಗೃಹದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಆಡಳಿತದಲ್ಲಿ ಒಂದೇ ವರ್ಷದಲ್ಲಿ ಹತ್ತು ಬಾರಿ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಮಾಡಲಾಗಿದ್ದು, ಇದೀಗ ಸರ್ಕಾರದ ಮುಂದೆ ಯಾವುದೇ ದಾರಿ ಇಲ್ಲದ ಹಿನ್ನೆಲೆ ಬೆಲೆ ಏರಿಕೆಯಾಗಿದೆ. ಇದರಿಂದ ಸಾಮಾನ್ಯ ನಾಗರೀಕರಿಗೆ ಕಷ್ಟವಾಗಲಿದೆ ಎಂಬ ಅರಿವು ಸರ್ಕಾರಕ್ಕಿದೆ. ಹೀಗಾಗಿ ಏರಿಕೆ ಮಾಡಿರುವ ಪೆಟ್ರೋಲ್ ಡೀಸೆಲ್ ದರವನ್ನು ಕಡಿಮೆ ಮಾಡುವ ಚಿಂತನೆ ಸರ್ಕಾರ ಮಾಡುತ್ತಿದೆ ಎಂದರು.

ಕಳೆದ 12 ವರ್ಷಗಳಲ್ಲಿ ದೇಶದ ಅಭಿವೃದ್ಧಿಗೆ ವೇಗ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ದೇಶದ ರಾಜ್ಯಗಳಿಗೆ ಯಾವುದೇ ತಾರತಮ್ಯವಿಲ್ಲದೆ ಎಲ್ಲ ಯೋಜನೆಗಳ ಲಾಭ ಪಡೆಯಲೆಂದು ಅನುದಾನ ನೀಡುತ್ತಿದೆ. 2026-27ನೇ ಸಾಲಿನ ಬಜೆಟ್ 57 ಲಕ್ಷ ಕೋಟಿ ಇದ್ದು, ದೇಶದ ಸರ್ವ ಸಮುದಾಯಗಳಿಗೆ ಸಮಾನವಾಗಿ ಪರಿಗಣಿಸಿದೆ.

ನನ್ನ ಸಚಿವಾಲಯಕ್ಕೆ ಕಳೆದ ಬಜೆಟ್‌ನಲ್ಲಿ 1,98 ಕೋಟಿ ಹಣ ನೀಡಲಾಗಿದ್ದು, ಇದರಲ್ಲಿ ಎಸ್ಸಿ, ಒಬಿಸಿ, ಹಿರಿಯ ನಾಗರಿಕರು, ಟ್ರಾನ್ಸಜೆಂಡರ್, ದಿವ್ಯಾಂಗರ ಅಭಿವೃದ್ಧಿಗೆ ಬಳಸಲಾಗುತ್ತಿದೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಮಹಾರಾಷ್ಟ್ರ ಅಧ್ಯಕ್ಷ ಎಂ.ವೆಂಕಟಸಿಂಗ್, ಕಾಕಾ ಸಾಹೇಬ್ ಕಣದಾಳ, ದೇವಿದಾಸ ಕಾಂಬ್ಳೆ, ಸತೀಶ್ ಹಾಸನ್, ನಾಗೇಶ್ ತಲಕಣಿ, ಶ್ರವಣ,ರಾಜಾ ಸಾರವಾಡೇ, ಎ.ಬಿ.ಹೊಸಮನಿ, ಪ್ರಕಾಶ್ ಮೂಲಭಾರತಿ ಇದ್ದರು.

2029ಕ್ಕೂ ನರೇಂದ್ರ ಮೋದಿ ಸರ್ಕಾರ ಅಧಿಕಾರ

ಕೇಂದ್ರ ಸರ್ಕಾರ ಎಲ್ಲಾ ರಂಗಗಳಲ್ಲೂ ವಿಫಲವಾಗಿದೆ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿಕೆಗೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ರಾಮದಾಸ್ ಅಠವಲೆ, ಖರ್ಗೆ ಅವರಿಗೆ ಮಾತನಾಡಲು ಅಧಿಕಾರ ಇದೆ. ಏಕಂದರೆ ಅವರು ವಿರೋಧ ಪಕ್ಷದಲ್ಲಿದ್ದಾರೆ. ವಿರೋಧ ಪಕ್ಷದಲ್ಲಿದ್ದಾಗ ಟೀಕೆ ಟಿಪ್ಪಣಿ ಮಾಡುವುದು ಅವರ ಕರ್ತವ್ಯವಾಗಿದ್ದು, ಮಾತನಾಡಲಿ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಕರ್ನಾಟಕದ ಹಿರಿಯ ಕಾಂಗ್ರೆಸ್ ರಾಜಕಾರಣಿ ಮಲ್ಲಿಕಾರ್ಜುನ ಖರ್ಗೆ, ಇಡೀ ಜೀವನ ಕಾಂಗ್ರೆಸ್ ಪಕ್ಷದಲ್ಲೇ ಕಳೆದಿದ್ದಾರೆ. ಯಾವಾಗ ಅವಕಾಶ ಇತ್ತು. ಆಗ ಕಾಂಗ್ರೆಸ್ ಅವರನ್ನು ಮುಖ್ಯಮಂತ್ರಿ ಮಾಡಲಿಲ್ಲ. ಬದಲಾಗಿ ಎಐಸಿಸಿ ಅಧ್ಯಕ್ಷರನ್ನಾಗಿ ಮಾಡಿದೆ ಎಂದ ಅವರು, ಖರ್ಗೆ ನಮ್ಮ ಒಳ್ಳೆಯ ಮಿತ್ರರು ಸಹ ಇದ್ದಾರೆ ಎಂದು ಹೇಳಿದರು.

ಸಂಪಾದಕೀಯ

ಮುಂದಿರಲಿದೆ ಹೊಸ ಸವಾಲುಗಳು

ಕೆಲವು ತಿಂಗಳಿನಿಂದ ನಡೆಯುತ್ತಿದ್ದ ತೆರೆಮರೆಯ ಕಸರತ್ತು, ಹರಡುತ್ತಿದ್ದ ಗಾಳಿಸುದ್ದಿಗಳಿಗೆಲ್ಲಾ ಇಂದು ಅಂತಿಮ ತೆರೆ ಬೀಳಲಿದೆ. ಡಿ.ಕೆ ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಮಂತ್ರಿಮಂಡಲದಲ್ಲಿ ಯಾರಿರುತ್ತಾರೆ ಎಂಬುದು ಕೆಲವು ದಿನಗಳಲ್ಲಿ ತಿಳಿಯಲಿದೆ. ಆದರೆ ಇನ್ನೆರಡು ವರ್ಷಗಳ ಕಾಲ ಹೊಸ ಮುಖ್ಯಮಂತ್ರಿಯ ಆಡಳಿತ ಹೇಗಿರಲಿದೆ ಎಂಬುದರ ಬಗೆಗಿನ ಕುತೂಹಲವಂತೂ ಜನರಿಗಿದೆ. ಸಿದ್ದರಾಮಯ್ಯ ಆಡಳಿತಾವಧಿಯಲ್ಲಿ ಇದ್ದಂಥ ವಾತಾವರಣವಂತೂ ಇರಲಾರದು ಎಂಬ ಮಾತನ್ನು ಜನರು ಈಗಾಗಲೇ ಆಡುತ್ತಿದ್ದಾರೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಎರಡು ವಿಭಿನ್ನ ವ್ಯಕ್ತಿತ್ವದವರು. ಶಿವಕುಮಾರ್ ಅವರು ಸಿದ್ಧಮಾದರಿಯ ಯಾವ ಸಿದ್ಧಾಂತಗಳಿಗೆ ಕಟ್ಟುಬಿದ್ದವರಲ್ಲವಾದರೂ ಅನೇಕ ಮುತ್ಸದ್ಧಿ ರಾಜಕಾರಣಿಗಳನ್ನು ಆದರ್ಶವಾಗಿಟ್ಟುಕೊಂಡವರು. ಅವರೆಲ್ಲರ ರಾಜಕಾರಣದ ಛಾಯೆಯೇ ಶಿವಕುಮಾರರ ಸಿದ್ಧಾಂತ ಎಂದರೂ ತಪ್ಪಿಲ್ಲ.

ಆಡಳಿತಗಳಲ್ಲಿ ಸಿದ್ಧಾಂತಗಳ ನೆರಳುಗಳಿರುತ್ತವೆ ಎಂಬ ಮಾತು ಸತ್ಯವೇ ಇರಬಹುದು. ಆದರೆ ಸಿದ್ಧಾಂತಗಳು ಯಾವತ್ತೂ ಆಡಳಿತಕ್ಕೆ ಸವಾಲಾಗದು. ಕೊನೆಗೆ ನಿಭಾಯಿಸಿಕೊಂಡು ಹೋಗುವ ಚಾಣಾಕ್ಷ್ಯತನವೇ ಆಡಳಿತಗಾರನಿಗೆ ಇರಬೇಕಾದ ಅಂತಿಮ ಅರ್ಹತೆ. ಶಿವಕುಮಾರ್ ಅವರು ಅದರಲ್ಲೂ ಪಳಗಿದವರು. ಬಂಡೆ, ಟ್ರಬಲ್ ಶೂಟರ್ ಇತ್ಯಾದಿ ಬಿರುದಾಂಕಿತ ರಾಜಕಾರಣಿ ಮತ್ತು ನಗರಾಭಿವೃದ್ಧಿಯ ಚಿಂತನೆಯಲ್ಲಿ ಅತ್ಯಂತ ಸ್ಪಷ್ಟತೆ ಇರುವವರು. ಇವೆಲ್ಲಾ ಇದ್ದರೂ ಡಿ.ಕೆ.ಶಿವಕುಮಾರ್ ಅವರಿಗೆ ಬೇರೆಯದ್ದೇ ಆದ ಸವಾಲುಗಳು ಮುಂದೆ ದುರಾಗಲಿವೆ. ಸಿದ್ದರಾಮಯ್ಯ ಅವಧಿಯಲ್ಲಿ ಅವರು ಗ್ಯಾರಂಟಿ ಯೋಜನೆಗಳ ಯಶಸ್ಸುಗಳೆಲ್ಲವನ್ನೂ ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಇನ್ನು ಡಿಕೆಶಿ ಹೊಸದಾದ, ಜನಪ್ರೀಯವಾದ ಯಾವುದನ್ನು ರಾಜ್ಯಕ್ಕೆ ನೀಡುವುದಿದೆ? ಅಲ್ಲದೆ ಮೂರು ವರ್ಷಗಳ ಗ್ಯಾರಂಟಿ ಯೋಜನೆಗಳ ಹೊರೆ ಇನ್ನೆರಡು ವರ್ಷಗಳಲ್ಲಿ ಮತ್ತಷ್ಟು ಹೆಚ್ಚಲಿದೆ. ಅದರ ಹೊರೆಯನ್ನು ಹೊಸ ಮುಖ್ಯಮಂತ್ರಿಯವರೇ ಹೊರಬೇಕಿದೆ. ಡಿಕೆಶಿಯವರು ಅನೇಕ ರಾಜಕೀಯ ಗೊಂದಲಗಳನ್ನು ಸುಲಭವಾಗಿ ಪರಿಹರಿಸಿದವರು. ಹೊರರಾಜ್ಯಗಳಲ್ಲಿ ರಾಜಕೀಯ ಗೊಂದಲಗಳುಂಟಾದರೂ ಹೈಕಮಾಂಡಿಗೆ ಮೊದಲು ನೆನಪಾಗುತ್ತಿದ್ದವರು ಶಿವಕುಮಾರ್ ಅವರೇ. ಆದರೆ ಸ್ವತಃ ಅವರಿಗೆ ಎದುರಾಗುವ ಸವಾಲುಗಳನ್ನು ಅಷ್ಟು ಸುಲಭವಾಗಿ ಎದುರಿಸಬಹುದೇ ಎನ್ನುವ ಪ್ರಶ್ನೆಯೂ ಅನೇಕರದ್ದು. ಸದ್ಯಕ್ಕಂತೂ ಯಾವ ರೀತಿಯ ರಾಜಕೀಯ ಸವಾಲುಗಳೂ ಎದುರಾಗಲಾರದು ಅನಿಸುತ್ತದಾದರೂ ರಾಜಕೀಯದಲ್ಲಿ ಯಾವುದೂ, ಯಾವ ಕ್ಷಣದಲ್ಲಾದರೂ ಸಂಭವಿಸಬಹುದು. ಸಿದ್ದರಾಮಯ್ಯನವರು ತನ್ನ ಹೋರಾಟ ನಿರಂತರವಾಗಲಿದೆ ಎಂಬುದರ ಸೂಚನೆಯನ್ನು ಈಗಾಗಲೇ ಕೊಟ್ಟಿದ್ದಾರೆ. ಅದು ಯಾವ ರೀತಿಯದ್ದೂ ಆಗಿರಬಹುದು! ಅಲ್ಲದೆ ಇನ್ನೆರಡು ವರ್ಷದ ಆಡಳಿತಾವಧಿಯಲ್ಲಿ ಕೊನೆಯ ಆರು ತಿಂಗಳು ಚುನಾವಣೆಯ ಸಿದ್ಧತೆಗೆ ತೊಡಬೇಕಾಗಿದೆ. ಉಳಿಯುವುದು ಒಂದೂವರೆ ವರ್ಷಗಳು ಮಾತ್ರ. ಅದರ ನಡುವೆ ಜಿಬಿಎ ಚುನಾವಣೆಯೂ ಎದುರಾಗಲಿದೆ. ಅದು ಸ್ವತಃ ಮುಖ್ಯಮಂತ್ರಿಯ ಹೆಗಲಿಗೆ ಬೀಳಲಿದೆ. ಹೀಗೆ ನೂರಾರು ಸವಾಲುಗಳು ನಾನಾ ಆಕಾರವನ್ನು ಹೊತ್ತು ಎದುರಾಗಲಿದೆ. ಸದಾ ಹರ್ಡಲ್ಸ್‌ಗಳನ್ನು ದಾಟಬೇಕಿದೆ. ಅರೆಕ್ಷಣವೂ ನಿಲ್ಲದಂತೆ ಹುಟ್ಟುಹಾಕಬೇಕಿದೆ. ಡಿಕೆಶಿಯವರಿಗೆ ಮುಂಬರುವ ಸವಾಲುಗಳು ತೀರಾ ಹೊಸದು ಎಂಬುದಿಲ್ಲಿ ಗಮನಾರ್ಹ. ಅವರು ಸುಲಭವಾಗಿ ನದಿ ದಾಟಲಿದ್ದಾರೆಯೇ ಎಂಬುದನ್ನು ಕಾಲ ಮಾತ್ರ ಉತ್ತರಿಸಲಿದೆ.

ಮುದ್ದಿಸುವುದರಿಂದ ದೋಷ

ಸಾಮೃತೈಃ ಪಾಣಿಭಿರ್ಘ್ನಂತ ಗುರವೋ ನ ಷಷೋಕ್ಷಿತೈವೇ ।
ಲಾಲನಾಶ್ರಯಿಣೋ ದೋಷಾಃ ತಾಡನಾಶ್ರಯಿಣೋ ಗುಣಾಃ ॥ -ಮಹಾಭಾಷ್ಯ

ಆಚಾರ್ಯರು (ತಂದೆ, ತಾಯಿ – ಗುರು) ಮಕ್ಕಳನ್ನು ಹಾಗೂ ಶಿಷ್ಯರನ್ನು ಅಮೃತಯುತವಾದ ತಮ್ಮ ಕೈಗಳಿಂದಲೇ ದಂಡಿಸುತ್ತಾರೆ. ವಿಷಯುಕ್ತಗಳಿಂದಲ್ಲ. ಮುದ್ದಿಸುವುದರಿಂದ ದೋಷ, ಶಿಕ್ಷಿಸುವುದರಿಂದ ಗುಣ – ಎಂಬುದು ಶ್ಲೋಕಾರ್ಥ.

ಆಧುನಿಕ ಶಿಕ್ಷಣ ಕ್ರಮದಂತೆ ವಿದ್ಯಾರ್ಥಿಗಳಿಗೆ ಬಯ್ಯಬಾರದು. ಹೊಡೆಯಬಾರದು, ಯಾವುದೇ ವಿಧವಾದ ಶಿಕ್ಷೆಯನ್ನು ನೀಡಬಾರದು. ಒಂದೊಮ್ಮೆ ಶಿಕ್ಷೆ ಕೊಟ್ಟರೆ ಶಿಕ್ಷಕರ ಮೇಲೆ ಕ್ರಮ ಜರುಗಿಸಲಾಗುತ್ತದೆ. 'ನಮ್ಮ ಮಕ್ಕಳಿಗೆ ನಾವು ಬಯ್ಯುವುದಿಲ್ಲ, ಹೊಡೆಯುವುದಿಲ್ಲ. ಅವರಿಗೆ ಶಿಕ್ಷೆ ಕೊಡುವುದಕ್ಕೆ ನಿಮಗೇನು ಅಧಿಕಾರ?' ಎಂದು ಪ್ರಶ್ನಿಸುವ ಹೆತ್ತವರಿದ್ದಾರೆ. ಮನೆಯಲ್ಲಾಗಲೀ, ಶಾಲೆಯಲ್ಲಾಗಲಿ ಶಿಕ್ಷಿಸದೇ ಇರುವುದರಿಂದ ಮಕ್ಕಳು ಹೆಚ್ಚೆಚ್ಚು ಹಟಮಾರಿಗಳಾಗಿದ್ದಾರೆ. ಹೆತ್ತವರನ್ನು ಹೆದರಿಸುವವರಾಗಿದ್ದಾರೆ. ಇನ್ನೂ ಭಯಾನಕ ಸಂಗತಿಯೆಂದರೆ ಮಕ್ಕಳು ಹೆಚ್ಚೆಚ್ಚು ಅಪರಾಧವೆಸಗುತ್ತಿದ್ದಾರೆ.

ಗುರು– ಹಿರಿಯರು ಬಯ್ಯುವುದರಲ್ಲಿ, ಪೆಟ್ಟು ಕೊಡುವುದರ ಹಿನ್ನೆಲೆಯಲ್ಲಿ ಮಕ್ಕಳ ಮೇಲೆ ಪ್ರೀತಿ ಇದೆಯೇ ವಿನಾ ದ್ವೇಷವಿಲ್ಲ. ಮಕ್ಕಳಿಗೆ ಕೆಡುಕುಂಟು ಮಾಡಬೇಕು ಎಂಬ ಭಾವನೆ ಕನಸಿನಲ್ಲಿಯೂ ಇರುವುದಿಲ್ಲ. ನಮ್ಮ ಮಕ್ಕಳಿಗೆ ಒಳ್ಳೆಯದಾಗಬೇಕೆಂಬ ಹಂಬಲವಿದೆ. ಆಚಾರ್ಯರು, ತಂದೆ–ತಾಯಿಗಳು, ಗುರುಗಳು ಹೊಡೆಯುವಾಗ ಅವರ ಕೈ ಅಮೃತಮಯವಾಗಿರುತ್ತದೆಯೋ ವಿನಾ ವಿಷಮಯವಾಗಲಿ, ದ್ವೇಷಯುಕ್ತವಾಗಿರುವುದಿಲ್ಲ. ಅವರು ನೀಡುವ ಒಂದೊಂದು ಪೆಟ್ಟು ಪಡೆದ ವರ ಪಾಲಿಗೆ ಅಮೃತವೇ ಸರಿ.

ಶ್ಲೋಕ ಸಾಗರ



• ಡಾ.ಸೋಂದಾ ಭಾಸ್ಕರ ಭಟ್

'ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್' ಅಂದರೆ ಹುಟ್ಟಿ ಐದು ವರ್ಷವಾಗುವವರೆಗೆ ಮಕ್ಕಳನ್ನು ಪ್ರೀತಿಸಬೇಕು. ಮುದ್ದು ಮಾಡಬೇಕು. ಪ್ರೀತಿಯಿಂದ ನಂಬಿಸಿ ತಿದ್ದುವ (ಪ್ರಯತ್ನ) ಮಾಡಬೇಕು. ಪ್ರೀತಿಪೂರ್ವಕವಾಗಿ ಸಣ್ಣ ಸಣ್ಣ ಮೌಲ್ಯಗಳನ್ನು ತುಂಬಬೇಕು. ಮುಂದಿನ ಹತ್ತು ವರ್ಷ ಶಿಕ್ಷಿಸಿ ಶಿಕ್ಷಣ ಕೊಡಬೇಕು. ತಪ್ಪೆಸಗಿದಾಗ ಕಿವಿ ಹಿಂಡಿ ಸರಿ ಮಾರ್ಗಕ್ಕೆ ಹಚ್ಚಬೇಕು. ಇದಾವುದೂ ದ್ವೇಷದ ಕ್ರಿಯೆಯಲ್ಲ, ಒಳಿತಾಗಬೇಕೆಂಬ ಉತ್ಕಟೇಚ್ಛೆಯ ಪ್ರತಿಫಲನ. ಇದನ್ನೆಂದೂ ತಪ್ಪಾಗಿ ವ್ಯಾಖ್ಯಾನಿಸುವ ಪ್ರಯತ್ನ ಮಾಡಬಾರದು. ಹೆತ್ತವರ ಕೈ ವಿಷಮಯವಲ್ಲ. ಅಮೃತ ಸಿಂಚನ. ನೀಡುವ ಪೆಟ್ಟು ಅಮೃತವನ್ನು ಉಣಬಡಿಸುತ್ತದೆ. ಅವರದು ಅಮೃತ ದಂಡನೆ. ಮಕ್ಕಳನ್ನು ಅತಿಯಾಗಿ ಮುದ್ದಿಸುವುದು, ಅವರ ಗೃಹಪಾಠವನ್ನು ನಾವೇ ಮಾಡಿ ಕೊಡುವುದು, ಅವರ ಪುಸ್ತಕದ ಚೀಲವನ್ನು ನಾವೇ ಹೊತ್ತುಕೊಂಡು ಹೋಗುವುದು ದೋಷವೇ ಸರಿ. ತಮ್ಮದೇ ಕೆಲಸವನ್ನು ಮಾಡದ ಆಲಸಿಗಳನ್ನಾಗಿಸುವ ಕೆಟ್ಟಕೆಲಸ. ಇದರ ಬದಲಾಗಿ ತಮ್ಮ ಸಣ್ಣ ಸಣ್ಣ ಕೆಲಸಗಳನ್ನು ತಾವೇ ಮಾಡಿಕೊಳ್ಳಲು ಪ್ರೇರೇಪಿಸಬೇಕು. ಕಲಿಸಿಕೊಡಬೇಕು. ತಪ್ಪೆಸಗಿದಾಗ ಶಿಕ್ಷೆ ಕೊಟ್ಟರೆ ಭವಿಷ್ಯದಲ್ಲಿ ಗುಣವಾಗಿಯೇ ಪರಿಣಮಿಸುತ್ತದೆ. ಕೆಲಸ ಮಾಡಿ ಕೆಟ್ಟವರಿಲ್ಲ. ಶಿಕ್ಷೆ ಪಡೆದು ಕೆಟ್ಟವರಾದವರೂ ಕಡಿಮೆ. ಕೇವಲ ಮುದ್ದು ಮಾಡಿ ಒಳ್ಳೆಯವರಾದವರೂ ಕಡಿಮೆ. ಆದ್ದರಿಂದ ತಿದ್ದುವುದಕ್ಕಾಗಿ ನೀಡುವ ಶಿಕ್ಷೆಯಿಂದ ವ್ಯಥೆ ಪಡಬಾರದು. ಸುಂದರ ಭವಿಷ್ಯಕ್ಕಾಗಿ ಎಂದು ತಿಳಿಯಬೇಕು.

ದೇಹ ದಹನದವರೆಗಿನ ಕ್ರಿಯೆಗಳು ಮತ್ತು ಅವುಗಳ ವೈಶಿಷ್ಟ್ಯ

ಅಗ್ನಿಯು ಹುಟ್ಟಿನಿಂದ ಮರಣದ ಅನಂತರದವರೆಗೂ ನಮ್ಮ ಜೊತೆ ಘನಿಷ್ಠ ಸಂಬಂಧವನ್ನು ಉಳ್ಳವನಾಗಿದ್ದಾನೆ.

ಪದಸಂಚಲನ

• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಇಲ್ಲಿಯವರೆಗೆ ವ್ಯಕ್ತಿಯೊಬ್ಬನ ಮರಣದ ಸಂದರ್ಭದಲ್ಲಿ ಕೂಡಲೇ ಮಾಡಲಾಗುವ ಅಂತ್ಯೇಷ್ಟಿಯ ಅಂಗವಾದ ಕೆಲವು ಕರ್ಮಾಂಗಗಳನ್ನು ತಿಳಿದುಕೊಂಡೆವು. ವ್ಯಕ್ತಿಯ ದೊಡ್ಡ ಉಸಿರು ಹೊರಡುವಾಗ ಆತನ ತಲೆಯನ್ನು ದಕ್ಷಿಣ ದಿಕ್ಕಿಗಿಟ್ಟು ಮಲಗಿಸಬೇಕು. ಅಲ್ಲಿಂದ ಆರಂಭಿಸಿ ಮರಣದ ಅನಂತರ ಮಾಡಲಾಗುವ ಶವಾಭಿಷೇಕದವರೆಗಿನ ವಿಧಾನಗಳ ಮಹತ್ತ್ವವನ್ನು ತಿಳಿದುಕೊಂಡೆವು. ಓಷಧಿಗಳಿಂದ ಕೂಡಿದ ಜಲದಿಂದ ಪಾದದಿಂದ ತಲೆಯವರೆಗೆ ಮೃತಶರೀರದ ಅಭಿಷೇಕವನ್ನು ಮಾಡಿದ ಅನಂತರ ದೇಹವನ್ನು ದಹನಪ್ರದೇಶದವರೆಗೆ ದೇವತಾನಾಮಸ್ಮರಣೆಯ ಸಹಿತವಾಗಿ ಎತ್ತಿಕೊಂಡು ಹೋಗಬೇಕು. ಈ ಸಂದರ್ಭದಲ್ಲಿ ಬರುವ ಮಂತ್ರಗಳಲ್ಲಿ ದೇವತೆಗಳನ್ನು, ಅಗ್ನಿಯನ್ನು ಮತ್ತು ವಾಯುವನ್ನು ಕುರಿತು ಪ್ರಾರ್ಥಿಸಲಾಗುತ್ತದೆ. ಶರೀರವನ್ನು ತ್ಯಜಿಸಿದ ಜೀವನನ್ನು ಇನ್ನು ಮುಂದೆ ಪ್ರೇತ ಎಂದು ಕರೆಯಲಾಗುತ್ತದೆ. ಪ್ರೇತ ಎಂದರೆ ಇಲ್ಲಿಂದ ಹೊರಟವನು ಎಂದರ್ಥ. ಶರೀರವನ್ನು ತ್ಯಜಿಸಿ ಹೊರಟಿರುವುದರಿಂದ ಸೂಕ್ಷ್ಮಶರೀರದಿಂದ ಕೂಡಿದ ಜೀವನನ್ನು ಪ್ರೇತ ಎಂದು ಕರೆಯಲಾಗುತ್ತದೆ. ಹೇ ಪ್ರೇತ, ಸರ್ವಲೋಕರಕ್ಷಕನಾದ ದೇವನು ನಿನ್ನನ್ನು ಇಲ್ಲಿಂದ ತೆಗೆದುಕೊಂಡುಹೋಗಿ ಪಿತೃಗಳಿಗೆ ಸಮರ್ಪಿಸಲಿ. ಯಾವ ಅಗ್ನಿಯು ನಿನ್ನ ದೇಹವನ್ನು ದಹಿಸುತ್ತಾನೋ ಆತನು ನೀನು ಮಾಡಿದ ಕರ್ಮವನ್ನು ಅರಿತ ದೇವತೆಗಳಿಗೆ ನಿನ್ನನ್ನು ತಲುಪಿಸಲಿ ಎಂಬಿತ್ಯಾದಿಯಾಗಿ ಪ್ರಾರ್ಥಿಸಲಾಗುತ್ತದೆ. ಒಟ್ಟಿನಲ್ಲಿ ಜೀವನ ಮುಂದಿನ ಪ್ರಯಾಣ ಸುಗಮವಾಗಿ ನಡೆಯಲಿ ಎಂಬುದಾಗಿ ಈ ಮಂತ್ರಗಳ ಮೂಲಕ ಪ್ರಾರ್ಥಿಸಲಾಗುತ್ತದೆ.

ಹೀಗೆ ಆ ದೇಹವನ್ನು ಹೊತ್ತೊಯ್ಯುವಾಗ, ದಹನಪ್ರದೇಶದ ಮಾರ್ಗದ ಮೂರನೆಯ ಒಂದಂಶದಷ್ಟು ಸಾಗಿದ ಮೇಲೆ ಒಮ್ಮೆ ದೇಹವನ್ನು ಇಟ್ಟು ತಿಲೋದಕಾದಿಗಳನ್ನು ನೀಡಬೇಕು. ಹೀಗೆ ಮೂರು ಬಾರಿ ಮಾಡಿ ದಹನಪ್ರದೇಶವನ್ನು ತಲುಪಿಸಬೇಕು. ಇಲ್ಲಿಯೂ ವಾಯ್ವಾದಿಗಳನ್ನು ಕುರಿತು ಪ್ರಾರ್ಥಿಸಲಾಗುತ್ತದೆ. ಎಲ್ಲಿ ದಹನವನ್ನು ಮಾಡಲಾಗುತ್ತದೆಯೋ ಆ ಭೂಮಿಯಲ್ಲಿ ಈಗಾಗಲೇ ಇರುವ ದೇವತೆಗಳನ್ನು ಪ್ರಾರ್ಥಿಸಲಾಗುತ್ತದೆ. ಅಲ್ಲಿ ಕಲಶವನ್ನಿಟ್ಟು ಈ ಜೀವನನ್ನು ಪುಣ್ಯಲೋಕಕ್ಕೆ ತಲುಪಿಸಿ ಅಲ್ಲಿ ಮಾಡಲಾಗುವ ಪ್ರಾರ್ಥನೆ. ಅನಂತರದ ಮಂತ್ರಗಳಲ್ಲಿ ಪಿತೃಗಳನ್ನು ಕುರಿತು ಪ್ರಾರ್ಥನೆಯನ್ನು ನಡೆಸಲಾಗುತ್ತದೆ.

ಯಥಾ ಪಿತಾ ಪುತ್ರಂ ಪಶ್ಯತಿ ಸಖಾ ವಾ ಸಖಿಮಾಗತಮ್ ।
ಏವಮಿಮಂ ಪೂರ್ವಂ ಸಂಕ್ಲಿನ್ನಾಃ ಪ್ರೇತಾಃ ಪಶ್ಯತ ನಾನ್ಯಥಾ ॥

– ಅರ್ಥಾತ್ ಹೇಗೆ ಮನೆಗೆ ಬಂದ ಪುತ್ರನನ್ನು ತಂದೆಯು ಪ್ರೇಮದಿಂದ ಸ್ವಾಗತಿಸುತ್ತಾನೋ, ಮನೆಗೆ ಬಂದಿರುವ ಮಿತ್ರನನ್ನು ಸ್ನೇಹಿತನು ಸ್ನೇಹಪೂರ್ವಕವಾಗಿ ನೋಡುತ್ತಾನೋ ಹಾಗೆಯೇ ಈ ಜೀವನನ್ನೂ ನೋಡಿರಿ ಎಂಬುದು ಪ್ರಾರ್ಥನೆಯ ಸಾರ. ಹೀಗೆ ಪ್ರಾರ್ಥನೆಯನ್ನು ಮಾಡಿ ಮುಖವೇ ಮೊದಲಾದ ಏಳು ಸ್ಥಾನಗಳಲ್ಲಿ ಆಜ್ಯಬಿಂದುವನ್ನು ಹಾಕಿ ಭೂರಾದಿ ಸಪ್ತಲೋಕಗಳನ್ನು ಆತ ತನ್ನ ಕರ್ಮಕ್ಕನುಸಾರವಾಗಿ ಸಾಗಲಿ ಎಂದು ಆಶಿಸಲಾಗುತ್ತದೆ. ಅನಂತರ ಆದಿತ್ಯನಿಗೆ ಆಹುತಿಯನ್ನು ಕೊಟ್ಟು, ಮೃತಶರೀರದ ಅಂಗುಷ್ಠಬಂಧನವನ್ನು ಬಿಡಿಸಲಾಗುತ್ತದೆ. ಇಲ್ಲಿ ಯಾಕೆ ಮೊದಲು ಅಂಗುಷ್ಠದ ಬಂಧನವನ್ನು ಮಾಡಲಾಗುತ್ತದೆ ಎಂಬ ಬಗ್ಗೆ ಕೆಲವು ಕಡೆ 'ಅಂಗುಷ್ಠವು ಮತ್ತೊಂದು ಜೀವನ ಪ್ರವೇಶಕ್ಕೆ ದಾರಿ. ಹಾಗಾಗಿ ಮೃತಶರೀರದಲ್ಲಿ ಬೇರೆ ಯಾವುದೋ ಜೀವನು ಪ್ರವೇಶಿಸದಿರಲಿ ಎಂಬ ಕಾರಣಕ್ಕೆ ಹೀಗೆ ಮಾಡಲಾಗುತ್ತದೆ' ಎಂದು ತಿಳಿಸಲಾಗಿದೆ. ವ್ಯಕ್ತಿಯ ಮರಣದ ಅನಂತರ ದಹನದವರೆಗೆ ಕಾಲದ ಅಂತರ ಇರುವುದರಿಂದ ಮತ್ತು ಬಹುದೂರದವರೆಗೆ ಶವದ ಯಾತ್ರೆಯು ಸಾಗಿ ಬರುವಾಗ ಆ ದೇಹದಲ್ಲಿ ಮತ್ತೊಂದು ಜೀವವು ಆವಿಷ್ಟವಾಗದಿರಲೆಂಬ ಉದ್ದೇಶದಿಂದ ಹೀಗೆ ಮಾಡಲಾಗುತ್ತದೆ ಎಂಬುದಾಗಿ ತಿಳಿಸಲಾಗಿದೆ. ದಹನದ ಸಂದರ್ಭದಲ್ಲಿ ಆ ಬಂಧನವನ್ನು ಬಿಡಿಸಲಾಗುತ್ತದೆ.

ಅನಂತರ ಗಡಿಗೆಯಲ್ಲಿ ನೀರನ್ನು ತುಂಬಿಕೊಂಡು ಅದಕ್ಕೊಂದು ಛಿದ್ರವನ್ನು ಮಾಡಿ ಮೂರು ಬಾರಿ ದೇಹದ ಸುತ್ತ ತಿರುಗಲಾಗುತ್ತದೆ. ಆಗ ಘಟದಿಂದ ಸುರಿಯುವ ನೀರು ಜೀವನ ಪರಲೋಕಯಾತ್ರೆಯ ಸಮಯದಲ್ಲಿ ಆತನ ದಾಹವನ್ನು ತಣಿಸಲಿ ಎಂಬುದಾಗಿ ಪ್ರಾರ್ಥಿಸಲಾಗುತ್ತದೆ. ಇಮಾ ಆಪೋ ಮಧುಮತ್ಯಃ ಅಸ್ಮಿಂಸ್ತೇ ಲೋಕ ಉಪದುಹ್ಯತಾಮ್ । ಇಮಾ ಆಪೋ ಮಧುಮತ್ಯಃ ಅಂತರಿಕ್ಷೇ ತೇ ಲೋಕ ಉಪದುಹ್ಯತಾಮ್ । ಇಮಾ ಆಪೋ ಮಧುಮತ್ಯಃ ಸ್ವರ್ಗೇ ತೇ ಲೋಕ ಉಪದುಹ್ಯತಾಮ್ । ಎಂಬುದಾಗಿ ಒಂದೊಂದು ಸುತ್ತಿಗೂ ಒಂದೊಂದು ಬಾರಿ ಪ್ರಾರ್ಥಿಸಲಾಗುತ್ತದೆ. ಅನಂತರ ಅಗ್ನಿಯನ್ನು ಕುರಿತು ಪ್ರಾರ್ಥಿಸುತ್ತಾ, ಈ ಶರೀರವನ್ನು ಸಮಗ್ರವಾಗಿ ದಹಿಸು ಎಂಬುದಾಗಿ ಕೋರಲಾಗುತ್ತದೆ. ಚೆನ್ನಾಗಿ ದಹಿಸಿದ ಅನಂತರ ಜೀವನನ್ನು ದೇವತೆಗಳಿಗೆ ಸಮರ್ಪಿಸು ಎಂಬುದಾಗಿ ಕೇಳಿಕೊಳ್ಳಲಾಗುತ್ತದೆ.

ಅನಂತರ ಪ್ರೇತವನ್ನುದ್ದೇಶಿಸಿ ಆತನ ಇಂದ್ರಿಯಾದಿಗಳು ಆಯಾ ಅಭಿಮಾನಿ ದೇವತೆಯನ್ನು ಸೇರಲಿ, ಅಂತಃಕರಣವು ವಾಯುವನ್ನು (ಹಿರಣ್ಯಗರ್ಭನನ್ನು) ಸೇರಲಿ ಎಂಬಿತ್ಯಾದಿಯಾಗಿ ಪ್ರಾರ್ಥಿಸಿಕೊಳ್ಳಲಾಗುತ್ತದೆ. ವ್ಯಕ್ತಿಯು ಜೀವಂತವಿರುವಾಗ ಆತ ಐದು ಜ್ಞಾನೇಂದ್ರಿಯಗಳ ಮೂಲಕ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ವಿಷಯಗಳನ್ನುಗ್ರಹಿಸುತ್ತಾನಷ್ಟೆ.

ಈ ಎಲ್ಲ ವಿಷಯಗಳ ಜ್ಞಾನವಾಗಲು ಆತನಿಗೆ ಇಂದ್ರಿಯಾಭಿಮಾನಿ ದೇವತೆಗಳ ಅನುಗ್ರಹ ಬೇಕಾಗುತ್ತದೆ. ಒಂದೊಂದು ಇಂದ್ರಿಯಕ್ಕೂ ಒಂದೊಂದು ಅಭಿಮಾನಿ ದೇವತೆಯಿರುತ್ತದೆ. ಪ್ರಾಣವನ್ನು ತ್ಯಜಿಸುವಾಗ ಆ ಎಲ್ಲ ಇಂದ್ರಿಯಾಭಿಮಾನಿ ದೇವತೆಗಳೂ ಅಂತಃಕರಣದಲ್ಲಿ ಸೇರಿಕೊಳ್ಳುತ್ತವೆ. ಅನಂತರ ಮನಸ್ಸು ಪ್ರಾಣದಲ್ಲಿ ಲೀನವಾಗುತ್ತದೆ ಎಂಬುದಾಗಿ ಉಪನಿಷತ್ತು ತಿಳಿಸುತ್ತದೆ. ಆ ಪ್ರಾಣವು ತೇಜಸ್ಸಿನಲ್ಲಿ ಲಯವಾಗುತ್ತದೆ. ಹೀಗೆ ಆಗುವಾಗ ಎಲ್ಲ ಇಂದ್ರಿಯಗಳ ದೇವತೆಗಳೂ ಈ ಶರೀರದ ಆಯಾ ಸ್ಥಾನವನ್ನು ತ್ಯಜಿಸಿ ಮನಸ್ಸಿನಲ್ಲಿ ತಮ್ಮ ಕಾರ್ಯದ ಉಪಸಂಹಾರವನ್ನು ಮಾಡಿಕೊಂಡು ಮನಸ್ಸಿನ ಜೊತೆಗೆ ಪ್ರಾಣಾದಿಗಳ ಜೊತೆಗೆ ಜೀವನೊಂದಿಗೆ ಈ ದೇಹವನ್ನು ಬಿಡುತ್ತಾರೆ ಎಂಬುದಾಗಿ ಉಪನಿಷತ್ತು ತಿಳಿಸಿದೆ. ಅದನ್ನೇ ಇಲ್ಲಿ ಪ್ರಾರ್ಥಿಸಲಾಗಿದೆ.

ಅನಂತರ ಅಗ್ನಿಯನ್ನು ಸ್ತುತಿಸಿ ಪ್ರೇತ ಮತ್ತು ಅಗ್ನಿಯ ನಡುವೆ ತಂದೆ –ಮಗನ ಸಂಬಂಧವಿರುವುದಾಗಿ ಹೇಳುತ್ತಾ ಸನ್ಮಾರ್ಗದಲ್ಲಿ ನಡೆಸಬೇಕೆಂಬುದಾಗಿ ಪ್ರಾರ್ಥಿಸಲಾಗುತ್ತದೆ. ಇದನ್ನೇ ಉಪನಿಷತ್ತಿನಲ್ಲಿಯೂ ಕೂಡ ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ ಇತ್ಯಾದಿ ಮಂತ್ರಗಳಲ್ಲಿ ಸನ್ಮಾರ್ಗದಲ್ಲಿ ನಡೆಸುತ್ತಾ, ಪಾಪಕರ್ಮಗಳಿಂದ ನಮ್ಮನ್ನು ಮುಕ್ತರನ್ನಾಗಿಸಿ ನಮ್ಮನ್ನು ದೇವಯಾನದಲ್ಲಿ ಕರೆದುಕೊಂಡು ಹೋಗು ಎಂಬಿತ್ಯಾದಿ ಪ್ರಾರ್ಥಿಸುವ ಸಂದರ್ಭವಿದೆ.

ಒಟ್ಟಿನಲ್ಲಿ ಅಗ್ನಿಯು ಭಾರತೀಯ ಸಂದರ್ಭದಲ್ಲಿ ಹುಟ್ಟಿನಿಂದ ಮರಣದ ಅನಂತರದವರೆಗೂ ನಮ್ಮ ಜೊತೆ ಘನಿಷ್ಠ ಸಂಬಂಧವನ್ನು ಉಳ್ಳವನಾಗಿದ್ದಾನೆ. ಅಗ್ನಿಯ ಉಪಾಸನೆಯು ನಮ್ಮ ಜೀವಿತದಲ್ಲೂ, ಅನಂತರವೂ ನಡೆಯುತ್ತಲೇ ಇರುತ್ತದೆ. ಈ ಸಂದರ್ಭದಲ್ಲಿ ಅಗ್ನಿಯಲ್ಲಿ ಅನೇಕ ಆಹುತಿಗಳನ್ನು ಕೊಡಲಾಗುತ್ತದೆ. ಪ್ರೇತದ ಮಾರ್ಗದ ದೇವತೆಗಳಿಗೆ ಈ ಆಹುತಿಗಳು ಸಲ್ಲುತ್ತವೆ. ಅದೇ ಸಂದರ್ಭದಲ್ಲಿ ಈ ಪ್ರೇತನನ್ನು ಸ್ವರ್ಗಪ್ರಾಪ್ತಿಗೆ ವಿಘ್ನದಾಯಿಗಳಾದ ರಾಕ್ಷಸರಿಂದ ರಕ್ಷಿಸು ಎಂಬುದಾಗಿ ಅಗ್ನಿಯನ್ನು ಪ್ರಾರ್ಥಿಸಲಾಗುತ್ತದೆ. ಅನಂತರ ಯಮಸೂಕ್ತದ ಮೂಲಕ ಯಮನ ಸ್ತುತಿಯನ್ನು ಮಾಡಲಾಗುತ್ತದೆ. ಅರ್ಥಗರ್ಭಿತವಾದ ಒಂಬತ್ತು ಮಂತ್ರಗಳು ಆ ಸೂಕ್ತದಲ್ಲಿವೆ. ಈ ಮೂಲಕ ಜೀವನೆಂಬ ಜ್ಯೋತಿಯನ್ನು, ಜ್ಯೋತಿರೂಪನಾದ ಅಗ್ನಿಯು ಪರಮಾತ್ಮನೆಂಬ ಜ್ಯೋತಿಯಲ್ಲಿ ಐಕ್ಯಗೊಳಿಸಲೆಂಬುದಾಗಿ ಕೇಳಿಕೊಳ್ಳಲಾಗುತ್ತದೆ. ಅನಂತರ ಧರ್ಮಕಾಷ್ಠವನ್ನು ಹಾಕಲಾಗುತ್ತದೆ. ಅಲ್ಲಿ ಆ ಜೀವನಿಗೆ ಉತ್ತಮಲೋಕಗಳು ಪ್ರಾಪ್ತಿಯಾಗಲೆಂಬುದಾಗಿ ಪ್ರಾರ್ಥಿಸಲಾಗುತ್ತದೆ. ಯುದ್ಧದಲ್ಲಿ ಮಡಿದ ಕ್ಷತ್ರಿಯ ಮತ್ತು ಶಮದಮಾನ್ವಿತನಾದ ಸಂನ್ಯಾಸಿಯು ಸೂರ್ಯಮಂಡಲವನ್ನು ಭೇದಿಸಿ ಉತ್ತಮಲೋಕಗಳನ್ನು ಹೊಂದುತ್ತಾರೆ. ಅಂಥ ಲೋಕಗಳು ಈ ಜೀವನಿಗೆ ಪ್ರಾಪ್ತಿಯಾಗಲೆಂಬುದು ಇಲ್ಲಿನ ಪ್ರಾರ್ಥನೆ.

ಹೀಗೆ ಒಬ್ಬ ವ್ಯಕ್ತಿಯು ಮರಣವನ್ನು ಹೊಂದಿದ ಮೇಲೆ ನಿರ್ಗಮಿಸಿದ ಜೀವನತದುತ್ತರ ಪ್ರಯಾಣಕ್ಕೆ ಸಹಕಾರಿಯಾಗಿ ಅನೇಕ ಅರ್ಥಗರ್ಭಿತವಾಅದ ಕ್ರಮಗಳನ್ನು ಆಚರಿಸಲಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಈ ಜನ್ಮವೇ ಮೊದಲೂ ಅಲ್ಲ ಮತ್ತು ಕೊನೆಯದೂ ಅಲ್ಲ. ಆತ್ಮಜ್ಞಾನದವರೆಗೂ ಇಂಥ ಜನ್ಮ–ಮರಣದ ಚಕ್ರದಿಂದ ಮುಕ್ತಿಯೆಂಬುದಿಲ್ಲ. ಅಲ್ಲಿಯವರೆಗೆ ಹಳೆಯ ಶರೀರವನ್ನು ತ್ಯಜಿಸಿ ಹೊಸ ಹೊಸ ಶರೀರವನ್ನು ಜೀವನು ಪಡೆಯುತ್ತಾ ಹೋಗುತ್ತಾನೆ. ಹಾಗೆ ಹಳೆಯ ಶರೀರವನ್ನು ತ್ಯಜಿಸಿದ ಮೇಲೆ ಆ ಶರೀರಕ್ಕೆ ಸೂಕ್ತ ವಿಧಾನಗಳೊಂದಿಗೆ ಪ್ರಕೃತಿಯಲ್ಲಿ ಲೀನವಾಗಿಸಲಾಗುತ್ತದೆ. ರಾಮಾಯಣದಲ್ಲಿಯೂ ರಾವಣನ ವಧೆಯ ಅನಂತರ ವಿಭೀಷಣನಿಗೆ ರಾವಣನ ಅಂತ್ಯಕ್ರಿಯೆಯನ್ನು ವಿಧಿವತ್ತಾಗಿ ಆಚರಿಸಲು ರಾಮನು ಆದೇಶಿಸುತ್ತಾನೆ.

ಆತ ಜೀವಂತವಿರುವವರೆಗೆ ಆತ ಶತ್ರುವಾಗಿದ್ದ. ಆದರೆ ಮರಣದ ಅನಂತರ ಶತ್ರುತ್ವವೆಂಬುದು ಇರುವುದಿಲ್ಲ ಎಂಬುದಾಗಿ ರಾಮನೇ ವಿಭೀಷಣನಿಗೆ ಹೇಳಿ ಉತ್ತರಕ್ರಿಯೆಗಳನ್ನು ನಡೆಸಲು ಸೂಚಿಸುತ್ತಾನೆ. ಹೀಗೆ ಮರಣದವರೆಗೂ ನಮಗೆ ಆಶ್ರಯವನ್ನಿತ್ತ ಶರೀರಕ್ಕೆ ಗೌರವಯುತವಾಗಿ ಸಂಸ್ಕಾರಕರ್ಮದ ಮೂಲಕ ಮತ್ತೆ ಪ್ರಕೃತಿಯಲ್ಲಿ ಲೀನವಾಗಿಸುವುದಷ್ಟೇ ಅಲ್ಲ, ಆ ಮೂಲಕ ಜೀವನ ಅನಂತರ ಪ್ರಯಾಣವು ಸುಗಮವಾಗಿ ನಡೆಯಲೆಂಬ ಉದ್ದೇಶದಿಂದ ಮಾಡಲಾಗುವ ಈ ಆಚರಣೆಯು ಕೂಡ ಭಾರತೀಯ ಸನಾತನ ಧರ್ಮದ ವೈಶಿಷ್ಟ್ಯವನ್ನುಎತ್ತಿ ಹಿಡಿಯುತ್ತದೆ.

ಕಾರ್ಮಿಕ-ರೈತರಿಗೆ ಕೊಲ್ಲಿಯ ಹೊಸ ದ್ವಾರ ತೆರೆದ ಭಾರತ

▸ ಪಿಯೂಷ್ ಗೋಯಲ್
ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು



ಜೂನ್ 1 ರಿಂದ ಜಾರಿಗೆ ಬರುವ ಭಾರತ–ಒಮಾನ್ ಮುಕ್ತ ವ್ಯಾಪಾರ ಒಪ್ಪಂದವು ಭಾರತದ ವಿದ್ಯಾರ್ಥಿಗಳು, ಕುಶಲಕರ್ಮಿಗಳು, ಮಹಿಳೆಯರು, ರೈತರು, ಮೀನುಗಾರರು ಮತ್ತು ಎಂಎಸ್‌ಎಂಇಗಳಿಗೆ (ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು) ಜಾಗತಿಕ ಸಮೃದ್ಧಿಯ ಹಾದಿಗಳನ್ನು ಸೃಷ್ಟಿಸುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಆಶಯದಲ್ಲಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಇದು ಹೊಸಮಾರುಕಟ್ಟೆಗಳನ್ನು ತೆರೆಯುವ ಮೂಲಕ ಮತ್ತು ಉದ್ಯೋಗ ಸೃಷ್ಟಿಯನ್ನು ವೇಗಗೊಳಿಸುವ ಮೂಲಕ ನೆರವಾಗಲಿದೆ.

200–300 ವರ್ಷಗಳಷ್ಟು ಹಳೆಯದಾದ ವ್ಯಾಪಾರಿ ಕುಟುಂಬಗಳು ಸೇರಿದಂತೆ ಸುಮಾರು 7 ಲಕ್ಷ ಭಾರತೀಯರಿಗೆ ನೆಲೆಯಾಗಿರುವ ಒಮಾನ್ ಜೊತೆಗೆ ಭಾರತವು ಆಳವಾದ ಆರ್ಥಿಕ ಹಾಗೂ ಜನತಾ ಸಂಪರ್ಕವನ್ನು ಹೊಂದಿದೆ. ಒಮಾನ್‌ನಿಂದ ಭಾರತೀಯರು ವಾರ್ಷಿಕವಾಗಿ ಸುಮಾರು 2 ಶತಕೋಟಿ ಡಾಲರ್ ಹಣವನ್ನು ಭಾರತಕ್ಕೆ ರವಾನಿಸುತ್ತಾರೆ. ಇದೇ ವೇಳೆ, 6,000ಕ್ಕೂ ಹೆಚ್ಚು ಭಾರತೀಯ ಉದ್ಯಮಗಳು ಅಲ್ಲಿ ಕಾರ್ಯನಿರ್ವಹಿಸುತ್ತಿವೆ.

ಉಭಯ ದೇಶಗಳ ನಡುವಿನ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವು (ಸಿಇಪಿಎ) ಆರ್ಥಿಕ ಮತ್ತು ಕಾರ್ಯತಂತ್ರದ ಬಾಂಧವ್ಯವನ್ನು ಗಣನೀಯವಾಗಿ ಬಲಪಡಿಸುತ್ತದೆ. ಇದು ಒಮಾನ್‌ನಲ್ಲಿ ಶೇಕಡಾ 98ರಷ್ಟು ಆಮದು ಸುಂಕದ ವರ್ಗಗಳಿಗೆ (ಟ್ಯಾರಿಫ್ ಲೈನ್) ತಕ್ಷಣದಿಂದಲೇ 100 ಪ್ರತಿಶತ ಸುಂಕ ರಹಿತ ಮಾರುಕಟ್ಟೆ ಪ್ರವೇಶವನ್ನು ನೀಡುತ್ತದೆ. ಇದು ಒಮನ್‌ಗೆ ಭಾರತದ ಒಟ್ಟು ರಫ್ತಿನಲ್ಲಿ ಶೇಕಡಾ 99.38 ರಷ್ಟನ್ನು ಒಳಗೊಂಡಿದೆ. 'ಸಿಇಪಿಎ' ಪೂರ್ವ ವ್ಯವಸ್ಥೆಯಲ್ಲಿ ಭಾರತದ ರಫ್ತಿನ ಕೇವಲ ಶೇ. 15.3ರಷ್ಟನ್ನು ಮಾತ್ರ ಶೂನ್ಯ ಸುಂಕದಲ್ಲಿ ಮಾರುಕಟ್ಟೆ ಪ್ರವೇಶಿಸಲು ಒಮಾನ್ ಅನುಮತಿಸುತ್ತಿತ್ತು. ಅದಕ್ಕೆ ಹೋಲಿಸಿದರೆ ಸಿಇಪಿಎ ಗಮನಾರ್ಹ ಸುಧಾರಣೆಯನ್ನು ಸೂಚಿಸುತ್ತದೆ. ಪ್ರಸ್ತುತ ಒಮಾನ್‌ನಲ್ಲಿ ಶೇಕಡಾ 5ರಷ್ಟು ಆಮದು ಸುಂಕವನ್ನು ಎದುರಿಸುತ್ತಿರುವ ಭಾರತದ ಸರಕುಗಳು, ಸುಮಾರು 3.64 ಶತಕೋಟಿ ಡಾಲರ್ ಮೌಲ್ಯದ ರಫ್ತುಗಳು ಹೆಚ್ಚು ಸ್ಪರ್ಧಾತ್ಮಕವಾಗಲಿವೆ.ಭಾರತದ ಎಂಎಸ್‌ಎಂಇ ಈ ಒಪ್ಪಂದವು ಪರಿವರ್ತನಾತ್ಮಕವಾಗಬಹುದು, ಏಕೆಂದರೆ ಸಿಇಪಿಎಯಿಂದ ಲಾಭಪಡೆಯುವ ಅನೇಕ ವಲಯಗಳಲ್ಲಿ ಸಣ್ಣ ಉದ್ಯಮಗಳ ಪ್ರಾಬಲ್ಯ ಹೆಚ್ಚಾಗಿದೆ. ಎಂಎಸ್‌ಎಂಇಗಳು ದೊಡ್ಡ ಅಂತರರಾಷ್ಟ್ರೀಯ ಕಾರ್ಯಾದೇಶಗಳನ್ನು ಪಡೆಯುವ ನಿರೀಕ್ಷೆಯಿರುವ ಕೆಲವು ಪ್ರಮುಖ ವಲಯಗಳಲ್ಲಿ ಕಬ್ಬಿಣ ಮತ್ತು ಉಕ್ಕು, ಜವಳಿ, ಚರ್ಮ, ವಾಹನ ಬಿಡಿಭಾಗಗಳು ಮತ್ತು ಕೈಗಾರಿಕಾ ಉಪಕರಣ ವಲಯಗಳು ಸೇರಿವೆ. ಇದು ಉತ್ಪಾದನೆ, ಹೂಡಿಕೆ ಮತ್ತು ಉದ್ಯೋಗ ನೇಮಕಾತಿಯನ್ನು ಉತ್ತೇಜಿಸುತ್ತದೆ. ಬೆಳೆಯುತ್ತಿರುವ ಜಾಗತಿಕ ಅಸ್ಥಿರತೆಯ ಯುಗದಲ್ಲಿ, ಸಿಇಪಿಎ ಭಾರತೀಯ ರಫ್ತುದಾರರಿಗೆ ಮಾರುಕಟ್ಟೆಗಳನ್ನು ವೈವಿಧ್ಯಗೊಳಿಸಲು ಮತ್ತು ಆರ್ಥಿಕ ಮಂದಗತಿ ಹಾಗೂ ಹೆಚ್ಚುತ್ತಿರುವ ವ್ಯಾಪಾರ ಅಡೆತಡೆಗಳನ್ನು ಎದುರಿಸುತ್ತಿರುವ ಸಾಂಪ್ರದಾಯಿಕ ದೇಶಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಒಂದು ಮಹತ್ತರ ಅವಕಾಶವನ್ನು ನೀಡುತ್ತದೆ. ಉದ್ಯೋಗ ಸೃಷ್ಟಿ–ವ್ಯಾಪಾರ ಒಪ್ಪಂದವು ಜವಳಿ ಮತ್ತು ಉಡುಪುಗಳು, ಚರ್ಮ ಮತ್ತು ಪಾದರಕ್ಷೆಗಳು, ಆಹಾರ ಸಂಸ್ಕರಣೆ, ಸಾಗರ ಉತ್ಪನ್ನಗಳು, ರತ್ನ ಮತ್ತು ಆಭರಣಗಳು ಹಾಗೂ ಆಯ್ದ ಎಂಜಿನಿಯರಿಂಗ್ ವಿಭಾಗಗಳಂತಹ ಅಧಿಕ ಕಾರ್ಮಿಕ ಶಕ್ತಿ ಬಳಕೆಯ ವಲಯಗಳಿಗೆ ಪ್ರಯೋಜನವನ್ನು ನೀಡುತ್ತದೆ. ಒಮನ್‌ಗೆ ಜವಳಿ ರಫ್ತು ಹೆಚ್ಚಳವು, ಉತ್ಪಾದನೆಯನ್ನು ಹೆಚ್ಚಿಸುತ್ತದೆ ಮತ್ತು ತಿರುಪುರ, ಸೂರತ್, ಲೂಧಿಯಾನ, ಪಾಣಿಪತ್, ಕೊಯಮತ್ತೂರು, ಕರೂರ್, ಭದೋಹಿ, ಮೊರಾದಾಬಾದ್, ಜೈಪುರ ಮತ್ತು ಅಹಮದಾಬಾದ್ ನಂತಹ ಪ್ರಮುಖ ಜವಳಿ ಕ್ಲಸ್ಟರ್‌ಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಭಾರತಾದ್ಯಂತದ ಕುಶಲಕರ್ಮಿಗಳು ಮತ್ತು ನೇಕಾರರು ತಮ್ಮ ಉತ್ಪನ್ನಗಳಿಗೆ ಹೆಚ್ಚಿದ ಅಂತರರಾಷ್ಟ್ರೀಯ ಬೇಡಿಕೆಯಿಂದ ಲಾಭ ಪಡೆಯುತ್ತಾರೆ. ಭಾರತಾದ್ಯಂತದ ಪ್ರಮುಖ ಚರ್ಮ ಮತ್ತು ಪಾದರಕ್ಷೆಗಳ ಕೇಂದ್ರಗಳಲ್ಲಿ, ವಿಶೇಷವಾಗಿ ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಹಾಗೂ ಮಹಾರಾಷ್ಟ್ರ, ಪಂಜಾಬ್, ಕರ್ನಾಟಕ ಮತ್ತು ಮಧ್ಯಪ್ರದೇಶದ ಕೆಲವು ಭಾಗಗಳಲ್ಲಿ ಹಲವಾರು ಉದ್ಯೋಗಗಳು ಸೃಷ್ಟಿಯಾಗಲಿವೆ.

ಉದ್ಯೋಗ ಬೆಳವಣಿಗೆಯನ್ನು ಸಿಇಪಿಎ ಹೇಗೆ ವೇಗಗೊಳಿಸುತ್ತದೆ ಎಂಬುದಕ್ಕೆ ರತ್ನ ಮತ್ತು ಆಭರಣ ವಲಯವು ಮತ್ತೊಂದು ಉದಾಹರಣೆಯಾಗಿದೆ. ಕತ್ತರಿಸಿದ ಮತ್ತು ಹೊಳಪು ನೀಡಿದ ವಜ್ರಗಳು, ಚಿನ್ನ ಮತ್ತು ಬೆಳ್ಳಿ ಆಭರಣಗಳು ಮತ್ತು ಕೈಯಿಂದ ತಯಾರಿಸಿದ ಆಭರಣಗಳ ಉತ್ಪಾದನೆಯಲ್ಲಿ ಭಾರತವು ಈಗಾಗಲೇ ಬಲವಾದ ಸಾಮರ್ಥ್ಯವನ್ನು ಹೊಂದಿದೆ.

ಸುಂಕದ ಅಡೆತಡೆಗಳನ್ನು ತೆಗೆದು ಹಾಕುವುದರೊಂದಿಗೆ, ಭಾರತೀಯ ರಫ್ತುದಾರರು ಯುರೋಪಿಯನ್ ಮತ್ತು ಏಷ್ಯಾದ ಪ್ರತಿಸ್ಪರ್ಧಿಗಳ ಮೇಲೆ ನಿರ್ಣಾಯಕ ಸ್ಪರ್ಧಾತ್ಮಕ ಲಾಭವನ್ನು ಪಡೆಯುತ್ತಾರೆ. ಮುಂದಿನ ಮೂರು ವರ್ಷಗಳಲ್ಲಿ ಒಮಾನ್‌ಗೆ 150 ದಶಲಕ್ಷ ಡಾಲರ್‌ನಷ್ಟು ರಫ್ತು ಬೆಳೆಯಬಹುದು ಎಂದು ಉದ್ಯಮವು ಅಂದಾಜಿಸಿದೆ. ಈ ಒಪ್ಪಂದವು ಭಾರತದ ರಾಷ್ಟ್ರೀಯ ಸಾವಯವ ಉತ್ಪಾದನೆ ಕಾರ್ಯಕ್ರಮ(ಎನ್‌ಪಿಒಪಿ) ಪ್ರಮಾಣೀಕರಣವನ್ನು ಅಂಗೀಕರಿಸಲು ಅವಕಾಶ ನೀಡುತ್ತದೆ. ಇದು ಪ್ರಮುಖ ಆಹಾರ ಆಮದುದಾರ ಒಮಾನ್‌ಗೆ ಸಾವಯವ ಉತ್ಪಾದನೆಯನ್ನು ಮಾರಾಟ ಮಾಡಲು ಭಾರತೀಯ ರೈತರಿಗೆ ಅಗಾಧ ಅವಕಾಶಗಳನ್ನು ತೆರೆಯುತ್ತದೆ. ಸಮುದ್ರ ಉತ್ಪನ್ನಗಳ ವಿಚಾರದಲ್ಲೂ ಭಾರತದ ಅಗಾಧವಾದ ಸಾಮರ್ಥ್ಯವು ಬಳಕೆಯಾಗದೆ ಉಳಿದಿದೆ. 2022 ಮತ್ತು 2024 ರ ನಡುವೆ ಒಮಾನ್‌ನ ಸಮುದ್ರ ಉತ್ಪನ್ನಗಳ ಆಮದು ಸುಮಾರು 119 ದಶಲಕ್ಷ ಡಾಲರ್ ಆಗಿತ್ತು. ಭಾರತದಿಂದ ಆಮದು ಕೇವಲ 7.75 ದಶಲಕ್ಷ ಡಾಲರ್‌ನಷ್ಟಿತ್ತು. ಇದು ಸೀಗಡಿ ಮತ್ತು ಘನೀಕರಿಸಿದ ಕಟಲ್‌ಫಿಶ್‌ನಂತಹ ಭಾರತೀಯ ಸಮುದ್ರಾಹಾರ ರಫ್ತಿಗೆ ಅಗಾಧ ಅವಕಾಶಗಳನ್ನು ನೀಡುತ್ತದೆ. ಅಧಿಕ ಕಾರ್ಮಿಕರ ಶಕ್ತಿ ಬಳಕೆಯಸಮುದ್ರ ಉತ್ಪನ್ನಗಳ ಉದ್ಯಮವು ಮೀನುಗಾರಿಕೆ, ಸಂಸ್ಕರಣೆ, ಪ್ಯಾಕೇಜಿಂಗ್, ಕೋಲ್ಡ್–ಚೈನ್ ಸರಕುಸಾಗಣೆ ಮತ್ತು ರಫ್ತುಕಾರ್ಯಾಚರಣೆಗಳಲ್ಲಿ ಹೆಚ್ಚುವರಿ ಉದ್ಯೋಗಗಳನ್ನು ಸೃಷ್ಟಿಸುವ ಸಾಧ್ಯತೆಯಿದೆ. ಔಷಧ ಮತ್ತು ಸಾಂಪ್ರದಾಯಿಕ ಔಷಧದಂತಹ ನಿಯಂತ್ರಕ ಪ್ರಾಧಿಕಾರಗಳು ಅನುಮೋದಿಸಿರುವ ಭಾರತೀಯ ಔಷಧಗಳು 90 ದಿನಗಳಲ್ಲಿ ಒಮಾನ್‌ನಲ್ಲಿ ಸ್ವಯಂಚಾಲಿತ ಮಾರ್ಕೆಟಿಂಗ್ ಅಧಿಕಾರವನ್ನು ಪಡೆಯುತ್ತವೆ. ಇದು ಭಾರತೀಯ ಔಷಧ ರಫ್ತುದಾರರಿಗೆ ದೊಡ್ಡ ಗೆಲುವು. ಗಮನಾರ್ಹ ವಿಷಯವೆಂದರೆ, ಸಿಇಪಿಎ ಭಾರತದ ಸಾಂಪ್ರದಾಯಿಕ ವೈದ್ಯಕೀಯ ಸೇವೆಗಳಿಗೆ ಅವಕಾಶಗಳನ್ನು ಸೃಷ್ಟಿಸುತ್ತದೆ. ಇದು ಸಾಂಪ್ರದಾಯಿಕ ಔಷಧದಲ್ಲಿ ಜಂಟಿ ಸಂಶೋಧನೆಗೆ ಅನುವು ಮಾಡಿದೆ. ಸೇವೆಗಳು ಮತ್ತು ಪ್ರಯಾಣ ಒಪ್ಪಂದದ ಮತ್ತೊಂದು ಪ್ರಮುಖ ಆಯಾಮವೆಂದರೆ ವೃತ್ತಿಪರ ಸೇವೆಗಳು, ಕಂಪ್ಯೂಟರ್ ಮತ್ತು ಐಟಿ ಸೇವೆಗಳು, ಶಿಕ್ಷಣ, ಆರೋಗ್ಯ ರಕ್ಷಣೆ, ಪ್ರವಾಸೋದ್ಯಮ, ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಪರಿಸರ ಸೇವೆಗಳು ಸೇರಿದಂತೆ ಭಾರತಕ್ಕೆ ಪ್ರಮುಖ ರಫ್ತು ಆಸಕ್ತಿಯ ಕ್ಷೇತ್ರಗಳಲ್ಲಿ ಒಮಾನ್ ವಾಣಿಜ್ಯಿಕವಾಗಿ ಅರ್ಥಪೂರ್ಣ ಬದ್ಧತೆಗಳನ್ನು ಕೈಗೊಂಡಿದೆ. ಅಕೌಂಟಿಂಗ್, ಎಂಜಿನಿಯರಿಂಗ್, ವೈದ್ಯಕೀಯ, ನಿರ್ಮಾಣ, ಶಿಕ್ಷಣ ಮತ್ತು ಸಲಹಾ ಕ್ಷೇತ್ರಗಳಲ್ಲಿನ ಭಾರತೀಯ ವೃತ್ತಿಪರರು ಸುಧಾರಿತ ಮಾರುಕಟ್ಟೆ ಪ್ರವೇಶದಿಂದ ಪ್ರಯೋಜನ ಪಡೆಯುವ ನಿರೀಕ್ಷೆಯಿದೆ.

ನಿರ್ಣಾಯಕವಾಗಿ, ಭಾರತೀಯ ವೃತ್ತಿಪರರು ಮತ್ತು ಕಾರ್ಮಿಕರಿಗೆ ಹೆಚ್ಚಿನ ಪ್ರಯಾಣ ಷರತ್ತುಗಳಿಗೆ ಒಮಾನ್ ಸಮ್ಮತಿಸಿದೆ. ಅಂತರ–ಕಾರ್ಪೊರೇಟ್ ವರ್ಗಾವಣೆಗೆ ಒಳಗಾದ ನೌಕರರು ಮತ್ತು ಗುತ್ತಿಗೆ ಸೇವಾ ಪೂರೈಕೆದಾರರಿಗೆ ನಾಲ್ಕು ವರ್ಷಗಳವರೆಗೆ ವಾಸ್ತವ್ಯವನ್ನು ಅನುಮತಿಸಲಾಗುವುದು.

ಇದೇ ವೇಳೆ, ವ್ಯಾಪಾರ ಸಂದರ್ಶಕರು ಮತ್ತು ಸ್ವತಂತ್ರ ವೃತ್ತಿಪರರು ಸುಲಭವಾದ ತಾತ್ಕಾಲಿಕ ಪ್ರವೇಶ ಅನುಮತಿಗಳನ್ನು ಪಡೆಯಲಿದ್ದಾರೆ. ಇದು ಅಂತರ–ಕಾರ್ಪೊರೇಟ್ ವರ್ಗಾವಣೆದಾರರ ಮಿತಿಯನ್ನು ಶೇಕಡಾ 20 ರಿಂದ 50ಕ್ಕೆ ಹೆಚ್ಚಿಸಿದೆ. ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕುವ ಮೋದಿ ಸರ್ಕಾರದ ಉಪಕ್ರಮಗಳು ಪ್ರತಿಯೊಬ್ಬ ಭಾರತೀಯನ ಜೀವನವನ್ನು ಸುಧಾರಿಸುವ ಪ್ರಧಾನಿಯವರ ಘನ ಉದ್ದೇಶದ ಭಾಗವಾಗಿದೆ. ವ್ಯಾಪಾರವು ಬೆಳವಣಿಗೆ, ಉದ್ಯೋಗ ಸೃಷ್ಟಿ ಮತ್ತು ಹಂಚಿಕೆಯ ಸಮೃದ್ಧಿಯ ಪ್ರಬಲ ಸಾಧನವಾಗಿದೆ ಎಂಬುದನ್ನು ಒಮಾನ್ ಜೊತೆಗಿನ ಒಪ್ಪಂದವು ನೆನಪಿಸುತ್ತದೆ. ಛಿದ್ರಗೊಂಡ ಮತ್ತು ರಕ್ಷಣಾತ್ಮಕ ಜಗತ್ತಿನಲ್ಲಿ ಹೊಸ, ಆತ್ಮವಿಶ್ವಾಸದ ಭಾರತವು ಗೋಡೆಗಳ ಹಿಂದೆ ಅಡಗಿಕೊಳ್ಳುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಪ್ರಧಾನಿ ಮೋದಿ ರವಾನಿಸುತ್ತಿದ್ದಾರೆ. ಇದು ಪಾಲುದಾರಿಕೆ, ಸ್ಪರ್ಧಾತ್ಮಕತೆ ಮತ್ತು ಜಾಗತಿಕ ತೊಡಗಿಸಿಕೊಳ್ಳುವಿಕೆಯ ಮೂಲಕ ಭಾರತ ಮತ್ತಷ್ಟು ಮೇಲೇರುತ್ತಿದೆ.

'ಕೋಟೆ ಕಟ್ಟಿ ಮೆರೆದವರೆಲ್ಲ ಮಣ್ಣಾದರು…'

ಅಭಿಷೇಕ್‌ನ ಮೇಲೆ ಸೋನಾಪುರದಲ್ಲಿ ಯಾವ ಬಗೆಯಲ್ಲಿ ಹಲ್ಲೆ ನಡೆಯಿತೋ ಅದು ಆತನೇ ಪೋಷಿಸಿದ ರಾಜಕೀಯ ವಾತಾವರಣದ ಫಲ.

▸ ಅರವಿಂದ ಶೆಣೈ

ಮಮತಾ ಬ್ಯಾನರ್ಜಿಯ ಸೋದರಳಿಯ ('ಭಾಯಿಪೋ') ಹಾಗೂ ಡೈಮಂಡ್ ಹಾರ್ಬರ್ ಕ್ಷೇತ್ರದ ಲೋಕಸಭಾ ಸದಸ್ಯ ಅಭಿಷೇಕ್ ಬ್ಯಾನರ್ಜಿ ಮೊನ್ನೆ ತಮ್ಮದೇ ಕ್ಷೇತ್ರದ ಸೋನಾಪುರಕ್ಕೆ ಭೇಟಿ ನೀಡಿದಾಗ ಅವರ ಮೇಲೆ ಜನರು ಕಲ್ಲೆಸೆದುದು, ಮೊಟ್ಟೆಯೆಸೆದುದು, ಬಳಿಕ ಹಲ್ಲೆ ನಡೆಸಿದ್ದು, ಕೊನೆಗೆ ಅಭಿಷೇಕ್ ತಲೆಗೆ ಹೆಲ್ಮೆಟ್ ಧರಿಸಿಕೊಂಡು ಭದ್ರತಾ ಸಿಬ್ಬಂದಿಗಳ ರಕ್ಷಣೆಯೊಂದಿಗೆ ಅಲ್ಲಿಂದ ಪಲಾಯನ ಮಾಡಿದ್ದು… ಮುಂತಾದ ದೃಶ್ಯಗಳೆಲ್ಲ ಈಗಾಗಲೆ ಎಲ್ಲೆಡೆ ವೈರಲ್ ಆಗಿವೆ.

ಕೆಲವೇ ತಿಂಗಳ ಹಿಂದೆ ಇದೇ ಅಭಿಷೇಕ್ ಬ್ಯಾನರ್ಜಿ ಅದೇ ಕ್ಷೇತ್ರದಲ್ಲಿ ನಿಂತು ಜನರಿಗೇ ಧಮಕಿ ಹಾಕಿದ್ದ. ತಮ್ಮ ಪಕ್ಷಕ್ಕೆ ಮತ ನೀಡದಿದ್ದರೆ ಮುಂದಿನ ಪರಿಣಾಮ ಎದುರಿಸಬೇಕಾದೀತು ಎಂದು ಜನರನ್ನು ಎಚ್ಚರಿಸಿದ್ದ. ಅಂಥಾ ಅಭಿಷೇಕ್ ತನ್ನದೇ ಕ್ಷೇತ್ರದಲ್ಲಿ ತಲೆಗೆ ಹೆಲ್ಮೆಟ್ ಧರಿಸಿಕೊಂಡು ಅಲ್ಲಿಂದ ಓಡಬೇಕಾಯಿತು ಎಂಬುದು ಎಂತಹಾ ವಿಡಂಬನಾತ್ಮಕ ದೃಶ್ಯ! 'ಕೋಟೆ ಕಟ್ಟಿ ಮೆರೆದವರೆಲ್ಲ ಮಣ್ಣಾದರು…' ಎಂಬ ಅಣ್ಣಾವ್ರ ಹಾಡಿನ ಸಾಲು ನೆನಪಾಗದಿದ್ದೀತೆ?

ಚುನಾವಣಾ ಫಲಿತಾಂಶ ಪ್ರಕಟವಾದ ಬಳಿಕ ನಡೆದ ಗಲಭೆಯಲ್ಲಿ ಸಂತ್ರಸ್ತರಾದ ತನ್ನ ಪಕ್ಷದ ಕಾರ್ಯಕರ್ತರನ್ನು ಭೇಟಿಯಾಗುವ ಧೈರ್ಯ ಕೂಡಾ ಅಭಿಷೇಕ್ ತಕ್ಷಣ ಮಾಡಲಿಲ್ಲ. ಜನರ ಆಕ್ರೋಶದ ಕಾವು ಆತನಿಗೆ ಅದಾಗಲೇ ತಟ್ಟಿದ್ದಿರಬೇಕು. ಕೊನೆಗೂ 26 ದಿನಗಳ ಬಳಿಕವಷ್ಟೆ ಆತ ಸೋನಾಪುರಕ್ಕೆ ಭೇಟಿ ನೀಡುವ ಧೈರ್ಯ ತೋರಿದ್ದು. ಆದರೆ ಅಲ್ಲಿ ದೊರಕಿದ ಸ್ವಾಗತ ಆತ ನಿರೀಕ್ಷಿಸದ್ದು.. ಮೊಟ್ಟೆ, ಕಲ್ಲು, ಶೂ… ಜತೆಗೇ "ಚೋರ್ ಚೋರ್" ಎಂಬ ಘೋಷಣೆ.

ಬಹುಶಃ ಆತ ಇಂತಹ ಆತಿಥ್ಯವನ್ನು ಮೊಟ್ಟ ಮೊದಲ ಬಾರಿ ಪಡೆಯುತ್ತಿರಬೇಕು… ರಾಜಕೀಯದ ಬೀಳನ್ನು ಆತ ಈವರೆಗೆ ಕಂಡವನಲ್ಲ. ಕೇವಲ ಏರನ್ನಷ್ಟೇ ಕಂಡವನು. ಅಭಿಷೇಕ್ ಕಷ್ಟಪಟ್ಟು ರಾಜಕೀಯದಲ್ಲಿ ಮೇಲೇರಿದವನಲ್ಲ. ಮಮತಾ ಬ್ಯಾನರ್ಜಿ ತರ ರಾಜಕೀಯದ ಸ್ಟ್ರೀಟ್ ಫೈಟರ್ ಕೂಡಾ ಅಲ್ಲ. ಆತನಿಗೆ ರಾಜಕೀಯ ಪಟ್ಟವು ಅನಾಯಾಸವಾಗಿ ಸಿಕ್ಕಿತ್ತು. ಪಕ್ಷದ ನಾಯಕತ್ವವನ್ನು ತಟ್ಟೆಯಲ್ಲಿಟ್ಟು ನೀಡಲಾಗಿತ್ತು. ಸ್ವಜನಪಕ್ಷಪಾತದಿಂದ ದೊರಕಿದ ಅಧಿಕಾರಕ್ಕೆ ಆತ ನಿದರ್ಶನವಾಗಿದ್ದ. ಆತನೊಬ್ಬ ಲಗಾಮಿಲ್ಲದ ಯುವರಾಜನಂತೆ ಕಾರ್ಯಾಚರಿಸುತ್ತಿದ್ದ. ತಾನು ಪ್ರತಿನಿಧಿಸುವ ಡೈಮಂಡ್ ಹಾರ್ಬರ್ ಕ್ಷೇತ್ರವಂತೂ ತನ್ನ ಸ್ವಂತ ರಾಜ್ಯ ಎಂಬಂತಿತ್ತು ಆತನ ವರ್ತನೆ.



ತನ್ನ ಕ್ಷೇತ್ರವು ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ ಎಂದು ಆತ ಮಾಧ್ಯಮಗಳ ಮುಂದೆ ಬಿಂಬಿಸಿಕೊಳ್ಳುತ್ತಿದ್ದ. ಆದಕ್ಕೆ ಬೇಕಾದಂತಹ ನರೇಟಿವ್ ರೂಪಿಸಿದ್ದ. ತನ್ನ ನರೇಟಿವ್ ಬಿಂಬಿಸುವ ಮಾಧ್ಯಮ ಮಂದಿಯನ್ನು ತನ್ನ ಸುತ್ತ ಇಟ್ಟುಕೊಂಡಿದ್ದ. ಅಂತಹ ಕರಾಮತ್ತಿನಲ್ಲಿ ಆತ ಮತ್ತು ಆತನ ಕೂಟ ಪರಿಣತವಾಗಿತ್ತು. ಆದರೆ ಒಳ್ಳೆಯ ಆಡಳಿತ ನೀಡುವ ಪರಿಣತಿ ಮಾತ್ರ ಇರಲಿಲ್ಲ. ಯಾವಾಗ ಅಧಿಕಾರ ಹೋಯಿತೋ ಆತನ ಕ್ಷೇತ್ರದ ನೈಜ ಚಿತ್ರಣ ಬೆಳಕಿಗೆ ಬಂತು. ಟಿಎಂಸಿ ದೌರ್ಜನ್ಯದಿಂದ ಮತ್ತು ದುರಾಡಳಿತದಿಂದ ರೋಸಿದ್ದ ಜನರ ರೋಷ ಸ್ಫೋಟಗೊಂಡಿತು.

ಅಭಿಷೇಕ್ ಈ ಹಿಂದೆ ಜನರಿಗೆ ಧಮಕಿ ಹಾಕಿದ್ದ ಹಳೆಯ ವಿಡಿಯೋಗಳೆಲ್ಲ ಈಗ ವೈರಲ್ ಆಗುತ್ತಿವೆ. ತನ್ನ ಅಧಿಕಾರ ಶಾಶ್ವತ ಎಂಬಂತೆ ಆತ ಆಗ ಜನರಿಗೆ ಬೆದರಿಕೆ ಹಾಕುತ್ತಿದ್ದ. ಜನರಿಂದ ಪಕ್ಷ ನಿಷ್ಠೆಯನ್ನು ಬೆದರಿಸಿ ಪಡೆಯಲಾಗುತ್ತಿತ್ತು. ತುಸುವೇ ಭಿನ್ನಮತ ಕಂಡರೂ ಅದನ್ನು ಬಲಪ್ರಯೋಗದಿಂದ ಅಣಗಿಸಲಾಗುತ್ತಿತ್ತು. ಅಭಿಷೇಕ್ ಯಾವತ್ತೂ ಟಿಎಂಸಿ ಜನಾಂದೋಲನದ ಭಾಗವಾಗಿರಲಿಲ್ಲ. ಆತ ಒಂದು ರೀತಿಯಲ್ಲಿ ಆದೇಶವನ್ನು ಜಾರಿಗೊಳಿಸುವ ಬಲಿಷ್ಠ ಯಂತ್ರದಂತಿದ್ದ. ಯಂತ್ರಕ್ಕೆ ವಿದ್ಯುತ್ ಸಂಪರ್ಕ ನಿಂತಾಗ ಯಂತ್ರ ನಿಷ್ಕ್ರಿಯವಾಗುತ್ತದೆ. ಅಭಿಷೇಕ್‌ನ ಅಧಿಕಾರದ ವಿದ್ಯುತ್ ಕೂಡಾ ಈಗ ಕಡಿತಗೊಂಡಿದೆ…

ಅಭಿಷೇಕ್‌ನ ಮೇಲೆ ಸೋನಾಪುರದಲ್ಲಿ ಯಾವ ಬಗೆಯಲ್ಲಿ ಹಲ್ಲೆ ನಡೆಯಿತೋ ಅದು ಆತನೇ ಬೆಳೆಸಿ, ಪೋಷಿಸಿದ ರಾಜಕೀಯ ವಾತಾವರಣದ ಫಲಶ್ರುತಿ. ದಶಕದಿಂದ ಟಿಎಂಸಿ ಕಾರ್ಯಕರ್ತರು, ಅಭಿಷೇಕ್‌ನ ಗೂಂಡಾಗಳು ಜನರನ್ನು ಜನರನ್ನು ಯಾವ ರೀತಿಯಲ್ಲಿ ಬೆದರಿಸಿ ಸತಾಯಿಸಿದರೋ ಅದನ್ನೇ ಈಗ ಜನರು ತಿರುಗಿಸಿ ನೀಡುತ್ತಿದ್ದಾರೆ. ಪೊಲೀಸರು ಟಿಎಂಸಿಯ ಹಳೆಯ ಗೂಂಡಾಗಳನ್ನು ಚಡ್ಡಿಯಲ್ಲಿ ಮೆರವಣಿಗೆ ಮಾಡಿ ಜೈಲಿಗೆ ಅಟ್ಟುತ್ತಿರುವಂತೆಯೇ ಇತ್ತ ಜನರಿಗೂ ಧೈರ್ಯ ಬರತೊಡಗಿದೆ. ತಮ್ಮನ್ನು ಸತಾಯಿಸಿದ ಮಂದಿಗೆ ಪ್ರತಿಯೇಟು ಬಿಗಿಯುತ್ತಿದ್ದಾರೆ. ತಾವು ಅನುಭವಿಸಿದ ಕೋಟಲೆಗೆ ಬದಲಿ ತೀರಿಸುತ್ತಿದ್ದಾರೆ.

ರಾಜಕೀಯದಲ್ಲಿ ಹಿಂಸೆ ಸಲ್ಲದು. ಅದು ನಿಜ. ಆದರೆ ಅದನ್ನು ಮೊದಲಿಗೆ ಅಭಿಷೇಕ್ ಬ್ಯಾನರ್ಜಿ ಅನುಸರಿಸಬೇಕಾಗಿತ್ತು. ಆತ ರಾಜಕೀಯದಲ್ಲಿ ಏನು ಬಿತ್ತಿದನೋ ಅದನ್ನೇ ಪಡೆಯುತ್ತಿದ್ದಾನೆ.

ಈಗ ಬಹಳಷ್ಟು ಟಿಎಂಸಿ ನಾಯಕರೇ ಅಭಿಷೇಕ್‌ನ ವಿರುದ್ಧ, ಆತನ ಕಾರ್ಯವೈಖರಿಯ ವಿರುದ್ಧ ಮಾತನಾಡತೊಡಗಿದ್ದಾರೆ. ಟಿಎಂಸಿ ಶಾಸಕರೂ 'ಭಾಯಿಪೋ' ಅಭಿಷೇಕ್ ವಿರುದ್ಧ ಮಾತನಾಡುವ ಧೈರ್ಯ ತೋರುತ್ತಿದ್ದಾರೆ. ಎಲ್ಲರ ಆಕ್ರೋಶವು ಮಮತಾ ಬ್ಯಾನರ್ಜಿಗಿಂತ ಹೆಚ್ಚಾಗಿ ಅಭಿಷೇಕ್ ಕುರಿತಾಗಿಯೇ ಇದೆ. ಮಮತಾಗೆ ಕೂಡಾ ತಮ್ಮ ಭಾಯಿಪೋ ನಿರಂಕುಶ ವರ್ತನೆಯ ಕುರಿತು ತಿಳಿಯದ್ದೇನಲ್ಲ. ಆದರೆ ಮಮತಾ 'ಧೃತರಾಷ್ಟ್ರನ ಕುರುಡು ಪ್ರೇಮ' ತೋರಿದರು ಎಂಬುದು ಟಿಎಂಸಿ ಶಾಸಕರ ಆರೋಪವಾಗಿದೆ. ಅಂದು ಕುರುಕುಲ ದುರ್ಯೋಧನನಿಂದಾಗಿ ನಾಶವಾದಂತೆ ಈಗ ಅಭಿಷೇಕ್‌ನಿಂದ ಟಿಎಂಸಿಯೇ ನಾಶದ ಹಾದಿಯಲ್ಲಿ ಸಾಗುತ್ತಿದೆ.

ಲೆಬನಾನ್ ಮೇಲೆ ಮುಂದುವರಿದ ಇಸ್ರೇಲ್ ದಾಳಿ

ನಾಯಕರ ವಾಗ್ವಾದ ದಾಳಿ ಪುನರಾರಂಭ!



• ವಾಷಿಂಗ್ಟನ್: ಇಸ್ರೇಲ್ ಪ್ರಧಾನಿಯೊಂದಿಗೆ ಅಮೆರಿಕ ಅಧ್ಯಕ್ಷರ ದೂರವಾಣಿ ಕರೆ ವಾಗ್ವಾದದ ಬಳಿಕ ದಕ್ಷಿಣ ಲೆಬನಾನ್ ಮೇಲಿನ ದಾಳಿಯನ್ನು ಇಸ್ರೇಲ್ ಮಂಗಳವಾರ ಪುನರಾರಂಭಿಸಿದೆ. ದಕ್ಷಿಣ ಲೆಬನಾನ್ ಮೇಲಿನ ಇಸ್ರೇಲ್ ದಾಳಿಯಿಂದ ಅಮೆರಿಕ ಜತೆಗಿನ ಶಾಂತಿ ಮಾತುಕತೆಯನ್ನು ಇರಾನ್ ಸ್ಥಗಿತಗೊಳಿಸಿದ ಹಿನ್ನೆಲೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಅಧ್ಯಕ್ಷ ಟ್ರಂಪ್ ಕರೆ ಮಾಡಿದ್ದರು. ನೆತನ್ಯಾಹು ಅವರೊಂದಿಗೆ ವಾಗ್ವಾದ ನಡೆಸಿದ ಬಳಿಕ, ಇಸ್ರೇಲ್ ಬೈರೂತ್‌ನತ್ತ ಮುನ್ನುಗ್ಗುವುದಿಲ್ಲ ಮತ್ತು ದಕ್ಷಿಣ ಲೆಬನಾನ್ ಮೇಲಿನ ದಾಳಿ ನಿಲ್ಲಿಸಲಿದೆ ಎಂದು ಟ್ರಂಪ್ ಘೋಷಿಸಿದ್ದರು. ಆದರೆ ಕೆಲವು ಗಂಟೆಗಳಲ್ಲಿ ಇಸ್ರೇಲ್ ದಾಳಿ ಮುಂದುವರಿಸಿದ್ದು, ಟ್ರಂಪ್ ಮತ್ತು ನೆತನ್ಯಾಹು ನಡುವಿನ ಭಿನ್ನಾಭಿಪ್ರಾಯ ಬಹಿರಂಗವಾಗಿದೆ. ಅಮೆರಿಕದ ಪ್ರಸ್ತಾವನೆಗೆ ಲೆಬನಾನ್ ಅಧಿಕಾರಿಗಳು ಮತ್ತು ಇರಾನ್ ಬೆಂಬಲಿತ ಉಗ್ರ ಸಂಘಟನೆ ಹೆಜ್ಬೊಲ್ಲಾ ಒಪ್ಪಿದ್ದವು.

ಟ್ರಂಪ್-ನೆತನ್ಯಾಹು ನಡುವೆ ವಾಗ್ವಾದ!: ದಕ್ಷಿಣ ಲೆಬನಾನ್ ಮೇಲಿನ ದಾಳಿ ನಿಲ್ಲಿಸುವಂತೆ ಹೇಳಲು ನೆತನ್ಯಾಹುರಿಗೆ ಟ್ರಂಪ್ ದೂರವಾಣಿ ಕರೆ ಮಾಡಿದ್ದು, ಇಬ್ಬರ ಮಧ್ಯೆ ಭಾರೀ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದೆ.

ಪರಮಾಣು ಸಭೆ ಇನ್ನಷ್ಟು ವಿಳಂಬ: ಇರಾನ್ ಡ್ರೋನ್ ಉತ್ಪಾದನಾ ಕೇಂದ್ರಗಳ ಮೇಲಿನ ದಾಳಿಗಳು ಆದರ ಡ್ರೋನ್ ನಿರ್ಮಾಣ ಸಾಮರ್ಥ್ಯವನ್ನು ಕುಗ್ಗಿಸಿದೆ ಎಂದು ಅಮೆರಿಕ ಗೃಹ ಇಲಾಖೆ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

ಮೊಜ್ತಬಾ ಇನ್ನೂ ಜೀವಂತ: ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಇನ್ನೂ ಜೀವಂತವಾಗಿದ್ದು, ಇರಾನ್ ನಡೆಯಲ್ಲಿ ಸಕ್ರಿಯವಾಗಿದ್ದಾರೆಂದು ರುಬಿಯೊ ಹೇಳಿದ್ದಾರೆ.

ಕಾನೂನುಬಾಹಿರ: ಇರಾನ್ ಮಾಡುತ್ತಿರುವುದು ಸಂಪೂರ್ಣ ಕಾನೂನುಬಾಹಿರ. ಹಾರ್ಮುಜ್ ಜಲಸಂಧಿಯನ್ನು ಇರಾನ್ ಸಂಪೂರ್ಣ ಮುಚ್ಚಿದ್ದು, ಇದನ್ನು ವಿಶ್ವದ ಯಾವುದೇ ರಾಷ್ಟ್ರ ಬೆಂಬಲಿಸುವುದಿಲ್ಲ. ಇಡೀ ವಿಶ್ವವೇ ಇರಾನ್ ವಿರುದ್ಧ ನಿಂತಿದೆ. ಹಾರ್ಮುಜ್ ತೆರೆಯಬೇಕೆಂಬುದೇ ನಮ್ಮ ಮೊದಲ ಷರತ್ತು ಎಂದು ರುಬಿಯೊ ತಿಳಿಸಿದ್ದಾರೆ.

ಶಾಂತಿ ಸಭೆಗೆ ಭಾರತ ಕರೆ

ಮಧ್ಯಪ್ರಾಚ್ಯ ಬೆಳವಣಿಗೆಗಳನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ನಾವು ಹಿಂದಿನಿಂದಲೂ ಶಾಂತಿ ಮಾತುಕತೆಯ ಮೂಲಕ ಬಿಕ್ಕಟ್ಟು ಅಂತ್ಯಗೊಳಿಸಲು ಕರೆ ನೀಡಿದ್ದೇವು. ಮಾತುಕತೆಯಿಂದ ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆ ಮರಳಲು ಸಾಧ್ಯ ಎಂದು ವಿದೇಶಾಂಗ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಹೈಕೋರ್ಟ್ ಆದೇಶ ರದ್ದುಗೊಳಿಸಿ ಸುಪ್ರೀಂ ತೀರ್ಪು

ಅನುಕಂಪ ಆಧಾರದ ನೇಮಕ: ವಿವಾಹಿತ ಪುತ್ರಿಯರೂ ಅರ್ಹ

• ಹೊಸದಿಲ್ಲಿ: ಕುಟುಂಬದ ವ್ಯಾಖ್ಯಾನದಿಂದ ವಿವಾಹಿತ ಪುತ್ರಿಯರನ್ನು ಹೊರಗಿಡುವುದು ಅನಾವಶ್ಯಕ, ಅಸಮರ್ಥನೀಯ ಮತ್ತು ಸಾಂವಿಧಾನಿಕವಾಗಿ ಅಮಾನ್ಯ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ತೀರ್ಪು ನೀಡಿದೆ. ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಆಲೋಕ್ ಆರಾಧೆ ನೇತೃತ್ವದ ಪೀಠ, ತಾಯಿಯ ನಿಧನದ ನಂತರ ನ್ಯಾಯಬೆಲೆ ಅಂಗಡಿ ಡೀಲರ್‌ಶಿಪ್‌ಗಾಗಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದ್ದ ಅಲಹಾಬಾದ್ ಹೈಕೋರ್ಟ್ ಆದೇಶವನ್ನು ರದ್ದುಗೊಳಿಸಿತು. ವಿವಾಹಿತ ಪುತ್ರಿಯರನ್ನು ಹೊರಗಿಟ್ಟಿದ್ದ 2019ರ ಸರ್ಕಾರದ ಆದೇಶವನ್ನು ಈ ಮಹಿಳೆ ಪ್ರಶ್ನಿಸಿದ್ದರು. ಮದುವೆಯು ಪೋಷಕರೊಂದಿಗಿನ ಸಂಬಂಧವನ್ನು ಕೊನೆಗೊಳಿಸುವುದಿಲ್ಲ ಅಥವಾ ಅವಲಂಬನೆಯಿಲ್ಲದಿರುವುದನ್ನು ಸಾಬೀತುಪಡಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಅವಲಂಬನೆಯೇ ಮಾನದಂಡ: ವಿವಾಹಿತ ಪುತ್ರರನ್ನು ಯೋಜನೆಯಲ್ಲಿ ಸೇರಿಸಿ, ಪುತ್ರಿಯರನ್ನು ಕೇವಲ ವಿವಾಹದ ಕಾರಣಕ್ಕೆ ಲಿಂಗ ತಾರತಮ್ಯದ ಆಧಾರದ ಮೇಲೆ ಹೊರಗಿಡಲಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಅವಲಂಬನೆ ಎಂಬುದು ವೈವಾಹಿಕ ಸ್ಥಿತಿಗಿಂತ ಹೆಚ್ಚಾಗಿ ವಾಸ್ತವದ ಪ್ರಶ್ನೆ. ಈ ಕೋಟಾದ ಉದ್ದೇಶ, ಮೃತ ಡೀಲರ್ ಕುಟುಂಬಕ್ಕೆ ತಕ್ಷಣದ ಆರ್ಥಿಕ ಪರಿಹಾರ ಒದಗಿಸುವುದು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ ನಿರಂತರತೆಯನ್ನು ಖಚಿತಪಡಿಸುವುದಾಗಿದೆ.

ಸುಪ್ರೀಂ ನಿರ್ದೇಶನ: ಅರ್ಜಿದಾರರು ಮದುವೆಯ ನಂತರವೂ ಅದೇ ಗ್ರಾಮದಲ್ಲಿ ವಾಸಿಸುತ್ತಿದ್ದರು, ಅಂಗಡಿಯನ್ನು ನಡೆಸಲು ಸಹಾಯ ಮಾಡುತ್ತಿದ್ದರು ಮತ್ತು ದೃಷ್ಟಿ ವಿಕಲಚೇತನ ಸಹೋದರಿ ಸೇರಿದಂತೆ ಇತರೆ ಸಹೋದರಿಯರನ್ನು ಸಾಕುವ ಜವಾಬ್ದಾರಿ ಹೊತ್ತಿದ್ದರು ಎಂಬುದು ದಾಖಲೆಗಳಿಂದ ಸಾಬೀತಾಗಿದೆ. ಸ್ಥಳೀಯ ನಿವಾಸದ ಅಗತ್ಯತೆಯ ಕುರಿತಾದ ರಾಜ್ಯ ಸರ್ಕಾರದ ವಾದವನ್ನು ತಿರಸ್ಕರಿಸಿದ ನ್ಯಾಯಾಲಯ, ಅರ್ಜಿಯನ್ನು ತಿರಸ್ಕರಿಸಲು ಇದ್ದ ಏಕೈಕ ಕಾರಣ ಅಮಾನ್ಯವಾಗಿರುವುದರಿಂದ ಮಹಿಳೆಗೆ ಪರಿಹಾರ ನೀಡುವಂತೆ ನಿರ್ದೇಶಿಸಿದೆ.



ರೈತರ ಹಿತಕ್ಕಾಗಿ ಸಮಗ್ರ ರಾಷ್ಟ್ರೀಯ ಅಭಿಯಾನ

ಖೇತ್ ಬಚಾವೋ
ರಾಸಾಯನಿಕ ರಸಗೊಬ್ಬರ ಬಳಕೆ ಕಡಿತ, ಕೃಷಿಭೂಮಿ ಪುನಶ್ಚೇತನದ ಗುರಿ

ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್) ಮತ್ತು ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಜಂಟಿಯಾಗಿ ಖೇತ್ ಬಚಾವೋ ಅಭಿಯಾನಕ್ಕೆ ಚಾಲನೆ ನೀಡಿವೆ. ಮಣ್ಣು ಪರೀಕ್ಷೆ ಆಧಾರಿತ ಪೋಷಕಾಂಶಗಳ ನಿರ್ವಹಣೆಯ ಮೂಲಕ ಸುಸ್ಥಿರ ಕೃಷಿಯನ್ನು ಉತ್ತೇಜಿಸುವ ಮತ್ತು ಯೂರಿಯಾದಂತಹ ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಗುರಿಯನ್ನು ಈ ಅಭಿಯಾನ ಹೊಂದಿದೆ. ಆ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.



ಏನಿದು ಖೇತ್ ಬಚಾವೋ?

ಖೇತ್ ಬಚಾವೋ ಅಭಿಯಾನವನ್ನು ಜಮೀನುಗಳು, ರೈತರು ಮತ್ತು ಗ್ರಾಮಗಳನ್ನು ಜೋಡಿಸುವ ಒಂದು ಸಮಗ್ರ ರಾಷ್ಟ್ರೀಯ ಅಭಿಯಾನ ಎಂದು ವಿವರಿಸಲಾಗಿದೆ. ಈ ಯೋಜನೆಯನ್ನು ಅತಿಯಾದ ರಾಸಾಯನಿಕ ಗೊಬ್ಬರ ಬಳಕೆ, ಕುಸಿಯುತ್ತಿರುವ ಮಣ್ಣಿನ ಸಾರಾಂಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಸಲಹಾ ಸೇವೆಗಳ ಸೀಮಿತ ಲಭ್ಯತೆ ಎಂಬ ಮೂರು ಪ್ರಮುಖ ಸವಾಲುಗಳನ್ನು ಎದುರಿಸಲು ವಿನ್ಯಾಸಗೊಳಿಸಲಾಗಿದೆ. ಈ ಅಭಿಯಾನ, ಸಾಂಪ್ರದಾಯಿಕ ಭಾರತೀಯ ಕೃಷಿ ಜ್ಞಾನವನ್ನು ಆಧುನಿಕ ಕೃಷಿ ವಿಜ್ಞಾನದೊಂದಿಗೆ ಸಂಯೋಜಿಸುತ್ತದೆ. ಇದರ ಅನುಷ್ಠಾನದಲ್ಲಿ ಪಂಚಾಯತ್‌ಗಳು, ಕೃಷಿ ವಿಜ್ಞಾನ ಕೇಂದ್ರಗಳು(ಕೆವಿಕೆ), ಐಸಿಎಆರ್ ಸಂಸ್ಥೆಗಳು, ರಾಜ್ಯ ಸರ್ಕಾರಗಳು ಮತ್ತು ಕೃಷಿ ಇಲಾಖೆಗಳು ಭಾಗಿಯಾಗಿದ್ದು, ಇದು ಇತ್ತೀಚಿನ ವರ್ಷಗಳಲ್ಲಿ ಜಾರಿಯಾಗುತ್ತಿರುವ ಅತ್ಯಂತ ವಿಶಾಲ ಸಾಂಸ್ಥಿಕ ಕೃಷಿ ಸಂಪರ್ಕ ಕಾರ್ಯಕ್ರಮಗಳಲ್ಲಿ ಒಂದು.

ಮಣ್ಣಿನ ಆರೋಗ್ಯಕ್ಕೆ ಪ್ರಯೋಜನಗಳು

ರೈತರ ಒಟ್ಟು ಬೇಸಾಯದ ವೆಚ್ಚದಲ್ಲಿ ರಾಸಾಯನಿಕ ರಸಗೊಬ್ಬರಗಳ ಪಾಲೇ ಹೆಚ್ಚು. ಮಣ್ಣು ಪರೀಕ್ಷೆ ಆಧಾರಿತ ಅನ್ವಯಗಳು ಮತ್ತು ನ್ಯಾನೋ-ರಸಗೊಬ್ಬರಗಳಿಗೆ ಬದಲಾಗುವುದರಿಂದ ರೈತರ ಇಂತಹ ವೆಚ್ಚಗಳು ಕಡಿಮೆಯಾಗಲಿವೆ ಮತ್ತು ನಿವ್ವಳ ಲಾಭದ ಪ್ರಮಾಣ ಸುಧಾರಿಸಲಿದೆ. ಯೂರಿಯಾದ ಮೇಲಿನ ಅತಿಯಾದ ಅವಲಂಬನೆಯಿಂದಾಗಿ ಮಣ್ಣಿನ ನೈಸರ್ಗಿಕ ಸೂಕ್ಷ್ಮ ಜೀವಿಗಳು ನಾಶವಾಗಿ, ಕಾಲಕ್ರಮೇಣ ಫಲವತ್ತತೆ ಕುಸಿದು ಉಂಟಾಗಿರುವ ದೀರ್ಘಕಾಲೀನ ಮಣ್ಣಿನ ಸವೆತವನ್ನು ತಡೆಯುವುದೂ ಸಹ ಈ ಅಭಿಯಾನದ ಗುರಿಯಾಗಿದೆ. ಪರಿಸರದ ದೃಷ್ಟಿಯಿಂದ, ಅತಿಯಾದ ರಾಸಾಯನಿಕ ಹರಿವು ಸ್ಥಳೀಯ ಜಲಮೂಲಗಳನ್ನು ಮತ್ತು ಅಂತರ್ಜಲವನ್ನು ಕಲುಷಿತಗೊಳಿಸುತ್ತಿದ್ದು, ಪಾದರಸ(ಎಚ್‌ಜಿ), ಕ್ರೋಮಿಯಂ (ಸಿಆರ್) ಮತ್ತು ಕ್ಯಾಡ್ಮಿಯಂ (ಸಿಡಿ) ಸೇರಿದಂತೆ ಹಾನಿಕಾರಕ ಭಾರ ಲೋಹಗಳ ಪ್ರಮಾಣ ಹೆಚ್ಚಿದೆ. ಖೇತ್ ಬಚಾವೋ ಅಭಿಯಾನ, ಕೃಷಿಯಲ್ಲಿ ರಾಸಾಯನಿಕಗಳ ಅತಿಯಾದ ಬಳಕೆಯನ್ನು ಕಡಿಮೆ ಮಾಡುವ ಮೂಲಕ ಗ್ರಾಮದ ಜಲ ಪರಿಸರ ವ್ಯವಸ್ಥೆಗಳನ್ನು ರಕ್ಷಿಸುವ ಉದ್ದೇಶ ಹೊಂದಿದೆ. ರೈತರು ಬಿತ್ತನೆ, ನೀರಾವರಿ ಮತ್ತು ಕೊಯ್ಲು ಕುರಿತು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಕಾಲಿಕ ಡಿಜಿಟಲ್ ಸಲಹೆಗಳನ್ನು ಈ ಮೂಲಕ ಪಡೆಯಲಿದ್ದಾರೆ.

ವ್ಯಾಪಕ ಪ್ರಾಮುಖ್ಯತೆ

ಈ ಅಭಿಯಾನದ ಪಂಚಾಯತ್-ಕೇಂದ್ರಿತ ವಿಧಾನ ಭಾರತದಲ್ಲಿ ಕೃಷಿ ಸಲಹಾ ಸೇವೆಗಳನ್ನು ತಲುಪಿಸುವ ವಿಧಾನದಲ್ಲಿ ಮಹತ್ವದ ಬದಲಾವಣೆಯನ್ನು ಸೂಚಿಸುತ್ತದೆ. ಇದರ ಅವರೋಹಣ ರೂಪದಿಂದ ಗ್ರಾಮಮಟ್ಟದಲ್ಲಿ ಹೆಚ್ಚಿನ ಅಧಿಕಾರ ಸಿಗುತ್ತದೆ ಮತ್ತು ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆ. ಕೃಷಿಗೆ ಸಂಬಂಧಿಸಿದ ಹಲವು ಸವಾಲುಗಳಿಗೆ ಒಂದೇ ವೇದಿಕೆಯಲ್ಲಿ ಪರಿಹಾರ ಒದಗಿಸುವ ಪ್ರಯತ್ನ ಇದಾಗಿದೆ.

ಪೂರಕ ಸರ್ಕಾರಿ ಯೋಜನೆಗಳು

ಖೇತ್ ಬಚಾವೋ ಅಭಿಯಾನ, ಹಲವಾರು ಅಸ್ತಿತ್ವದಲ್ಲಿರುವ ಕೇಂದ್ರ ಸರ್ಕಾರದ ಕಾರ್ಯಕ್ರಮಗಳೊಂದಿಗೆ ಒಟ್ಟಾಗಿ ಕಾರ್ಯನಿರ್ವಹಿಸುತ್ತದೆ. ಪಿಎಂ-ಪ್ರಣಾಮ್ ಯೋಜನೆ ಪ್ರೋತ್ಸಾಹಕ ಆಧಾರಿತ ಮಾದರಿಯನ್ನು ಒದಗಿಸುತ್ತದೆ, ಇದರಲ್ಲಿ ಯೂರಿಯಾ ಮತ್ತು ಡಿಎಪಿಯಂತಹ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಯಶಸ್ವಿಯಾಗಿ ಕಡಿಮೆ ಮಾಡುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು, ಅದರಿಂದ ಉಂಟಾಗುವ ಉಳಿತಾಯದ ಶೇ.50ರಷ್ಟನ್ನು ಕೇಂದ್ರ ಸರ್ಕಾರದಿಂದ ಅನುದಾನವಾಗಿ ಮರಳಿ ಪಡೆಯುತ್ತವೆ. ಈ ಅನುದಾನವನ್ನು ಗ್ರಾಮ ಮಟ್ಟದಲ್ಲಿ ಪರ್ಯಾಯ, ಸಾವಯವ ಮತ್ತು ಜೈವಿಕ ಗೊಬ್ಬರ ಉತ್ಪಾದನೆಯ ಮೂಲಸೌಕರ್ಯಗಳನ್ನು ಸ್ಥಾಪಿಸಲು ಬಳಸಲಾಗುತ್ತದೆ. ಸ್ವಸ್ಥ್ ಧರಾ, ಖೇತ್ ಹರಾ ಎಂಬ ಘೋಷವಾಕ್ಯದಲ್ಲಿ ಪ್ರಾರಂಭಿಸಲಾದ ಮಣ್ಣಿನ ಆರೋಗ್ಯ ಕಾರ್ಡ್(ಎಸ್‌ಎಚ್‌ಸಿ) ಯೋಜನೆ, ಪರಂಪರಾಗತ್ ಕೃಷಿ ವಿಕಾಸ್ ಯೋಜನೆಗೂ(ಪಿಕೆವಿವೈ) ಇದು ಪೂರಕವಾಗಿದೆ

ಯೋಜನೆಯ ಪ್ರಮುಖ ಸ್ತಂಭಗಳು

ಈ ಅಭಿಯಾನ, ಐದು ಪ್ರಮುಖ ಕಾರ್ಯತಂತ್ರಗಳ ಮೂಲಕ ಕಾರ್ಯನಿರ್ವಹಿಸುತ್ತದೆ. ಮೊದಲನೆಯದಾಗಿ, ಇದು ರೈತರಿಗೆ ಮಣ್ಣು ಪರೀಕ್ಷೆ ನಡೆಸಲು ಮತ್ತು ಅವರ ಭೂಮಿಗೆ ಅಗತ್ಯವಿರುವ ನಿರ್ದಿಷ್ಟ ಪೋಷಕಾಂಶಗಳನ್ನು ಮಾತ್ರ ಬಳಸಲು ತರಬೇತಿ ನೀಡುತ್ತದೆ. ಇದನ್ನು ಮಣ್ಣು ಪರೀಕ್ಷೆ ಆಧಾರಿತ ಪೋಷಕಾಂಶ ನಿರ್ವಹಣೆ ಎನ್ನಲಾಗುತ್ತದೆ. ಎರಡನೆಯದಾಗಿ, ಇದು ಸಾಂಪ್ರದಾಯಿಕ ಯೂರಿಯಾಕ್ಕೆ ಪರ್ಯಾಯವಾಗಿ ನ್ಯಾನೋ ಯೂರಿಯಾ ಮತ್ತು ಜೈವಿಕ ಗೊಬ್ಬರಗಳನ್ನು ಉತ್ತೇಜಿಸುತ್ತದೆ, ಇವುಗಳು ವೆಚ್ಚ ತಗ್ಗಿಸುವ ಜತೆಗೆ ಪರಿಸರ ಸ್ನೇಹಿ ಎಂದು ಪರಿಗಣಿಸಲಾಗಿದೆ. ಮೂರನೆಯದಾಗಿ, ಸ್ಥಳೀಯ ಪಂಚಾಯತ್‌ಗಳನ್ನು ಮಾಹಿತಿ ಕೇಂದ್ರಗಳಾಗಿ ಸಬಲೀಕರಣಗೊಳಿಸಲಾಗುತ್ತಿದ್ದು, ಇದು ದೂರದ ಪ್ರದೇಶದ ರೈತರಿಗೂ ಕೃಷಿ ಪರಿಣತಿ ಒದಗಿಸುತ್ತದೆ. ನಾಲ್ಕನೆಯದಾಗಿ, ರೈತರು ನೈಜ-ಸಮಯದ, ಸ್ಥಳೀಯ ಹವಾಮಾನ ನವೀಕರಣ ಮತ್ತು ಬೆಳೆ ಸಲಹೆಗಳನ್ನು ಪಡೆಯಲಿದ್ದು, ಇದು ಹವಾಮಾನ ವೈಪರೀತ್ಯದ ಅಪಾಯಗಳನ್ನು ನಿರ್ವಹಿಸಲು ಸಹಾಯ ಮಾಡುತ್ತದೆ. ಐದನೆಯದಾಗಿ, ಈ ಅಭಿಯಾನ, ಅಸ್ತಿತ್ವದಲ್ಲಿರುವ ಸರ್ಕಾರಿ ಯೋಜನೆಗಳ ಲಾಭ ಪಡೆಯುವುದನ್ನು ಸುಗಮಗೊಳಿಸುತ್ತದೆ. ಇದರಿಂದಾಗಿ ಸಬ್ಸಿಡಿಗಳು, ಗುಣಮಟ್ಟದ ಬಿತ್ತನೆ ಬೀಜಗಳು ಮತ್ತು ತಂತ್ರಜ್ಞಾನ ಉಪಕರಣಗಳು ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಗ್ರಾಮಗಳನ್ನು ತಲುಪುತ್ತವೆ. ಈ ಅಭಿಯಾನ ಪಿಎಂ-ಕಿಸಾನ್, ಕಿಸಾನ್ ಕ್ರೆಡಿಟ್ ಕಾರ್ಡ್, ಬೇಳೆಕಾಳುಗಳು-ಎಣ್ಣೆಕಾಳುಗಳ ಮಿಷನ್, ಆಯಿಲ್ ಪಾಮ್ ಮಿಷನ್, ಹತ್ತಿ ಮಿಷನ್, ಯಾಂತ್ರೀಕರಣ ಬೆಂಬಲ ಮತ್ತು ಜಲ ಸಂರಕ್ಷಣಾ ಉಪಕ್ರಮಗಳು ಸೇರಿದಂತೆ ಅಸ್ತಿತ್ವದಲ್ಲಿರುವ ಪ್ರಮುಖ ಯೋಜನೆಗಳನ್ನು ಸಂಯೋಜಿಸುತ್ತದೆ.

ಕಿರುಸುದ್ದಿ

ಪರಿಷ್ಕೃತ ವಲಸೆ ನೀತಿ ಜಾರಿಗೆ ಅಧಿಸೂಚನೆ

• ಹೊಸದಿಲ್ಲಿ: ಅನುಮತಿಸಲಾದ ವೀಸಾ ಅವಧಿ ಮೀರಿ ಭಾರತದಲ್ಲಿ ವಾಸ್ತವ್ಯ ವಿಸ್ತರಿಸಲು ಬಯಸುವ ವಿದೇಶೀಯರು ಈಗ ಕೇಂದ್ರ ಗೃಹ ಸಚಿವಾಲಯ ಅಧಿಸೂಚಿಸಿದ ಪರಿಷ್ಕೃತ ವಲಸೆ ಮತ್ತು ವಿದೇಶೀಯರ ನಿಯಮಗಳು 2025ರಲ್ಲಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಈ ಬದಲಾವಣೆಗಳಿಗೆ 180 ದಿನಗಳ ಅಥವಾ ಅದಕ್ಕಿಂತ ಕಡಿಮೆ ಅವಧಿ ವೀಸಾಗಳಲ್ಲಿರುವ ಸಂದರ್ಶಕರು 180 ದಿನಗಳ ಅವಧಿ ಮುಗಿಯುವ ಮೊದಲು ನೋಂದಣಿ ಪೂರ್ಣಗೊಳಿಸಬೇಕಾಗುತ್ತದೆ. ಅಧಿಸೂಚನೆಯ ಪ್ರಕಾರ, ವಲಸೆ ಮತ್ತು ವಿದೇಶೀಯರ ನಿಯಮಗಳು, 2025ರ ನಿಯಮ 12ಅನ್ನು ತಿದ್ದುಪಡಿ ಮಾಡಲಾಗಿದೆ.

ಮನೆ ಖರೀದಿದಾರರಿಗೆ ವಂಚನೆ; ನಾಲ್ವರ ಸೆರೆ

• ಹೊಸದಿಲ್ಲಿ: 19,000ಕ್ಕೂ ಹೆಚ್ಚು ಹೂಡಿಕೆದಾರರಿಗೆ ವಂಚಿಸಿರುವ 2,004 ಕೋಟಿ ರೂ. ಮೊತ್ತದ ಮನೆ ಖರೀದಿದಾರರ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ(ಇಡಿ) ಜೂ.1 ರಂದು ಅರ್ಥ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್‌ನ ನಾಲ್ಕು ಪ್ರವರ್ತಕರನ್ನು ಬಂಧಿಸಿದೆ. ಅವಧೇಶ್ ಕುಮಾರ್ ಗೋಯಲ್, ರಜನೀಶ್ ಮಿತ್ತಲ್, ಅತುಲ್ ಗುಪ್ತಾ ಮತ್ತು ವಿಕಾಸ್ ಗುಪ್ತಾ ಅವರನ್ನು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅನ್ವಯ ಬಂಧಿಸಲಾಗಿದೆ. ದಿಲ್ಲಿ ವಿಶೇಷ ನ್ಯಾಯಾಲಯ ಬಂಧಿತರನ್ನು ವಿಚಾರಣೆಗಾಗಿ ಐದು ದಿನಗಳ ಕಾಲ ಇಡಿ ಕಸ್ಟಡಿಗೆ ಒಪ್ಪಿಸಿದೆ. ಸಕಾಲದಲ್ಲಿ ವಸತಿ ಮತ್ತು ವಾಣಿಜ್ಯ ಯೋಜನೆಗಳನ್ನು ಹಸ್ತಾಂತರಿಸುವ ಭರವಸೆ ನೀಡಿ ಈ ಕಂಪನಿ 19,425 ಮನೆ ಖರೀದಿದಾರರಿಂದ ಸುಮಾರು 2,004 ಕೋಟಿ ರೂ. ಸಂಗ್ರಹಿಸಿತ್ತು. ಆದರೆ, ಯೋಜನೆಗಳು ಅಪೂರ್ಣವಾಗಿಯೇ ಉಳಿದಿದ್ದು, 467 ಕೋಟಿ ರೂ. ಹಣವನ್ನು ಗ್ರೂಪ್ ಸಂಸ್ಥೆಗಳ ಮೂಲಕ ಚರಾಸ್ತಿ ಮತ್ತು ಸ್ಥಿರಾಸ್ತಿಗಳನ್ನು ಖರೀದಿಸಲು ದುರುಪಯೋಗಪಡಿಸಿಕೊಳ್ಳಲಾಗಿದೆ, ಎಂದು ತನಿಖೆಯಿಂದ ತಿಳಿದುಬಂದಿದೆ.

ಕಾಂಗೋದಲ್ಲಿ 321 ಇಬೋಲಾ ಕೇಸ್ ದೃಢ

• ಜಿನೀವಾ: ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದಲ್ಲಿ ಇಬೋಲಾದ ಬುಂಡಿಬುಗ್ಯೋ ಪ್ರಭೇದದ 116 ಶಂಕಿತ ಪ್ರಕರಣಗಳು ಪತ್ತೆಯಾಗಿದ್ದು, ಈವರೆಗೆ 321 ಪ್ರಕರಣಗಳು ದೃಢಪಟ್ಟಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಮಂಗಳವಾರ ತಿಳಿಸಿದೆ. ವೈರಸ್‌ನಿಂದ 41 ಮಂದಿ ಮೃತಪಟ್ಟಿದ್ದು, ಆರು ಜನರು ಚೇತರಿಸಿಕೊಂಡಿದ್ದಾರೆ. ಉಗಾಂಡಾದಲ್ಲಿ 9 ಪ್ರಕರಣಗಳು ದೃಢಪಟ್ಟಿದ್ದು, ಓರ್ವ ಮೃತಪಟ್ಟಿದ್ದಾನೆ. ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆಯು ಇದನ್ನು ಅಂತಾರಾಷ್ಟ್ರೀಯ ಕಾಳಜಿಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯೆಂದು ಘೋಷಿಸಿದೆ.

ಬ್ರಿಟನ್‌ನಲ್ಲಿ ಪಾಕಿಸ್ತಾನ ಗ್ಯಾಂಗ್‌ನಿಂದ ದೌರ್ಜನ್ಯ

• ಲಂಡನ್: ಬ್ರಿಟನ್‌ನ ಹಲವು ರಾಜ್ಯಗಳಲ್ಲಿ ಸಕ್ರಿಯವಾಗಿರುವ ಮಕ್ಕಳ ಸಂಘಟಿತ ಲೈಂಗಿಕ ಶೋಷಣೆಯ ಪಾಕಿಸ್ತಾನಿ ಮೂಲದ ಗ್ರೂಮಿಂಗ್ ಗ್ಯಾಂಗ್ ಕುರಿತಾದ ಸಂತ್ರಸ್ತರ ಭೀಕರ ಸಾಕ್ಷ್ಯಗಳನ್ನು ಬ್ರಿಟಿಷ್ ಸಂಸದ ರೂಪರ್ಟ್ ಲೋವ್ ಸಂಸತ್ತಿನಲ್ಲಿ ಮಂಡಿಸಿದ್ದಾರೆ. ರೂಪರ್ಟ್ ಲೋವ್, ತಮ್ಮ ಸ್ವತಂತ್ರ ತನಿಖೆಯ ಅವಧಿಯಲ್ಲಿ ಸಂಗ್ರಹಿಸಿದ ಸಾಕ್ಷ್ಯಗಳನ್ನು ಮಂಡಿಸಿದ್ದು, ಇದರಲ್ಲಿ ಸಾಂಸ್ಥಿಕ ವೈಫಲ್ಯ, ಹಿಂಸಾಚಾರ, ಬಾಲಕಿಯರ ಗರ್ಭಧಾರಣೆ ಮತ್ತು ಬೆದರಿಕೆಗಳ ವಿವರಗಳಿವೆ. ಕೇವಲ 13 ನೇ ವಯಸ್ಸಿನಿಂದಲೇ ಮೂರು ವರ್ಷಗಳ ಅವಧಿಯಲ್ಲಿ ನೂರಾರು ಪುರುಷರಿಂದ ಅತ್ಯಾಚಾರಕ್ಕೊಳಗಾದ ಕರಾಳ ಅನುಭವಗಳನ್ನು ಸಂತ್ರಸ್ತರು ಹಂಚಿಕೊಂಡಿದ್ದಾರೆ. ದೌರ್ಜನ್ಯಕ್ಕೊಳಗಾದವರಲ್ಲಿ ಬಹುತೇಕರು ಬಿಳಿಯರು ಎಂದು ಹೇಳಲಾಗಿದೆ. ಮಕ್ಕಳ ಸಂಘಟಿತ ಲೈಂಗಿಕ ಶೋಷಣೆಯಲ್ಲಿ ತೊಡಗಿರುವ ಅಪರಾಧಿಗಳು ಪ್ರಮುಖವಾಗಿ ಪಾಕಿಸ್ತಾನಿ ಮೂಲದ ಟ್ಯಾಕ್ಸಿ ಚಾಲಕರು ಮತ್ತು ಮಾರುಕಟ್ಟೆ ವ್ಯಾಪಾರಿಗಳು ಎಂದು ಸರ್ಕಾರಿ ತನಿಖೆಗಳು ಕಂಡುಕೊಂಡಿವೆ. ಲೋವ್ ಖಾಸಗಿ ತನಿಖೆ, ಬ್ರಿಟನ್‌ನ ಕನಿಷ್ಠ 85 ಪ್ರದೇಶಗಳಲ್ಲಿ ಇಂತಹ ಜಾಲಗಳು ಹರಡಿರುವುದನ್ನು ಗುರುತಿಸಿದೆ. ಈ ಮಾದರಿಯ ದೌರ್ಜನ್ಯಗಳು ರೋಥರ್ ಹ್ಯಾಮ್, ರಾಚ್‌ಡೇಲ್, ಆಕ್ಸ್‌ಫರ್ಡ್, ಟೆಲ್‌ಫೋರ್ಡ್ ಮತ್ತು ಬ್ರಿಸ್ಟಲ್ ಸೇರಿದಂತೆ ಬ್ರಿಟನ್‌ನ ಸುಮಾರು 50 ನಗರಗಳಲ್ಲಿ ಪುನರಾವರ್ತನೆಯಾಗಿವೆ. 2014ರ ವರದಿಯ ಪ್ರಕಾರ, ರೋಥರ್‌ಹ್ಯಾಮ್ ಒಂದರಲ್ಲೇ 1997ರಿಂದ 2013ರ ನಡುವೆ 1,400ಕ್ಕೂ ಹೆಚ್ಚು ಮಕ್ಕಳು ಶೋಷಣೆಗೆ ಒಳಗಾಗಿದ್ದರು.

ಕಾಶ್ಮೀರ ಕುರಿತ ಪಾಕ್, ಇಯು ಹೇಳಿಕೆಗೆ ಕಿಡಿ

• ಹೊಸದಿಲ್ಲಿ: ಪಾಕಿಸ್ತಾನ ಮತ್ತು ಐರೋಪ್ಯ ಒಕ್ಕೂಟಗಳು ಹೊರಡಿಸಿರುವ ಜಂಟಿ ಪತ್ರಿಕಾ ಪ್ರಕಟಣೆಗೆ ಭಾರತ ಆಕ್ರೋಶ ವ್ಯಕ್ತಪಡಿಸಿದ್ದು, ಜಮ್ಮು-ಕಾಶ್ಮೀರದ ಬಗ್ಗೆ ಮಾಡಲಾದ ಉಲ್ಲೇಖಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿದೆ. ಸೋಮವಾರ ನಡೆದ ಪಾಕಿಸ್ತಾನ-ಇಯು ಸಭೆಯಲ್ಲಿ ಪಾಕಿಸ್ತಾನ, ಕಾಶ್ಮೀರ ತನ್ನ ಅವಿಭಾಜ್ಯ ಅಂಗ ಎಂದಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ(ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್, ಜಮ್ಮು-ಕಾಶ್ಮೀರ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಗಳು ಭಾರತದ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಭಾಗಗಳಾಗಿವೆ ಎಂದಿದ್ದಾರೆ. ಅಂತೆಯೇ, ಭಾರತದ ಸಾರ್ವಭೌಮ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಲು ಯಾವುದೇ ಅಧಿಕಾರವಿಲ್ಲದ ಬಾಹ್ಯ ಘಟಕಗಳಿಗೆ ಎಚ್ಚರಿಕೆ ನೀಡಿದರು. ಇತ್ತೀಚಿನ ದ್ವಿಪಾಕ್ಷಿಕ ಮತ್ತು ಬಹುಪಕ್ಷೀಯ ವೇದಿಕೆಗಳಲ್ಲಿ, ಪಾಕಿಸ್ತಾನ ಅಂತಾರಾಷ್ಟ್ರೀಯ ಬೆಂಬಲ ಪಡೆಯಲು ಜಂಟಿ ಹೇಳಿಕೆಗಳಲ್ಲಿ ಜಮ್ಮು -ಕಾಶ್ಮೀರದ ಉಲ್ಲೇಖಗಳನ್ನು ಹೇಳಲು ನಿರಂತರವಾಗಿ ಪ್ರಯತ್ನಿಸಿದೆ. ಆದಾಗ್ಯೂ, ಭಾರತದ ಆಡಳಿತಾತ್ಮಕ ಮತ್ತು ಪ್ರಾದೇಶಿಕ ಸಮಗ್ರತೆ ಬಗ್ಗೆ ಪ್ರತಿಕ್ರಿಯಿಸಲು ಮೂರನೇ ವ್ಯಕ್ತಿಗಳಿಗೆ ಯಾವುದೇ ಪಾತ್ರ ಅಥವಾ ಅಧಿಕಾರವಿಲ್ಲ ಎಂದು ಭಾರತ ದೃಢವಾಗಿ ಹೇಳಿದೆ.

3ನೇ ವ್ಯಕ್ತಿ ಹಸ್ತಕ್ಷೇಪಕ್ಕಿಲ್ಲ ಅವಕಾಶ: ಭಾರತ ಮತ್ತು ನೇಪಾಳದ ನಡುವಿನ ದ್ವಿಪಕ್ಷೀಯ ವಿಷಯದಲ್ಲಿ ಯಾವುದೇ ಮೂರನೇ ವ್ಯಕ್ತಿಗಳ ಪಾತ್ರವಿಲ್ಲ. ಉಭಯ ದೇಶಗಳ ಗಡಿ ವಿಷಯಗಳ ಎಲ್ಲಾ ಅಂಶಗಳನ್ನು ಎದುರಿಸಲು ದ್ವಿಪಕ್ಷೀಯ ಮಾನದಂಡಗಳಿವೆ ಎಂದು ಭಾರತ ಮಂಗಳವಾರ ಹೇಳಿದೆ.

ಮಹಾರಾಷ್ಟ್ರದಲ್ಲಿ ರೈತರ 2 ಲಕ್ಷ ರೂ. ಸಾಲಮನ್ನಾ

• ಮುಂಬೈ: ರೈತರ 2 ಲಕ್ಷ ರೂ.ವರೆಗಿನ ಸಾಲವನ್ನು ಸಂಪೂರ್ಣ ಮನ್ನಾ ಮಾಡಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ. ಇದರಿಂದ ಸುಮಾರು 56 ಲಕ್ಷ ರೈತರಿಗೆ ಲಾಭವಾಗಲಿದೆ. ರೈತರಿಗೆ ಮಹತ್ವದ ನೆರವು ನೀಡುವ ಉದ್ದೇಶದಿಂದ ಪುಣ್ಯಶ್ಲೋಕ ಅಹಲ್ಯಾದೇವಿ ಹೋಳ್ಕರ್ ಶೇತ್ಕರಿ ಕರ್ಜಮುಕ್ತಿ ಯೋಜನೆಗೆ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಯೋಜನೆಯಲ್ಲಿ 2019ರ ಏ.1ರಿಂದ 2025ರ ಮಾ.31ರ ನಡುವೆ ಪಡೆದ ಅಲ್ಪಾವಧಿಯ ಬೆಳೆಸಾಲಗಳಲ್ಲಿ, 2025ರ ಸೆ.30ರ ವೇಳೆಗೆ ಬಾಕಿ ಉಳಿದು 2026ರ ಮಾ.31ರವರೆಗೆ ಪಾವತಿಯಾಗದ 2 ಲಕ್ಷ ರೂ.ವರೆಗಿನ ಸಾಲವನ್ನು ಸಂಪೂರ್ಣ ಮನ್ನಾ ಮಾಡಲಾಗುತ್ತದೆ. 2 ಲಕ್ಷ ರೂ.ಗಿಂತ ಹೆಚ್ಚು ಸಾಲ ಬಾಕಿ ಇರುವ ರೈತರು ಹೆಚ್ಚುವರಿ ಮೊತ್ತವನ್ನು 2027ರ ಮಾ.31ರೊಳಗೆ ಪಾವತಿಸಿದರೆ 2 ಲಕ್ಷ ರೂ.ವರೆಗೆ ಸಾಲಮನ್ನಾ ಸೌಲಭ್ಯ ಪಡೆಯಬಹುದು. ಇದಲ್ಲದೆ, 2022-23ರಿಂದ 2024-25ರ ಅವಧಿಯಲ್ಲಿ ಕನಿಷ್ಠ ಎರಡು ವರ್ಷಗಳ ಕಾಲ ನಿಗದಿತ ಅವಧಿಯೊಳಗೆ ಬೆಳೆಸಾಲ ತೀರಿಸಿದ ರೈತರಿಗೆ ಗರಿಷ್ಠ 50 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತದೆ. ಹಿಂದಿನ ಮಹಾತ್ಮ ಜ್ಯೋತಿರಾವ್ ಫುಲೆ ಶೇತ್ಕರಿ ಕರ್ಜಮುಕ್ತಿ ಯೋಜನೆಯ ಫಲಾನುಭವಿಗಳಿಗೂ ಕೆಲವು ಷರತ್ತುಗಳೊಂದಿಗೆ ನೆರವು ಲಭ್ಯವಾಗಲಿದೆ. ಆದರೆ, ರಾಜಕೀಯ ಪಕ್ಷಗಳ ಪದಾಧಿಕಾರಿಗಳು, ಸರ್ಕಾರಿ ನೌಕರರು, ಆದಾಯ ತೆರಿಗೆ ಪಾವತಿದಾರರು ಹಾಗೂ ತಿಂಗಳಿಗೆ 25 ಸಾವಿರ ರೂ.ಗಿಂತ ಹೆಚ್ಚು ವೇತನ ಪಡೆಯುವ ಸಹಕಾರಿ ಸಂಸ್ಥೆಗಳ ನೌಕರರನ್ನು ಯೋಜನೆಯಿಂದ ಹೊರಗಿಡಲಾಗಿದೆ.

3 ಮದರಸಾಗಳಿಗೆ ಬೀಗ, ಸಂತ್ರಸ್ತ ಕುಟುಂಬಕ್ಕೆ ನೆರವು

• ಗಾಜಿಯಾಬಾದ್: ಉತ್ತರ ಪ್ರದೇಶದ ಗಾಜಿಯಾಬಾದ್‌ನ ಖೋಡಾ ಪ್ರದೇಶದಲ್ಲಿ 17 ವರ್ಷದ ಸೂರ್ಯ ಚೌಹಾಣ್ ಹತ್ಯೆ ಪ್ರಕರಣದ ಬಳಿಕ ಉದ್ವಿಗ್ನಗೊಂಡಿದ್ದ ಪರಿಸ್ಥಿತಿ ಶಾಂತವಾಗಿದೆ. ಆರೋಪಿ ಅಸದ್ ಪೊಲೀಸ್ ಎನ್‌ಕೌಂಟರ್‌ನಲ್ಲಿ ಮೃತಪಟ್ಟ ನಂತರ, ಆಡಳಿತ ಮತ್ತು ಪೊಲೀಸರು ಪರಿಸ್ಥಿತಿ ಬಗ್ಗೆ ಕಟ್ಟೆಚ್ಚರವಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಾನ್ಯತೆ ಇಲ್ಲದೆ ಕಾರ್ಯನಿರ್ವಹಿಸುತ್ತಿದ್ದ ಮೂರು ಮದರಸಾಗಳನ್ನು ಅಧಿಕಾರಿಗಳು ಬೀಗ ಜಡಿದಿದ್ದಾರೆ. ಅಲ್ಲಿನ ವಿದ್ಯಾರ್ಥಿಗಳ ವಿವರ ಸಂಗ್ರಹಿಸಿ, ಅವರನ್ನು ಸಮೀಪದ ಸರ್ಕಾರಿ ಅಥವಾ ಮಾನ್ಯತೆ ಪಡೆದ ಶಾಲೆಗಳಿಗೆ ದಾಖಲಿಸಲು ಕ್ರಮ ಕೈಗೊಳ್ಳಲಾಗಿದೆ. ಸೂರ್ಯನ ಕುಟುಂಬಕ್ಕೆ ನೆರವು ನೀಡುವ ಉದ್ದೇಶದಿಂದ ಸರ್ಕಾರವು ಆತನ ತಾಯಿ ಸರೋಜ್ ಅವರಿಗೆ ಖೋಡಾ ನಗರಸಭೆಯಲ್ಲಿ ಗುತ್ತಿಗೆ ಆಧಾರದ ಸ್ವಚ್ಛತಾ ಮೇಲ್ವಿಚಾರಕ ಹುದ್ದೆಯನ್ನು ನೀಡಿದೆ. ಕುಟುಂಬದ ಯಾವುದೇ ಅರ್ಹ ಸದಸ್ಯರು ಈ ಹುದ್ದೆಯನ್ನು ಸ್ವೀಕರಿಸಬಹುದಾಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಸ್ನೇಹದ ಹೆಸರಿನಲ್ಲಿ ನಡೆದ ಹತ್ಯೆ ಸಂಪೂರ್ಣವಾಗಿ ಖಂಡನೀಯ ಎಂದು ಹೇಳಿದ್ದು, ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ನೀಡದ ಪೋಷಕರು ಎಚ್ಚರ ವಹಿಸಬೇಕು ಎಂದಿದ್ದಾರೆ.

ಸೇನೆಗೆ ದೇಸಿ ದಿವ್ಯಾಸ್ತ್ರದ ದಿವ್ಯಶಕ್ತಿ

• ಹೊಸದಿಲ್ಲಿ: ಎಐ ಆಧಾರಿತ ಮಾನವರಹಿತ ಕಮಿಕಾಜಿ ಡ್ರೋನ್ ದಿವ್ಯಾಸ್ತ್ರ ಎಂಕೆ-1 ಹಾರಾಟ ಪರೀಕ್ಷೆ ಯಶಸ್ವಿಯಾಗಿ ನಡೆದಿದೆ. ದೇಶೀಯ ರಕ್ಷಣಾ ತಂತ್ರಜ್ಞಾನ ಸಂಸ್ಥೆಯಾದ ಹಾವರ್‌ಇಟ್ ದಿವ್ಯಾಸ್ತ್ರವನ್ನು ನಿರ್ಮಿಸಿದ್ದು, ಇದೊಂದು ಆತ್ಮಾಹುತಿ ದಾಳಿ ಡ್ರೋನ್ ಆಗಿದೆ. ಇದು ನೈಜ ಸಮಯದ ಗುಪ್ತಚರ ಮಾಹಿತಿ ಸಂಗ್ರಹಣೆ ಮತ್ತು ದಾಳಿ ಸಾಮರ್ಥ್ಯವನ್ನು ಹೊಂದಿರುವ ವಿಶೇಷ ಸಂಯೋಜನೆ ಹೊಂದಿದೆ. ಇದು ಪ್ರಧಾನಿ ನರೇಂದ್ರ ಮೋದಿ ಅವರ ಮೇಕ್ ಇನ್ ಇಂಡಿಯಾ ಉಪಕ್ರಮಕ್ಕೆ ದೊಡ್ಡ ಉತ್ತೇಜನವಾಗಿದೆ. ಸೇನೆಯ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ದಿವ್ಯಾಸ್ತ್ರದ ಹಾರಾಟ ಪರೀಕ್ಷೆ ನಡೆದಿದೆ. ಉತ್ತರಪ್ರದೇಶದ ಲಖನೌ ಮೂಲದ ರಕ್ಷಣಾ ನವೋದ್ಯಮವಾದ ಹಾವರ್ ಇಟ್ ದಿವ್ಯಾಸ್ತ್ರ ಡ್ರೋನ್ ನಿರ್ಮಿಸಿದೆ. ಇದನ್ನು ಗುಪ್ತಚರ, ಕಣ್ಗಾವಲು ಮತ್ತು ಸ್ಥಳಾನ್ವೇಷಣೆ ಕಾರ್ಯಾಚರಣೆಗಳಿಗಾಗಿ ವಿನ್ಯಾಸ ಮಾಡಲ್ಪಟ್ಟಿದೆ.

ಎಲ್ಲಿ ಪರೀಕ್ಷೆ?

ರಾಜಸ್ಥಾನದ ಜೋಧ್‌ಪುರ ಮರಭೂಮಿ ಪ್ರದೇಶದಲ್ಲಿ 50 ಡಿಗ್ರಿ ಸೆಲ್ಸಿಯಸ್‌ಗೂ ಹೆಚ್ಚಿನ ಉಷ್ಣಾಂಶದಲ್ಲಿ ದಿವ್ಯಾಸ್ತ್ರದ ಹಾರಾಟ ಪರೀಕ್ಷೆಯನ್ನು ಸೋಮವಾರ ನಡೆಸಲಾಯಿತು.


ಎಐ ಆಧಾರಿತ ದಿವ್ಯಾಸ್ತ್ರ ಎಂಕೆ-1 ಆತ್ಮಾಹುತಿ ದಾಳಿ ಡ್ರೋನ್ ಹಾರಾಟ ಯಶಸ್ವಿ

ಶೇ.95 ದೇಸಿ ಉಪಕರಣ ಬಳಕೆ

ದಿವ್ಯಾಸ್ತ್ರ ಡ್ರೋನ್ ಸಾಮರ್ಥ್ಯ ಮಾತ್ರವಲ್ಲದೆ ಅದರ ನಿರ್ಮಾಣವೂ ಗಮನಸೆಳೆಯುತ್ತದೆ. ಶೇ.95 ದೇಸಿ ಉಪಕರಣಗಳಿಂದ ದಿವ್ಯಾಸ್ತ್ರ ಎಂಕೆ-1 ಮತ್ತು ಎಂಕೆ-2 ಡ್ರೋನ್‌ಗಳ ನಿರ್ಮಾಣ ಮಾಡಲಾಗುತ್ತಿದೆ.

ಅಗ್ಗದ ನಿರ್ಮಾಣ: ಅತ್ಯಾಧುನಿಕ ವೈಮಾನಿಕ ದಾಳಿ ನಡೆಸುವುದಕ್ಕೆ ದುಬಾರಿ ವಿದೇಶಿ ಡ್ರೋನ್ ಆಮದು ಮೇಲಿನ ಅವಲಂಬನೆ ಕಡಿಮೆಯಾಗಲಿದೆ. ಆಮದು ಡ್ರೋನ್‌ಗಳಿಂದ ಮೂರು ಪಟ್ಟು ಅಗ್ಗದ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಏನಿದು ಲಾಯಿಟರಿಂಗ್ ಮ್ಯೂನಿಷನ್?

ಸಾಮಾನ್ಯವಾಗಿ ಕ್ಷಿಪಣಿಯನ್ನು ಉಡಾಯಿಸಿದ ಬಳಿಕ ಅದರ ಗುರಿ ಬದಲಾಯಿಸಲು ಸಾಧ್ಯವಿಲ್ಲ. ಆದರೆ ಲಾಯಿಟರಿಂಗ್ ಮ್ಯೂನಿಷನ್ ಎಂದರೆ, ಗುರಿ ಪ್ರದೇಶದ ಮೇಲೆ ಕೆಲ ಗಂಟೆಗಳ ಕಾಲ ಹಾರುತ್ತಾ ಇರುತ್ತದೆ. ಸೂಕ್ತ ಗುರಿ(ಟಾರ್ಗೆಟ್) ಹುಡುಕುತ್ತದೆ. ಗುರಿ ಕಂಡ ತಕ್ಷಣ ಅದೇ ಗುರಿಯ ಮೇಲೆ ಅಪ್ಪಳಿಸಿ ಸ್ಫೋಟಗೊಳ್ಳುತ್ತದೆ.

ಶೀಘ್ರದಲ್ಲಿ ದಿವ್ಯಾಸ್ತ್ರ ಎಂಕೆ-2

ದಿವ್ಯಾಸ್ತ್ರ ಎಂಕೆ-2 ಡ್ರೋನ್ ಆರಂಭಿಕ ಹಂತದ ಪರೀಕ್ಷೆಗಳನ್ನು ನಡೆಸಿದ್ದಾಗಿ ಹಾವರ್‌ಇಟ್ ಹೇಳಿಕೊಂಡಿದೆ. ಇದು 8ರಿಂದ 12 ಗಂಟೆಗಳವರೆಗೆ ಹಾರಾಟ ಸಾಮರ್ಥ್ಯ ಹೊಂದಿರಲಿದೆ. ಇದರ ದಾಳಿ ದೂರವ್ಯಾಪ್ತಿ 1500ರಿಂದ 2000 ಕಿ.ಮೀ. ಇರಲಿದೆ.

ಏನಿದರ ವಿಶೇಷತೆ

- ವಿಧ: ಲಾಯಿಟರಿಂಗ್ ಮ್ಯೂನಿಷನ್/ಕಮಿಕಾಜಿ ಡ್ರೋನ್
- ಪೇಲೋಡ್: 15ರಿಂದ 80 ಕೆ.ಜಿ.ವರೆಗೆ
- ದಾಳಿ ವೇಗ: ಪ್ರತಿ ಗಂಟೆಗೆ 300ರಿಂದ 400 ಕಿ.ಮೀ.
- ದಾಳಿ ವ್ಯಾಪ್ತಿ: 500 ಕಿ.ಮೀ.ವರೆಗೆ
- ಉಡಾವಣೆ ವಿಧಾನ: ವಾಹನ ಆಧಾರಿತ ಉಡಾವಣೆ
- ಹಾರಾಟ ಅವಧಿ: 5 ಗಂಟೆಗಳವರೆಗೆ
- ಸ್ವದೇಶಿ ಅಂಶ: ಸುಮಾರು ಶೇ.95

ಬೈಕ್‌ಗೆ ಹೆದ್ದಾರಿ ಕಾಮಗಾರಿಯ ವಾಹನ ಡಿಕ್ಕಿ: ಸವಾರ ಗಂಭೀರ

ಬೆಳ್ತಂಗಡಿ: ಹೆದ್ದಾರಿ ಕಾಮಗಾರಿಯ ಫೇವರ್ ಮೆಷೀನ್ ವಾಹನಕ್ಕೆ ಹಿಂಬದಿಯಿಂದ ಬುಲೆಟ್ ಬೈಕ್ ಡಿಕ್ಕಿ ಹೊಡೆದ ಘಟನೆ ರಾಷ್ಟ್ರೀಯ ಹೆದ್ದಾರಿಯ ಕಲ್ಮಂಜದ ಗುರಿವಳ್ಳ ಕ್ರಾಸ್ ಸಮೀಪ ಸೋಮವಾರ ರಾತ್ರಿ ನಡೆದಿದೆ. ಘಟನೆಯಲ್ಲಿ ಬೈಕ್ ಸವಾರ ಕಡಿರುದ್ಯಾವರ ಗ್ರಾಮದ ಪರಬೆಟ್ಟು ನಿವಾಸಿ ಇಲೆಕ್ಟ್ರಿಷಿಯನ್ ಹರೀಶ್ (28) ಗಂಭೀರ ಗಾಯ ಗೊಂಡಿದ್ದು, ಉಜಿರೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೆದ್ದಾರಿ ಕಾಮಗಾರಿಯ ವಾಹನಕ್ಕೆ ಹಿಂಬದಿಯ ದೀಪಗಳು ಇಲ್ಲದ ಕಾರಣ ವಾಹನ ಸಂಚರಿಸುತ್ತಿದ್ದುದು ಗಮನಕ್ಕೆ ಬಾರದೆ ಅಪಘಾತ ನಡೆದಿದೆ ಎಂದು ಸ್ಥಳೀಯರು ಹೇಳಿದ್ದಾರೆ. ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ವಾಹನಗಳು ಅಲ್ಲಲ್ಲಿ ರಸ್ತೆ ಬದಿ ರಾತ್ರಿ ಹೊತ್ತು ನಿಲ್ಲುತ್ತಿದ್ದು, ಇವುಗಳಲ್ಲಿ ಸರಿಯಾದ ರಿಫ್ಲೆಕ್ಟರ್, ದೀಪಗಳು ಇಲ್ಲದಿರುವುದು ವಾಹನ ಸವಾರರಿಗೆ ಅಪಾಯಕಾರಿಯಾಗಿದೆ.

ರೈಲು ಪ್ರಯಾಣಿಕನ ಮೇಲೆ ಹಲ್ಲೆ: ಮೂವರ ಬಂಧನ

ಬಂಟ್ವಾಳ: ಸುಬ್ರಹ್ಮಣ್ಯ ಪ್ಯಾಸೆಂಜರ್ ರೈಲಿನ ಕೊನೆಯ ಬೋಗಿಯಲ್ಲಿ ಕ್ಷುಲ್ಲಕ ಕಾರಣಕ್ಕೆ ಪ್ರಯಾಣಿಕರೋರ್ವರ ಮೇಲೆ ಹಲ್ಲೆಗೈದ ಆರೋಪದಲ್ಲಿ ಮೂವರನ್ನು ಬಂಟವಾಳ (ಬಿ.ಸಿ.ರೋಡು) ರೈಲ್ವೇ ನಿಲ್ದಾಣದಲ್ಲಿ ರೈಲ್ವೆ ರಕ್ಷಣಾ ಪಡೆ ಸಿಬ್ಬಂದಿಗಳು ವಶಕ್ಕೆ ಪಡೆದುಕೊಂಡ ಘಟನೆ ಮಂಗಳವಾರ ನಡೆದಿದೆ. ಕೋಡಿಂಬಾಳ ರೈಲು ನಿಲ್ದಾಣದಲ್ಲಿ ಸುಬ್ರಹ್ಮಣ್ಯ ರೈಲು ಹತ್ತಿದ್ದ ಮೂವರು ವ್ಯಕ್ತಿಗಳು ಕೊನೆಯ ಬೋಗಿಯಲ್ಲಿ ಪ್ರಯಾಣಿಕರೋರ್ವರ ಜೊತೆ ಕ್ಷುಲ್ಲಕ ಕಾರಣಕ್ಕೆ ಜಗಳ ಮಾಡಿ ಹಲ್ಲೆಗೈದಿದ್ದರೆನ್ನಲಾಗಿದೆ. ಈ ಘಟನೆಯ ಹಿನ್ನೆಲೆಯಲ್ಲಿ ರೈಲನ್ನು ಕೆಲ ಹೊತ್ತುಗಳ ಕಾಲ ಬಂಟ್ವಾಳ ರೈಲ್ವೆ ನಿಲ್ದಾಣದಲ್ಲಿ ನಿಲ್ಲಿಸಲಾಗಿತ್ತು. ಬಳಿಕ ಆರ್‌ಪಿಎಫ್ ಸಿಬ್ಬಂದಿಗಳು ರೈಲಿಗೆ ತೆರಳಿ ಆರೋಪಿಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡರು. ಘಟನೆಯ ಕುರಿತು ತನಿಖೆ ನಡೆಯುತ್ತಿದ್ದು, ಹಲ್ಲೆಗೆ ಸ್ಪಷ್ಟ ಕಾರಣ ತಿಳಿದು ಬಂದಿಲ್ಲ.

ಪುತ್ತೂರು ಮಾರುಕಟ್ಟೆ ಧಾರಣೆ

02-06-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	415 - 456
ಚೋಲ್ ಅಡಿಕೆ	515 - 540
ಡಬಲ್ ಚೋಲ್	515 - 540
ಹೊಸ ಪಠೋರ	340 - 390
ಹಳೆ ಪಠೋರ	360 - 390
ಹೊಸ ಉಳ್ಳಿ	140 - 290
ಹಳೆ ಉಳ್ಳಿ	130 - 290
ಹೊಸ ಕೋಕಾ	315 - 335
ಹಳೆ ಕೋಕಾ	315 - 335
ಹೊಸ ಕರಿಗೋಟು	250 - 280
ಹಳೆ ಕರಿಗೋಟು	250 - 280
ಹಸಿ ಕೊಕ್ಕೋ	70 - 105
ಒಣ ಕೊಕ್ಕೋ	270 - 320
ಕಾಳುಮೆಣಸು ಧಾರಣೆ	
ಕಾಳುಮೆಣಸು	450 - 680
ರಬ್ಬರ್ ಧಾರಣೆ : ಗ್ರೇಡ್	
ಆರ್‌ಎಸ್‌ಎಸ್ 1	255.00
ಆರ್‌ಎಸ್‌ಎಸ್ 2	211.00
ಸ್ಕ್ರಾಪ್ 1	146.00
ಸ್ಕ್ರಾಪ್ 2	140.00

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಛೇರಿ, ಜಲಭವನ, ನಂ.ಪಿ-4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ, ಸರಸ್ವತಿ ಪುರಂ, ಮೈಸೂರು-09.
ದೂರವಾಣಿ ಸಂ: 0821-2545894 ಇ-ಮೇಲ್: kwbcemys2014@gmail.com

IFT ಸಂ.: 272/2026-27 ದಿನಾಂಕ: 29.05.2026

ಟೆಂಡರ್ ಪ್ರಕಟಣೆ

ಕಾಮಗಾರಿಯ ವಿವರ: ನಗರಸಭೆ, ನಂಜನಗೂಡಿನ 2022-23ನೇ ಸಾಲಿನ 15ನೇ ಹಣಕಾಸು ಅನುದಾನದಡಿ, ತೇವಣಿ ಕೊಡುಗೆಯಡಿ ನಗರಸಭೆ, ನಂಜನಗೂಡು ಕಚೇರಿಯ ಆವರಣದಲ್ಲಿ 10 ಲಕ್ಷ ಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣ ಹಾಗೂ ಸಂಬಂಧಿತ ಕಾಮಗಾರಿಯ (ಲಂಪ್ಸಮ್ ಟೆಂಡರ್ - ಯಾವುದೇ ವೇರಿಯೇಷನ್ ಇಲ್ಲದೆ) ಟೆಂಡರ್‌ನ್ನು **ರೂ.176.06 ಲಕ್ಷಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಇಂಡೆಂಟ್ ಸಂಖ್ಯೆ**: KUWSDB/2026-27/WS/WORK_INDENT514 ರಲ್ಲಿ ಆಹ್ವಾನಿಸಲಾಗಿರುತ್ತದೆ.
ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಸಂಪರ್ಕಿಸುವುದು

DIPR/MYS/258/SA/2026-27 ಸಹಿ/-ಮುಖ್ಯ ಅಭಿಯಂತರರು

ಕರ್ನಾಟಕ ಸರ್ಕಾರ
ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್-ಕಾಂಪಾ/ಸಿಆರ್-03/2025-26/1 ದಿ:3 0.05.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ.
(ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿನಲ್ಲಿ ಕಾಂಪಾ ಲೆಕ್ಕ ಶೀರ್ಷಿಕೆಯಡಿ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ, "ಮುಂಗಡ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000 ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್-3 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
1. ಇ-ಟೆಂಡರು ಸಲ್ಲಿಸಲು ಕೊನೆಯ ದಿನಾಂಕ: 09.06.2026 ಅಪರಾಹ್ನ 4.00 ಗಂಟೆಯವರೆಗೆ **2.** ಟೆಂಡರು ತೆರೆಯುವ ದಿನಾಂಕ: 10.06.2026 ಅಪರಾಹ್ನ 4.30 ಗಂಟೆ

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/02/06/302

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/910/877 ಇ-mail: purchase@kmf.coop

ದಿನಾಂಕ: 01.06.2026

ಟೆಂಡರ್ ಪ್ರಕಟಣೆ

ಕಹಾಮದ ನಂದಿನಿ ಹೈಟೆಕ್ ಪ್ರಾಡಕ್ಟ್ ಘಟಕ ಚನ್ನರಾಯಪಟ್ಟಣ ಘಟಕದ ಉಪಯೋಗಕ್ಕೆ ಅವಶ್ಯಕತೆಯಿರುವ ಟ್ಯಾಕ್ಸಿ ವಾಹನಗಳ ಸೇವೆಯನ್ನು ಗುತ್ತಿಗೆ ಆಧಾರದಲ್ಲಿ ಎರಡು ವರ್ಷಗಳ ಅವಧಿಗೆ ಪಡೆಯಲು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ದಾಸ್ತಾವೇಜುಗಳನ್ನು **https://kppp.karnataka.gov.in/** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

Sl. No.	Tender Number	Tender Indent Numbers	Particulars	Approx. Qty. & EMD
1	KMF/ PUR/ Tender-926/ 2026-27	KMF/ 2026-27/ SE5270	Providing Taxi Services for a period of two Years to KMF Nandini Hitech Product Plant, Channarayapattana	Please refer the tender document.

ಇನ್ನಿತರೆ ವಿವರ ಹಾಗೂ ಮಾಹಿತಿಗಳನ್ನು ಟೆಂಡರ್ ದಾಖಲಾತಿಗಳಲ್ಲಿ ನೋಡಬಹುದು ಮತ್ತು **www.kmfnandini.coop.** ನೋಡಬಹುದು.

ಟೆಂಡರ್ ಡೌನ್‌ಲೋಡ್ ಪ್ರಾರಂಭದ ದಿನಾಂಕ	01.06.2026 ರಿಂದ
ಟೆಂಡರ್ ಪೂರ್ವಭಾವಿ ಸಭೆ ದಿನಾಂಕ	08.06.2026 ರಂದು ಬೆಳಗ್ಗೆ 11.00 ಗಂಟೆಗೆ
ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	15.06.2026 ರಂದು ಸಂಜೆ 5.00 ಗಂಟೆಯವರೆಗೆ
ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ	16.06.2026 ರಂದು ಸಂಜೆ 5.05 ಗಂಟೆಗೆ
ಕಮರ್ಷಿಯಲ್ ಟೆಂಡರ್ ತೆರೆಯುವ ದಿನಾಂಕ	ತಾಂತ್ರಿಕ ಟೆಂಡರ್ ಪರಿಶೀಲನೆಯ ನಂತರ

ಕರ್ನಾಟಕ ಹಾಲು ಮಹಾಮಂಡಳಿ ಪರವಾಗಿ
ಸಹಿ/-
ನಿರ್ದೇಶಕರು (ಖರೀದಿ)

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-522th) ಡ್ರಾ ಜೂನ್ 2ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SA 292349 (IRINJALAKUDA)
Cons Prize-Rs: 5000/-
SB 292349 SC 292349 SD 292349 SE 292349
SF 292349 SG 292349 SH 292349 SJ 292349
SK 292349 SL 292349 SM 292349
2nd Prize Rs: 30,00,000/- [30 Lakhs]
SM 809084 (WAYANADU)
3d Prize Rs: 5,00,000/- [5 Lakhs]
SG 983114 (THIRUVANANTHAPURAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0079 0216 1032 1296 1777 3741 4054 4091 4586 4627 4633 5096 5268 6111 7334 8769 9090 9542 9998
5th Prize Rs.2,000/-
1674 1924 3333 8299 9423 9438
6th Prize Rs.1,000/-
0743 0823 1060 1119 1471 1846 1848 2522 2579 3005 3569 3726 3874 4670 5091 6011 6265 6337 7194 7516 7981 8290 8641 8883 9891
7th Prize Rs.500/-
0074 0279 0295 0296 0322 0760 0878 1266 1401 1435 1469 1524 1690 1952 1984 2071 2458 2476 2708 2922 3363 3702 3892 3945 3992 4044 4104 4134 4176 4217 4436 4693 4697 4776 4778 4846 4859 4985 4996 5222 5226 5743 5812 5903 5938 6006 6087 6092 6535 6549 6864 7446 7529 7557 7880 7931 7936 7951 8051 8109 8264 8347 8532 8711 8724 8755 8761 8904 9148 9298 9391 9405 9548 9650 9870 9997
8th Prize Rs.200/-
0308 0334 0362 0480 0641 0654 0683 0907 0974 0989 0991 1095 1332 1626 1645 1920 2082 2208 2277 2487 2837 2905 3093 3171 3250 3286 3525 3550 3596 3627 3870 4025 4292 4322 4456 4607 4673 4746 4962 5082 5205 5461 5495 5515 5654 5714 5764 5895 5933 6218 6464 6571 6572 6657 6757 6906 7040 7107 7235 7508 7581 7659 7741 7755 7830 7892 7955 8033 8281 8388 8394 8657 8664 8803 8821 8822 8834 9000 9212 9321 9365 9464 9471 9576 9582 9652 9662 9681 9836 9924
9th Prize Rs.100/-
0002 0003 0027 0123 0291 0407 0430 0440 0469 0514 0519 0531 0638 0685 0714 0791 0805 0810 0841 0940 0965 1067 1134 1161 1177 1212 1216 1268 1298 1301 1324 1586 1606 1643 1685 1716 1760 1875 1876 1968 2035 2109 2244 2254 2509 2516 2578 2629 2738 2817 2839 2931 2947 2951 3055 3200 3269 3273 3382 3384 3685 3732 3735 3749 4046 4098 4105 4295 4412 4453 4466 4469 4519 4589 4687 4700 4948 4949 4966 4995 5113 5208 5241 5265 5369 5409 5507 5509 5510 5626 5716 5738 5813 5900 5960 6071 6195 6472 6518 6556 6573 6620 6860 6865 6927 7009 7203 7207 7280 7332 7336 7364 7365 7407 7480 7483 7536 7841 7894 7914 7996 8153 8190 8219 8225 8246 8249 8398 8416 8567 8623 8679 8802 8840 9198 9208 9297 9327 9336 9385 9516 9535 9544 9661 9674 9816 9850 9933 9935 9944

ಮಂಗಳೂರು ಮಹಾನಗರಪಾಲಿಕೆ

MCC/EE2/TENDER-10/2026-27 ದಿನಾಂಕ: 02-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಈ ಕಛೇರಿ ಟೆಂಡರ್ ಸಂಖ್ಯೆ: **DMA/2026-27/WORK INDENT NO.58342, 58695, 58701, 58703, 58739, 58741** ರಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. 6 ಕಾಮಗಾರಿಗಳ ಒಟ್ಟು ಮೊತ್ತ **ರೂಪಾಯಿ 540.70 ಲಕ್ಷಗಳಾಗಿರುತ್ತದೆ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 12-06-2026 ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು

DIPR/DK/KSMCA/304/26-27 dt: 02.06.2026

ಕೋಟೆಕಾರು ಪಟ್ಟಣ ಪಂಚಾಯತ್, ದ.ಕ.

ನಂಬ್ರ: ಕೋಪಪಂ/(1)/ಕಾಮಗಾರಿ/ಸಿಆರ್/69/2026-27 ದಿನಾಂಕ: 30.05.2026

ಟೆಂಡರು ಪ್ರಕಟಣೆ

ಕೋಟೆಕಾರು ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿಯಡಿ ಈ ಕೆಳಗಿನ 1 ಕಾಮಗಾರಿಯನ್ನು ಮತ್ತು 2026-27 ನೇ ಸಾಲಿನ ಪಟ್ಟಣ ಪಂಚಾಯತ್ ನಿಧಿ ಪ.ಜಾತಿ/ಪ.ಪಂ ಗಳ ಶ್ರೇಯೋಭಿವೃದ್ಧಿಗಾಗಿ ಶೇ 24.10, 7.25 ಮತ್ತು 5% ಅನುದಾನದಡಿ 7 ಕಾಮಗಾರಿಗಳು ಒಟ್ಟು 8 ಕಾಮಗಾರಿಗಳನ್ನು ನಿರ್ವಹಿಸಲು ಐಟಂವಾರು ಟೆಂಡರುಗಳನ್ನು, ಮುಖ್ಯಾಧಿಕಾರಿಯವರು, ಕೋಟೆಕಾರು ಪಟ್ಟಣ ಪಂಚಾಯತ್ ಇವರಿಂದ ಕರ್ನಾಟಕ ಪಾರದರ್ಶಕ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ 1999 ಮತ್ತು 2000ರ ಅನ್ವಯ ಟೆಂಡರು ಕರೆಯಲಾಗಿದೆ. ಟೆಂಡರು ಷರತ್ತು ಮತ್ತು ಇತರ ವಿವರಗಳಿಗೆ ಪಟ್ಟಣ ಪಂಚಾಯತ್ ಕಚೇರಿಯಲ್ಲಿ ಕಚೇರಿಯ ಸಮಯದಲ್ಲಿ ಪಡೆದುಕೊಳ್ಳಬಹುದು ಅಥವಾ ಪಟ್ಟಣ ಪಂಚಾಯತ್ ವೆಬ್‌ಸೈಟ್ www.kotekartown.mrc. gov.in ನಲ್ಲಿ ನೋಡಬಹುದು.
ಟೆಂಡರು ಸಲ್ಲಿಸುವ ಕೊನೆಯ ದಿನಾಂಕ. 16.06.2026 ಅಪರಾಹ್ನ 5.00 ಗಂಟೆಗೆ, ಟೆಂಡರು ತೆರೆಯುವ ದಿನಾಂಕ. 18.06.2026 ಅಪರಾಹ್ನ 5.00 ಗಂಟೆಗೆ

ಸಹಿ/- (ಶ್ರೀಮತಿ ದಿವ್ಯ ಎಸ್.ಶೆಟ್ಟಿ), ಅಧ್ಯಕ್ಷರು, ಪಟ್ಟಣ ಪಂಚಾಯತ್ ಕೋಟೆಕಾರು
ಸಹಿ/- (ಶ್ರೀಮತಿ ಮಾಲಿನಿ) ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಕೋಟೆಕಾರು

DIPR/DK/KSMCA/300/26-27 dt: 02.06.2026

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ, ಧಾರವಾಡ (ಡಿ.ಆರ್.ಡಿ.ಎ. ಶಾಖೆ)

Email ID : projectdirector14@gmail.com
ನಂ:ಧಾಜಿಪಂ/ಯೋಜನಿ/D-1/2025-26 ದಿನಾಂಕ : 01-06-2026

ಅಲ್ಪಾವಧಿ ಮರುಟೆಂಡರ್ ಪ್ರಕಟಣೆ ವಿವರ

ಎನ್.ಆರ್.ಎಲ್.ಎಂ ಯೋಜನೆಯಡಿ ಖಾಲಿಯಿರುವ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಆಯ್ಕೆ ಮಾಡಿಕೊಳ್ಳಲು ಅರ್ಹ ಮ್ಯಾನ್ ಪವರ್ ಏಜನ್ಸಿಗಳನ್ನು e-procurement ಮುಖಾಂತರ ಆಹ್ವಾನಿಸಿರುವ ವಿವರ ಈ ಕೆಳಕಂಡಂತಿರುತ್ತದೆ.
(1) ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ : **02-06-2026** (2) ಭರ್ತಿ ಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ : **19-06-2026** 5.30 PM (3) ಸ್ವೀಕರಿಸಲಾದ ಇ-ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **22-06-2026** 11.30 AM (4) ಸ್ವೀಕರಿಸಲಾದ ಇ-ಟೆಂಡರ್‌ಗಳ ಹಣಕಾಸು ಬಿಡ್ ತೆರೆಯುವ ದಿನಾಂಕ : **24-06-2026** 11.30 AM (5) ಇ-ಟೆಂಡರ್ ತೆರೆಯುವ ಸ್ಥಳ : ಜಿಲ್ಲಾ ಪಂಚಾಯತ ಕಛೇರಿ ಧಾರವಾಡ
WEBSITE: https://kppp.karnataka.gov.in
ಟೆಂಡರ್ ಸಂಖ್ಯೆ : RDPR/2025-26/SE3402/CALL-2
ವಿ.ಸೂ : ತಾಂತ್ರಿಕ ಹಾಗೂ ಹಣಕಾಸಿನ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/- ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ, ಧಾರವಾಡ.

ವಾಸಾಸಂಇ/ಧಾ/ಕೆಎಸ್‌ಎಂಸಿಎ/250/26-27

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ,

ವಿದ್ಯುತ್ ವಿಭಾಗ, ಕೆ.ಆರ್.ವೃತ್ತ, ಬೆಂಗಳೂರು.
ಸಂ:ಕಾ.ಅ.(ವಿ)/ಲೋ.ಇ./ವಿದ್ಯುತ್/2026-27/305 ದಿನಾಂಕ:02.06.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳಿಗೆ KW-1 STD ಷರತ್ತಿಗೊಳಪಟ್ಟಂತೆ ಇ-ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ. ಮೂಲಕ ಎರಡನೇ ಟೆಂಡರ್ ಕರೆಯನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಕೆಳಕಂಡಂತಿವೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)
1	Providing Diesel Generator Set to District Prison, Mangalore, D.K. District. PWD/2026-27/EL/WORK_INDENT 35406/Call-2	ರೂ.11.88

ಮೇಲಿನ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್: **https://kppp.karnataka.gov.in/#/portal/portal-home** ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು **ದಿನಾಂಕ:01.06.2026** ರಿಂದ **15.06.2026, 16.00** ಗಂಟೆಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ **ದಿನಾಂಕ: 15.06.2026** ರಂದೆ **16.00** ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ)
ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು.

ವಾಸಾಸಂಇ/ಉನಿ-ಸಿ.ಪಿ/928/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
(ಸ್ವಾಯತ್ತ ಸಂಸ್ಥೆ)
ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ

ಸಂ: ಕ್ರಿಮ್ಸ್/ಇ-ಟೆಂಡರ್/2026-27 ದಿನಾಂಕ: 30.05.2026

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕ್ರ.ಸಂ.1: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ-ಟೆಂಡರ್/207/2026-27, ದಿನಾಂಕ: 30.05.2026, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ **Tele-Reporting of CT, MRI Scan** ಗಾಗಿ ಇ-ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 02.06.2026 ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 18.06.2026 ರಂದು ಸಂಜೆ 5.00 ರ ಒಳಗೆ

ಕ್ರ.ಸಂ.2: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ-ಟೆಂಡರ್/208/2026-27, ದಿನಾಂಕ: 30.05.2026, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ ಸ್ಟೇಶನರಿ ಸಾಮಗ್ರಿಗಳ ಪೂರೈಕೆ **(Stationary Items)** ಗಾಗಿ ಇ-ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 02.06.2026 ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 18.06.2026 ರಂದು ಸಂಜೆ 5.00 ರ ಒಳಗೆ

ಕ್ರ.ಸಂ.3: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ-ಟೆಂಡರ್/189/2025-26/4ನೇ ಕರೆ, ದಿನಾಂಕ: 30.05.2026, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರದ ಕಾಲೇಜು ಆವರಣದಲ್ಲಿರುವ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇಲೆ ಉಪಹಾರಗೃಹವನ್ನು ನಡೆಸಲು 4ನೇ ಕರೆ ಇ-ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 02.06.2026 ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 18.06.2026 ರಂದು ಸಂಜೆ 5.00 ರ ಒಳಗೆ

ಕ್ರ.ಸಂ.4: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ-ಟೆಂಡರ್/197/2025-26/2ನೇ ಕರೆ, ದಿನಾಂಕ: 30.05.2026, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರದ ಬೋಧಕ ಆಸ್ಪತ್ರೆಯ ಒಳರೋಗಿಗಳಿಗೆ ಸಿದ್ಧಪಡಿಸಿದ ಪಥ್ಯಾಹಾರವನ್ನು ಒಂದು ವರ್ಷದ ಅವಧಿಗೆ ಒದಗಿಸಲು 2ನೇ ಕರೆ ಇ-ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 03.06.2026 ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 20.06.2026 ರಂದು ಸಂಜೆ 5.00 ರ ಒಳಗೆ

ಕ್ರ.ಸಂ.5: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ-ಟೆಂಡರ್/209/2026-27, ದಿನಾಂಕ: 30.05.2026, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ ಎಸ್.ಸಿ.ಪಿ./ ಟಿ.ಎಸ್.ಪಿ ಯೋಜನೆಯಡಿಯಲ್ಲಿ ಟ್ಯಾಬ್ ಮತ್ತು ವಿವಿಧ ಸಲಕರಣೆಗಳನ್ನು ಅರೇವೈದ್ಯಕೀಯ ವಿದ್ಯಾರ್ಥಿಗಳಿಗೆ ಪೂರೈಕೆ **(TAB & Various Instruments to Paramedical Students under SCP/TSP Scheme)** ಗಾಗಿ ಇ-ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 03.06.2026 ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 20.06.2026 ರಂದು ಸಂಜೆ 5.00 ರ ಒಳಗೆ

ಕ್ರ.ಸಂ.6: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ-ಟೆಂಡರ್/210/2026-27, ದಿನಾಂಕ: 30.05.2026, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ ಎಸ್.ಸಿ.ಪಿ./ ಟಿ.ಎಸ್.ಪಿ ಯೋಜನೆಯಡಿಯಲ್ಲಿ ಅರೆವೈದ್ಯಕೀಯ ಕೋರ್ಸ್‌ಗಳ ಪಠ್ಯ ಪುಸ್ತಕಗಳ ಪೂರೈಕೆ **(Paramedical Courses Books)** ಗಾಗಿ ಇ-ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 03.06.2026 ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 20.06.2026 ರಂದು ಸಂಜೆ 5.00 ರ ಒಳಗೆ

ಈ ಮೇಲ್ಕಂಡ ಟೆಂಡರ್‌ಗಳಿಗೆ ಅರ್ಹ ಟೆಂಡರ್‌ದಾರರಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು, ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ **http://www.kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು.

ಸಹಿ/- ನಿರ್ದೇಶಕರು
ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ

DIPR/KWR/KSMCA/170/26-27 dt. 01.06.2026

ಹೆಸರು ಬದಲಾವಣೆ

ಬೆಳ್ತಂಗಡಿ ತಾಲೂಕು, ಪಿಲ್ಯ ಗ್ರಾಮದ ಬ್ರಹ್ಮಶ್ರೀ ನಿಲಯ ಹೆಂಕಲ ಹೊಸಮನೆ ನಿವಾಸಿ ಜಗದೀಶ ಎಂಬವರ ಪತ್ನಿ ಯಶೋಧ ಎಂಬವಳಾದ ನಾನು ತಿಳಿಸುವುದೇನೆಂದರೆ

ನನಗೆ ಸಂಬಂಧಪಟ್ಟ ಬೀಡಿ ದಾಖಲಾತಿಯಲ್ಲಿ ನನ್ನ ಗಂಡನ ಹೆಸರು ಜಗನ್ನಾಥ ಪೂಜಾರಿ As ಜಗದೀಶ (Jaganatha Poojary As Jagadeesha) ಎಂದು ನನ್ನ ಗಂಡನ ಆಧಾರ್‌ಕಾರ್ಡ್‌ನಲ್ಲಿ ಮತ್ತು ನನ್ನ ಆಧಾರ್ ಕಾರ್ಡ್‌ನಲ್ಲಿ ಜಗದೀಶ **(Jagadeesha)** ಎಂದು ನನ್ನ ಆಧಾರ್‌ಕಾರ್ಡ್‌ನಲ್ಲಿ ನನ್ನ ಜನನ ದಿನಾಂಕ 1-3-1972 ಎಂದು ನನ್ನ ಬೀಡಿ ದಾಖಲಾತಿಯಲ್ಲಿ ನನ್ನ ಜನನ ದಿನಾಂಕ 3-8-1974 ಎಂದು ನಮೂದಾಗಿರುತ್ತದೆ.

ಮೇಲ್ಕಾಣಿಸಿದ ಎಲ್ಲಾ ಹೆಸರುಗಳು ನನ್ನ ಗಂಡನಿಗೆ ಸಂಬಂಧಪಟ್ಟವುಗಳೇ ಆಗಿರುತ್ತವೆ. ಆಧಾರ್‌ಕಾರ್ಡ್‌ನಲ್ಲಿರುವಂತೆ ಮುಂದಿನ ನನ್ನ ಎಲ್ಲಾ ವ್ಯವಹಾರಗಳನ್ನು ನಡೆಸುತ್ತೇನೆ ಎಂದು ದಿನಾಂಕ 25-5-2026 ರಂದು ನೋಟರಿ ಭಗೀರಥ ಜಿ. ಬೆಳ್ತಂಗಡಿ ಎಂಬವರಲ್ಲಿ ಪ್ರಮಾಣೀಕರಿಸಿರುತ್ತೇನೆ.

ನೇರ ನೇಮಕಾತಿ ಅಧಿಸೂಚನೆ

ಭಾರತ ಸರ್ಕಾರದ ಕಾರ್ಪೊರೇಟ್ ಅಫೇರ್ಸ್ ಸಚಿವಾಲಯದ ಅಡಿಯಲ್ಲಿ ನೋಂದಾಯಿತ ದಕ್ಷಿಣ ಕನ್ನಡ ಬೆಳೆಗಾರರ ಸಾವಯವ ಸಂಯುಕ್ತ ರೈತ ಉತ್ಪಾದಕ ಕಂಪನಿ ಲಿಮಿಟೆಡ್ ಸಂಸ್ಥೆಯಲ್ಲಿ ಬೆಂಗಳೂರು, ಹಾಸನ, ಮೈಸೂರು, ಶಿವಮೊಗ್ಗ, ಮಂಗಳೂರು ಮೂಡಬಿದ್ರೆ, ಕುಂದಾಪುರ, ಸುರತ್ಕಲ್, ಕಾರ್ಕಳ ಹಾಗೂ ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಆರಂಭವಾಗಲಿರುವ ಶಾಖೆಗಳಲ್ಲಿ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
ಹುದ್ದೆಗಳು : ಮ್ಯಾನೇಜರ್, ಸಹಾಯಕ ಮ್ಯಾನೇಜರ್ ಕ್ಯಾಶ್ ಅಧಿಕಾರಿ, ಸಾಲ ಅಧಿಕಾರಿ, ಗ್ರಾಹಕ ಸೇವಾ ಅಧಿಕಾರಿ, ಫೀಲ್ಡ್ ಕಲೆಕ್ಷನ್ ಅಧಿಕಾರಿ
ಒಟ್ಟು ಹುದ್ದೆಗಳು: 65
ವೇತನ: ರೂ. 18,500 ರಿಂದ ರೂ. 45000 (ಅರ್ಹತೆ/ಅನುಭವ ಆಧಾರಿತ ವೇತನ)
ಸೌಲಭ್ಯಗಳು: ESI, PF
ಅರ್ಹತಾ ಪ್ರದೇಶ : ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.
ಹುದ್ದೆಗಳಿಗೆ ಆಯ್ಕೆಯ ಕೊನೆಯ ದಿನಾಂಕ: 20-06-2026
ಸಂಪರ್ಕಿಸಿ : ಎಸ್. ಸತೀಶ್ ನಾಯಕ್ +919980496533/9448627226

IN THE COURT OF THE ADDITIONAL J.M.F.C. AT MADIKERI KODAGU
CR.M.C. No. 37/2026

Petitioner:
K.M.Yadhukumar
V/s
Respondent:
The Chief Registrar of Birth & deaths, Represented by the Tahsildar, Madikeri Taluk, Kodagu District. And others

PUBLIC NOTICE

Take notice that the petitioner has filed the above case to obtain death certificate of his mother respectively **Neelamma.K.M.** died on **21.04.1996** at Kopati Village and Post, Madikeri Taluk, Kodagu District.
Whoever having any objection to the above petition may appear before the Hon'ble Civil Judge and J.M.F.C AT Madikeri vide Cr.M.C No.37/2026 on **16.05.2026 at 11.00 a.m.** either personally or through advocate failing which the case will be heard and procedure with as per law.

(By Order of the Court)
Sd/- Chief Ministerial Officer
Civil Judge & JMFC, Madikeri
Sd/- Sri. A.A.Pemmaiah
Advocate, Madikeri, Kodagu
Madikeri
02.06.2026

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ: ಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/2700 ಮಾನವ ಸೇವೆ/2ನೇ ಕರೆ
ಟೆಂಡರ್ ಪ್ರಕಟಣೆ ಸಂಖ್ಯೆ : 02/2026-27 ದಿನಾಂಕ : 30.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ 2ನೇ ಕರೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ 2700 ಭದ್ರಾ, ಗೊಂದಿ ಮತ್ತು ಜಂಬದಹಳ್ಳ ಲೆಕ್ಕ ಶೀರ್ಷಿಕೆಯಡಿಯಲ್ಲಿ 03 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್. ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.
1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 02.06.2026 ರಿಂದ 11.06.2026 ರವರೆಗೆ ಸಂಜೆ 17.29 ಗಂಟೆಗೆ. 2) ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ : 12.06.2026 ರಂದು 17.30 ಗಂಟೆಗೆ. Financial Bid will be opened for Sl No.01 & 02 and Technical Bid will be opened for Sl No. 3 after obtaining approval of technical bid from competent authority financial bid will be opened. 3) ಕಾಲಾವಧಿ : 12 ತಿಂಗಳು. 4) ಪ್ರೀ ಬಿಡ್ ಮೀಟಿಂಗ್ : 06.06.2026ರಂದು ಬೆಳಿಗ್ಗೆ 11.00 ಗಂಟೆಗೆ, ಕಾರ್ಯಪಾಲಕ ಇಂಜಿನಿಯರ್ ರವರ ಕಚೇರಿ, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ. **(For S1 No.03).** 5) ಟೆಂಡರ್‌ಗಿಟ್ಟ ಮೊತ್ತ : ರೂ.17.04 ಲಕ್ಷಗಳಿಂದ ರೂ.141.02 ಲಕ್ಷಗಳವರೆಗೆ. 6) ಇಎಂಡಿ ಮೊತ್ತ : ರೂ. 42,600/- .ಯಿಂದ ರೂ. 2,12,000/- ವರೆಗೆ.
ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/-
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ.03-06/ ಝೀಂಕಾರ್/2026-27

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

#1, ಡಾ|| ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ. ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು-560 079, ದೂರವಾಣಿ ಸಂಖ್ಯೆ: +91-80-29619801
ಮಿಂಚ್ ಅಂಚೆ : Email: md.ksmscl@gmail.com

No: KSMSCL/EQPT/HFW/NHM-NFDS/15th FC/RDK KITS/ RETND/03/2026-27, Date: 02.06.2026

ಟೆಂಡರ್ ಪ್ರಕಟಣೆ

ಉಲ್ಲೇಖ: ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ:
1. **KSMSCL/EQPT/HFW/NHM-NFDS/15thFC/RDK KITS/RETND/03/ 2026-27 (IND-0263 Call 2) Date: 26.05.2026.**
2. **KSMSCL/EQPT/HFW/GH/GLUCOSTRIP/RETND/04/2026-27 (IND-0305- Call 02) Date: 26.05.2026.**
3. **KSMSCL/EQPT/HFW/GH/GLUCOSTRIP/RETND/05/2026-27 (IND-0306 Call 02) Date: 26.05.2026**
4. **KSMSCL/EQPT/HFW/OH/DU/TND/06/2026-27(IND-0399) Date: 26.05.2026**
5. **KSMSCL/EQPT/HFW/NPCB&VI/TND/07/2025-26(IND-0400) Date:26.05.2026.**
6. **KSMSCL/HFW/MH/PRGM/FCM-INJ/DRUGS/TND/09/2026-27 (IND-0401)**

e-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ-ಟೆಂಡರ್ ಕರೆಯಲಾಗಿದೆ.
1. 15ನೇ ಹಣಕಾಸು ಆಯೋಗದ ಅನುದಾನಗಳನ್ನು ಬಳಸಿಕೊಂಡು **NHM-NFDS** ಕಾರ್ಯಕ್ರಮದಡಿಯಲ್ಲಿ ತ್ವರಿತ ರೋಗನಿರ್ಣಯ ಕಿಟ್‌ಗಳ ಖರೀದಿಗೆ ಮರು-ಟೆಂಡರ್ **(IND-0263 Call 2)**
2. ಗೃಹ ಆರೋಗ್ಯ ಯೋಜನೆಯಡಿಯಲ್ಲಿ ರಕ್ತ ಗ್ಲೂಕೋಸ್ ಪರೀಕ್ಷೆಗಾಗಿ ಸ್ಟ್ರಿಪ್ಸ್ ಲ್ಯಾನ್ಸೆಟ್‌ಗಳ ಪೂರೈಕೆಗಾಗಿ ಮರು-ಟೆಂಡರ್ **(IND-0305- Call 02)**
3. ಗೃಹ ಆರೋಗ್ಯ ಯೋಜನೆಯಡಿಯಲ್ಲಿ ರಕ್ತ ಗ್ಲೂಕೋಸ್ ಪರೀಕ್ಷೆಗಾಗಿ ಸ್ಟ್ರಿಪ್ಸ್ ಲ್ಯಾನ್ಸೆಟ್‌ಗಳ ಪೂರೈಕೆಗಾಗಿ ಮರು-ಟೆಂಡರ್ **(IND-0306 Call 02)**
4. ಬಾಯಿ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ದಂತ ಘಟಕಗಳ ಪೂರೈಕೆ ಮತ್ತು ಸ್ಥಾಪನೆಗೆ ಟೆಂಡರ್ **(IND-0399)**
5. **NPCB&VI** ಕಾರ್ಯಕ್ರಮದ ಭರವಸೆ ಕಾರ್ಯಕ್ರಮದ ಅಡಿಯಲ್ಲಿ ನೇತ್ರ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆಗಾಗಿ ಟೆಂಡರ್ **(IND-0400)**
6. ತಾಯಿ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಫೆರಿಕ್ ಕಾರ್ಬಾಕ್ಸಿ ಮಾಲ್ಟೋಸ್ ಇಂಜಕ್ಷನ್ ಖರೀದಿಸಿ ಸರಬರಾಜು ಮಾಡುವ ಬಗ್ಗೆ **(IND-0401)**

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://kppp.karnataka.gov.in** ನಲ್ಲಿ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/-
ಪ್ರಧಾನ ವ್ಯವಸ್ಥಾಪಕರು (ಆ&ಸ)
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು.

DIPR/CP/R0949/AAPL/2026-27

ಪಟ್ಟಣ ಪಂಚಾಯಿತಿ ಕಾರ್ಯಾಲಯ ತೆಕ್ಕಲಕೋಟೆ
ಬಳ್ಳಾರಿ (ಜಿಲ್ಲೆ). ದೂ:08396 248228

E-mail ka.tekkalakote.tp@gmail.com web site: www.tekkalakotetown.mrc.gov.in
ನಂ.ಪಪಂತೆ/ಕಾಮಗಾರಿ/15ನೇ.ಹ/2026-27 ದಿನಾಂಕ:-29.05.2026

ಟೆಂಡರ್ ಪ್ರಕಟಣೆ

(ಸ್ಟಾಂಡರ್ಸ್ ಟೆಂಡರ್ ಕೆ.ಪಿ.ಪಿ ಪೋರ್ಟಲ್ ಕೆ.ಡಬ್ಲೂ-4 ಸರ್ವಿಸ್ ಬಿಡ್ ಡಾಕುಮೆಂಟ್ ಪ್ರಕಾರ ರ ನಿಬಂಧನೆಗಳಿಗೆ ಒಳಪಟ್ಟು)
1)ಖಾಲಿ ಟೆಂಡರ್ ಫಾರಂಗಾಗಿ ಕೆ.ಪಿ.ಪಿ ಪೋರ್ಟಲ್ ಪದ್ಧತಿಯಲ್ಲಿ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಅವಧಿ: **ದಿನಾಂಕ: 01/06/2026 ರಿಂದ 15/06/2026ರ ಸಂಜೆ 5.30 ಗಂಟೆವರೆಗೆ**
2)ಪೂರ್ವಾಭಾವಿ ಬಿಡ್ ಸಭೆಯ ದಿನಾಂಕ: **ದಿನಾಂಕ 11/06/2026 ರಂದು ಬೆಳಿಗ್ಗೆ 11.00 ಗಂಟೆಗೆ**
3)ಟೆಂಡರನ್ನು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **ದಿನಾಂಕ 17/06/2026 ರಂದು ಬೆಳಿಗ್ಗೆ 11.00 ಗಂಟೆಗೆ**
4)ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **ದಿನಾಂಕ 22/06/2026 ರಂದು ಬೆಳಿಗ್ಗೆ 11.00 ಗಂಟೆಗೆ**
ಒಂದು ವೇಳೆ ನಿಗಧಿಪಡಿಸಿದ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು.

ಕ್ರ ನಂ	ಇಂಡೆಂಟ್ ನಂ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಖಾಲಿ ಟೆಂಡರ್ ಫಾರಂ ಬೆಲೆ	ಗುತ್ತೇದಾರರ ಅರ್ಹತೆ	ಕಾಮಗಾರಿ ಕಾಲಾವಧಿ
2023-24,2024-25,2025-26ನೇ ಸಾಲಿನ 15ನೇ ಹಣಕಾಸು ನಿರ್ಬಂದಿತ ಅನುದಾನ & 2021-22ನೇ ಸಾಲಿನ 15ನೇ ಹಣಕಾಸು NMPC ಅನುದಾನ							
	DMA/2025-26/ BD/ WORK_INDENT 43302/ Call-2	ತೆಕ್ಕಲಕೋಟೆ ಪಟ್ಟಣ ಪಂಚಾಯಿತಿಯ ಘನತ್ಯಾಜ್ಯ ವಸ್ತು ನಿರ್ವಹಣೆ ವಾಹನಗಳ ನಿಲುಗಡೆ ಮರು ಬಳಕೆ ಘನತ್ಯಾಜ್ಯ ವಸ್ತು ದಾಸ್ತಾನು ಘನತ್ಯಾಜ್ಯ ನಿರ್ವಹಣೆ ಸಿಬ್ಬಂದಿಗೆ ಶೌಚಾಲಯ ಮತ್ತು ಇತರೆ ಮೂಲಸೌಕರ್ಯ ಕೊಠಡಿ ನಿರ್ಮಾಣ ಕಾಮಗಾರಿ	150.00	ಕೆ.ಪಿ.ಪಿ.ಪೋರ್ಟಲ್ ಪದ್ಧತಿ			

ಸಹಿ/- ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ತೆಕ್ಕಲಕೋಟೆ
ವಾ.ಸಾ.ಸಂ.ಇ/ಬಳ್ಳಾರಿ/2026-27/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/198
ಸಹಿ/- ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ತೆಕ್ಕಲಕೋಟೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ/ಟೆಂಡರ/2026-27/733 ದಿನಾಂಕ : 01/06/2026

:: ಇ-ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ ದ್ವಿ-ಲಕೋಟೆ ಪದ್ಧತಿಯಲ್ಲಿ-2 ::

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸನ್ನತಿನಲ್ಲಿ 5 ತರಗತಿ ಕೋಣೆಗಳ ನಿರ್ಮಾಣ ಮತ್ತು ಇತರೆ ನಿರ್ಮಾಣ ಕಾಮಗಾರಿ (for CAT-II (A) Bidders only) RDPR/2025-26/BD/WORK_INDENT24745/CALL-2, 2) ಲೆಕ್ಕ ಶೀರ್ಷಿಕೆ: **2025-26 & 2026-27 ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆ,** 3) ಟೆಂಡರಿಗಿಟ್ಟ ಅಂದಾಜು ಮೊತ್ತ: ರೂ. **68,46,368.95**, 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **01.06.2026 ರಿಂದ 11.06.2026 ಸಾಯಂಕಾಲ 4:00 ಗಂಟೆವರೆಗೆ,** 6) ಟೆಂಡರ ಅರ್ಜಿ ಬೆಲೆ: ಇ-ಪ್ರೊಕ್ಯೂರಮೆಂಟ್ ನಿಯಮಾನುಸಾರ, 7) ಇ.ಎಂ.ಡಿ. : ರೂ. 68,500.00, 8) ಟೆಂಡರ ಸಲ್ಲಿಸುವ ದಿನಾಂಕ: **01.06.2026 ರಿಂದ 11.06.2026 ಸಾಯಂಕಾಲ 4:00 ಗಂಟೆವರೆಗೆ,** 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12.06.2026 ಸಾಯಂಕಾಲ 4:00 ಗಂಟೆ ನಂತರ,** 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **15.06.2026 ಬೆಳಿಗ್ಗೆ 11:00 ಗಂಟೆ ನಂತರ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/180/ಕೆ.ಎಸ್.ಎಂ.ಸಿ.&ಎ/2026-27

ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಭೇಟಿ ಬಳಿಕ ಸಂಸದ ಯದುವೀರ್ ಒಡೆಯರ್ ಸ್ಪಷ್ಟನೆ

ಕೊಡಗು ಜಿಲ್ಲೆಯಲ್ಲಿ ರೈಲು ಮಾರ್ಗವಿಲ್ಲ

ಮಡಿಕೇರಿ: ಪ್ರಸ್ತುತ ಕೊಡಗು ಜಿಲ್ಲೆಯ ಮೂಲಕ ಹಾದುಹೋಗುವ ಯಾವುದೇ ರೈಲು ಮಾರ್ಗದ ಪ್ರಸ್ತಾವನೆ ರೈಲ್ವೆ ಸಚಿವಾಲಯದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸ್ಪಷ್ಟಪಡಿಸಿದ್ದಾರೆ.

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿ ಮಾಡಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ರೈಲ್ವೆ ಮೂಲಸೌಕರ್ಯ ಮತ್ತು ಸಂಪರ್ಕ ವ್ಯವಸ್ಥೆಗಳ ಕುರಿತು ಚರ್ಚೆ ನಡೆಸಿದ ಬಳಿಕ ಯದುವೀರ್ ಅವರು ಈ ಸ್ಪಷ್ಟನೆ ನೀಡಿದ್ದಾರೆ.

ಕೊಡಗಿನ ಮೂಲಕ ರೈಲು ಮಾರ್ಗ ಹಾದುಹೋಗುವ ಸಾಧ್ಯತೆಯ ಬಗ್ಗೆ ಇತ್ತೀಚಿನ ದಿನಗಳಲ್ಲಿ ಹರಿದಾಡುತ್ತಿರುವ ಕೆಲವು ವರದಿಗಳು ಮತ್ತು ಚರ್ಚೆಗಳು ಸಾರ್ವಜನಿಕರ ಒಂದು ವಲಯದಲ್ಲಿ ಆತಂಕವನ್ನು ಉಂಟುಮಾಡಿವೆ. ಆದರೆ, ರೈಲ್ವೆ ಸಚಿವರೊಂದಿಗೆ ನಡೆದ ಮಾತುಕತೆಯಲ್ಲಿ ಇಂತಹ ಯಾವುದೇ ಪ್ರಸ್ತಾವನೆ ಪ್ರಸ್ತುತ ಸಚಿವಾಲಯದ ಪರಿಗಣನೆಯಲ್ಲಿಲ್ಲ ಎಂಬುದು ದೃಢಪಟ್ಟಿದೆ ಎಂದು ಅವರು ಹೇಳಿದ್ದಾರೆ.



ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಜೊತೆ ಸಂಸದ ಯದುವೀರ್ ಚರ್ಚೆ

ಪ್ರದೇಶಕ್ಕೆ ಸಂಬಂಧಿಸಿದ ಯಾವುದೇ ಭವಿಷ್ಯದ ಮೂಲಸೌಕರ್ಯ ಯೋಜನೆಯನ್ನು ಕೈಗೊಳ್ಳುವ ಮೊದಲು ಎಲ್ಲಾ ಹಿತಾಸಕ್ತಿ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಲಾಗುವುದು ಹಾಗೂ ಜಿಲ್ಲೆಯ ಪರಿಸರ, ಪರಿಸ್ಥಿತಿ ಮತ್ತು ಅಭಿವೃದ್ಧಿ ಸಂಬಂಧಿತಹಿತಾಸಕ್ತಿಗಳನ್ನುಪರಿಗಣಿಸಲಾಗುವುದು ಎಂದು ಸಂಸದರು ಒತ್ತಿಹೇಳಿದ್ದಾರೆ.

ಕೊಡಗಿನ ಸಮತೋಲಿತ ಅಭಿವೃದ್ಧಿಯನ್ನು ಖಚಿತಪಡಿಸುವುದರ ಜೊತೆಗೆ ಅದರ ವಿಶಿಷ್ಟ ಪರಿಸರ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ತನ್ನ ಬದ್ಧತೆಯನ್ನು ಯದುವೀರ್ ಅವರು ಪುನರುಚ್ಚರಿಸಿದ್ದಾರೆ. ಅಲ್ಲದೆ, ಪ್ರದೇಶದ ಹಿತಕ್ಕಾಗಿ ಉತ್ತಮ ಸಂಪರ್ಕ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳಲ್ಲಿ ರೈಲ್ವೆ ಸಚಿವಾಲಯದೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರುವುದಾಗಿ ಕ್ಷೇತ್ರದ ಜನತೆಗೆ ಭರವಸೆ ನೀಡಿದ್ದಾರೆ.

ಊಹಾಪೋಹಗಳ ಆಧಾರದ ವರದಿಗಳಿಂದ ಸಾರ್ವಜನಿಕರು ದಾರಿ ತಪ್ಪಬಾರದು ಎಂದು ಮನವಿ ಮಾಡಿರುವ ಸಂಸದರು, ಈ ವಿಷಯಕ್ಕೆ ಸಂಬಂಧಿಸಿದ ಯಾವುದೇ ಅಧಿಕೃತ ಬೆಳವಣಿಗೆಯನ್ನು ಸೂಕ್ತ ಮಾರ್ಗಗಳ ಮೂಲಕ ಪಾರದರ್ಶಕವಾಗಿ ತಿಳಿಸಲಾಗುವುದು ಎಂದು ಹೇಳಿದ್ದಾರೆ.

ರೈಲ್ವೆ ಇಲಾಖೆಯ ಸ್ಪಷ್ಟನೆ

ದಕ್ಷಿಣ ಕನ್ನಡ ಜಿಲ್ಲೆಯ ಕಾಣಿಯೂರಿನಿಂದ ಸುಳ್ಯ–ನಾಪೋಕ್ಲು ಮೂಲಕ ಮೈಸೂರಿಗೆ ಸಂಪರ್ಕ ಕಲ್ಪಿಸುವ ಯಾವುದೇ ರೈಲ್ವೆ ಮಾರ್ಗದ ಯೋಜನೆ ಪರಿಗಣನೆಯಲ್ಲಿಲ್ಲ ಮತ್ತು ಪ್ರಸ್ತಾವಿತ ಮಾರ್ಗಕ್ಕಾಗಿ ಯಾವುದೇ ಸಮೀಕ್ಷೆಯನ್ನು ನಡೆಸುತ್ತಿಲ್ಲ ಎಂದು ಮೈಸೂರಿನ ನೈಋತ್ಯ ರೈಲ್ವೆಯ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಕಾಣಿಯೂರು, ಸುಳ್ಯ ಮತ್ತು ಕೊಡಗಿನ ನಾಪೋಕ್ಲು ಮೂಲಕ ಮೈಸೂರನ್ನು ಸಂಪರ್ಕಿಸುವ ಹೊಸ ರೈಲು ಮಾರ್ಗವನ್ನು ನಿರ್ಮಿಸುವಂತೆ ಕೋರಿ ಸುಳ್ಯ ಶಾಸಕ ಭಾಗೀರಥಿ ಮುರುಳ್ಯ ಮತ್ತು ದಕ್ಷಿಣ ಕನ್ನಡದ ಸಂಸದ ಬ್ರಿಜೇಶ್ ಚೌಟ ಅವರು ಇತ್ತೀಚೆಗೆ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಜ್ಞಾಪಕ ಪತ್ರವನ್ನು ಸಲ್ಲಿಸಿದ್ದರು. ಈ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದಂತೆ ಕೊಡಗು ಜಿಲ್ಲೆಯ ಪರಿಸರವಾದಿಗಳು ಹಾಗೂ ವಿವಿಧ ಸಂಘಟನೆಗಳ ಸದಸ್ಯರು ಈ ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

ನೈಋತ್ಯ ರೈಲ್ವೆಯು ಪರಿಸರದ ಬಗ್ಗೆ, ವಿಶೇಷವಾಗಿ ಪ್ರದೇಶದ ಸುಂದರ ಮತ್ತು ಸೂಕ್ಷ್ಮ ಪರಿಸರ ವ್ಯವಸ್ಥೆಯ ಬಗ್ಗೆ ಸಾರ್ವಜನಿಕರ ಕಾಳಜಿಯನ್ನು ಆಳವಾಗಿ ಗೌರವಿಸುತ್ತದೆ ಮತ್ತು ಹಂಚಿಕೊಳ್ಳುತ್ತದೆ ಮತ್ತು ಈ ಪ್ರದೇಶದಲ್ಲಿ ರೈಲ್ವೆ ಮಾರ್ಗಕ್ಕಾಗಿ ಯಾವುದೇ ಸಮೀಕ್ಷೆಯನ್ನು ಯೋಜಿಸಲಾಗಿಲ್ಲ ಎಂದು ಮಂಜುನಾಥ್ ಅವರು ಪುನರುಚ್ಚರಿಸಿದ್ದಾರೆ.

ಕಿರುಸುದ್ದಿ

ತಂಬಾಕು ಮಂಡಳಿಯೊಂದಿಗೆ ಕರ್ನಾಟಕ ಬ್ಯಾಂಕ್ ಸಹಭಾಗಿತ್ವ



ಮಂಗಳೂರು: ಸಾರ್ವಜನಿಕ ರಂಗದ ಪ್ರತಿಷ್ಠಿತ ಬ್ಯಾಂಕ್ ಗಳಲ್ಲಿ ಒಂದಾದ ಕರ್ನಾಟಕ ಬ್ಯಾಂಕ್ ಮತ್ತು ತಂಬಾಕು ಮಂಡಳಿ ರಾಜ್ಯದ ನೋಂದಾಯಿತ ತಂಬಾಕು ಬೆಳೆಗಾರರಿಗೆ ವಿಶೇಷ ಹಣಕಾಸು ಪರಿಹಾರಗಳನ್ನು ಒದಗಿಸುವ ಉದ್ದೇಶದಿಂದ ಮಹತ್ವದ ಸಹಭಾಗಿತ್ವಕ್ಕೆ ಚಾಲನೆ ನೀಡಿದೆ.

ಮೇ 29, 2026ರಂದು ಆರಂಭಗೊಂಡ ಈ ಯೋಜನೆಯಡಿ ಕರ್ನಾಟಕ ಬ್ಯಾಂಕ್, ತಂಬಾಕು ಮಂಡಳಿಯಲ್ಲಿ ನೋಂದಾಯಿತ ರೈತರ ಅಗತ್ಯಗಳಿಗೆ ಅನುಗುಣವಾಗಿ ವಿಶೇಷ ಬ್ಯಾಂಕಿಂಗ್ ಹಾಗೂ ಸಾಲ ಸೌಲಭ್ಯಗಳನ್ನು ಒದಗಿಸಲಿದೆ. ರೈತರಿಗೆ ಸಮಯೋಚಿತ ಸಾಲ ಸಿಗುವಂತೆ ಮಾಡುವುದು, ಹಣಕಾಸು ಒಳಗೊಳ್ಳುವಿಕೆಯನ್ನು ಉತ್ತೇಜಿಸುವುದು ಹಾಗೂ ತಂಬಾಕು ಕೃಷಿ ಸಮುದಾಯದ ಸುಸ್ಥಿರ ಬೆಳವಣಿಗೆಗೆ ನೆರವಾಗುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ಈ ಸಹಭಾಗಿತ್ವಕ್ಕೆ ಕರ್ನಾಟಕ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಘವೇಂದ್ರ ಎಸ್.ಭಟ್ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ತಂಬಾಕು ಮಂಡಳಿಯ ನಿರ್ದೇಶಕ ಶ್ರೀನಿವಾಸ ಬಿ.ಸಿ. ಉಪಸ್ಥಿತರಿದ್ದರು.

ಇಎಸ್‌ಐ ಆಸ್ಪತ್ರೆಯಿಂದ ನೌಕರರ ವಜಾ: ಮರು ನೇಮಿಸುವಂತೆ ಸೂಚನೆ



ಪುತ್ತೂರು: ಮಂಗಳೂರಿನ ಇಎಸ್‌ಐ ಆಸ್ಪತ್ರೆಯಲ್ಲಿ ಹೊರ ಗುತ್ತಿಗೆ ನೌಕರರಾಗಿ ಕಳೆದ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದ 9 ಮಂದಿ ನೌಕರರನ್ನು ಸಂಸ್ಥೆ ವಜಾ ಮಾಡಿದ್ದು ಮೇ 31ರ ಬಳಿಕ ಕೆಲಸಕ್ಕೆ ಬಾರದಂತೆ ನೋಟೀಸ್ ನೀಡಿತ್ತು. ವಜಾಗೊಂಡ ನೌಕರರು ಸೋಮವಾರ ಶಾಸಕ ಅಶೋಕ್ ರೈ ಅವರನ್ನು ಭೇಟಿಯಾಗಿ ಮನವಿ ಮಾಡಿದ್ದು, ವಜಾಗೊಳಿಸಿದ ಕಾರ್ಮಿಕರನ್ನು ಮತ್ತೆ ನೇಮಿಸುವಂತೆ ಇಲಾಖೆಗೆ ಶಾಸಕರು ಸೂಚನೆಯನ್ನು ನೀಡಿದ್ದಾರೆ. 9 ಮಂದಿ ನೌಕರರ ಪೈಕಿ ಮಂಗಳೂರು, ಪುತ್ತೂರು ಸೇರಿದಂತೆ ವಿವಿಧ ತಾಲೂಕಿನವರಿದ್ದಾರೆ. ವಜಾಗೊಂಡ ನೌಕರರ ಪೈಕಿ 5 ಮಂದಿ ನರ್ಸ್‌ಗಳು ಮತ್ತು ಉಳಿದವರು ಲ್ಯಾಬ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದರು. ಸಿಬಂದಿ ಹೊರೆ ಇಳಿಯುವ ಉದ್ದೇಶದಿಂದ ಇಲಾಖೆ ಈ ಕ್ರಮಕ್ಕೆ ಮುಂದಾಗಿತ್ತು. ವಜಾಗೊಳಿಸಿದ ಎಲ್ಲಾ ನೌಕರರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಶಾಸಕರು ಆರೋಗ್ಯ ಇಲಾಖೆಯ ಕಮಿಷನರ್‌ಗೆ ಸೂಚನೆ ನೀಡಿದರು.

ನಮ್ಮ ಸಮಸ್ಯೆಯನ್ನು ಹೇಳಿಕೊಳ್ಳಲು ನಾವು ಮಂಗಳೂರಿನಿಂದ ಶಾಸಕ ಅಶೋಕ್ ರೈ ಕಚೇರಿಗೆ ಬಂದಿದ್ದೇವೆ. ತಕ್ಷಣವೇ ಸಮಸ್ಯೆಗೆ ಸ್ಪಂದಿಸಿ ಸಂಬಂಧಿಸಿದವರಿಗೆ ಕರೆ ಮಾಡಿ ನಮ್ಮನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಸೂಚನೆಯನ್ನು ನೀಡಿದ್ದಾರೆ ಎಂದು ಇಎಸ್‌ಐ ಆಸ್ಪತ್ರೆಯ ಶುಶ್ರೂಷಾಧಿಕಾರಿ ಶಿಲ್ಪ ಪಟಗಾರ ತಿಳಿಸಿದ್ದಾರೆ.

ಕುಲಶೇಖರ ಡೇರಿಯಲ್ಲಿ ವಿಶ್ವ ಹಾಲು ದಿನಾಚರಣೆ | ಸಾಧಕರಿಗೆ ಸನ್ಮಾನ

ಯುವ ಸಮುದಾಯ ಹೈನುಗಾರಿಕೆಯಲ್ಲಿ ತೊಡಗಿಕೊಳ್ಳಲಿ : ರವಿರಾಜ ಹೆಗ್ಡೆ ಕರೆ



ಮಂಗಳೂರು: ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ಕುಲಶೇಖರ ಮತ್ತು ಭಾರತೀಯ ಡೇರಿ ಅಸೋಸಿಯೇಶನ್ ರಾಜ್ಯ ಶಾಖೆ ಇದರ ಆಶ್ರಯದಲ್ಲಿ ಮಂಗಳವಾರ ವಿಶ್ವ ಹಾಲು ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ದಕ್ಷಿಣ ಕನ್ನಡ ಹಾಲು ಒಕ್ಕೂಟದ ಅಧ್ಯಕ್ಷ ರವಿರಾಜ ಹೆಗ್ಡೆ, ಚಿನ್ನಕ್ಕಿಂತ ಹಾಲು ಶ್ರೇಷ್ಠ ಎಂಬಂತೆ ಹೈನುಗಾರಿಕೆ ನಂಬಿದರೆ ಜೀವನದಲ್ಲಿ ಖಂಡಿತಾ ಯಶಸ್ಸು ಸಾಧ್ಯವಿದೆ. ಈ ನಿಟ್ಟಿನಲ್ಲಿ ಮಹಿಳೆಯರು, ಯುವಸಮುದಾಯ ಹೈನುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದರು.

ದಕ್ಷಿಣ ಕನ್ನಡ ಹಾಲು ಒಕ್ಕೂಟ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಪ್ರಗತಿ ಕಾಣುತ್ತಿದೆ. ಕಳೆದ ವರ್ಷ 3.30ಲಕ್ಷ ಲೀಟರ್ ಹಾಲು ಸಂಗ್ರಹಣೆಯಾಗಿದ್ದರೆ, ಈ ವರ್ಷ 4.70ಲಕ್ಷ ಲೀಟರ್ ಹಾಲು ಸಂಗ್ರಹಣೆಯಾಗುತ್ತಿದೆ. ಗ್ರಾಮೀಣ ಭಾಗದಲ್ಲಿ ಹೈನುಗಾರಿಕೆ ಬಲಿಷ್ಠವಾಗಿದ್ದು, ಶೇ.80ಕ್ಕೂ ಅಧಿಕ ಹಾಲು ಗ್ರಾಮೀಣ ಭಾಗದಿಂದಲೇ ಸಂಗ್ರಹವಾಗುತ್ತಿದೆ ಎಂದು ಅವರು ಹೇಳಿದರು.

ಭಾರತೀಯ ಡೇರಿ ಅಸೋಸಿಯೇಶನ್ ಅಧ್ಯಕ್ಷ ಡಾ.ಸತೀಶ್ ಕುಲಕರ್ಣಿ ಮಾತನಾಡಿ, ಕೇಂದ್ರ, ರಾಜ್ಯ ಸರ್ಕಾರಗಳು ಕೃಷಿ ಮಾದರಿಯಲ್ಲೇ ಹೈನುಗಾರರಿಗೆ ಬಡ್ಡಿ ರಹಿತ ಸಾಲ, ಸಾಲ ಮನ್ನಾ, ಕಡಿಮೆ ಬಡ್ಡಿ ಸಾಲವನ್ನು ನೀಡುವಂತಾಗಬೇಕು ಎಂದರು.

ದ.ಕ. ಹಾಲು ಒಕ್ಕೂಟದ ಉಪಾಧ್ಯಕ್ಷ ಉದಯ ಎಸ್.ಕೋಟ್ಯಾನ್, ಎನ್‌ಡಿಡಿಬಿ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎನ್.ಬಿ. ಬೆಳವಾಡಿ, ಐಡಿಎ ರಾಜ್ಯ ಘಟಕ ಅಧ್ಯಕ್ಷ ಎನ್.ಬಿ. ಮರಾಠೆ, ರಾಜ್ಯ ಘಟಕ ಕಾರ್ಯದರ್ಶಿ ವಿಜಯೇಂದ್ರ ದೇಶಪಾಂಡೆ, ಮೈಸೂರು ಹಾಲು ಒಕ್ಕೂಟ ಮಾಜಿ ವ್ಯವಸ್ಥಾಪಕ ನಿರ್ದೇಶಕ ವಿಜಯ ಕುಮಾರ್ ಬಿ.ಎನ್., ಧಾರವಾಡ ಹಾಲು ಒಕ್ಕೂಟ ಮಾಜಿ ವ್ಯವಸ್ಥಾಪಕ ನಿರ್ದೇಶಕ ಕೊಡಿಯಾಲ್ ಮಠ್, ಸಂಪನ್ಮೂಲ ವ್ಯಕ್ತಿಗಳಾಗಿ ಹಾಸನ ಪಶುವೈದ್ಯಕೀಯ ಕಾಲೇಜು ಸಹಪ್ರಾಧ್ಯಾಪಕ ಡಾ. ಶಿವಕುಮಾರ್, ಎನ್‌ಎಸ್‌ಎಸ್ ಬೆಂಗಳೂರು ಜಂಟಿ ನಿರ್ದೇಶಕ ಡಾ. ರಾಘವೇಂದ್ರ ತಂತ್ರಿ, ಬೆಂಗಳೂರು ಕಹಾಮ ಮಾಜಿ ನಿರ್ದೇಶಕ ಡಾ.ಬಿ.ಪಿ. ಸುರೇಶ್, ಕರ್ನಾಟಕ ಹಾಲು ಮಹಾಮಂಡಳಿ ನಿರ್ದೇಶಕ ಬೆಳಪು ದೇವಿಪ್ರಸಾದ್ ಶೆಟ್ಟಿ, ದ.ಕ. ಹಾಲು ಉತ್ಪಾದಕರ ಒಕ್ಕೂಟದ ನಿರ್ದೇಶಕರಾದ ಸುಚರಿತಾ ಶೆಟ್ಟಿ, ಸುಧಾಕರ ಶೆಟ್ಟಿ, ಸವಿತಾ ಶೆಟ್ಟಿ, ನಂದಕುಮಾರ್, ಪ್ರಭಾಕರ್, ಶಿವಮೂರ್ತಿ, ಮಮತಾ ಶೆಟ್ಟಿ, ಹಾಲು ಉತ್ಪಾದಕರ ಒಕ್ಕೂಟ ಆಡಳಿತ ನಿರ್ದೇಶಕ ಜಯಕುಮಾರ್ ಉಪಸ್ಥಿತರಿದ್ದರು.

ಒಕ್ಕೂಟದ ಶೇಖರಣಾ ವಿಭಾಗದ ವ್ಯವಸ್ಥಾಪಕರಾದ ರವಿರಾಜ್ ಉಡುಪ ವಂದಿಸಿದರು. ಮಾರುಕಟ್ಟೆ ವಿಭಾಗದ ಉಪ ವ್ಯವಸ್ಥಾಪಕರಾದ ಜಾನೆಟ್ ರೊಸಾರಿಯೋ ಕಾರ್ಯಕ್ರಮ ನಿರೂಪಿಸಿದರು.

ಹೈನುಗಾರಿಕೆ ಕ್ಷೇತ್ರದ ಸಾಧಕರಿಗೆ ಸನ್ಮಾನ

ಕಾರ್ಯಕ್ರಮದಲ್ಲಿ ಹೈನುಗಾರಿಕೆ ಮೂಲಕ ಯಶಸ್ಸು ಕಾಂಡ ಸಾಧಕರನ್ನು ಸನ್ಮಾನಿಸಲಾಯಿತು.ಪಿಲಿಗೋಡು ಹಾಲು ಉತ್ಪಾದಕರ ಸಹಕಾರಿ ಸಂಘದ ಸದಸ್ಯೆ ಜಲೀಲಾ (ದಿನಕ್ಕೆ ಸರಾಸರಿ 407ಲೀಟರ್ ಹಾಲು), ಪಡುಮಾರ್ನಾಡು ಲಿಮಾಲ ಲಿನೆಟ್ ಗೊನ್ಸಾಲ್ವಿಸ್ (ದಿನಕ್ಕೆ ಸರಾಸರಿ 360ಲೀಟರ್), ಉಡುಪಿ ಹಿರಿಯ ಡ್ಕ ಸುಮಾ (ದಿನಕ್ಕೆ ಸರಾಸರಿ 352ಲೀಟರ್) ಇವರುಗಳನ್ನು ಗೌರವಿಸಲಾಯಿತು.



ಬ್ಯಾಂಕಾಕ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಮುಕ್ತ ಟೇಕ್ವಾಂಡೋ ಕ್ರೀಡಾಕೂಟದಲ್ಲಿ ಭಾರತ ತಂಡ ಪ್ರತಿನಿಧಿಸಿದ್ದ ಶಾರದಾ ವಿದ್ಯಾನಿಕೇತನ ಶಾಲೆಯ ಮಯಾನ್ ಸೆಟ್ಟಿ, ಜಶನ್ ಉತ್ತಯ್ಯ, ಪ್ರಜ್ವಲ್ ನಾಯ್ಕ್ ಜೂನಿಯರ್ ವಿಭಾಗದಲ್ಲಿ ತಲಾ ಒಂದೊಂದು ಚಿನ್ನ, ಕೆಡೆಟ್ ವಿಭಾಗದಲ್ಲಿ ಚಿನ್ಮಯ್ ಬಿ. ಆರ್. ಒಂದು ಚಿನ್ನ, ಸಮರ್ಥ್ ಜಿ. ಎ. ಮತ್ತು ವಿಹಾನ್ ಅನೀಶ್ ತಲಾ ಒಂದು ಬೆಳ್ಳಿ ಹಾಗೂ ತಮನ್ ಗಿರೀಶ್ ಒಂದು ಕಂಚಿನ ಪದಕ ಪಡೆದಿದ್ದು, ತರಬೇತುದಾರರಾಗಿ ಡಾ. ಗುರುರಾಜ್ ಇಟಗಿ ಹಾಗೂ ನಿರ್ವಾಹಕರಾಗಿ ದೀಪಾ ಶಂಕರ್ ಭಾಗವಹಿಸಿದ್ದಾರೆ. ಇವರನ್ನು ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಬಿ. ಪುರಾಣಿಕ್ ಅಭಿನಂದಿಸಿದ್ದಾರೆ.

ಮಂಗಳೂರಿನಲ್ಲಿ 14,520 ರೈತರು ನೋಂದಣಿಗೆ ಬಾಕಿ

ಬೆಳೆ ವಿಮೆ: 'ಕೇಂದ್ರ ರೈತ ಐಡಿ' ವಿತರಣೆ

ಮಂಗಳೂರು: ಕೇಂದ್ರ ಸರ್ಕಾರದ ಬರ ಪರಿಹಾರ, ಬೆಳೆವಿಮೆ ಹಾಗೂ ಪಿ.ಎಂ. ಕಿಸಾನ್ ಯೋಜನೆಯಡಿ ಸೌಲಭ್ಯಗಳನ್ನು ಪಡೆಯಲು ರಾಜ್ಯದ 'ಫ್ರೂಟ್ಸ್' ಮಾದರಿಯಂತೆಯೇ ಕೇಂದ್ರ ಸರ್ಕಾರವು 'ಕೇಂದ್ರ ರೈತ ಐಡಿ' ವಿತರಿಸುವ ಪ್ರಕ್ರಿಯೆಯನ್ನು ಆರಂಭಿಸಿದೆ.

ಮಂಗಳೂರು ತಾಲೂಕಿನಲ್ಲಿ ಒಟ್ಟು ಎಫ್.ಐ.ಡಿ ಹೊಂದಿರುವ 35,990 ರೈತರ ಪೈಕಿ ಇನ್ನು 14,520 ರೈತರು ನೋಂದಣಿಗೆ ಬಾಕಿ ಉಳಿದಿದ್ದಾರೆ. ರೈತರು ಮೊದಲು ಇ–ಕೆವೈಸಿ ಮಾಡಿಸಿ, ಬಳಿಕ ವಿದ್ಯುನ್ಮಾನ ಸಹಮತಿ ಪತ್ರ ನೀಡುವುದು ಕಡ್ಡಾಯವಾಗಿದೆ. ಇದರ ನಂತರವಷ್ಟೇ ಕೇಂದ್ರದ ರೈತ ಐಡಿ ಸೃಜನೆಯಾಗುತ್ತದೆ.

ಇನ್ನು ಕೆಲವೇ ದಿನಗಳಲ್ಲಿ ಈ ನೋಂದಣಿ ಪ್ರಕ್ರಿಯೆಯು ಮುಕ್ತಾಯಗೊಳ್ಳಲಿದ್ದು, ಕೃಷಿ ಜಮೀನು ಹೊಂದಿರುವ ತಾಲೂಕಿನ ಎಲ್ಲಾ ರೈತರು ಕೇಂದ್ರ ರೈತ ಐಡಿ ಮಾಡಿಕೊಳ್ಳುವುದು ಕಡ್ಡಾಯವಾಗಿದೆ.

ನೋಂದಣಿಗೆ ಏನೇನು ಬೇಕು?

ರೈತ ಐಡಿ ಮಾಡಿಕೊಳ್ಳಲು ಪಹಣಿ ಪತ್ರ, ರೈತರ ಆಧಾರ್ ಕಾರ್ಡ್, ಆಧಾರ್ ಕಾರ್ಡ್ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆ, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಇತ್ಯಾದಿ ಅವಶ್ಯಕ.

ರೈತರು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ, ಗ್ರಾಮ ಒನ್ ಕೇಂದ್ರ, ಕಂದಾಯ ಅಥವಾ ತೋಟಗಾರಿಕೆ ಇಲಾಖೆಯ ಕಚೇರಿಗಳನ್ನು ಸಂಪರ್ಕಿಸಿ ಅಗತ್ಯ ದಾಖಲೆಗಳೊಂದಿಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು.

ಈ ಪ್ರಕ್ರಿಯೆಯು ಪೂರ್ಣಗೊಳ್ಳಲು ಒಟ್ಟು 3 ಬಾರಿ ಒಟಿಪಿ ಪಡೆಯಲಾಗುತ್ತದೆ. ಹಾಗಾಗಿ ರೈತರು ಆಧಾರ್ ಸಂಖ್ಯೆಗೆ ಜೋಡಣೆ ಯಾಗಿರುವ ಮೊಬೈಲ್ ಫೋನ್‌ನೊಂದಿಗೆ ನೋಂದಣಿ ಸಮಯದಲ್ಲಿ ಖುದ್ದಾಗಿ ಹಾಜರಿರಬೇಕು.

'ಅಗ್ರಿಸ್ಟಾಕ್' ಉಪಕ್ರಮದ ಪ್ರಯೋಜನ

ಕೇಂದ್ರ ರೈತ ಐಡಿಯು ರೈತರ ಆಧಾರ್ ಮತ್ತು ಭೂದಾಖಲೆ ಗಳೊಂದಿಗೆ ನೇರವಾದ ಸಂಪರ್ಕವನ್ನುಹೊಂದಿರುತ್ತದೆ.ಕೇಂದ್ರಸರ್ಕಾರದ 'ಅಗ್ರಿಸ್ಟಾಕ್' ಉಪಕ್ರಮದ ಭಾಗವಾಗಿರುವ ಈ ಡಿಜಿಟಲ್ ಐಡಿಯು ರೈತರ ಭೂದಾಖಲೆಗಳು, ಆಧಾರ್ ಮತ್ತು ಬ್ಯಾಂಕ್ ವಿವರಗಳನ್ನು ಒಂದೇ ದತ್ತಸಂಚಯದಲ್ಲಿಸಂಯೋಜಿಸುತ್ತದೆ. ಇದರಿಂದ ಅರ್ಹ ಫಲಾನುಭವಿಗಳನ್ನು ಗುರುತಿಸಿ, ನೇರವಾಗಿ ರೈತರ ಖಾತೆಗೆ ಹಣ ವರ್ಗಾಯಿಸಲು ಸಾಧ್ಯವಾಗುತ್ತದೆ.

ಒಂದು ವೇಳೆ ರೈತರು ಈ ಐಡಿಯನ್ನು ಹೊಂದಿಲ್ಲದಿದ್ದರೆ, ಮುಂಬರುವ ದಿನಗಳಲ್ಲಿ ಅವರಿಗೆ ಕಿಸಾನ್ ಸಮ್ಮಾನ್ ನಿಧಿ ಸೇರಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡುವ ಎಲ್ಲಾ ಸವಲತ್ತುಗಳು ರದ್ದಾಗುವ ಸಾಧ್ಯತೆಯಿದೆ. ಆದ್ದರಿಂದ, ಕೇಂದ್ರ ಐಡಿ ಮಾಡಿಸಲು ಬಾಕಿ ಇರುವ ಎಲ್ಲಾ ರೈತರು ಆದಷ್ಟು ಶೀಘ್ರ ಮಾಡಿಕೊಳ್ಳುವಂತೆ ಕೃಷಿ ಇಲಾಖಾ ಅಧಿಕಾರಿಗಳು ತಿಳಿಸಿದ್ದಾರೆ.

ಕರಾವಳಿಯಲ್ಲಿ 1.18 ಲಕ್ಷ ಮಂದಿ ಬಾಕಿ

ಕೇಂದ್ರ ರೈತ ಐಡಿ (ಎಫ್‌ಐಡಿ) ನೋಂದಣಿಯಲ್ಲಿ ಕರಾವಳಿ ಭಾಗದಲ್ಲಿ 1.18 ಲಕ್ಷ ಮಂದಿ ಬಾಕಿ ಉಳಿದಿದ್ದಾರೆ. ದ. ಕ. ಜಿಲ್ಲೆಯಲ್ಲಿ ಇದುವರೆಗೆ 1,39,119 ಮಂದಿ ಐಡಿ ಮಾಡಿಸಿಕೊಂಡಿದ್ದು, 69,526 ಮಂದಿ ಬಾಕಿ ಇದ್ದಾರೆ. ಉಡುಪಿ ಜಿಲ್ಲೆಯಲ್ಲಿ 1,29,619 ಮಂದಿ ಐಡಿ ಮಾಡಿಸಿದ್ದು, 49,163 ಮಂದಿಯದ್ದು ಬಾಕಿ ಇದೆ.

ರೈತರು ಇ–ಕೆವೈಸಿ ಮಾಡಿಸಿಕೊಳ್ಳಲು ಸೂಚನೆ

ಸುಳ್ಯ: ರೈತ ನೋಂದಣಿ (ಫ್ರುಟ್ ಐಡಿ) ಹೊಂದಿರುವ ರೈತರು ಸೆಂಟ್ರಲ್ ಐಡಿ (ಸಿಐಡಿ) ಇ-ಕೆವೈಸಿ ಮಾಡಲು ಕಡ್ಡಾಯವಾಗಿದ್ದು ಮಾಡದೇ ಹೋದಲ್ಲಿ ಮುಂದೆ ತಮಗೆ ಸರಕಾರದಿಂದ ಸಿಗುವ ಸೌಲಭ್ಯಗಳಿಂದ ವಂಚಿತರಾಗಬಹುದಾಗಿದ್ದು ಎಲ್ಲಾ ರೈತರು ಈ ಕೆವೈಸಿ ಮಾಡಿಸುವಂತೆ ಸುಳ್ಯ ಕೃಷಿ ಇಲಾಖೆ ಉಪ ನಿರ್ದೇಶಕ ಗುರುಪ್ರಸಾದ್ ಎಂ.ಎಸ್. ತಿಳಿಸಿದ್ದಾರೆ.

ಸುಳ್ಯ ತಾಲೂಕಿನಲ್ಲಿ 7962 ರೈತ ಫಲಾನುಭವಿಗಳು ಈ ಕೆವೈಸಿ ಮಾಡಿಸಿಕೊಳ್ಳದೇ ಇದ್ದು ಅಂತಹ ರೈತರು ರೈತ ಸಂಪರ್ಕ ಕೇಂದ್ರ ಸುಳ್ಯ ಹಾಗೂ ಪಂಜ ಮತ್ತು ತೋಟಗಾರಿಕಾ ಇಲಾಖೆ ಸುಳ್ಯ ಇಲ್ಲಿಗೆ ಭೇಟಿ ಸೆಂಟ್ರಲ್ ಐಡಿ (ಸಿಐಡಿ) ಇ ಕೆವೈಸಿ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

ತಾಲೂಕಿನ ಗ್ರಾಮವಾರು ವಿವರಗಳು ಈ ಕೆಳಗಿನಂತಿವೆ.: ಅಜ್ಜಾವರ 553, ಆಲೆಟ್ಟಿ 419, ಐವರ್ನಾಡು 422, ಅರಂತೋಡು 258, ಅಮರಮುಡ್ನೂರು 341, ಅಮರಪಡ್ನೂರು 173, ಬಾಳಿಲ 130, ಮುಪ್ಪೇರ್ಯ 136, ಕೊಡಿಯಾಳ 191, ಕಳಂಜ 147, ಮರ್ಕಂಜ 304, ನೆಲ್ಲೂರು ಕೆಮ್ರಾಜೆ 192, ಮಡಪ್ಪಾಡಿ 144, ಮಂಡೆಕೋಲು 311, ಪೆರುವಾಜೆ 175, ಬೆಳ್ಳಾರೆ 235, ತೊಡಿಕಾನ 90, ಸುಳ್ಯ ಕಸಬ 494, ಸಂಪಾಜೆ 274, ಉಬರಡ್ಕ ಮಿತ್ತೂರು 267, ಕನಕಮಜಲು 157, ಜಾಲ್ಸೂರು 416, ಗುತ್ತಿಗಾರು 287, ನಾಲ್ಕೂರು 257, ಹರಿಹರ 119, ಕಲ್ಮಕಾರು 104, ಪಂಜೆತ್ತಾಡಿ 136, ಕಲ್ಮಡ್ಕ 197, ಕೊಲ್ಲಮೊಗರು 183, ಐವತ್ತೊಕ್ಲು 164, ಕೂತ್ಕುಂಜ 113, ಮುರುಳ್ಯ 222, ದೇವಚಳ್ಳ 206, ಬಾಳುಗೋಡು 116 ಹೀಗೆ ಒಟ್ಟು 7692 ಫಲಾನುಭವಿಗಳು ಇ-ಕೆವೈಸಿ ನಡೆಸದೇ ಇದ್ದು ಕಡ್ಡಾಯವಾಗಿ ಇ-ಕೆವೈಸಿ ನಡೆಸುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಆಳ್ವಾಸ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಯತಿಕುಮಾರಸ್ವಾಮಿ ಗೌಡ ಅವರಿಗೆ, ಕರ್ನಾಟಕ ಶುಶ್ರೂಷಕ ಶಿಕ್ಷಕರ ಸಂಘ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಹಮ್ಮಿಕೊಂಡ ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯಲ್ಲಿ 'ಅತ್ಯುತ್ತಮ ನರ್ಸ್ ಎಜುಕೇಟರ್ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಸಮಾರಂಭದಲ್ಲಿ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿವಿಯ ಕುಲಪತಿ ಡಾ. ಭಗವಾನ್ ಬಿ.ಸಿ. ಉಪಸ್ಥಿತರಿದ್ದರು.

ಮಂತ್ರಿ ಸ್ಥಾನದ ಕುರಿತು ಸ್ಪೀಕರ್ ಯು.ಟಿ. ಖಾದರ್
ಕೊಟ್ಟ ಜವಾಬ್ದಾರಿ ನಿರ್ವಹಿಸುವೆ

ಮಂಗಳೂರು: ಸರ್ಕಾರ ಕೊಟ್ಟ ಜವಾಬ್ದಾರಿ ನಿರ್ವಹಿಸುತ್ತೇನೆ ಎಂದು ಸ್ಪೀಕರ್ ಯು.ಟಿ. ಖಾದರ್ ತಿಳಿಸಿದ್ದಾರೆ.

ಮಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಸ್ಪೀಕರ್ ಆಗಿಯೇ ಇದ್ದೇನೆ, ನಾನು ಯಾವುದೇ ಮಂತ್ರಿ ಸ್ಥಾನದ ಆಕಾಂಕ್ಷಿಯಲ್ಲ. ಯಾರಿಗೆ ಯಾವ ಸ್ಥಾನ ಕೊಡಬೇಕು ಎಂಬುದು ಸರ್ಕಾರಕ್ಕೆ ಹಾಗೂ ಪಕ್ಷಕ್ಕೆ ಬಿಟ್ಟ ವಿಚಾರ. ಕೊಟ್ಟರೆ ಮಂತ್ರಿ, ಇಲ್ಲದಿದ್ದರೆ ಸ್ಪೀಕರ್, ಅದಿಲ್ಲದಿದ್ದರೆ ಶಾಸಕನಾಗಿ ಜವಾಬ್ದಾರಿ ನಿರ್ವಹಿಸುವೆ ಎಂದರು.

2023ರಲ್ಲಿ ಮಂತ್ರಿ ಸ್ಥಾನದ ಲಿಸ್ಟ್‌ನಲ್ಲಿ ನನ್ನ ಹೆಸರಿದೆ ಎಂದು ಇತ್ತು. ಆದರೆ ಬಳಿಕ ಸಭಾಧ್ಯಕ್ಷ ಸ್ಥಾನ ಕೊಟ್ಟಿದ್ದಾರೆ. ಅದನ್ನು ಯಾವುದೇ ಚರ್ಚೆ ಇಲ್ಲದೆ ತೆಗೆದುಕೊಂಡು ನಿಷ್ಠೆಯಿಂದ ನಿಭಾಯಿಸಿದ್ದೇನೆ. ನನಗೆ ಪೋಸ್ಟ್ ಮುಖ್ಯವಲ್ಲ ಎಂದರು. ಜಮೀರ್ ಅಹ್ಮದ್ ಆಡಿಯೋ ವೈರಲ್ ಬಗ್ಗೆ ಮಾಧ್ಯಮದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈಗ ನಾನು ಇದರ ಬಗ್ಗೆ ಮಾತನಾಡುವುದಿಲ್ಲ. ಸಭಾಧ್ಯಕ್ಷ ಸ್ಥಾನ ಬಿಟ್ಟು ಬಂದ ಬಳಿಕ ರಾಜಕೀಯ ವಿಚಾರದ ಬಗ್ಗೆ ಮಾತನಾಡುತ್ತೇನೆ ಎಂದರು. ಪಕ್ಷ ಸೂಚಿಸಿದಲ್ಲಿ ಸ್ಪೀಕರ್ ಸ್ಥಾನಕ್ಕೆ ರಾಜಿನಾಮೆ ನೀಡುತ್ತೇನೆ. ಆದರೆ ರಾಜಿನಾಮೆ ನೀಡುವಂತೆ ನನಗೆ ಯಾವ ಸೂಚನೆ ಈವರೆಗೆ ಸಿಕ್ಕಿಲ್ಲ. ಸ್ಪೀಕರ್ ಆಗಿ ನಾನು ಸಂತೋಷದಿಂದ್ದೇನೆ. ಶಾಸಕನಾದವ ಒಮ್ಮೆಯಾದರೂ ಜೀವನದಲ್ಲಿ ಸ್ಪೀಕರ್ ಆಗಬೇಕು. ನಮ್ಮನ್ನು ಇಷ್ಟು ಬೆಳೆಸಿದ್ದು ಪಕ್ಷ, ಕಾರ್ಯಕರ್ತರು, ಮತದಾರರು ಯು.ಟಿ. ಖಾದರ್ ಹೇಳಿದರು.

ರಾಷ್ಟ್ರೀಯ ಇ ವಿಧಾನ್

ವಿಧಾನಪರಿಷತ್ ಕಲಾಪಗಳನ್ನುಸಂಪೂರ್ಣವಾಗಿಕಾಗದ ರಹಿತವಾಗಿ ಡಿಜಿಟಲೀಕರಣ ಮಾಡುವ ಯೋಜನೆಯಂತೆ ಕೇಂದ್ರ ಸರ್ಕಾರದ ರಾಷ್ಟ್ರೀಯ ಇ ವಿಧಾನ್ ಅಪ್ಲಿಕೇಷನ್ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು. ಮುಂದಿನ ಆರು ತಿಂಗಳಲ್ಲಿ ಈ ಡಿಜಿಟಲೀಕರಣ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ವಿಧಾನ ಮಂಡಲದ ಡಿಜಿಟಲೀಕರಣ ಯೋಜನೆ ಡಿಪಿಆರ್ ಹಂತದಲ್ಲಿದ್ದು, ಅನುಷ್ಠಾನದ ಬಳಿಕ ಉಭಯ ಸದನಗಳ ಶಾಸಕರಿಗೆ ಅದರ ಬಳಕೆ ಬಗ್ಗೆ ತರಬೇತಿ ನೀಡಲಾಗುವುದು ಎಂದರು.

ಕಿರು ಸುದ್ದಿ

ಮುಚ್ಚಿದ ಆರಿಕ್ಕಾಡಿ ಟೋಲ್ ಪ್ಲಾಜಾದಿಂದ 2.71 ಕೋಟಿ ರೂ.ಗಳಿಗೂ ಹೆಚ್ಚು ಹಣ ಸಂಗ್ರಹ: ಮಾಹಿತಿ ಬಹಿರಂಗ

ಕುಂಬಳೆ: ಆರಿಕ್ಕಾಡಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದ ಪ್ರತಿಭಟನೆಯ ನಂತರ ಮುಚ್ಚಲ್ಪಟ್ಟ ಟೋಲ್ ಪ್ಲಾಜಾ ದಿಂದ 24 ದಿನಗಳಲ್ಲಿ 2.71 ಕೋ.ರೂ.ಗಳಿಗೂ ಹೆಚ್ಚು ಹಣ ಸಂಗ್ರಹವಾಗಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ್ದ ಅರ್ಜಿಯಲ್ಲಿ ಟೋಲ್ ಪ್ಲಾಜಾ ನಿರ್ಮಾಣಕ್ಕೆ 2.15 ಕೋ.ರೂ.ಗಳನ್ನು ಖರ್ಚು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಜನವರಿ 12 ರಿಂದ ಫೆಬ್ರವರಿ 4 ರ ವರೆಗೆ ಟೋಲ್ ಸಂಗ್ರಹವನ್ನು ನಡೆಸಲಾಯಿತು. ಇದರಲ್ಲಿ ಫಾಸ್ಟ್ ಟ್ಯಾಗ್ ಮೂಲಕ 2.7 ಕೋಟಿ ರೂ.ಗಳು, ಯುಪಿಐ ಮತ್ತು ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಮೂಲಕ 26,000 ರೂ.ಗಳು ಮತ್ತು 1.1 ಲಕ್ಷ ರೂ.ಗಳನ್ನು ನಗದು ರೂಪದಲ್ಲಿ ಸಂಗ್ರಹಿಸಲಾಗಿದೆ. ಒಟ್ಟು 2,71,36,000 ರೂ. ಸಂಗ್ರಹವಾಗಿದೆ ಎಂದು ದಾಖಲೆ ಹೇಳುತ್ತಿದೆ. ಟೋಲ್ ಪ್ಲಾಜಾವನ್ನು ಆಧುನಿಕ ರೀತಿಯಲ್ಲಿ ನಿರ್ಮಿಸಲು , ಕ್ಯಾಮೆರಾ ಗಳನ್ನು ಅಳವಡಿಸಲು 2.15 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ ಎಂದು ದಾಖಲೆಯಲ್ಲಿ ವಿವರಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಣ್ಣೂರು ಯೋಜನಾ ಅನುಷ್ಠಾನ ಘಟಕದಿಂದ ಪಡೆದ ದಾಖಲೆಯಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ. ಕುಂಬಳೆ ಆರಿಕ್ಕಾಡಿಯಲ್ಲಿ ಜನಪ್ರತಿನಿಧಿಗಳು ಮತ್ತು ಸ್ಥಳೀಯರು ರಚಿಸಿದ ಕ್ರಿಯಾ ಸಮಿತಿಯು ಟೋಲ್ ಪ್ಲಾಜಾ ವಿರುದ್ಧ ತೀವ್ರ ಪ್ರತಿಭಟನೆ ನಡೆಸಿತ್ತು. ಈ ಬಗ್ಗೆ ನ್ಯಾಯಾಲಯದಲ್ಲಿ ಅರ್ಜಿಗಳು ಸಲ್ಲಿಕೆಯಾಗಿದ್ದವು. ತಾತ್ಕಾಲಿಕ ಟೋಲ್ ಪ್ಲಾಜಾ ವಿರುದ್ಧ ವ್ಯಾಪಕ ಸಾರ್ವಜನಿಕ ಪ್ರತಿಭಟನೆ ವ್ಯಕ್ತವಾಯಿತು. ಇದರ ನಂತರ ತಾತ್ಕಾಲಿಕ ಟೋಲ್ ಪ್ಲಾಜಾವನ್ನು ಮುಚ್ಚಲಾಯಿತು.

ನಗದು ಕಳವು: ದೂರು

ಮಂಗಳೂರು: ಕದ್ರಿ ಮಲ್ಲಿಕಟ್ಟೆಯ ವಾಣಿಜ್ಯ ಸಂಕೀರ್ಣದಲ್ಲಿರುವ ಅಂಗಡಿಯೊಂದಕ್ಕೆ ನುಗ್ಗಿದ ಕಳ್ಳರು ಅಂಗಡಿಯಲ್ಲಿದ್ದ ಸುಮಾರು 28 ಸಾವಿರ ನಗದು ದೋಚಿದ ಘಟನೆ ನಡೆದಿದೆ. ಸ್ಟಾರ್ಟ್ ಟೆಕ್ ಸೊಲ್ಯೂಷನ್ಸ್ ಎಂಬ ಹೆಸರಿನ ಕಂಪ್ಯೂಟರ್ ಸೇಲ್ಸ್ ಮತ್ತು ರಿಪೇರಿ ಮಳಿಗೆಯಿಂದ ಈ ಕಳ್ಳತನ ನಡೆದಿದೆ. ಈ ಬಗ್ಗೆ ಕದ್ರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಂಗಡಿ ಮಾಲಕ ರಜನೀಶ್ ಕೆ. ಅವರು ಮೇ 30ರಂದು ರಾತ್ರಿ 11.30ಕ್ಕೆ ಅಂಗಡಿಗೆ ಬೀಗ ಹಾಕಿ ಮನೆಗೆ ತೆರಳಿದ್ದಾರೆ. ಜೂ.1ರಂದು ಬೆಳಗ್ಗೆ 8.45ಕ್ಕೆ ಅವರ ಸಹಾಯಕ ಪೂಜಿತ್ ಎಂಬವರು ಅಂಗಡಿ ತೆರೆಯಲೆಂದು ಬಂದಾಗ ಶಟರ್ ಬೀಗ ಮುರಿದಿರುವುದು ಕಂಡು ಬಂದಿದೆ. ಪೊಲೀಸರು ಕಳ್ಳರ ಪತ್ತೆಗೆ ಕಾರ್ಯಾಚರಣೆ ಆರಂಭಿಸಿದ್ದಾರೆ.

ವ್ಯಕ್ತಿ ನಾಪತ್ತೆ

ಉಡುಪಿ: ಬ್ರಹ್ಮಾವರ ಹೊಸಾಳ ಗ್ರಾಮದ ಬಾರ್ಕೂರು ನಿವಾಸಿ ಪ್ರತಾಪ್ ಶೆಟ್ಟಿ(42) ಎಂಬವರು ಏಪ್ರಿಲ್ 7 ರಂದು ಬೆಂಗಳೂರಿಗೆ ಕೆಲಸಕ್ಕೆ ಹೋಗುತ್ತೇನೆಂದು ಹೇಳಿ ಹೋದವರು ಬೆಂಗಳೂರಿಗೆ ಹೋಗದೆ ಏಪ್ರಿಲ 13 ರಂದು ಕಾಡೂರು ಹೊಳೆ ಬದಿ ಉಡುಪುಗಳು ಹಾಗೂ ಮೊಬೈಲ್ ಬಿಟ್ಟು ನಾಪತ್ತೆಯಾಗಿರುತ್ತಾರೆ.ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಬ್ರಹ್ಮಾವರ ಪೊಲೀಸ್ ಠಾಣೆ ದೂ.ಸಂ: 0820-2461044, 9480805453 ಅನ್ನು ಸಂಪರ್ಕಿಸುವಂತೆ ಬ್ರಹ್ಮಾವರ ಪೊಲೀಸ್ ಠಾಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ಮೋಹನ್‌ದಾಸ್ ಕಾಮತ್

ಕಾಸರಗೋಡು: ನಗರದ ಎಸ್‌ವಿಟಿ ಕ್ರಾಸ್ ರಸ್ತೆ ಬಳಿಯ ಗಣೇಶ್ ಕೃಪಾದ ಮೋಹನ್‌ದಾಸ್ ಕಾಮತ್ (65) ಮಂಗಳವಾರ ಬೆಳಗ್ಗೆ ನಿಧನ ಹೊಂದಿದರು. ಕುಸಿದು ಬಿದ್ದ ಅವರನ್ನು ಕೂಡಲೇ ಆಸ್ಪತ್ರೆಗೆ ತಲುಪಿಸಿದರೂ ಜೀವ ರಕ್ಷಿಸಲಾಗಲಿಲ್ಲ. ಅವರು ಕಾಸರಗೋಡು ಬೀಚ್ ರಸ್ತೆಯ ಶ್ರೀರಾಮ್ ಲಂಚ್ ಹೋಂನ ಮಾಲಕರಾಗಿದ್ದರು. ಮೃತರು ಪತ್ನಿ ಪದ್ಮಾ ಕಾಮತ್, ಮಕ್ಕಳಾದ ವಿಘ್ನೇಶ್, ವಿನುತಾ ಅವರನ್ನು ಅಗಲಿದ್ದಾರೆ.

ಲಕ್ಷ್ಮೀನಾರಾಯಣ ರಾವ್



ಕಿನ್ನಿಗೋಳಿ : ಪಕ್ಷಿಕೆರೆ ಪಂಜ ಕೊಯಿಕುಡೆ ಲಕ್ಷ್ಮೀನಾರಾಯಣ ರಾವ್ (94) ಸೋಮವಾರ ರಾತ್ರಿ ನಿಧನರಾದರು. ಕೃಷಿಕರಾಗಿದ್ದ ಮೃತರು ಇಬ್ಬರು ಗಂಡು, ಮೂವರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಮೃತರ ಇಚ್ಛೆಯಂತೆ ಅವರ ಎರಡು ಕಣ್ಣುಗಳನ್ನು ಪ್ರಸಾದ್ ನೇತ್ರಾಲಯಕ್ಕೆ ದಾನ ಮಾಡಲಾಯಿತು.

ಸದಾಶಿವ ಶೆಟ್ಟಿ

ಕಿನ್ನಿಗೋಳಿ : ಪಕ್ಷಿಕೆರೆ ಪಂಜ ನಿವಾಸಿ ಸದಾಶಿವ ಶೆಟ್ಟಿ (68) ತಾ. 24 ರಂದು ನಿಧನರಾದರು. ಮೂವರು ಗಂಡು, ಒಬ್ಬ ಹೆಣ್ಣು ಮಗಳನ್ನು ಅಗಲಿದ್ದಾರೆ. ಮೃತರು ಪಕ್ಷಿಕೆರೆ ಪರಿಸರದಲ್ಲಿ ವಿವಿಧ ಮೇಳಗಳ ಬಯಲಾಟಗಳನ್ನು ಸಂಘಟಿಸುತ್ತಿದ್ದರು.

ಸಿದ್ಧಾಂಕುರ ಹರ್ಬಲ್ಸ್ : ಲಾಯಿಲ ಗ್ರಾಮದ ಗುರಿಂಗಾನದಲ್ಲಿದೆ ಪಾರಂಪರಿಕ ನೆಲೆಯ ಸಂಶೋಧನಾ ಕೇಂದ್ರ
ಕೃಷಿ-ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಯತ್ನ

ದಕ್ಷಿಣ ಕನ್ನಡ, ಉತ್ತರ ಕನ್ನಡ, ಮಲೆನಾಡು ಭಾಗಗಳ ಬದುಕಿನ ಜೀವನಾಡಿ ಅಡಿಕೆ. ಆದರಿಂದು ಎಲೆ ಚುಕ್ಕಿ ರೋಗ, ಹಳದಿ ರೋಗ ...ಹೀಗೆ ಅಡಿಕೆಗೆ ಬಂದ ರೋಗದಿಂದ ಬೆಳೆಗಾರರು ಕಂಗೆಟ್ಟುಹೋಗಿದ್ದಾರೆ. ತಲೆಮಾರುಗಳಿಂದ ನಡೆಸಿಕೊಂಡು ಬರುತ್ತಿದ್ದ ಎಕರೆಗಟ್ಟಲೆ ಅಡಿಕೆತೋಟಗಳು ಇಂದು ನೋಡ ನೋಡುತ್ತಿದ್ದಂತೆಯೇ ಸೊರಗಿ ಕೃಷಿಕರು ಕಂಗಾಲಾಗಿದ್ದಾರೆ.



ಬೆಳ್ತಂಗಡಿ ತಾಲೂಕಿನ ಲಾಯಿಲ ಗ್ರಾಮದ ಗುರಿಂಗಾನದಲ್ಲಿ ಕೇಂದ್ರ ಹೊಂದಿರುವ ವನಸ್ಪತಿ ಮೂಲಿಕೆಗಳಿಂದ ಕೂಡಿರುವಂತಹ ವಿಷಯಗಳಲ್ಲಿ ಪಾರಂಪರಿಕ ಅಧ್ಯಯನ ಮಾಡಿ ತಯಾರಿಸಿರುವ ಉತ್ಪನ್ನಗಳು ಕೃಷಿಯಲ್ಲಿ ಎದುರಾಗುವ ರೋಗ ಸಮಸ್ಯೆಗಳಿಗೆ ,ಅದರಲ್ಲೂ ಅಡಿಕೆ ಬೆಳೆಗಾರರನ್ನು ಕಾಡುವ ಸಮಸ್ಯೆಗಳಿಗೆ ಒಂದು ಆಶಾವಾದವಾಗಿ ಗೋಚರಿಸುತ್ತಿದೆ ಎಂದರೆ ತಪ್ಪಾಗದು.

ಇಲ್ಲಿ ವಿಶೇಷವಾಗಿ ಕೃಷಿ, ಆರೋಗ್ಯ ಮತ್ತು ಪಶು ಸಂಬಂಧಿತ ಆರೋಗ್ಯ ಸಮಸ್ಯೆಗಳಿಗೆ ಪರಿಹಾರವಾಗಿ ಪಾರಂಪರಿಕ ಅಧ್ಯಯನಗಳನ್ನು ನಡೆಸಿ ತಯಾರಿಸಿದ ಉತ್ಪನ್ನಗಳು ಅನೇಕ ಕೃಷಿಕರಿಗೆ ವರದಾನವಾಗಿ ಮೂಡಿಬಂದಿದೆ. ಕೃಷಿ ಯಲ್ಲಿ ಅದರಲ್ಲೂ ಇಂದು ಅಡಿಕೆ ಕೃಷಿಯಲ್ಲಿ ಕಂಡುಬರುತ್ತಿರುವ ಎಲೆ ಚುಕ್ಕಿ ರೋಗ, ಶಿಲೀಂದ್ರ ಬಾಧೆ, ಕೊಳೆರೋಗ, ಹುಳಬಾಧೆ, ಎಲೆ ಹಳದಿಯಾಗುವಂತಹ ರೋಗಗಳಿಗೆ ಇವರು ಕಂಡುಕೊಂಡ ಔಷಧೋಪಚಾರ ಒಂದಷ್ಟು ಭರವಸೆ ಮೂಡಿಸಿದೆ.

ರೈತರ ತೋಟಗಳು ಎಲೆ ಚುಕ್ಕಿರೋಗ, ಎಲೆ



ಹಳದಿ ರೋಗಕ್ಕೆ ಸಿಲುಕಿ ಬದುಕೇ ಅತಂತ್ರವಾಗುತ್ತಿದೆ. ಈ ಸಮಸ್ಯೆ ಪರಿಹಾರಕ್ಕೆ ನಿರಂತರ ಪ್ರಯತ್ನಗಳನ್ನು ನಡೆಸಲಾಗುತ್ತಿದ್ದರೂ, ಇನ್ನೂ ಯಾವುದೇ ಒಂದು ಸಾಂಸ್ಥಿಕ -ಶಾಶ್ವತ ಪರಿಹಾರ ಲಭಿಸಿಲ್ಲ. ಇಂತಹ ಸನ್ನಿವೇಶದಲ್ಲಿ ಕೃಷಿಕರೇ ಅಲ್ಲಲ್ಲಿ ತಮ್ಮದೇ ಆದ ಪಾರಂಪರಿಕ ಪ್ರಯೋಗಗಳನ್ನು ನಡೆಸಿ ಕೆಲವೆಡೆ ಯಶಸ್ವಿಯೂ ಆಗಿದ್ದಾರೆ. ಈ ಸಂದರ್ಭದಲ್ಲೇ ಗುರಿಂಗಾನದ ಆಕ್ಯುಪ್ರೆಶರ್ ತಜ್ಞ ಹಾಗೂ ನಾಟಿ ವೈದ್ಯರಾಗಿರುವ ಮೋಹನ್ ಶರ್ಮ ಅವರು ಪಾರಂಪರಿಕವಾಗಿ ಅಭಿವೃದ್ಧಿಪಡಿಸಿರುವ ಸಿದ್ಧಾಂಕುರ ಬಯೋ ಆಯಿಲ್ ಎನ್ನುವ ತೈಲ ಮಿಶ್ರಣ ಆಧಾರಿತ ಔಷಧವನ್ನು ಈಗ ಅನೇಕ ಕೃಷಿಕರು ಬಳಸಿ ಪ್ರಯೋಜನ ಕಂಡುಕೊಂಡಿದ್ದಾರೆ.

ಔಷಧೋಪಚಾರ ಹೇಗೆ ?

ಈಗಾಗಲೇ ಅನೇಕ ಅಡಿಕೆ ತೋಟಗಳಲ್ಲಿ ಇವರ ಅಡ್ಡಪರಿಣಾಮವಿಲ್ಲದ ಔಷಧೋಪಚಾರವನ್ನು ಪ್ರಯೋಗಿಸಿದ್ದು, ಅನೇಕ ಅಡಿಕೆ ಬೆಳೆಗಾರರು ತಮ್ಮ ತೋಟಗಳನ್ನು ಮೊದಲಿನ ಸ್ಥಿತಿಗೆ ತರುವಲ್ಲಿ ಸಫಲತೆ ಕಂಡಿದ್ದಾರೆ. ಇವರು ತಯಾರಿಸಿದ ಕೈಬೇವು,ಗಿಡ ಮೂಲಿಕೆಗಳು, ಪಂಚಗವ್ಯ ಸೇರಿದಂತೆ ಸಂಪೂರ್ಣ ವನಸ್ಪತಿ ಆಧಾರಿತ ಸಿದ್ಧಾಂಕುರ ಬಯೋ ಆಯಿಲ್ ಎಂಬ ತೈಲ ಮಿಶ್ರಣ ಆಧಾರಿತ ಔಷಧವನ್ನು ಅಡಿಕೆ ಬೆಳೆಗಾರರು ತಾವು ಬಿಡುವ ಬೋರ್ಡೋ ದ್ರಾವಣದೊಂದಿಗೆ ಮಿಶ್ರ ಮಾಡಿ ಬಿಡಬಹುದಾಗಿದೆ. ಬಯೋಫೈಟ್‌ನೊಂದಿಗೂ ಇದನ್ನು ಸೇರಿಸಿ ಬಿಡಬಹುದಾಗಿದೆ.ಕೈಗೆಟಕುವ ಬೆಲೆಯಲ್ಲಿ ಈ ಔಷಧ ದ್ರಾವಣ ಲಭ್ಯವಿದೆ.

ಈಗಾಗಲೇ ಬಿಳಿಮಲೆ, ಬೆಳ್ತಂಗಡಿ, ಚಾರ್ಮಾಡಿ,ಕನ್ಯಾನ ಸೇರಿದಂತೆ ಅನೇಕ ಕಡೆಗಳಲ್ಲಿನ ತೋಟಗಳಿಗೆ ಈ ಔಷಧವನ್ನು ಬಳಸಲಾಗಿದ್ದು ಉತ್ತಮ ಫಲಿತಾಂಶ ಲಭಿಸಿದೆ. ಎರಡರಿಂದ ಮೂರು ಬಾರಿ ಇದನ್ನು ಪ್ರಯೋಗಿಸಬೇಕಾಗಿದ್ದು, ಇದರಿಂದ ರೋಗ ಉಪಶಮನ ಕಂಡುಬಂದಿರುವುದನ್ನು ಹಲವು ರೈತರು ತಿಳಿಸಿದ್ದಾರೆ. ಸುಳ್ಯ ತಾಲೂಕಿನ ಕರ್ಮಕಾರ್ ಗ್ರಾಮದ ಉದಯ ಬಿಳಿಮಲೆ ಸೇರಿದಂತೆ ಅನೇಕ ರೈತರು ಈ ಔಷಧ ಪ್ರಯೋಗ ನಡೆಸಿದ್ದು, ಉತ್ತಮ ಫಲಿತಾಂಶ ಪಡೆದಿರುವುದನ್ನು ತಿಳಿಸಿದ್ದಾರೆ. ಮೋಹನ್ ಶರ್ಮ ಅವರು ಸಿದ್ಧಾಂಕುರ ಹರ್ಬಲ್ಸ್‌ನ ವತಿಯಿಂದ ಹಲವೆಡೆ ಕೃಷಿ ಮತ್ತು ಆರೋಗ್ಯ ಶಿಬಿರಗಳನ್ನು ನಡೆಸುತ್ತಿದ್ದು, ಅನೇಕರು ಇದರ ಪ್ರಯೋಜನಗಳನ್ನು ಪಡೆದುಕೊಂಡಿದ್ದಾರೆ.

ಪಶು ಆರೋಗ್ಯ ಸಮಸ್ಯೆಗೂ ಚಿಕಿತ್ಸೆ ಲಭ್ಯ

ಅನುಭವೀ ಆಕ್ಯುಪ್ರೆಶರ್ ಚಿಕಿತ್ಸಕರೂ ಆಗಿರುವ ಮೋಹನ್ ಭಟ್ ಅವರುತಯಾರಿಸಿದ ಉತ್ಪನ್ನಅನೇಕ ಕಾಯಿಲೆಗಳನ್ನು ಗುಣಪಡಿಸುವಲ್ಲಿ ನೆರವಾಗಿದೆ. ಅದು ಮಂಡಿನೋವು, ಗ್ಯಾಸ್ಟ್ರಿಕ್, ಹೊಟ್ಟೆನೋವು, ಮೂತ್ರ-ಪ್ರಾಸ್ಟೇಟ್ ಸಂಬಂಧಿ ಸಮಸ್ಯೆ, ಹೆಣ್ಣುಮಕ್ಕಳ ಮುಟ್ಟು ಸಂಬಂಧಿ ಸಮಸ್ಯೆ ಇತ್ಯಾದಿಗಳಿಗೂ ಅವರು ಔಷಧರಹಿತವಾಗಿ ಚಿಕಿತ್ಸೆ ಗಳನ್ನು ಅಭಿವೃದ್ಧಿಪಡಿಸಿ ಅದನ್ನು ಜನಸ್ನೇಹಿಯಾಗಿ ಲಭ್ಯವಾಗುವಂತೆ ಮಾಡಿಕೊಡುವ ಮೂಲಕ ನೈಸರ್ಗಿಕವಾಗಿ ಆರೋಗ್ಯ ಪಡೆಯುವಂತೆ ಮಾಡುತ್ತಿದ್ದಾರೆ. ಇವರ ಕುಟುಂಬದ ಹಿರಿಯರು ಕೂಡ ಪಾರಂಪರಿಕ ವೈದ್ಯ ಪದ್ಧತಿಯಲ್ಲಿ ಸಾಧನೆಗೈದಿದ್ದು, ಇದೀಗ ಸಾಮಾಜಿಕ ಕಳಕಳಿಯುಳ್ಳ ತರುಣ ಮೋಹನ್ ಭಟ್ ಅವರು ಇದನ್ನು ಮುಂದುವರಿಸಿ ಹೊಸ ಪ್ರಯೋಗಗಳನ್ನು ಮಾಡಲು ಮುಂದಾಗಿದ್ದು, ಬೆಂಬಲದ ಅಗತ್ಯವಿದೆ. ಹೆಚ್ಚಿನ ವಿವರಗಳಿಗೆ ಜಂಗಮ ದೂರವಾಣಿ 8618829759ನ್ನು ಸಂಪರ್ಕಿಸಬಹುದಾಗಿದೆ.

> **ತುಂಬ ಪ್ರಯೋಜನಕಾರಿ**
> ನಾನು ಫೆಬ್ರವರಿ, ಮಾರ್ಚ್, ಏಪ್ರಿಲ್ ಹೀಗೆ 3 ಬಾರಿ ಸಿದ್ಧಾಂಕುರ ಬಯೋ ಆಯಿಲ್ ಔಷಧವನ್ನು ಬಿಟ್ಟ ಬಳಿಕ ನನ್ನ ತೋಟದಲ್ಲಿ ಶೇ.90 ಫಸಲು ಉತ್ತಮವಾಗಿ ಮೂಡಿಬಂದಿದ್ದು, ಗಿಡಗಳೂ ಆರೋಗ್ಯಪೂರ್ಣವಾಗಿ ಮೂಡಿಬಂದಿವೆ.
> ■ ಈಶ್ವರಚಂದ್ರ ಭಟ್ , ಒಡಿಯೂರು ಬೈಲು, ಕನ್ಯಾನ ಕರೋಪಾಡಿ

> ನನ್ನ ತೋಟದಲ್ಲಿ ಸಣ್ಣ ಗಿಡಗಳು ಹಳದಿಯಾಗಿ ಕುಂಟು ಸಿರಿ ಆಗಿದ್ದವು. ಮರಗಳು ಮುಂಡುತಿರಿಯಾಗಿ , ಹಳೆಯ ಮರಗಳು ಹಳದಿ ಎಲೆ ರೋಗಕ್ಕೆ ಸಿಲುಕಿ ಬಗ್ಗಿ ಹೋಗಿದ್ದವು.ಹಿಂಗಾರ ಒಣಗಿ ಹೋಗಿತ್ತು.ನಳ್ಳಿ ಬೀಳುವ ಸಮಸ್ಯೆ ತೀವ್ರವಾಗಿತ್ತು. ಇದೀಗ ಸಿದ್ಧಾಂಕುರ ಬಯೋ ಆಯಿಲ್ ಔಷಧ ಸಿಂಪಡಣೆಮಾಡಿದ ಬಳಿಕ ಸಣ್ಣ ಗಿಡಗಳು ಸಂಪೂರ್ಣ ಚೇತರಿಸಿಕೊಂಡಿದ್ದು, ಇತರ ಮರಗಳ ಎಲೆಗಳೂ ಹಸುರಾಗಿ ಬರುತ್ತಿವೆ. ಹೊಸದಾಗಿ ಬಂದ ಹಿಂಗಾರವು ದೃಢವಾಗಿವೆ.ನಳ್ಳಿ ಉದುರುವ ಸಮಸ್ಯೆ ಕೂಡ ಹತೋಟಿಗೆ ಬಂದಿವೆ.
> ■ ಹರೀಶ್ ಚಾರ್ಮಾಡಿ, ಸುಳಿಂಗಾಯಿ, ಬೆಳ್ತಂಗಡಿ

> ನನ್ನ ತೋಟದಲ್ಲಿ ಅಡಿಕೆ ಗಿಡಗಳು ಸೊರಗಿ ಸೋಗೆಗಳು ಬಾಗಿ ಎಲೆಗಳಲ್ಲಿ ಚುಕ್ಕಿ ಚುಕ್ಕಿಯಾಗಿ ಗಿಡಗಳು ಕೃಶವಾಗಿದ್ದವು.ಆದರೆ ಸಿದ್ಧಾಂಕುರ ಬಯೋ ಆಯಿಲ್ ಸಿಂಪಡಣೆಗೈದ ಬಳಿಕ ಸೊರಗಿದ ಅಡಿಕೆ ಗಿಡಗಳು ಸರಿಯಾಗಿ ಚೇತರಿಸಿಕೊಂಡಿವೆ.ಹಳದಿಯಾಗಿರುವ ಗಿಡಗಳು ಕೂಡ ಸುಮಾರು 30ದಿನಗಳಲ್ಲಿ ಹಸಿರಾಗಿ ಬಂದಿವೆ.
> ■ ಸತ್ಯ ಭಟ್ , ಚಾರ್ಮಾಡಿ

ಮಲೆಯಾಳಂ ಭಾಷಾ ಕಡ್ಡಾಯವನ್ನು ಪ್ರಶ್ನಿಸಿ ಕನ್ನಡ ವಿದ್ಯಾರ್ಥಿಗಳಿಂದ ಹೈಕೋರ್ಟ್‌ಗೆ ಅರ್ಜಿ

ಕಾಸರಗೋಡು: ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳದಲ್ಲಿ ಈ ಹಿಂದಿನ ಎಡರಂಗ ಸರಕಾರವು ಜಾರಿಗೆ ತಂದಿರುವ ಮಲೆಯಾಳ ಭಾಷಾ ಕಾಯ್ದೆ - 2025 ಹಾಗೂ ಭಾಷಾ ಅಲ್ಪಸಂಖ್ಯಾತರ ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯನ್ನು ಪ್ರಶ್ನಿಸಿ ಜಿಲ್ಲೆಯ ಕನ್ನಡ ವಿದ್ಯಾರ್ಥಿಗಳಾದ 7 ಮಂದಿ ಕೇರಳ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಗಡಿನಾಡು ಕಾಸರಗೋಡಿನ ಕನ್ನಡ ವಿದ್ಯಾರ್ಥಿಗಳಾದ ದೀಕ್ಷಾ, ತನಿಷಾ, ಧನುಷ್, ಹರ್ಷಶ್ರೀ, ಮೊಹಮ್ಮದ್, ಶಿವಾಜಿತ್, ಮುಹಮ್ಮದ್ ರಿಯಾಜ್ ಎಂಬವರು ಸರಕಾರದ ಕ್ರಮವನ್ನು ಪ್ರಶ್ನಿಸಿ ಕಾನೂನು ಹೋರಾಟಕ್ಕೆ ಮುಂದಾಗಿದ್ದಾರೆ. ಸರಕಾರವು ಜಾರಿಗೊಳಿಸಿದ ಮಲೆಯಾಳ ಭಾಷಾ ಕಾಯ್ದೆಯು ಸಾಂವಿಧಾನಿಕ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ವಿದ್ಯಾರ್ಥಿಗಳು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಜಸ್ಟೀಸ್ ಬೆಚ್ಚು ಕುರಿಯನ್ ಥೋಮಸ್ ಅವರಏಕಸದಸ್ಯ



ಪೀಠವು ಈ ಅರ್ಜಿಯನ್ನು ಪರಿಗಣಿಸಿ ರಾಜ್ಯ ಸರಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗೆ ತುರ್ತು ನೋಟೀಸ್ ಜಾರಿಮಾಡಿದೆ. ಮಧ್ಯಂತರ ತಡೆಯಾಜ್ಞೆಯ ಮನವಿಯನ್ನು ಪರಿಗಣಿಸುವ ಕುರಿತಾದ ಸಮಗ್ರ ವಿಚಾರಣೆಯನ್ನು ಜೂನ್ 9ಕ್ಕೆ ನಿಗದಿಪಡಿಸಲಾಗಿದೆ.

ಗಡಿನಾಡು ಕಾಸರಗೋಡು ಜಿಲ್ಲೆಯು ಬಹುಭಾಷಾ ಸಂಗಮ ಭೂಮಿಯಾಗಿದ್ದು, ಇಲ್ಲಿನ ಮಾತೃ ಭಾಷೆ ಕನ್ನಡವಾಗಿದೆ. ಕಾಸರಗೋಡು ಜಿಲ್ಲೆಯು ಇತಿಹಾಸದಲ್ಲಿ ಕರ್ನಾಟಕದ ಭಾಗವಾಗಿತ್ತು. ಆದರೆ ಕೇರಳಕ್ಕೆ ಸೇರ್ಪಡೆಗೊಂಡು ಇಲ್ಲಿನ ಕನ್ನಡಿಗರು ಶಿಕ್ಷಣ, ಉದ್ಯೋಗ, ಸೇವಾ ವಲಯ, ವ್ಯಾಪಾರ ವಹಿವಾಟು ಮೊದಲಾದ ಎಲ್ಲಾ ರಂಗಗಳಲ್ಲೂ ಸಮಸ್ಯೆ ಎದುರಿಸುತ್ತಿದ್ದಾರೆ. ಕಾಸರಗೋಡು ಇಂದಿಗೂ ಸಾಂಸ್ಕೃತಿಕವಾಗಿ ಹಾಗೂ ಸೈದ್ಧಾಂತಿಕವಾಗಿ ಕರ್ನಾಟಕದೊಂದಿಗೆ ಬೆಸೆದುಕೊಂಡಿದೆ. ಭೌಗೋಳಿಕವಾಗಿ ಮಾತ್ರ ಕೇರಳದೊಂದಿಗಿದೆ. ಕನ್ನಡ ಭಾಷೆ, ಸಂಸ್ಕೃತಿ, ಆಚಾರ, ವಿಚಾರ, ನೆಲ, ಜಲಗಳ ಮೇಲೆ ಮಲೆಯಾಳ ಭಾಷೆಯು ನಿರಂತರ ಸವಾರಿ ಮಾಡುತ್ತಿದ್ದು, ಆದರೆ ಕನ್ನಡಿಗರ ತಾಳ್ಮೆಯನ್ನು ಪದೇ ಪದೇ ಕೆಣಕುವಂತಾಗುತ್ತಿದೆ.

ಜ್ಞಾನಸುಧಾ : ಜೆ.ಇ.ಇಅಡ್ವಾನ್ಸ್‌ಡ್- 2026 ಫಲಿತಾಂಶ
ಐಐಟಿ ಪ್ರವೇಶಕ್ಕೆ 14 ವಿದ್ಯಾರ್ಥಿಗಳು

ಕಾರ್ಕಳ: ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಐ.ಐ.ಟಿ.) ಪ್ರವೇಶಾತಿಗಾಗಿ ನಡೆಸಲಾಗುವ ಜೆ.ಇ.ಇ.ಅಡ್ವಾನ್ಸ್‌ಡ್ -2026ರ ಫಲಿತಾಂಶ ದಲ್ಲಿ ಜನರಲ್ ಮೆರಿಟ್ ವಿಭಾಗದಲ್ಲಿ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ 14 ವಿದ್ಯಾರ್ಥಿಗಳು ಐಐಟಿ ಪ್ರವೇಶಕ್ಕೆ ಅರ್ಹತೆ ಗಳಿಸಿದ್ದು, ಜನರಲ್ ಮೆರಿಟ್ ವಿಭಾಗದಲ್ಲಿನಾಲ್ಕು ವಿದ್ಯಾರ್ಥಿಗಳು ಒಂಬತ್ತು ಸಾವಿರದ ಒಳಗಿನ ರ್‍ಯಾಂಕ್ ಗಳಿಸಿದ್ದಾರೆ.

ಜನರಲ್ ಮೆರಿಟ್‌ನಲ್ಲಿ ವಿದ್ಯಾರ್ಥಿಗಳಾದ ಸೋಹನ್ ಗಿರಿರಡ್ಡಿ 6391ನೇ ರ್‍ಯಾಂಕ್, ತೇಜಸ್ ನಾಯಕ್ 7510ನೇ ರ್‍ಯಾಂಕ್, ನಿಶಾನ್ಎನ್ ಸಾಲ್ಯಾನ್ 8642ನೇ ರ್‍ಯಾಂಕ್, ಕನಿಷ್ಕ್ ಎಸ್. ಅಮಿನ್ 8851ನೇ ರ್‍ಯಾಂಕ್, ಕೆಟಗರಿ ವಿಭಾಗದಲ್ಲಿ ಶಶಾಂಕ್ ವಿ. 167ನೇ ರ್‍ಯಾಂಕನ್ನು ಹಾಗೂ ಸೋಹನ್‌ಗಿರಿರಡ್ಡಿ 759ನೇ ರ್‍ಯಾಂಕ್ ಪಡೆದಿದ್ದಾರೆ.

ಈ ಎಲ್ಲಾಸಾಧಕ ವಿದ್ಯಾರ್ಥಿಗಳನ್ನು ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟಿನ ಅಧ್ಯಕ್ಷ ಡಾ.ಸುಧಾಕರ ಶೆಟ್ಟಿ ಅಭಿನಂದಿಸಿದ್ದಾರೆ.









ಕಾಮೆಡ್-ಕೆ ಫಲಿತಾಂಶ: ರಾಷ್ಟ್ರ ಮಟ್ಟದಲ್ಲಿ ಕನಿಷ್ಕ್‌ಗೆ 34ನೇ ರ್‍ಯಾಂಕ್

ಕರ್ನಾಟಕ ಖಾಸಗಿ ವೈದ್ಯಕೀಯ, ಇಂಜಿನಿಯರಿಂಗ್ ಹಾಗೂ ದಂತವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್-ಕೆ) ಇಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ರಾಷ್ಟ್ರಮಟ್ಟದಲ್ಲಿ ನಡೆಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ ಫಲಿತಾಂಶದಲ್ಲಿ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ 9 ವಿದ್ಯಾರ್ಥಿಗಳು ಸಾವಿರದೊಳಗೆ ರ್‍ಯಾಂಕ್ ಗಳಿಸಿದ್ದಾರೆ. ವಿದ್ಯಾರ್ಥಿಗಳಾದ ಕನಿಷ್ಕ್ ಎಸ್. ಅಮೀನ್ 34ನೇ ರ್‍ಯಾಂಕ್ (99.9720626 ಪರ್ಸಂಟೈಲ್), ವೈಷ್ಣವಿ ಕುಲಕರ್ಣಿ 111ನೇ ರ್‍ಯಾಂಕ್ (99.9057114 ಪರ್ಸಂಟೈಲ್), ನಿಶಾನ್ ಎನ್. ಸಾಲ್ಯಾನ್ 153ನೇ ರ್‍ಯಾಂಕ್ (99.8693924 ಪರ್ಸಂಟೈಲ್), ಎನ್. ಎಸ್. ವಿವೇಕ್ 292ನೇ ರ್‍ಯಾಂಕ್ (99.7671777 ಪರ್ಸಂಟೈಲ್), ಜೀವನ್ ಎನ್.ಬಿ. 644ನೇ ರ್‍ಯಾಂಕ್ (99.4378194 ಪರ್ಸಂಟೈಲ್), ಸುಬ್ರಹ್ಮಣ್ಯ ಶೆಣೈ 654ನೇ ರ್‍ಯಾಂಕ್ (99.4378194 ಪರ್ಸಂಟೈಲ್), ಅಭಿಷೇಕ್ ಡಿ. ಜಿ. 914ನೇ ರ್‍ಯಾಂಕ್ (99.2258187 ಪರ್ಸಂಟೈಲ್), ಸಹನ ಎನ್. 946ನೇ ರ್‍ಯಾಂಕ್ (99.1741021 ಪರ್ಸಂಟೈಲ್) ಹಾಗೂ ವರುಣ್ ಜೆ. 979ನೇ ರ್‍ಯಾಂಕ್ (99.14821112 ಪರ್ಸಂಟೈಲ್) ಪಡೆದಿದ್ದಾರೆ.

ಜಾರ್ಜ್ ಫರ್ನಾಂಡೀಸ್ ಜನ್ಮದಿನ: ಹೋರಾಟದ ಮಹಾನ್ ಚೇತನದ ಸಂಸ್ಮರಣೆ

ಕೊಂಕಣ ರೈಲ್ವೆಯ ಜನಕ, ಸರಳ ಜೀವಿ, ನಿಷ್ಠಾವಂತ ಹೋರಾಟಗಾರ, ಸಮಾಜವಾದಿ ಚಿಂತಕ ಹಾಗೂ ದೇಶದ ಮಾಜಿ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್ ಅವರ ಜನ್ಮದಿನದ ಅಂಗವಾಗಿ ಅವರ ಮರೆಯಲಾಗದ ದೇಶಸೇವೆ ಮತ್ತು ಆದರ್ಶಗಳನ್ನು ನಾಡು ಇಂದು ಕೃತಜ್ಞತೆಯಿಂದ ಸ್ಮರಿಸುತ್ತಿದೆ. ತತ್ವ ಸಿದ್ಧಾಂತಗಳೊಂದಿಗೆ ಎಂದೂ ರಾಜಿ ಮಾಡಿಕೊಳ್ಳದ ಅವರು, ಸಾರ್ವಜನಿಕರ ಮನಸ್ಸಿನಲ್ಲಿ ಎಂದಿಗೂ 'ಪ್ರೀತಿಯ ಜಾರ್ಜ್' ಎಂದೇ ನೆಲೆಸಿದ್ದಾರೆ.



ಸಿದ್ಧಾಂತದೊಂದಿಗೆ ರಾಜಿ ಇಲ್ಲದ ಹೋರಾಟದ ಬದುಕು

ಜೂನ್ 3,1930 ರಂದುಮಂಗಳೂರಿನಲ್ಲಿ ಜನಿಸಿದ ಜಾರ್ಜ್ ಫರ್ನಾಂಡೀಸ್, ತಮ್ಮ 19ನೇ ವಯಸ್ಸಿನಲ್ಲಿಯೇ ಮುಂಬೈಗೆ ತೆರಳಿ ಸಮಾಜವಾದಿ ನಾಯಕ ಡಾ. ರಾಮ್ ಮನೋಹರ್ ಲೋಹಿಯಾ ಅವರ ಸಂಪರ್ಕಕ್ಕೆ ಬಂದರು. ಅಲ್ಲಿಂದ ಆರಂಭವಾದ ಅವರ ಹೋರಾಟದ ಬದುಕು ರೈಲ್ವೆ ಕಾರ್ಮಿಕರ ಹಕ್ಕುಗಳ ಧ್ವನಿಯಾಗಿ ಮುಂಬೈನಲ್ಲಿ ಹೊಸ ಇತಿಹಾಸ ಸೃಷ್ಟಿಸಿತು.

ಆರೋಪ ಮುಕ್ತವಾಗಿ ಹೊರಬಂದ ಸಭ್ಯ ರಾಜಕಾರಣಿ

ರಕ್ಷಣಾ ಸಚಿವರಾಗಿದ್ದ ಅವಧಿಯಲ್ಲಿ ಇವರ ಮೇಲೆ ಕೇಳಿಬಂದ 'ಶವ ಪೆಟ್ಟಿಗೆ ಹಗರಣ'ದ ಆರೋಪ ಸಾರ್ವಜನಿಕರಲ್ಲಿ ಆಕ್ರೋಶ ಮೂಡಿಸಿತ್ತಾದರೂ, ಜಾರ್ಜ್ ಅವರು ಜೀವನದುದ್ದಕ್ಕೂ ಕಾಯ್ದುಕೊಂಡು ಬಂದ ಪ್ರಾಮಾಣಿಕತೆ ಆ ಅಪವಾದಕ್ಕೆ ಬೆಲೆಯಿಲ್ಲದಂತೆ ಮಾಡಿತು. ಆರೋಪ ಕೇಳಿಬಂದ ತಕ್ಷಣವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆಗೆ ಹೆಗಲುಕೊಟ್ಟ ಜಾರ್ಜ್, ತನಿಖಾ ಆಯೋಗದ ವಿಚಾರಣೆಯ ಬಳಿಕ ಸಂಪೂರ್ಣ ದೋಷಮುಕ್ತರಾಗಿ ಹೊರಬಂದರು.

ಪತ್ರಕರ್ತರಾಗಿ, ಲೇಖಕರಾಗಿ, ಕೃಷಿಕರಾಗಿ ಹಾಗೂ ಕಾರ್ಮಿಕ ನಾಯಕನಾಗಿ ತಮ್ಮ 88ನೇ ವಯಸ್ಸಿನಲ್ಲಿ ನಿಧನರಾದ ಜಾರ್ಜ್ ಫರ್ನಾಂಡೀಸ್ ಅವರ ಸರಳ ಜೀವನದ ಆದರ್ಶಗಳನ್ನು ಪಾಲಿಸುವುದೇ ನಾವು ಅವರಿಗೆ ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿ.

ದೇಶದಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾದಾಗ ಅಂದಿನ ಸರ್ಕಾರದ ಸರ್ವಾಧಿಕಾರಿ ಧೋರಣೆಯನ್ನು ಖಂಡಿಸಿ ಭೂಗತರಾಗಿಯೇ ಬಂಡಾಯವೆದ್ದ ಧೀರ ಜಾರ್ಜ್. ಈ ಸಂದರ್ಭದಲ್ಲಿ ಬರೋಡಾ ಡೈನಮೈಟ್ಸ್ ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ತಿಹಾರ್ ಜೈಲು ಪಾಲಾದರೂ, ಸರ್ಕಾರದ ದಬ್ಬಾಳಿಕೆ ಇವರ ಗಟ್ಟಿ ಇರಾದೆಯನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ. ಜೀವನಪೂರ್ತಿ ಕಾಂಗ್ರೆಸ್ ವಿರೋಧಿ ರಾಜಕಾರಣ ನಡೆಸಿದ ಜಾರ್ಜ್, ಕಾಲಾನಂತರದಲ್ಲಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ಪ್ರಬಲ ಬೆಂಬಲವಾಗಿ ನಿಂತರು.

ಕೊಂಕಣ ರೈಲ್ವೆ ಕ್ರಾಂತಿ ಹಾಗೂ 'ಸೈನಿಕರ ಸಚಿವ'

ವಿ.ಪಿ. ಸಿಂಗ್ ಪ್ರಧಾನಿಯಾಗಿದ್ದ ಅವಧಿಯಲ್ಲಿ ರೈಲ್ವೆ ಸಚಿವರಾಗಿದ್ದಾಗ ಸಾಮಾನ್ಯ ಜನರೊಡನೆ ಪ್ರಯಾಣಿಸಿ ಸರಳತೆ ಮೆರೆದಿದ್ದ ಜಾರ್ಜ್, ಕರಾವಳಿ ಭಾಗದ ಜನರ ದಶಕಗಳ ಕನಸಾಗಿದ್ದ 'ಕೊಂಕಣ ರೈಲ್ವೆ' ಯೋಜನೆಯನ್ನು ಸಾಕಾರಗೊಳಿಸಿ ಅಜರಾಮರರಾದರು. ಮೊರಾರ್ಜಿ ದೇಸಾಯಿ ಅವರ ಸಂಪುಟದಲ್ಲಿ ಕೈಗಾರಿಕಾ ಸಚಿವರಾಗಿಯೂ ಅವರು ದೇಶಕ್ಕೆ ಶ್ರಮಿಸಿದ್ದರು.

ಮುಂದೆ ವಾಜಪೇಯಿ ಸರ್ಕಾರದಲ್ಲಿ ಎರಡು ಬಾರಿ ರಕ್ಷಣಾ ಸಚಿವರಾಗಿದ್ದ ಅವಧಿಯಲ್ಲಿ ಶಿಷ್ಟಾಚಾರಗಳನ್ನು ಬದಿಗಿಟ್ಟು ತಮಗೆ ಒದಗಿಸಲಾಗಿದ್ದ ಭದ್ರತೆಯನ್ನು ನಿರಾಕರಿಸಿದ್ದರು. ಇವರ ಅಧಿಕಾರಾವಧಿಯಲ್ಲೇ ಭಾರತವು 'ಪೋಖ್ರಾನ್-2' ಅಣು ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿ ಜಗತ್ತಿಗೆ ತನ್ನ ಶಕ್ತಿ ಪ್ರದರ್ಶಿಸಿತು. 'ಪಾಕಿಸ್ತಾನಕ್ಕಿಂತಲೂ ಚೀನಾ ದೇಶವೇ ನಮ್ಮ ಮೊದಲ ಶತ್ರು' ಎಂದು ಮುನ್ಸೂಚನೆ ನೀಡಿದ್ದ ಜಾರ್ಜ್, ರಕ್ಷಣಾ ಸಚಿವರಾದ ಬಳಿಕ ಅದೆಷ್ಟೋ ಬಾರಿ ಕಠಿಣ ಯುದ್ಧ ಭೂಮಿಗಳಿಗೆ ಖುದ್ದಾಗಿ ಭೇಟಿ ನೀಡಿ ಸೈನಿಕರ ಕುಂದುಕೊರತೆಗಳನ್ನು ಆಲಿಸುತ್ತಿದ್ದರು. ಈ ಗುಣದಿಂದಾಗಿಯೇ ಇವರನ್ನು ಸೈನಿಕರು ಪ್ರೀತಿಯಿಂದ 'ಸೈನಿಕರ ಸಚಿವ ಎಂದೇ ಗುರುತಿಸುತ್ತಿದ್ದರು.

ಜಾರ್ಜ್ ಮಾರ್ಗದರ್ಶನದಲ್ಲಿ ಕರಾವಳಿಯ ಅಭಿವೃದ್ಧಿ ಯೋಜನೆಗಳು ಸಾಕಾರ: ತೋನ್ಸೆ ಜಯಕೃಷ್ಣ ಶೆಟ್ಟಿ



ಕೇಂದ್ರದಲ್ಲಿ ಮಂತ್ರಿಸ್ಥಾನದಲ್ಲಿದ್ದರೂ ನಮ್ಮ ಕರಾವಳಿ ಜಿಲ್ಲೆಯ ಅಭಿವೃದ್ಧಿಯ ಕನಸು ಕಂಡವರು ಜಾರ್ಜ್ ಫೆರ್ನಾಂಡೀಸ್. ಸಾಮಾನ್ಯ ಬದುಕು ನಡೆಸಿ ಅಸಾಧಾರಣ ಸಾಹಸ ಮತ್ತು ಧೈರ್ಯಶಾಲಿಯಾಗಿ ಬದುಕಿದ ಇಂತಹ ಮಹಾನ್ ಚೇತನಗಳು ಗತಿಸಿದಾಗ ಮಾತ್ರ ಜನರಿಗೆ ನೆನಪಾಗಿ, ಮತ್ತೆ ಮರೆತುಹೋಗುವುದು ನಿಜಕ್ಕೂ ದುಃಖದ ಸಂಗತಿ. ನಮ್ಮ 'ಜಯಶ್ರೀಕೃಷ್ಣ ಪರಿಸರಪ್ರೇಮಿ ಸಮಿತಿ'ಯ ಪರಿಸರ ಪೂರಕ ಯೋಜನೆಗಳನ್ನು ಕೇಳಿ ಅವರು ಅತ್ಯಂತ ಸಂತೋಷಪಡುತ್ತಿದ್ದರು. ಮಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ವಿಸ್ತರಣೆ, ಕುದುರೆಮುಖ ಯೋಜನೆ ಹಾಗೂ ನಾಗಾರ್ಜುನ ವಿದ್ಯುತ್ ಯೋಜನೆಗಳ ವಿಷಯದಲ್ಲಿ ನಮ್ಮ ಸಮಿತಿಯ ಯೋಜನೆಗಳು ಸರ್ಕಾರಕ್ಕೆ ತಲುಪುವಲ್ಲಿ ಅವರು ಮಾರ್ಗದರ್ಶಕ ರಾಗಿದ್ದರು. ಅವರೊಂದಿಗಿನ ಒಡನಾಟ ನನ್ನ ಬದುಕಿನಲ್ಲಿ ಅವಿಸ್ಮರಣೀಯ.

ಕಿರುಸುದ್ದಿ

ಟೀಮ್ ಡೇವಿಡ್‌ಗೆ ದಂಡ, ಒಂದು ಪಂದ್ಯದಿಂದ ಹೊರಕ್ಕೆ

ಮುಂಬೈ: ಅಂಪೈರ್‌ನೊಂದಿಗೆ ಆಕ್ರಮಣಕಾರಿ ಮನಸ್ಥಿತಿಯಿಂದ ವರ್ತನೆಗೈದಿರುವ ನಿಟ್ಟಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್ ಟೀಮ್ ಡೇವಿಡ್‌ಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ದಂಡ ವಿಧಿಸಿದ್ದಲ್ಲದೆ ಒಂದು ಪಂದ್ಯದ ನಿಷೇಧ ಹೇರಿದೆ. ಅಹಮದಾಬಾದ್‌ನಲ್ಲಿ ನಡೆದ ಗುಜರಾತ್ ಮತ್ತು ಆರ್‌ಸಿಬಿ ನಡುವಿನ ಫೈನಲ್ ಪಂದ್ಯದ ವೇಳೆ ಅವರು ಆನ್ ಫೀಲ್ಡ್ ಅಂಪೈರ್‌ನೊಂದಿಗೆ ಆಕ್ರಮಣಕಾರಿ ಮನಸ್ಥಿತಿಯೊಂದಿಗೆ ವರ್ತಿಸಿರುವುದು ದಂಡಕ್ಕೆ ಕಾರಣವಾಗಿದೆ. ಫೈನಲ್ ಪಂದ್ಯದಲ್ಲಿ ಡೇವಿಡ್ ವಿಕೆಟ್ ಒಪ್ಪಿಸಿದ ನಂತರ ಆನ್‌ಫೀಲ್ಡ್ ಅಂಪೈರ್ ನಿತಿನ್ ಮೆನನ್ ಮೇಲೆ ಕೈಯಲ್ಲಿದ್ದ ಐಸ್‌ಪ್ಯಾಕ್ ಎಸೆದಿದ್ದಾರೆ. ಇದು ಐಪಿಎಲ್ ಮಾನದಂಡಗಳ ಪ್ರಕಾರ ತಪ್ಪಾಗಿದೆ. ಈ ಬಗ್ಗೆ ಅಧಿಕೃತವಾಗಿ ಹೇಳಿರುವ ಬಿಸಿಸಿಐ, ಟೀಮ್ ಡೇವಿಡ್ ಅಂಪೈರ್‌ನೊಂದಿಗೆ ಅನುಚಿತ ವರ್ತನೆಗೈದಿರುವ ನಿಟ್ಟಿನಲ್ಲಿ ಒಂದು ಡಿ-ಮೆರಿಟ್ ಅಂಕ ಮತ್ತು ಪಂದ್ಯದ ಶೇ. 50ರಷ್ಟು ಶುಲ್ಕವನ್ನು ದಂಡವಾಗಿ ವಿಧಿಸಲಾಗಿದೆ. ಈಗಾಗಲೇ ಎರಡು ತಪ್ಪುಗಳನ್ನು ಮಾಡಿರುವ ಡೇವಿಡ್ ಮುಂದಿನ ವರ್ಷದ ಮುಂದಿನ ವರ್ಷ ನಡೆಯುವ ಪಂದ್ಯಾವಳಿಯ ಮೊದಲ ಪಂದ್ಯ ಆಡುವಂತಿಲ್ಲ.

ಜೂನ್ 20ರಿಂದ ಮಹಾರಾಜ ಟ್ರೋಫಿ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಆಯೋಜಿಸುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯ ಐದನೇ ಆವೃತ್ತಿ ಜೂನ್ 20ರಂದು ಶುರುವಾಗಲಿದೆ. ಉದ್ಘಾಟನಾ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ಮತ್ತು ಗುಲ್ಬರ್ಗಾ ಮಿಸ್ಟಿಕ್ಸ್ ತಂಡಗಳು ಮುಖಾಮುಖಿಯಾಗಲಿವೆ.

ಮೈಸೂರು, ಹುಬ್ಬಳ್ಳಿ ಹಾಗೂ ಬೆಂಗಳೂರಿನಲ್ಲಿ ನಡೆಯಲಿರುವ ಈ ಟೂರ್ನಿಯು ಜುಲೈ 12ರಂದು ಫೈನಲ್ ಪಂದ್ಯದೊಂದಿಗೆ ಮುಕ್ತಾಯಗೊಳ್ಳಲಿದೆ. ಉದ್ಘಾಟನಾ ದಿನದ ಎರಡನೇ ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ತಂಡ ನೂತನ ಫ್ರಾಂಚೈಸಿಯಾದ ಶಿವಮೊಗ್ಗ ಯೋಧಾಸ್ ವಿರುದ್ಧ ಸೆಣಸಲಿದೆ. ಈ ಬಾರಿಯ ಟೂರ್ನಿಯಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡ ಜೂನ್ 21ರಂದು ಹುಬ್ಬಳ್ಳಿ ಟೈಗರ್ಸ್ ವಿರುದ್ಧ ತನ್ನ ಮೊದಲ ಪಂದ್ಯವನ್ನು ಆಡಲಿದೆ. ಜೂನ್ 20ರಿಂದ 26ರವರೆಗೆ ಮೈಸೂರು ಹಂತ, ಜೂನ್ 27ರಿಂದ ಜುಲೈ 3ರವರೆಗೆ ಹುಬ್ಬಳ್ಳಿ ಹಂತ ಹಾಗೂ ಜುಲೈ 5ರಿಂದ 12ರವರೆಗೆ ಬೆಂಗಳೂರು ಹಂತ ನಡೆಯಲಿದೆ. ಮೈಸೂರು ಮತ್ತು ಹುಬ್ಬಳ್ಳಿಯಲ್ಲಿ ತಲಾ 12 ಪಂದ್ಯಗಳು ನಡೆಯಲಿದ್ದು, ಬೆಂಗಳೂರಿನಲ್ಲಿ 10 ಪಂದ್ಯಗಳು ನಡೆಯಲಿವೆ. ಇದರಲ್ಲಿ ಕ್ವಾಲಿಫೈಯರ್-1, ಎಲಿಮಿನೇಟರ್, ಕ್ವಾಲಿಫೈಯರ್-2 ಹಾಗೂ ಫೈನಲ್ ಕೂಡ ಸೇರಿವೆ. ಟೂರ್ನಿಯ ಆಟಗಾರರ ಹರಾಜು ಪ್ರಕ್ರಿಯೆ ಜೂನ್ 5ರಂದು ಬೆಂಗಳೂರಿನಲ್ಲಿ ನಡೆಯಲಿದ್ದು, 150ಕ್ಕೂ ಹೆಚ್ಚು ಆಟಗಾರರು ಹರಾಜಿನಲ್ಲಿ ಭಾಗವಹಿಸಲಿದ್ದಾರೆ.

> ▸▸ ಮೊದಲ ಪಂದ್ಯದಲ್ಲಿ ಬೆಂಗಳೂರು-ಗುಲ್ಬರ್ಗಾ ಫೈಟ್
> ▸▸ ಜುಲೈ 12ರಂದು ಫೈನಲ್

ಎಫ್‌ಐಎಚ್ ಮಹಿಳಾ ನೇಷನ್ಸ್ ಕಪ್‌ಗೆ ಭಾರತ ತಂಡ

ಹೊಸದಿಲ್ಲಿ: ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ಜೂನ್ 15ರಿಂದ 21ರವರೆಗೆ ನಡೆಯಲಿರುವ ಎಫ್‌ಐಎಚ್ ಮಹಿಳಾ ನೇಷನ್ಸ್ ಕಪ್ 2025-26 ಟೂರ್ನಿಗೆ ಭಾರತೀಯ ಮಹಿಳಾ ಹಾಕಿ ತಂಡವನ್ನು ಹಾಕಿ ಇಂಡಿಯಾ ಮಂಗಳವಾರ ಪ್ರಕಟಿಸಿದೆ. ಸಲಿಮಾ ಟೆಟೆ ತಂಡದ ನಾಯಕಿಯಾಗಿ ಮುಂದುವರಿದಿದ್ದು, ಗೋಲ್‌ಕೀಪರ್‌ಗಳಾಗಿ ಅನುಭವಿ ಸವಿತಾ ಹಾಗೂ ಬಿಚು ದೇವಿ ಖರಿಬಾಮ್ ಸ್ಥಾನ ಪಡೆದಿದ್ದಾರೆ. ಆಸ್ಟ್ರೇಲಿಯಾ ಪ್ರವಾಸದಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಭಾರತ ತಂಡ ಇದೀಗ ನೇಷನ್ಸ್ ಕಪ್‌ನಲ್ಲಿ ಉತ್ತಮ ಸಾಧನೆ ಮಾಡುವ ವಿಶ್ವಾಸದಲ್ಲಿದೆ. ಪರ್ತ್‌ನಲ್ಲಿ ನಡೆದ ನಾಲ್ಕು ಪಂದ್ಯಗಳ ಸ್ನೇಹಪೂರ್ಣ ಸರಣಿಯನ್ನು ಭಾರತ 2-2ರಿಂದ ಸಮಬಲಗೊಳಿಸಿತ್ತು. ಭಾರತವನ್ನು ಪೂಲ್ ಎ'ಯಲ್ಲಿ ಜಪಾನ್, ಅಮೆರಿಕ ಹಾಗೂ ಉರುಗ್ವೆ ತಂಡಗಳೊಂದಿಗೆ ಸೇರಿಸಲಾಗಿದೆ. ಪೂಲ್ ಬಿ'ಯಲ್ಲಿ ಆತಿಥೇಯ ನ್ಯೂಜಿಲೆಂಡ್, ಚಿಲಿ, ಕೊರಿಯಾ ಮತ್ತು ಫ್ರಾನ್ಸ್ ತಂಡಗಳಿವೆ.

> ▸▸ ಸಲಿಮಾ ಟೆಟೆ ನಾಯಕಿ
> ▸▸ ಜಪಾನ್, ಉರುಗ್ವೆ, ಅಮೆರಿಕ ವಿರುದ್ಧ ಭಾರತ ಸೆಣಸು

ಭಾರತ ತಂಡ: ಗೋಲ್‌ಕೀಪರ್‌ಗಳು: ಸವಿತಾ, ಬಿಚು ದೇವಿ ಖರಿಬಾಮ್, **ಡಿಫೆಂಡರ್:** ಸುಶೀಲಾ ಚಾನು ಪುಖ್ರಂಬಮ್, ಇಶಿಕಾ ಚೌಧರಿ, ಲಾಲ್ರಂಟ್ಲುವಾಂಗಿ, ಶಿಲ್ಪಿ ದಬಾಸ್, ಜ್ಯೋತಿ, ನಿಕ್ಕಿ ಪ್ರಧಾನ, **ಮಿಡ್‌ಫೀಲ್ಡರ್‌ಗಳು:** ಸಲಿಮಾ ಟೆಟೆ (ನಾಯಕಿ), ನೇಹಾ, ಸುನೆಲಿತಾ ಟೊಪ್ಪೊ, ಸಾಕ್ಷಿ ರಾಣಾ, ದೀಪಿಕಾ ಸೊರೆಂಗ್, ಸೋನಂ, ಲಾಲ್ರೆಮ್ಸಿಯಾಮಿ, **ಫಾರ್ವರ್ಡ್‌ಗಳು:** ನವ್ನೀತ್ ಕೌರ್, ದೀಪಿಕಾ, ರುತುಜಾ ದಾದಾಸೋ ಪಿಸಾಳ್, ಇಶಿಕಾ, ಅನ್ನು

ಕರ್ನಾಟಕಕ್ಕೆ ಜೂ. ಬ್ಯಾಸ್ಕೆಟ್‌ಬಾಲ್ ಕಿರೀಟ

ಬೆಂಗಳೂರು: ಇತ್ತೀಚೆಗೆ ಪುದುಚೇರಿಯಲ್ಲಿ ನಡೆದ 76 ನೇ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ರಾಜ್ಯ ಜೂನಿಯರ್ ಬಾಲಕರ ಬ್ಯಾಸ್ಕೆಟ್‌ಬಾಲ್ ತಂಡವು ಚಿನ್ನದ ಪದಕ ಗೆದ್ದಿದೆ. ಈ [illegible] ಮತ್ತು ಕೆಒಎ ಅಧ್ಯಕ್ಷ ಡಾ. ಕೆ. ಗೋವಿಂದರಾಜ್ ತಂಡವನ್ನು ಸ್ವಾಗತಿಸಿದರು. ಇದೇ ವೇಳೆ ತಂಡಕ್ಕೆ ಟ್ರ್ಯಾಕ್‌ಸೂಟ್ ಮತ್ತು ಶೂಗಳ ಜೊತೆಗೆ ನಗದು ಬಹುಮಾನವನ್ನು ರೂ. 7.5 ಲಕ್ಷದಿಂದ ರೂ. 10.00 ಲಕ್ಷಕ್ಕೆ ಹೆಚ್ಚಿಸಲಾಯಿತು. ಆಗಿನ ಮೈಸೂರು ರಾಜ್ಯವು 1966 ರಲ್ಲಿ ಕೊಯಮತ್ತೂರಿನಲ್ಲಿ ಜೂನಿಯರ್ ರಾಷ್ಟ್ರೀಯ ಚಾಂಪಿಯನ್‌ಶಿಪ್ ಗೆದ್ದಿತು, ನಂತರ ಕರ್ನಾಟಕ ರಾಜ್ಯವು 1980 ರಲ್ಲಿ ಚಿತ್ತೂರಿನಲ್ಲಿ ಮತ್ತು 1981 ರಲ್ಲಿ ಗೋವಾದಲ್ಲಿ ಅದೇ ಚಾಂಪಿಯನ್‌ಶಿಪ್ ಗೆದ್ದಿತು.

ವಾರಿಯರ್ಸ್ ಪ್ರತಿಭಾನ್ವೇಷಣೆ: 213 ಕ್ರಿಕೆಟಿಗರ ಸತ್ವಪರೀಕ್ಷೆ

ಬೆಂಗಳೂರು: ಜೂನ್ 20ರಿಂದ ಆರಂಭವಾಗಲಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಗಾಗಿ ಮಾಜಿ ಚಾಂಪಿಯನ್ 'ಮೈಸೂರು ವಾರಿಯರ್ಸ್' ಫ್ರಾಂಚೈಸಿಯು ಬೆಂಗಳೂರಿನ ಜಸ್ಟ್ ಕ್ರಿಕೆಟ್ ಅಕಾಡೆಮಿಯಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾನ್ವೇಷಣೆ ಶಿಬಿರಕ್ಕೆ ರಾಜ್ಯದ ಯುವ ಆಟಗಾರರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಕರ್ನಾಟಕದ ವಿವಿಧ ಭಾಗಗಳಿಂದ ಒಟ್ಟು 213 ಉದಯೋನ್ಮುಖ ಕ್ರಿಕೆಟಿಗರು ಈ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ತಮ್ಮ ಕೌಶಲ್ಯ ಪ್ರದರ್ಶಿಸಿದರು. ಇದರಲ್ಲಿ 68 ಆಲ್ ರೌಂಡರ್ಸ್, 63 ಮಧ್ಯಮ ವೇಗದ ಬೌಲರ್‌ಗಳು, 45 ಬ್ಯಾಟರ್‌ಗಳು, 20 ವಿಕೆಟ್ ಕೀಪರ್‌ಗಳು ಹಾಗೂ 17 ಸ್ಪಿನ್ನರ್‌ಗಳು ಕಾಣಿಸಿಕೊಂಡಿದ್ದರು. ಮೈಸೂರು ವಾರಿಯರ್ಸ್ ತಂಡದ ಮುಖ್ಯ ಕೋಚ್ ಆರ್.ಎಕ್ಸ್. ಮುರಳೀಧರ್, ಸಹಾಯಕ ಕೋಚ್ ವಿಜಯ್ ಮದ್ಯಾಳ್ಕರ್ ಮತ್ತು ಮಾಲೀಕರಾದ ಅರ್ಜುನ್ ರಂಗ ಅವರ ನೇತೃತ್ವದಲ್ಲಿ ಆಟಗಾರರ ಫಿಟ್ನೆಸ್ ಹಾಗೂ ತಾಂತ್ರಿಕ ಸಾಮರ್ಥ್ಯವನ್ನು ಪ್ರಮುಖವಾಗಿ ಪರೀಕ್ಷಿಸಲಾಗಿದ್ದು, ಅತ್ಯುತ್ತಮ ಪ್ರದರ್ಶನ ನೀಡಿದ 15 ಪ್ರತಿಭಾವಂತ ಆಟಗಾರರನ್ನು ಆಯ್ಕೆ ಮಾಡಲು ತೀರ್ಮಾನಿಸಲಾಗಿದೆ. ಇಲ್ಲಿ ಆಯ್ಕೆಯಾದವರು ಮುಂಬರುವ ಮಹಾರಾಜ ಟ್ರೋಫಿ ಹರಾಜು ಪ್ರಕ್ರಿಯೆ ಪರಿಗಣಿಸುವಂತೆ ಕೆಎಸ್‌ಸಿಎಗೆ ಶಿಫಾರಸು ಮಾಡಲಾಗುವುದು.



ಐಪಿಎಲ್‌ನಲ್ಲಿ ಸ್ಟಾರ್‌ಗಳ ಉದಯ!







ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಯುವಕರ ಆಟ. ಬಿಸಿಸಿಐಗೂ ಅದು ಕೇವಲ ಒಂದು ಟೂರ್ನಿಯಲ್ಲ. ಕೇವಲ ಆದಾಯದ ಮೂಲವೂ ಅಲ್ಲ. ಲೀಗ್ ಒಂದು ಭವಿಷ್ಯ ರೂಪಿಸುವ ಯೋಜನೆ. ಭವಿಷ್ಯದ ಆಟಗಾರರನ್ನು ಹುಡುಕಿ ತರುವ ವಿಂಗ್ ಮತ್ತು ಭಾರತ ಕ್ರಿಕೆಟ್ ತಂಡವನ್ನು ಗಟ್ಟಿಗೊಳಿಸುವ ಬುನಾದಿ. ಏಕೆಂದರೆ ಭಾರತ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ಪಂದ್ಯಾವಳಿ ಪ್ರತಿ ವರ್ಷ ಪ್ರಮುಖ ಪಾತ್ರ ವಹಿಸುತ್ತದೆ. ಅದಕ್ಕಾಗೇ ಭಾರತ ತಂಡದಲ್ಲಿ ಆಡಬೇಕು, ದೇಶವನ್ನು ಪ್ರತಿನಿಧಿಸಬೇಕೆಂಬ ಕನಸನ್ನು ಹೊತ್ತಿರುವ ದೇಶದ ಸಮಸ್ತ ಕ್ರಿಕೆಟಿಗರು ಒಮ್ಮೆ ಐಪಿಎಲ್‌ನಲ್ಲಿ ಮಿಂಚಿದರೆ ಸಾಕು ಎಂಬ ಲೆಕ್ಕಾಚಾರಗಳನ್ನು ಹಾಕಿಕೊಂಡಿರುತ್ತಾರೆ. ಅದರಂತೆ ಅಫ್ಘಾನಿಸ್ತಾನ, ಇಂಗ್ಲೆಂಡ್ ಮತ್ತು ವಿಂಡೀಸ್ ವಿರುದ್ಧದ ಪಂದ್ಯಗಳಿಗೆ ಭಾರತ ತಂಡಕ್ಕೆ ಆಯ್ಕೆಯಾಗುವತ್ತ ಸಾಗಿದವರ್‍ಯಾರು? ಈಗಾಗಲೇ ಆಡಿದವರಲ್ಲಿ ಹಿನ್ನಡೆ ಅನುಭವಿಸಿದವರ್‍ಯಾರು ಮತ್ತು ಐಪಿಎಲ್‌ನಲ್ಲಿ ಮಿಂಚಿದ ಯುವಕರ ಪಟ್ಟಿಯನ್ನು ನೋಡುವುದಾದರೆ..

ಭಾರತ ಪ್ರತಿನಿಧಿಸಲು ವೈಭವ್ ಸಿದ್ಧ

ಈ ಬಾರಿಯ ಐಪಿಎಲ್‌ನಲ್ಲಿ ಭಾರತಕ್ಕೆ ಸಿಕ್ಕ ದೊಡ್ಡ ಟ್ರೋಫಿಯೆಂದರೆ ಅದು ವೈಭವ್ ಸೂರ್ಯವಂಶಿ. 15 ವರ್ಷದ ಬಾಲಕ ರಾಜಸ್ಥಾನ ತಂಡವನ್ನು ಪ್ರತಿನಿಧಿಸಿದ್ದು, ಈ ಬಾರಿಯ ಆರೆಂಜ್ ಕ್ಯಾಪ್, ಉದಯೋನ್ಮುಖ ಆಟಗಾರ, ಸೂಪರ್ ಸ್ಟ್ರೈಕರ ಸೇರಿದಂತೆ ವಿವಿಧ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. 776 ರನ್ ಗಳಿಸಿದ ಅವರ ಅಂಕಿ ಸಂಖ್ಯೆ ಭಾರತ ತಂಡಕ್ಕೆ ಅರ್ಹ ಎನ್ನುವ ಸ್ಪಷ್ಟತೆ ಕೊಡುತ್ತದೆ. ವೈಭವ್ ಅವರ ವಯಸ್ಸು ಮತ್ತು ರನ್ ಅಷ್ಟೇ ಇದಕ್ಕೆ ಕಾರಣವಲ್ಲ. ಬದಲಾಗಿ ವೈಭವ್ ಅವರ ಪ್ರಬುದ್ಧತೆ. ಬಂದ ತಕ್ಷಣ ಹೊಡೆದಾಡುವುದು ಅವರ ಅಸಲಿ ಆಟ. ಬಾಲನ್ನು ಬೌಂಡರಿಗಟ್ಟುವುದು ಅವರ ಶಕ್ತಿ. ಆದರೆ ಇದಕ್ಕೂ ಮಿಗಿಲಾದ ಆಟ ವೈಭವ್ ಪ್ರದರ್ಶಿಸಿದ್ದಾರೆ. ಕ್ವಾಲಿಫೈಯರ್ ಪಂದ್ಯದಲ್ಲಿ ತಂಡ ಹಿಂದೆ ಬಿದ್ದಾಗ ಅವರು ಆಡಿದ ಆಟವನ್ನು ಇಡೀ ದೇಶವೇ ಗಮನಿಸಿತು. ಈ ಆಟವೇ ಅವರ ಪ್ರಬುದ್ಧತೆಗೆ ಸಾಕ್ಷಿ. ಈ ನಡುವೆ ಏಷ್ಯನ್ ಗೇಮ್ಸ್‌ಗೆ ಆಯ್ಕೆ ಮಾಡಿದೆ ಎಂಬ ವಿಚಾರವೂ ನಮ್ಮ ಮುಂದಿದೆ.

ಆಸರೆಯಾದ ಆಯುಷ್ ಮಾತ್ರೆ

ಚೆನ್ನೈ ತಂಡದ ಪರ ಆಡಿರುವ 18 ವರ್ಷದ ಯುವಕ ಆಯುಷ್ ಮಾತ್ರೆ ಸಿಕ್ಕ ಪಂದ್ಯಗಳಲ್ಲಿ ಅಬ್ಬರಿಸಿ ಮೆರೆದಾಡಿದವರು. ಕಳೆದ ವರ್ಷ ಗಾಯದಿಂದ ಬದಲಾಯಿಸಿಕೊಂಡ ಆಟಗಾರರಲ್ಲಿ ಅವರನ್ನು ಚೆನ್ನೈ ತಂಡ ಸೇರಿಸಿಕೊಂಡಿದ್ದಲ್ಲದೆ, ಈ ವರ್ಷ ರಿಟೇನ್ ಕೂಡ ಮಾಡಿತ್ತು. ಈ ನಡುವೆ ಪಂದ್ಯಾವಳಿಯಲ್ಲಿ ಕಳೆದ ವರ್ಷದಂತೆ ಈ ವರ್ಷವೂ ಮಿಂಚಿದ್ದಾರೆ. 6 ಪಂದ್ಯ ಮಾತ್ರ ಆಡಿರುವ ಅವರು 200 ರನ್ ಗಳಿಸಿದ್ದಾರೆ. ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಅವರ ಮಿಂಚಿನಾಟ ಗಮನಾರ್ಹವಾಗಿತ್ತು. ಅವರೂ ಕೂಡ ಪ್ರಬುದ್ಧತೆಯ ಆಟದಿಂದ ಹೆಸರು ಮಾಡಿದವರು. ಚೆನ್ನೈ ತಂಡದ ಬಹುತೇಕ ಆಟಗಾರರು ಪರದಾಟ ನಡೆಸಿರುವಾಗ ರನ್‌ರೇಟ್ ಮತ್ತು ಸ್ಕೋರ್‌ನ ಜವಾಬ್ದಾರಿ ತೆಗೆದುಕೊಂಡು ಮಿಂಚಿದವರು. ಹಾಗಾಗಿ ಅವರ ಮೇಲೂ ಬಿಸಿಸಿಐ ಕಣ್ಣಿಡಲಿದೆ.

ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್

ಪಂಜಾಬ್ ತಂಡದ ಆರಂಭಿಕ ಪ್ರಿಯಾಂಶ್ ಆರ್ಯ ಅವರ ಬ್ಯಾಟಿಂಗ ದೇಶವೇ ಮೆಚ್ಚಿದೆ. ಮುಖ್ಯವಾಗಿ ಮೊದಲಾರ್ಧದಲ್ಲಿ ಪ್ರಿಯಾಂಶ್ ಸಿಕ್ಸರ್‌ಗಳಿಂದಲೇ ಮಾತನಾಡುತ್ತಿದ್ದರು. 13 ಪಂದ್ಯಗಳಲ್ಲಿ 364 ರನ್ ಪೇರಿಸಿರುವ ಅವರು ಉದಯೋನ್ಮುಖ ಆಟಗಾರರ ಪಟ್ಟಿಯಲ್ಲಿ ಪ್ರಮುಖರು. ಇನ್ನೊಂದೆಡೆ ಅದೇ ಪಂಜಾಬ್ ತಂಡದ ಪ್ರಭಸಿಮ್ರನ್ ಸಿಂಗ್ ಕೂಡ ಅದೇ ವೇಗದಲ್ಲಿ ಬ್ಯಾಟಿಂಗ್ ಮಾಡಿದ್ದಾರೆ. ಮುಖ್ಯವಾಗಿ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಚೇಸಿಂಗ್ ವೇಳೆ ಇವರ ಆಟ ಗಮನಾರ್ಹವಾಗಿತ್ತು. 13 ಪಂದ್ಯಗಳಲ್ಲಿ ಪ್ರಭಸಿಮ್ರನ್ 510 ರನ್ ಗಳಿಸಿದ್ದು ಪಂಜಾಬ್ ಪರ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಿದ್ದಾರೆ.

ಇನ್ನಷ್ಟು ಬ್ಯಾಟಿಗರು

ಪಾಟಿದಾರ್ ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಮಿಂಚಿದ್ದಾರೆ. ಅವರೂ ಕೂಡ ಬಿಸಿಸಿಐಗೆ ಸ್ಪಷ್ಟ ಸಂದೇಶ ಕೊಟ್ಟಿದ್ದಾರೆ. ಈ ಭರಾಟೆಯಲ್ಲಿ ಉರ್ವಿಲ್, 722 ರನ್ ಗಳಿಸಿರುವ ಸುದರ್ಶನ್, ರಾಜಸ್ಥಾನ ತಂಡದ ಧ್ರುವ್ ಜುರೇಲ್, ಕೆಕೆಆರ್ ತಂಡದ ಅಂಗ್ರಿಶ್ ರಘುವಂಶಿ ಕೂಡ ಮಿಂಚಿನಾಟವಾಡಿದ್ದು, ಫಸ್ಟ್ ಕ್ಲಾಸ್ ಕ್ರಿಕೆಟ್ ಮತ್ತು ಎ ತಂಡಗಳ ಕ್ರಿಕೆಟ್‌ನಲ್ಲಿ ಭಾಗವಹಿಸಲು ಸಿದ್ಧರಾದಂತಿದ್ದಾರೆ.

ಯಾರಿಗೆ ಹಿನ್ನಡೆ?

ಮುನ್ನಡೆಯುದ್ದಲ್ಲಿ ಹಿನ್ನಡೆಯಿದೆ ಎಂಬಂತೆ ಭಾರತ ತಂಡದ ಪ್ರಮುಖ ಆಟಗಾರರಿಗೆ ಹಿನ್ನಡೆಯೂ ಆಗಿದೆ. ಲಖನೌ ತಂಡದ ಮಾಜಿ ನಾಯಕ ಪಂತ್‌ಗೆ ಈಗಾಗಲೇ ಭಾರತ ತಂಡದಲ್ಲಿ ಹಿಂಬಡ್ತಿ ಸಿಕ್ಕಿದೆ. ದಿಲ್ಲಿಯ ಅಕ್ಷರ್‌ಗೂ ಹಿನ್ನಡೆಯಾಗಿದೆ. ಸೂರ್ಯ ಕುಮಾರ್, ಚೆನ್ನೈ ನಾಯಕ ರುತುರಾಜ್ ಗಾಯಕ್ವಾಡ್, ಕೆಕೆಆರ್ ನಾಯಕ ಅಜಿಂಕ್ಯಾ ರಹಾನೆ, ರಿಯಾನ್ ಪರಾಗ್, ರಿಂಕು ಸಿಂಗ್ ಸೇರಿದಂತೆ ಪ್ರಮುಖ ಆಟಗಾರರು ಹಿನ್ನಡೆ ಅನುಭವಿಸಿದ್ದಾರೆ.

ಬೌಲರ್‌ಗಳಲ್ಲಿ

ರಸೀಖ್‌ಗೊಂದು ಸಲಾಂ

ಆರ್‌ಸಿಬಿ ತಂಡದ ವೇಗಿ ರಸೀಖ್ ಸಲಾಂ ದಾರ್ ಮಿಂಚಿದ ಆಟಗಾರರಲ್ಲಿ ಒಬ್ಬರು. ಫೈನಲ್ ಪಂದ್ಯದಲ್ಲಿ ಗಮನಾರ್ಹ ಪ್ರದರ್ಶನ ನೀಡಿದ ರಸೀಖ್, ವೇಗಿ ಯಶ್ ದಯಾಳ್ ಜಾಗದಲ್ಲಿ ಆಡಿ ಅತ್ಯುತ್ತಮ ಪ್ರದರ್ಶನ ನೀಡುತ್ತಾ ಬಂದರು. ಸಿಕ್ಕ ಅವಕಾಶಗಳನ್ನೆಲ್ಲಾ ಅಚ್ಚುಕಟ್ಟಾಗಿ ಬಳಸಿಕೊಂಡು 19 ವಿಕೆಟ್ ಪಡೆದು ಮಿಂಚಿದ್ದಾರೆ. ವಿಶೇಷ ಅಂದರೆ ಅವರಾಡಿದ್ದು 12 ಪಂದ್ಯಗಳಲ್ಲಿ ಮಾತ್ರ.




ಪ್ರಿನ್ಸ್ ಯಾದವ್ ಧಮಾಕಾ

ಲಖನೌ ತಂಡದ ಪರ ಗಮನಾರ್ಹ ಬೌಲಿಂಗ್ ಮಾಡಿ ಅಫ್ಘಾನಿಸ್ತಾನ ವಿರುದ್ಧದ ಏಕದಿನ ತಂಡಕ್ಕೆ ಆಯ್ಕೆಯಾಗಿರುವ ಪ್ರಿನ್ಸ್ ಯಾದವ್ ಈ ಬಾರಿಯ ಹೀರೋ. ಮೊದಲಿನ ಪಂದ್ಯದಿಂದಲೂ ಕರಾರುವಾಕ್ ದಾಳಿ ಸಂಘಟಿಸಿದ್ದಾರೆ. ಕೊಹ್ಲಿ ಅವರ ವಿಕೆಟ್ ಪಡೆದಿರುವುದು ಅವರಿಗೆ ಬೂಸ್ಟರ್ ನೀಡಿದೆ. 14 ಪಂದ್ಯಗಳಲ್ಲಿ 16 ವಿಕೆಟ್ ಪಡೆದ ಅವರು, ಭಾರತದ ಭವಿಷ್ಯ ಆಟಗಾರರಾಗುವ ಸಂದೇಶ ನೀಡಿದ್ದಾರೆ. ಈ ಪ್ರದರ್ಶನದೊಂದಿಗೆ ಬಿಸಿಸಿಐ ಗಮನಕ್ಕೆ ಬಂದಿದ್ದಾರೆ.



ಕಾರ್ತಿಕ್ ತ್ಯಾಗಿ

ದೇಶಿ ಕ್ರಿಕೆಟ್‌ನಲ್ಲಿ ಸದ್ದು ಮಾಡಿ ಐಪಿಎಲ್‌ಗೆ ಬಂದ ಕಾರ್ತಿಕ್ ತ್ಯಾಗಿ ಗೆಲುವಿನಲ್ಲಿ ಮಿಂಚಿದವರಲ್ಲಿ ಒಬ್ಬರು. ಕೆಕೆಆರ್ ತಂಡದಲ್ಲಿ ಬೌಲರ್‌ಗಳ ಅವಶ್ಯವಿತ್ತು. ಮುಖ್ಯ ಬೌಲರ್‌ಗಳು ಗಾಯಗೊಂಡು ಹೊರಬಿದ್ದ ನಂತರ ಪಂದ್ಯಾವಳಿಯಲ್ಲಿ ಕಾರ್ತಿಕ್ ತ್ಯಾಗಿ ಕೆಕೆಆರ್ ತಂಡದ ಪ್ರಮುಖ ಬೌಲರ್ ಆದರು. ಮಧ್ಯಮ ಓವರ್‌ಗಳಲ್ಲಿ ಮಿಂಚುತ್ತಾ ಗಮನ ಸೆಳೆದು ಹೀರೋ ಅನಿಸಿದರು. 13 ಪಂದ್ಯಗಳಲ್ಲಿ ಅವರು, 18 ವಿಕೆಟ್ ಪಡೆದಿದ್ದರು, ಮುಂದಿನ ಅವಕಾಶಕ್ಕಾಗಿ ಕಾಯುತ್ತಿದ್ದಾರೆ.



ಇನ್ನಷ್ಟು

ಹೈದರಾಬಾದ್ ತಂಡದಲ್ಲಿ ಪ್ರಫುಲ್ ಮತ್ತು ಸಾಕೀಬ್ ಹುಸೈನ್ ಎಂಬ ವೇಗಿಗಳು ಕೂಡ ಈ ಬಾರಿ ಭರ್ಜರಿ ಪ್ರದರ್ಶನ ನೀಡಿದ್ದಾರೆ. ಆರಂಭಿಕ ಪಂದ್ಯದಲ್ಲೇ 4 ವಿಕೆಟ್‌ಗಳೊಂದಿಗೆ ಮಿಂಚಿದ ಈ ಇಬ್ಬರೂ, ಕೊನೆಯ ಪಂದ್ಯದ ವರೆಗೂ ಹೈದರಾ ಬಾದ್‌ನ ಪ್ರಮುಖ ಬೌಲರ್‌ಗಳೇ ಅನಿಸಿಕೊಂಡರು. ಕೆಕೆಆರ್ ತಂಡದ ಅನುಕುಲ್ ರಾಯ್, ಆರ್‌ಸಿಬಿಯ ಕೃಣಾಲ್ ಪಾಂಡ್ಯ, ರಾಜಸ್ಥಾನ ತಂಡದ ಬ್ರಿಜೇಶ್ ಪಟೇಲ್, ಚೆನ್ನೈ ತಂಡದ ಅನ್ಷುಲ್ ಕಂಬೋಜ್ ಕೂಡ ಈ ಬಾರಿಯ ಐಪಿಎಲ್‌ನಲ್ಲಿ ಮಿಂಚಿ ಗಮನ ಸೆಳೆದಿದ್ದಾರೆ.

ಸೆಮಿಫೈನಲ್‌ಗೆ ಜ್ವೆರೆವ್



ಪ್ಯಾರಿಸ್: ಈ ಬಾರಿಯ ರೋಲ್ಯಾಂಡ್ ಗ್ಯಾರೋಸ್‌ನ ಗೆಲುವಿನ ಫೇವರಿಟ್ ಅಲೆಕ್ಸಾಂಡರ್ ಜ್ವೆರೆವ್ ಪ್ರತಿಷ್ಠಿತ ಫ್ರೆಂಚ್ ಓಪನ್ ಗ್ರ್ಯಾಂಡ್‌ಸ್ಲ್ಯಾಮ್ ಪಂದ್ಯಾವಳಿಯ ಸೆಮಿಫೈನಲ್ ಪ್ರವೇಶಿಸಿದರು.

ಮಂಗಳವಾರದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅವರು, ರಾಫೇಲ್ ಜೋಡರ್ ವಿರುದ್ಧ ಮೂರು ಸೆಟ್ ಪಂದ್ಯದಲ್ಲಿ ಜಯಿಸಿದರು. ಮೊದಲನೇ ಸೆಟ್‌ನಲ್ಲಿ ಅಲ್ಪ ಪೈಪೋಟಿಯಿದ್ದರೂ ಮುಂದಿನ ಎರಡು ಸೆಟ್‌ಗಳಲ್ಲಿ ಸಲೀಸಾಗಿ ಗೆದ್ದ ಜ್ವೆರೆವ್ ಪಂದ್ಯದಲ್ಲಿ 7(3)-6(3), 6-1, 6-3 ರೊಂದಿಗೆ ಪ್ರಾಬಲ್ಯ ಸಾಧಿಸಿದರು. ಪಂದ್ಯಾವಳಿಯ ಮೊದಲ ಪಂದ್ಯದಿಂದಲೂ ಅವರು ಉತ್ತಮ ಪ್ರದರ್ಶನ ನೀಡುತ್ತಾ ಬಂದಿದ್ದಾರೆ. ಮೊದಲನೇ ಸರ್ವ್‌ನಲ್ಲಿ ಶೇ. 80 ರಷ್ಟು ಅಂಕಗಳನ್ನು ಗಳಿಸಿದ ಜ್ವೆರೆವ್ ಬರೋಬ್ಬರಿ 7 ಏಸ್ ಪಾಯಿಂಟ್‌ಗಳನ್ನೂ ಪಡೆದುಕೊಂಡರು.

> **ಫ್ರೆಂಚ್ ಓಪನ್ ಗ್ರ್ಯಾಂಡ್ ಸ್ಲ್ಯಾಮ್**

ಉಪಾಂತ್ಯಕ್ಕೆ ಆಂಡ್ರೀವಾ, ಮಾರ್ತಾ: ಮಹಿಳೆಯರ ವಿಭಾಗದಲ್ಲಿ ಮಿರ್ರಾ ಆಂಡ್ರೀವಾ, ಸೋರಾನಾ ಸಿರ್ಸ್ಟಿಯಾ ವಿರುದ್ಧ ಗೆಲುವು ಸಾಧಿಸಿದ್ದು ಸೆಮಿಫೈನಲ್‌ಗೇರಿದರು. ಮೊದಲನೇ ಸೆಟ್‌ನಿಂದಲೂ ಪ್ರಾಬಲ್ಯ ಸಾಧಿಸಿದ ಆಂಡ್ರೀವಾ 6-0, 6-3ರೊಂದಿಗೆ ಸೆಮಿಗೆ ಲಗ್ಗೆ ಹಾಕಿದರು. ಮಹಿಳೆಯ ಇನ್ನೊಂದು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಎಲಿನಾ ಸ್ವಿಟೋಲ್ಲಿನಾ ವಿರುದ್ಧ ಗೆಲುವು ಸಾಧಿಸಿರುವ ಮಾರ್ತಾ ಕೋಸ್ಟ್ಯುಕ್ ಸೆಮಿಗೇರಿದ್ದಾರೆ. 3 ಸೆಟ್‌ಗಳ ಈ ಪಂದ್ಯದಲ್ಲಿ ಮೊದಲನೇ ಸೆಟ್ ಅನ್ನು 6-3ರಿಂದ ಗೆದ್ದ ಮಾರ್ತಾ ಎರಡನೇ ಸೆಟ್ ಅನ್ನು 2-6ರಿಂದ ಸೋತರು. ಬಳಿಕ ಮತ್ತೆ ಕಂಬ್ಯಾಕ್ ಮಾಡಿದ ಮಾರ್ತಾ 6-2ರಿಂದ ಕಡೆಯ ಸೆಟ್ ಗೆದ್ದು ಮಿಂಚಿದರು. ಮತ್ತೊಂದು ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸೆಬಲೆಂಕಾ ಅರಿನಾ ಒಸ್ಕಾ ವಿರುದ್ಧ 7-5, 6-3ರಿಂದ ಗೆಲುವು ಸಾಧಿಸಿದರು. ಇದರೊಂದಿಗೆ ಕ್ವಾರ್ಟರ್‌ಫೈನಲ್‌ಗೆ ಲಗ್ಗೆ ಹಾಕಿದರು.

ಚೆಸ್: ಪ್ರಜ್ಞಾನಂದಗೆ ಗೆಲುವು

ಓಸ್ಲೊ (ನಾರ್ವೆ): ಇಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ ಟೂರ್ನಿಯ ಏಳನೇ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಜಯ ಸಾಧಿಸಿದ್ದು, ಅಂಕಪಟ್ಟಿಯ ಅಗ್ರಸ್ಥಾನದ ಪೈಪೋಟಿಯನ್ನು ಮತ್ತಷ್ಟು ರೋಚಕಗೊಳಿಸಿದ್ದಾರೆ. ಈ ಸುತ್ತಿನ ಪ್ರಮುಖ ಪಂದ್ಯದಲ್ಲಿ ಪ್ರಜ್ಞಾನಂದ, ಅಲಿರೆಜಾ ಫಿರೌಜಾ ವಿರುದ್ಧ ಕ್ಲಾಸಿಕಲ್ ವಿಭಾಗದಲ್ಲಿ ಗೆಲುವು ದಾಖಲಿಸಿದರು. ಸುದೀರ್ಘ ಹೋರಾಟದಲ್ಲಿ ಮೇಲುಗೈ ಸಾಧಿಸಿದ ಭಾರತೀಯ ತಾರೆ, ಅಂತಿಮ ಹಂತದಲ್ಲಿ ತಪ್ಪಿಲ್ಲದ ಆಟವಾಡಿ ಮೂರು ಅಂಕಗಳನ್ನು ತಮ್ಮದಾಗಿಸಿಕೊಂಡರು. ಈ ಸೋಲು ಫಿರೌಜಾಗೆ ಟೂರ್ನಿಯಲ್ಲಿ ಎರಡನೇ ಕ್ಲಾಸಿಕಲ್ ಸೋಲಾಗಿದೆ. ವಿಶ್ವ ನಂ.1 ಮ್ಯಾಗ್ನಸ್ ಕಾರ್ಲ್ಸನ್ ಹಾಗೂ ವಿನ್ಸೆಂಟ್ ಕೀಮರ್ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ನಡೆದ ಆರ್ಮಗೆಡ್ಡನ್ ಪಂದ್ಯದಲ್ಲಿ ಕಾರ್ಲ್ಸನ್ ಗೆದ್ದು ಹೆಚ್ಚುವರಿ ಅಂಕಗಳನ್ನು ಪಡೆದು ಅಗ್ರಸ್ಥಾನದ ಪೈಪೋಟಿಯಲ್ಲಿ ಉಳಿದರು.



ಗುಕೇಶ್‌ಗೆ ಹೆಚ್ಚುವರಿ ಅಂಕ


ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಹಾಗೂ ವೆಸ್ಲಿ ಸೋ ನಡುವಿನ ಕ್ಲಾಸಿಕಲ್ ಪಂದ್ಯವೂ ಡ್ರಾದಲ್ಲಿ ಅಂತ್ಯಗೊಂಡಿತು. ನಂತರ ನಡೆದ ಆರ್ಮಗೆಡ್ಡನ್ ಕದನದಲ್ಲಿ ಗುಕೇಶ್ ಜಯ ಸಾಧಿಸಿ ಹೆಚ್ಚುವರಿ ಅಂಕಗಳನ್ನು ಗಳಿಸಿದರು. ಏಳು ಸುತ್ತುಗಳ ಅಂತ್ಯಕ್ಕೆ ವೆಸ್ಲಿ ಸೋ 12.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಫಿರೌಜಾ 10 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಕಾರ್ಲ್ಸನ್, ಕೀಮರ್ ಮತ್ತು ಪ್ರಜ್ಞಾನಂದ ತಲಾ 9 ಅಂಕಗಳೊಂದಿಗೆ ಸಮೀಪದಲ್ಲಿದ್ದಾರೆ.

ಮಹಿಳಾ ವಿಭಾಗದಲ್ಲಿ

ಮಹಿಳಾ ವಿಭಾಗದಲ್ಲಿ ಭಾರತದ ಕೊನೇರು ಹಂಪಿ ಹಾಗೂ ದಿವ್ಯಾ ದೇಶಮುಖ್ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ಆರ್ಮಗೆಡ್ಡನ್‌ನಲ್ಲಿ ಕಪ್ಪು ಕಾಯಿಗಳೊಂದಿಗೆ ಆಡಿದ ದಿವ್ಯಾ ಜಯ ಸಾಧಿಸಿ ಹೆಚ್ಚುವರಿ ಅಂಕಗಳನ್ನು ಪಡೆದು ಅಗ್ರಸ್ಥಾನದ ಪೈಪೋಟಿಯಲ್ಲಿ ತಮ್ಮ ಸ್ಥಾನವನ್ನು ಗಟ್ಟಿಗೊಳಿಸಿದರು.

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ



6003

ಎಡದಿಂದ ಬಲಕ್ಕೆ
2.ಹೆಚ್ಚು ತಿನ್ನುವ ಆಸಕ್ತಿಯುಳ್ಳವನು (4)
4.ಉಭಯಚರ ಗುಂಪಿಗೆ ಸೇರಿದ ಪ್ರಾಣಿ (2)
5.ಕುಲದ ನಡುವೆ ಅಡಗಿದ ಕೋಗಿಲೆ (3)
6.ಬಾಗಿಲನ್ನು ಕಾಯುವವನು (5)
8.ಪ್ರಾಚೀನ-ಹಳೆಯ ಕಾಲದ್ದು (4)
11.ಒಂದಕ್ಕೊಂದು ಹೊಂದಾಣಿಕೆ ಎಂಬರ್ಥದ ಶಬ್ದ (4)
12.ಮಣೆಯ ನಡುವೆ ಮನೋವಿಕಾರವಿದೆ (5)
14.ದಾರವನ್ನು ತಾರೆನೆಂದ ದಾನಿ (3)
16.ಮನೆಯ ಸಾಲುಗಳ ನಡುವಿನ ಹಾದಿ (2)
17.ಶರ ಒಳಗೊಂಡ ಕೀರ್ತಿ ತರುವಂಥಾದ್ದು (4)


ಮೇಲಿನಿಂದ ಕೆಳಕ್ಕೆ
1. "ನನಗೆ ಆಗತ್ಯವಿದೆ" ಎಂದು ಹೀಗೆ ಹೇಳುತ್ತೇವೆ (2)
2.ಎಳ್ಳಿನಿಂದ ಎಣ್ಣೆ ತೆಗೆಯುವವನು (5)
3.ಕತ್ತು ತಿರುಗಿಸಿ ಮಾಡುವ ವ್ಯಾಯಾಮ (4)
4.ಕೆನ್ನೆಯೂ ಹೌದು-ತಲೆಬುರುಡೆಯೂ ಹೌದು (3)
7.ಕಸಿವಿಸಿ-ಭ್ರಾಂತಿಯ ಸಮಾನಪದ (4)
8.ಪಾವಿತ್ರ್ಯತೆ ನೆಲೆಸಿರುವ ಸ್ಥಳ (4)
9.ಉತ್ಪನ್ನ-ಸೇವೆ ಬಳಸಿಕೊಳ್ಳುವ ವ್ಯಕ್ತಿ (5)
10.ಮಯ ಒಳಗೊಂಡ ಸುಂದರವಾದುದು (4)
13.ಅಮೂಲ್ಯ ವಸ್ತುಗಳನ್ನಿಡುವ ಲೋಹದ ಪೆಟ್ಟಿಗೆ (3)
15.ಗುಟ್ಟನ್ನು ಹೀಗೆ ಬಯಲು ಮಾಡು (2)

6002 ಉತ್ತರ

ಎಡದಿಂದ ಬಲಕ್ಕೆ:
3.ಅಡ್ಡಿ 4.ಅನಂತಶಯನ
7.ಕವಲು 8.ಕಣಕ
9.ತೇರು 10.ದಕ್ಷ
12.ತೊಗಲು 14.ನಗರ
15.ಬದುಕುವದಾರಿ 18.ಕಿಂಡಿ

ಮೇಲಿನಿಂದ ಕೆಳಕ್ಕೆ :
1.ಅಜ್ಜ 2.ಮಾಯ
3.ಅದಲುಬದಲು 5.ತರುಣ
6.ನಕಲು 8.ಕರುಳಿನಕುಡಿ
11.ಬರಡು 13.ಗಡವ
16.ದುಷ್ಟ 17.ರಿಸಿ

ಪೆಡಲ್‌ಗೆ ಬ್ರೇಕ್ ಹಾಕಿದ ಆಕ್ಸಿಲರೇಟರ್



▸ ಶ್ರೀಲಕ್ಷ್ಮಿ

'ಜೀವ್ನಾನೆ ಒಂದು ಸೈಕಲ್ ಇದ್ದಂಗೆ, ತುಳ್ಕೊಂಡು ತಳ್ಕೊಂಡು ನಡಿಬೇಕು ಮುಂದೆ...' ಈ ಹಾಡನ್ನು ಇತ್ತೀಚಿಗೆ ಅಲ್ಲಲ್ಲಿ ಕೇಳ್ತಾನೆ ಇರ್ತೀವಿ. ಆದರೆ ಸೈಕಲ್ ತುಳಿಯೋರ ಸಂಖ್ಯೆ ಗಣನೀಯವಾಗಿ ಕಡಿಮೆ ಆಗುತ್ತಿರುವ ಈ ದಿನಗಳಲ್ಲಿ, ಸೈಕಲ್ ಕುರಿತಾದ ಉದಾಹರಣೆಗಳು ಎಷ್ಟು ಪ್ರಸ್ತುತ? ತ್ರಿಚಕ್ರ ಸೈಕಲ್‌ನಿಂದ ಪ್ರಾರಂಭವಾಗುವ ನಮ್ಮ ಸವಾರಿ, ಅದೇಕೋ ಬೈ ಸೈಕಲ್ ಹಂತವನ್ನು ಬೇಗನೆ ಮುಗಿಸಿ ಮೋಟಾರ್ ವಾಹನದ ಕಡೆಗೆ ಮುಖಮಾಡಿ ಸೈಕಲ್ ಫೇಸ್‌ಗೆ ತಿಲ್ಲಾನವನ್ನು ಹಾಡಿಯೇ ಬಿಡುತ್ತದೆ. ತಾತ-ಮುತ್ತಾತಂದಿರು ಹೇಳ್ತಿದ್ದ ಅವರ ಕಿಲೋಮೀಟರ್‌ಗಟ್ಟಲೆ ಸೈಕಲ್ ಸವಾರಿ ಕಥೆಗಳು ಕಥೆಗಳಾಗಿಯೇ ಉಳಿದುಬಿಟ್ಟವು.

ಗಂಟೆಗೆ ಎರಡು ರೂಪಾಯಿ, ಐದು ರೂಪಾಯಿಯಂತೆ ಕೊಡಿಟ್ಟು ಬಾಡಿಗೆ ಕೊಟ್ಟು ತುಳಿಯುತ್ತಿದ್ದ ಸೈಕಲ್ ಸವಾರಿಗಳನ್ನು ನೆನೆದು, ಈಗಿನ ಕಾಲದ ಬೈಸೈಕಲ್ ಮನೆಯ ಗ್ಯಾರೇಜಿನ ಒಂದು ಮೂಲೆಯಲ್ಲಿ ದೂಳು ಹಿಡಿದು ನಿಂತಿರುವುದನ್ನು ನೋಡಿದರೆ ಬೇಸರವಾಗುತ್ತದೆ. ಈಗಿನ ಪೆಟ್ರೋಲ್-ಡೀಸೆಲ್ ಬೆಲೆಗಳನ್ನು ಲೆಕ್ಕಿಸದೆ ವಾಹನ ಚಲಾಯಿಸುವ ಯುವ ಪೀಳಿಗೆಗೆ ಆ ಪೆಡ್ಲಿಂಗ್ ಖುಷಿಯ ಅಂದಾಜು ತಿಳಿಯಲು ಸಾಧ್ಯವೇ ಇಲ್ಲ. ಆಗಿನ ಕಾಲಕ್ಕೆ ಹೋಲಿಸಿದರೆ ಇಂದಿನ ಜನರ ಆರ್ಥಿಕತೆಯ ಮಟ್ಟ ಸುಧಾರಿಸಿದೆ. ಆದ್ದರಿಂದ ಹೆಚ್ಚೆಚ್ಚು ಮೋಟಾರ್ ವಾಹನಗಳ ಖರೀದಿಗೆ ಮುಂದಾಗುತ್ತಿದ್ದಾರೆ ಎಂದು ಹೇಳಬಹುದಾದರೂ ವಾಹನ ದಟ್ಟಣೆ ಹಾಗೂ ವಾಹನಗಳಿಂದಾಗುತ್ತಿರುವ ವಾಯು ಮಾಲಿನ್ಯದ ಬಗ್ಗೆ ಪರಿಸರ ದಿನದಂದು ಮಾತ್ರ ಯೋಚಿಸಿದರೆ ಪ್ರಯೋಜನವಿಲ್ಲ.



> **ಇಂದು ವಿಶ್ವ ಬೈಸಿಕಲ್ ದಿನ**

ಸೈಕಲ್ ತುಳಿಯೋರು ಈಗಿನ ಕಾಲದಲ್ಲಿ ಇಲ್ಲವೇ ಇಲ್ಲ ಎಂದಲ್ಲ. ಈಗಲೂ ಪ್ರತಿನಿತ್ಯ ಸೈಕಲಿನಲ್ಲೇ ಓಡಾಡುವ ಬೈಸೈಕಲ್ ಸವಾರರು ನಮ್ಮ ಸುತ್ತಮುತ್ತ ಇದ್ದಾರೆ. ಆದರೆ ಬಹಳ ಕಡಿಮೆ. ಶ್ರಮವಹಿಸಿ ಮಾಡುವ ಕೆಲಸ ಕಾರ್ಯಗಳೆಂದರೆ ಯಾರಿಗೆ ಇಷ್ಟ ಹೇಳಿ? ಒಂದು ಗಂಟೆಗಳ ಕಾಲ ಸೈಕಲ್‌ನಲ್ಲಿ ಹೋಗುವ ಸಮಯವನ್ನು ಹದಿನೈದು ನಿಮಿಷಗಳಲ್ಲಿ ಶ್ರಮವಿಲ್ಲದೆ ಮೋಟಾರ್ ವಾಹನಗಳ ಮೂಲಕ ಹೋಗಿ ತಲುಪಬಹುದು ಎಂದರೆ ಯಾರು ತಾನೇ ಬೇಡ ಅಂತಾರೆ? ಒಂದು ಗಂಟೆಯ ಜಿಮ್ ಸೆಶನ್‌ಗೆ ಅರ್ಧ ಗಂಟೆ ಟ್ರಾಫಿಕಿನಲ್ಲಿ ಹೋಗಿ ಬರುವುದರ ಅರ್ಥ ತಿಳಿಯದಂತಾಗಿದೆ. ಸ್ಥೂಲಕಾಯವಿಲ್ಲದ ಸಮಾಜವಿದ್ದ ಆಗಿನ ಕಾಲದ ಸೀಕ್ರೆಟ್‌ಗಳಲ್ಲಿ ಸೈಕ್ಲಿಂಗೂ ಒಂದು ಎಂದೇ ಹೇಳಬಹುದು.

ಈಗಿನ ಕಾಲದಲ್ಲಿ ಹೆಸರಿಗಷ್ಟೆ ಹದಿನೆಂಟು ವರ್ಷದ ಮೇಲ್ಪಟ್ಟವರಿಗೆ ಲೈಸೆನ್ಸ್. ಆದರೆ ಹತ್ತು ಹನ್ನೆರಡು ವರ್ಷದವರು ವಾಹನ ಚಲಾಯಿಸುವುದನ್ನು ನೋಡುವುದು ಸರ್ವೇಸಾಮಾನ್ಯ. ಅಯ್ಯೋ! ಸಿಟಿಗಳಲ್ಲಿ ಜಾಗವೇ ಇಲ್ಲ. ಎಲ್ಲಿ ಸೈಕ್ಲಿಂಗ್ ಮಾಡೋದು? ಎಂಬ ಕುಂಟು ನೆಪ ಹೇಳುವವರಿಗೆ ಏನು ಹೇಳಲು ಸಾಧ್ಯ? ಮುಂದಿನ ರಸ್ತೆಯಲ್ಲಿ ಇರುವ ಸ್ನೇಹಿತನ ಮನೆಗೋ, ಅಂಗಡಿಗೋ ಗಾಡಿಯಲ್ಲಿಯೇ ಹೋಗ್ಬೇಕೆ? ನಡೆಯೋದು, ಸ್ಕಿಂಗ್ ಮಾಡೋದು ವ್ಯಾಯಾಮದ ಭಾಗವಾಗುತ್ತಿರುವ ಈ ಕಾಲಘಟ್ಟದಲ್ಲಿ, ಸೈಕ್ಲಿಂಗ್ ಒಂದು Mode of Transportation ಅಂತ ಹೇಳಿ ನೆನಪಿಸಬೇಕಿದೆ. ಪೆಡಲ್ ಮಾಡಿ ಕಾಲನ್ನು ಬಲಿಷ್ಠವಾಗಿ ಇಟ್ಟುಕೊಳ್ಳಬೇಕಾದ ಮಕ್ಕಳ ಕೈಗೆ ವಾಹನಗಳ ಕೀಲಿ-ಕೈ ಅವರ ಮಾನಸಿಕ ಅಂದಾಜಿಗೆ ಸವಾಲು ಒಡ್ಡುವ ಆಕ್ಸಿಲರೇಟರ್ ಹಿಡಿಸಿ ಭಯವಿಲ್ಲದೆ ನೋಡುತ್ತಿರುವ ಸಮಾಜದಲ್ಲಿ ನಾವಿದ್ದೇವೆ. ಮನುಷ್ಯ ಬೆಳೆದಂತೆಲ್ಲಾ ಬದಲಾವಣೆಗಳು ಅವಶ್ಯ. ಆದರೆ ಬೈಸೈಕಲ್ ತುಳಿಯುವ ವಯಸ್ಸಿನಲ್ಲಿ ಆಕ್ಸಿಲರೇಟರ್‌ನ ಪರಿಚಯವಾಗಿಬಿಟ್ಟರೆ ಪೆಡಲ್‌ಗೆ ಬ್ರೇಕ್ ಬೀಳೋದು ಗ್ಯಾರಂಟಿ. ಇಂತಹ ಸಮಯದಲ್ಲಿ ಪೋಷಕರಾದವರು ಮಕ್ಕಳ ವಯಸ್ಸಿನನುಸಾರ ತಿಳುವಳಿಕೆಯಿಂದ ಸೈಕಲ್, ವಾಹನಗಳನ್ನು ಅವರಿಗೆ ಪರಿಚಯಿಸುತ್ತಾ ಹೋದರೆ ಮಕ್ಕಳು ಸ್ವಲ್ಪವಾದರೋ ಸುರಕ್ಷಿತರಾಗಿ ವಾಹನ ಚಲಾವಣೆಗೆ ಮುಂದಾಗುತ್ತಾರೆ. ಟ್ರಾಫಿಕ್ ನಿಯಮಗಳು ತಿಳಿಯದೇ ಎಷ್ಟೋ ಅಪಘಾತಗಳು ದಿನನಿತ್ಯ ಸಂಭವಿಸುತ್ತಿವೆ. ಮೊಬೈಲ್, ಮೋಟಾರ್ ವಾಹನ... ಹೀಗೆ ಬಾಲ್ಯಾವಸ್ಥೆಯನ್ನು ಕಸಿದುಕೊಳ್ಳುವ ವಸ್ತುಗಳನ್ನು ಆತುರದಿಂದ ಮಕ್ಕಳಿಗೆ ಪರಿಚಯಿಸುವ ಕೆಲಸ ನಮ್ಮಿಂದಾಗದಿರಲಿ. ಮಕ್ಕಳು ಮಕ್ಕಳಾಗಿರಲು ನಾವು ಸಹಕರಿಸೋಣ. ಇಂದು ವಿಶ್ವ ಬೈಸಿಕಲ್ ದಿನ. ಒಂದು ರೌಂಡ್ ಪೆಡಲ್ ತುಳಿದು ಬರೋಣ.

> **ಪೆಡಲ್ ಮಾಡಿ ಕಾಲನ್ನು ಬಲಿಷ್ಠವಾಗಿ ಇಟ್ಟುಕೊಳ್ಳಬೇಕಾದ ಮಕ್ಕಳ ಕೈಗೆ ವಾಹನಗಳ ಕೀಲಿ-ಕೈ ಅವರ ಮಾನಸಿಕ ಅಂದಾಜಿಗೆ ಸವಾಲು ಒಡ್ಡುವ ಆಕ್ಸಿಲರೇಟರ್ ಹಿಡಿಸಿ ಭಯವಿಲ್ಲದೆ ನೋಡುತ್ತಿರುವ ಸಮಾಜದಲ್ಲಿ ನಾವಿದ್ದೇವೆ.**

ಕರಾವಳಿಯ ಹಲವೆಡೆ ಗುಡುಗು ಸಹಿತ ಭಾರೀ ಮಳೆ | ಅಲ್ಲಲ್ಲಿ ಹಾನಿ

ಮುಂಗಾರು ಮೊದಲೇ 'ಮಳೆ'





ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಸೇರಿದಂತೆ ಕರಾವಳಿಯ ಅನೇಕ ಕಡೆಗಳಲ್ಲಿ ಮಂಗಳವಾರ ಸಂಜೆ ಗುಡುಗು ಸಹಿತ ಉತ್ತಮ ಮಳೆಯಾಗಿದೆ. ಜೂನ್ 7ರ ಬಳಿಕ ಕರಾವಳಿಗೆ ಅಧಿಕೃತವಾಗಿ ಮುಂಗಾರು ಆರಂಭವಾಗುವ ಮುನ್ಸೂಚನೆ ಇದ್ದರೂ ಕರಾವಳಿಯ ಹಲವೆಡೆ ಕಳೆದ ಕೆಲವು ದಿನಗಳಿಂದ ಭಾರೀ ಮಳೆಯಾಗುತ್ತಲೇ ಇದೆ.

ಕೂಳೂರಿನಲ್ಲಿ ರಾಜ ಕಾಲುವೆಗೆ ಮಣ್ಣು ಕುಸಿತ

ಮಂಗಳೂರು ನಗರದ ಕೂಳೂರು ಬಳಿಯ ರಾಜ ಕಾಲುವೆಯ ಒಂದು ಬದಿಯಲ್ಲಿ ಮಣ್ಣು ಕುಸಿದಿದೆ. ಪಕ್ಕದಲ್ಲಿಯೇ ರಸ್ತೆಯಿದ್ದು, ಮಳೆಗಾಲದಲ್ಲಿ ಮತ್ತಷ್ಟು ಕುಸಿತ ಕಾಣುವ ಭೀತಿ ಎದುರಾಗಿದೆ. ಹವಾಮಾನ ಇಲಾಖೆಯ ಸೂಚನೆಯಂತೆ ರಾಜ್ಯಕ್ಕೆ ಅಧಿಕೃತವಾಗಿ ಜೂನ್ 4ರ ನಂತರ ಮುಂಗಾರು ಪ್ರವೇಶವಾಗಲಿದೆ. ಜೂನ್ 7ರ ಬಳಿಕ ಕರಾವಳಿಗೆ ಪ್ರವೇಶವಾಗಲಿದೆ.





ಬೆಳ್ತಂಗಡಿಯಲ್ಲೂ ಭಾರೀ ಮಳೆ

ಬೆಳ್ತಂಗಡಿ ತಾಲೂಕಿನ ಹಲವೆಡೆ ಮಂಗಳವಾರ ಸಂಜೆ ಭಾರಿ ಗಾಳಿ ಮಳೆಯಾಗಿದೆ. ಬೆಳ್ತಂಗಡಿ ನಗರ, ಉಜಿರೆ, ಮುಂಡಾಜೆ, ಸೋಮಂತಡ್ಕ, ಕಕ್ಕಿಂಜೆ. ಧರ್ಮಸ್ಥಳ, ಗುರುವಾಯನಕೆರೆ, ಅಳದಂಗಡಿ ಮುಂತಾದ ಕಡೆ ಉತ್ತಮ ಮಳೆಯಾಗಿದೆ. ಮುಂಡಾಜೆ ಗ್ರಾಮದ ಸೀಟು ರೋಡಿನಲ್ಲಿ ಗಾಳಿಗೆ, ಬೃಹತ್ ಗಾತ್ರದ ಮರ ಪುಂಜಾಲಕಟ್ಟೆ ಚಾರ್ಮಾಡಿ ರಾಷ್ಟ್ರೀಯ ಹೆದ್ದಾರಿಗೆ ಬಿದ್ದು, ಒಂದು ಗಂಟೆಗಳ ಕಾಲ ಟ್ರಾಫಿಕ್ ಜಾಮ್ ಉಂಟಾಯಿತು. ಸ್ಥಳಕ್ಕೆ ಧಾವಿಸಿದ ಮೆಸ್ಕಾಂ, ಅರಣ್ಯ ಇಲಾಖೆ ಸಿಬಂದಿ ಹಾಗೂ ಸ್ಥಳೀಯರು ಸೇರಿಕೊಂಡು ಮರ ಹಾಗೂ ವಿದ್ಯುತ್ ತಂತಿ ತೆರವು ಮಾಡಿದ್ದಾರೆ. ಘನ ವಾಹನಗಳು ಸಂಚರಿಸಲು ಸಾಧ್ಯವಾಗದೇ ರಸ್ತೆಯಲ್ಲಿ ನಿಲ್ಲುವಂತಾಗಿತ್ತು. ರಾಷ್ಟ್ರೀಯ ಹೆದ್ದಾರಿಯ ಚರಂಡಿ ಕಾಮಗಾರಿ ನಡೆಯದೇ ರಸ್ತೆಯಲ್ಲಿ ಮಳೆ ನೀರು ಹರಿದು ವಾಹನ ಸವಾರರು ಪರದಾಡುವಂತಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬೆಳ್ತಂಗಡಿ, ಉಪ್ಪಿನಂಗಡಿ, ಸುಳ್ಯ, ಸುಬ್ರಹ್ಮಣ್ಯ, ಕಡಬಮತ್ತುಬಂಟ್ವಾಳಪರಿಸರದಲ್ಲಿಮಂಗಳವಾರ ಸಂಜೆ ವೇಳೆಗೆ ಉತ್ತಮ ಮಳೆಯಾಗಿದೆ.

ರಸ್ತೆಯಲ್ಲೇ ನೀರು

ಮಂಗಳೂರಿನ ಬಹುತೇಕ ರಸ್ತೆಗಳು ಮೊದಲ ಭಾರೀ ಮಳೆಗೆ ನೀರು ಸಂಗ್ರಹಗೊಂಡು ವಾಹನ ಸವಾರು ಸುಗಮವಾಗಿ ಸಂಚರಿಸಲು ತೊಡಕಾಯಿತು. ಪಂಪ್‌ವೆಲ್, ಕೂಳೂರು, ಕೊಟ್ಟಾರ ಚೌಕಿ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಳೆನೀರು ಸರಾಗವಾಗಿ ಹರಿದು ಹೋಗಲು ರಾಜಕಾಲುವೆ ಹಾಗೂ ಚರಂಡಿ ವ್ಯವಸ್ಥೆ ಇಲ್ಲದೆ, ರಸ್ತೆಯಲ್ಲೇ ನೀರು ನಿಂತಿದ್ದುದು ಕಂಡುಬಂತು.

ಉಡುಪಿ ಜಿಲ್ಲೆಯಲ್ಲಿ ಸಾಧಾರಣ ಮಳೆ

ಉಡುಪಿ ಜಿಲ್ಲೆಯಾದ್ಯಂತ ಮಂಗಳವಾರ ಸಾಧಾರಣ ಮುಂಗಾರು ಪೂರ್ವ ಮಳೆಯಾಗಿದೆ. ಜಿಲ್ಲೆಯ ಕಾಪು, ಕಟಪಾಡಿ, ಶಿರ್ವ, ಪಡುಬಿದ್ರೆ, ಬ್ರಹ್ಮಾವರ ಹಾಗೂ ಮಲ್ಪೆ ಸೇರಿದಂತೆ ವಿವಿಧ ಭಾಗಗಳಲ್ಲಿ ಬೆಳಗಿನಿಂದಲೇ ಮೋಡಕವಿದ ವಾತಾವರಣವಿದ್ದು, ಮಧ್ಯಾಹ್ನದ ಬಳಿಕ ಜಿಟಿಜಿಟಿ ಮಳೆ ಸುರಿದಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮುಂಗಾರು ಪೂರ್ವ ಮಳೆ ಕೈಕೊಟ್ಟಿರುವುದು ಕರಾವಳಿಯ ರೈತರಲ್ಲಿ ಆತಂಕ ಮೂಡಿಸಿದೆ. ಕಳೆದ ವರ್ಷ ಮೇ ತಿಂಗಳಲ್ಲಿ ಜಿಲ್ಲೆಯಲ್ಲಿ ವಾಡಿಕೆಗಿಂತ ಭಾರಿ ಪ್ರಮಾಣದ ಮಳೆಯಾಗಿತ್ತು. ಮೇ ತಿಂಗಳ ವಾಡಿಕೆ ಮಳೆ 165 ಮಿ.ಮೀ. ಆಗಿದ್ದರೂ, ಕಳೆದ ವರ್ಷ ಬರೋಬ್ಬರಿ 836 ಮಿ.ಮೀ. ಅಂದರೆ ಶೇ. 408 ರಷ್ಟು ದಾಖಲೆಯ ಮಳೆ ಸುರಿದಿತ್ತು. ಆದರೆ, ಈ ವರ್ಷ ಮೇ ತಿಂಗಳಲ್ಲಿ ವಾಡಿಕೆ ಮಳೆಯಾದ 165 ಮಿ.ಮೀ.ಗೆ ಹೋಲಿಸಿದರೆ ಜಿಲ್ಲೆಯಲ್ಲಿ ಸುರಿದಿರುವುದು ಕೇವಲ 126 ಮಿ.ಮೀ. ಮಳೆ ಮಾತ್ರ. ಅಂದರೆ ಈ ಬಾರಿ ಶೇ. 23 ರಷ್ಟು ಮಳೆ ಕೊರತೆ ಎದುರಾಗಿದೆ. ಮುಂಗಾರು ಪೂರ್ವ ಮಳೆಯ ಈ ತೀವ್ರ ಕೊರತೆಯಿಂದಾಗಿ ಜಿಲ್ಲೆಯ ರೈತರಿಗೆ ಈ ಬಾರಿಯ ಮುಂಗಾರು ಕೃಷಿಯ ಆರಂಭಿಕ ಲಕ್ಷಣಗಳು ಆತಂಕ ತಂದೊಡ್ಡಿವೆ. ಮಳೆ ಕೊರತೆಯ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆಗಳಿಗೆ ಹಾಗೂ ಬಿತ್ತನೆಗೆ ಬೇಕಾದ ಯಾವುದೇ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲು ಜಿಲ್ಲೆಯ ಅನ್ನದಾತರಿಗೆ ಇದುವರೆಗೆ ಸಾಧ್ಯವಾಗಿಲ್ಲ.

ಬಡ ಮಹಿಳೆಯ ಗರ್ಭಕೋಶದಲ್ಲಿ 8 ಕೆ.ಜಿ ತೂಕದ ಗಡ್ಡೆ

ಉಡುಪಿ ಸರಕಾರಿ ಆಸ್ಪತ್ರೆ ವೈದ್ಯರ ಯಶಸ್ವಿ ಶಸ್ತ್ರಚಿಕಿತ್ಸೆ

ಉಡುಪಿ: ಇಲ್ಲಿನ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ತಜ್ಞ ವೈದ್ಯರ ತಂಡವು 44 ವರ್ಷದ ಬಡ ಮಹಿಳೆಯೊಬ್ಬರ ಗರ್ಭಕೋಶದಿಂದ 8 ಕೆ.ಜಿ ತೂಕದ ಬೃಹತ್ ಗಡ್ಡೆಯನ್ನು ಅತ್ಯಂತ ಯಶಸ್ವಿ ಶಸ್ತ್ರಚಿಕಿತ್ಸೆಯ ಮೂಲಕ ಹೊರತೆಗೆಯುವಲ್ಲಿ ಮಹತ್ವದ ಸಾಧನೆ ಮಾಡಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಲಕ್ಷಾಂತರ ರೂಪಾಯಿ ವೆಚ್ಚವಾಗುವ ಇಂತಹ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಯಲ್ಲೇ ಉಚಿತವಾಗಿ ನಡೆಸಿ ಬಡ ರೋಗಿಗೆ ಮರುಜೀವ ನೀಡಲಾಗಿದೆ.

ಗರ್ಭಿಣಿಯಂತಿದ್ದ ಹೊಟ್ಟೆ

44 ವರ್ಷದ ಈ ಮಹಿಳೆ ಕಳೆದ ಒಂದು ವರ್ಷದಿಂದ ತೀವ್ರ ಹೊಟ್ಟೆನೋವಿನಿಂದ ಬಳಲುತ್ತಿದ್ದರು. ಇದಕ್ಕಾಗಿ ಹಲವು ಖಾಸಗಿ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಕೊನೆಗೆ ಗುಣಮುಖರಾಗದ ಕಾರಣ ಬೇರೆ ದಾರಿ ಕಾಣದೆ ಮಹಿಳೆಯು ಉಡುಪಿಯ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ದಾಖಲಾಗಿದ್ದರು. ಆಸ್ಪತ್ರೆಯ ತಜ್ಞ ವೈದ್ಯರು ಮಹಿಳೆಯನ್ನು ಸೂಕ್ಷ್ಮವಾಗಿ ತಪಾಸಣೆ ನಡೆಸಿದಾಗ, ಆಕೆಯ ಹೊಟ್ಟೆಯು ಒಂಬತ್ತು ತಿಂಗಳ ಗರ್ಭಿಣಿಯ ಹೊಟ್ಟೆಯ ಗಾತ್ರದಂತೆ ಉಬ್ಬಿಕೊಂಡಿರುವುದು ಮತ್ತು ಒಳಗೆ ನೀರು ತುಂಬಿದ ಗೆಡ್ಡೆಯ ಸ್ಥಿತಿ ಇರುವುದು ಕಂಡುಬಂದಿದೆ. ತಕ್ಷಣ ಎಚ್ಚೆತ್ತ ವೈದ್ಯರು ರೋಗಿಯನ್ನು ಅಲ್ಟ್ರಾಸೌಂಡ್ ಹಾಗೂ ಸಿಟಿ ಸ್ಕ್ಯಾನ್ ಪರೀಕ್ಷೆಗಳಿಗೆ ಒಳಪಡಿಸಿದಾಗ, ಗರ್ಭಕೋಶದಲ್ಲಿ ಬೃಹತ್ ಗಾತ್ರದ ಗೆಡ್ಡೆ ಬೆಳೆದಿರುವುದು ಪತ್ತೆಯಾಗಿದೆ.

ಜಿಲ್ಲಾ ಸರ್ಜನ್ ಮಾರ್ಗದರ್ಶನ

ಯಶಸ್ವಿ ಶಸ್ತ್ರಚಿಕಿತ್ಸೆ ಗಡ್ಡೆಯ ಗಂಭೀರತೆಯನ್ನು ಅರಿತ ವೈದ್ಯರ ತಂಡವು ತಕ್ಷಣವೇ ಶಸ್ತ್ರಚಿಕಿತ್ಸೆ ನಡೆಸಲು ನಿರ್ಧರಿಸಿತು. ಜಿಲ್ಲಾ ಆಸ್ಪತ್ರೆ ಹಾಗೂ ತಾಯಿ–ಮಕ್ಕಳ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರಾದ (ಜಿಲ್ಲಾ ಸರ್ಜನ್) ಡಾ. ಹೆಚ್. ಅಶೋಕ್ ಅವರೊಂದಿಗೆ ಸುದೀರ್ಘವಾಗಿ ಚರ್ಚಿಸಿ, ಅವರ ಉಸ್ತುವಾರಿ ಹಾಗೂ ಸಲಹೆಯಂತೆ ಮೇ 25 ರಂದು ಶಸ್ತ್ರಚಿಕಿತ್ಸೆ ನಡೆಸಲಾಯಿತು. ಕೊನೆಗೆ ವೈದ್ಯರ ತಂಡವು ಮಹಿಳೆಯ ಗರ್ಭಕೋಶದಲ್ಲಿದ್ದ 8 ಕೆ.ಜಿ ಗಾತ್ರದ ಬೃಹತ್ ಗಡ್ಡೆಯನ್ನು ಯಶಸ್ವಿಯಾಗಿ ಹೊರತೆಗೆದಿದೆ. ಸದ್ಯ ರೋಗಿಯು ಸಂಪೂರ್ಣವಾಗಿ ಚೇತರಿಸಿಕೊಳ್ಳುತ್ತಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

> "ಇಷ್ಟೊಂದು ಬೃಹತ್ ಗಾತ್ರದ ಗರ್ಭಕೋಶದ ಗೆಡ್ಡೆಯನ್ನು ಯಾವುದೇ ಅಡ್ಡಪರಿಣಾಮಗಳಿಲ್ಲದೆ ಅತ್ಯಂತ ಸುರಕ್ಷಿತವಾಗಿ, ಯಶಸ್ವಿಯಾಗಿ ಶಸ್ತ್ರಚಿಕಿತ್ಸೆಯ ಮೂಲಕ ಹೊರತೆಗೆದ ಇಡೀ ತಜ್ಞ ವೈದ್ಯರ ತಂಡ ಮತ್ತು ಆಪರೇಷನ್ ಥಿಯೇಟರ್ ಸಿಬ್ಬಂದಿಯ ಕಾರ್ಯ ವೈಖರಿ ನಿಜಕ್ಕೂ ಪ್ರಶಂಸನೀಯ.ಇಂತಹ ಸಂಕೀರ್ಣ ಸವಾಲುಗಳನ್ನು ಎದುರಿಸಲು ನಮ್ಮ ವೈದ್ಯರು ಶಕ್ತರಾಗಿದ್ದಾರೆ ಎಂಬುದಕ್ಕೆ ಈ ಸಾಧನೆಯೇ ಸಾಕ್ಷಿ."
>
> ■ ಡಾ.ಎಚ್. ಅಶೋಕ್, ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ

ಸಾಧನೆ ಮಾಡಿದ ವೈದ್ಯರು ಹಾಗೂ ಸಿಬ್ಬಂದಿ ತಂಡ

ಆಸ್ಪತ್ರೆಯ ಸ್ತ್ರೀರೋಗ ತಜ್ಞರಾದ ಡಾ. ಶಶಾಂಕ್ ಕಿಣಿ, ಡಾ. ಜಾಸ್ಮಿನ್, ಡಾ. ಕವಿತಾ, ಡಾ. ಅಮೃತಾಂಶ್ ಅವರ ತಂಡ ಹಾಗೂ ಅರವಳಿಕೆ ತಜ್ಞರಾದ ಡಾ. ಸೂರ್ಯನಾರಾಯಣ, ಡಾ. ರಾಜ್ ಗೋಪಾಲ್ ಭಂಡಾರಿ ಅವರ ನೇತೃತ್ವದಲ್ಲಿ ಈ ಯಶಸ್ವಿ ಶಸ್ತ್ರಚಿಕಿತ್ಸೆ ನಡೆದಿದೆ. ಇವರಿಗೆ ಶುಶ್ರೂಷಣಾಧಿಕಾರಿ ರಕ್ಷಿತಾ ಹಾಗೂ ಒ.ಟಿ ಸಹಾಯಕಿ ಸಂಗೀತ ಅವರು ಯಶಸ್ವಿಯಾಗಿ ಸಹಕರಿಸಿದ್ದಾರೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 29° 24° | ಉಡುಪಿ 30° 24°

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 03, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 3

ಮಳೆಗಾಲದಲ್ಲಿ ಕಿಂಡಿ ಅಣೆಕಟ್ಟು ನಿರ್ವಹಣೆಯೇ ಸವಾಲು!



ಪುಟ 5

ಪಯಸ್ವಿನಿ ಹೊಳೆಗೆ ನೂತನ ಸೇತುವೆ ನಿರ್ಮಿಸಲು ಆಗ್ರಹ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸಮಾಜದಲ್ಲಿ ತೃತೀಯ ಲಿಂಗಿಗಳ ಬದುಕು, ಸಮಸ್ಯೆಯ ಜಾಗೃತಿ ಮೂಡಿಸಿದ ಬೀದಿ ನಾಟಕ







ಮಂಗಳವಾರ ನಗರದ ಬಿಜೈ ಕೆಎಸ್‌ಆರ್‌ಟಿಸಿ ಬಳಿ ಸಮಾಜದಲ್ಲಿ ತೃತೀಯ ಲಿಂಗಿಗಳ ಬದುಕು, ಅವರ ಸಮಸ್ಯೆಗಳ ಕುರಿತಾಗಿ ಜಾಗೃತಿ ಮೂಡಿಸುವ ಬೀದಿ ನಾಟಕ ಸಾರ್ವಜನಿಕರ ಗಮನಸೆಳೆಯಿತು. ಮಂಗಳೂರಿನ ರಥಬೀದಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ಸಮಾಜ ಕಾರ್ಯ ಅಧ್ಯಯನ ವಿಭಾಗದ ಪಠ್ಯೇತರ ಚಟುವಟಿಕೆಯ ಅಂಗವಾಗಿ ಈ ಬೀದಿ ನಾಟಕದ ಆಯೋಜನೆಯಾಗಿತ್ತು.

ಸುರತ್ಕಲ್ ಫ್ಲೈಓವರ್‌ನಲ್ಲಿ ಭಾರೀ ಗಾತ್ರದ ಸಿಮೆಂಟ್ ಕಲ್ಲಿನ ತುಂಡು ಕುಸಿತ



ಸುರತ್ಕಲ್: ರಾಷ್ಟ್ರೀಯ ಹೆದ್ದಾರಿ 66ರ ಸುರತ್ಕಲ್ ಫ್ಲೈಓವರ್‌ನ ಕೆಳಭಾಗದಿಂದ ಬಾರಿ ಗಾತ್ರದ ಸಿಮೆಂಟ್ ಕಲ್ಲಿನ ತುಂಡು ಮಂಗಳವಾರ ಸಂಜೆ ಬಿದ್ದಿದ್ದು ಯಾರೂ ಇಲ್ಲದರಿಂದ ದೊಡ್ಡ ಅನಾಹುತವೊಂದು ಕೂದಲೆಳೆ ಅಂತರದಲ್ಲಿ ತಪ್ಪಿದೆ. ಸಂಜೆ ವೇಳೆ ಫ್ಲೈಓವರ್‌ನ ಕೆಳ ಭಾಗದ ಒಂದು ತುಂಡು ದಿಢೀರ್ ಕುಸಿದು ಬಿದ್ದಿದೆ. ಆ ವೇಳೆ ದ್ವಿಚಕ್ರ ಸವಾರರು ಅಥವಾ ಪಾದಚಾರಿಗಳು ಹೋಗುತ್ತಿದ್ದರೆ ಭಾರಿ ಅಪಾಯ ಸಂಭವಿಸುತ್ತಿತ್ತು ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಇನ್ನೂ ಬೀಳುವ ಭೀತಿ:

ಫ್ಲೈಓವರ್‌ನ ಇತರೆ ಭಾಗದಲ್ಲೂ ಸಿಮೆಂಟ್ ಕಲ್ಲುಗಳು ಸಡಿಲವಾಗಿದ್ದು, ಯಾವಾಗ ಬೇಕಾದರೂ ಕೆಳಗೆ ಬೀಳುವ ಸಾಧ್ಯತೆ ಇದೆ. ಪ್ರತಿನಿತ್ಯ ನೂರಾರು ವಾಹನಗಳು, ಪಾದಚಾರಿಗಳು ಈ ಮಾರ್ಗದಲ್ಲಿ ಸಂಚರಿಸುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತಕ್ಷಣ ಸ್ಥಳ ಪರಿಶೀಲನೆ ನಡೆಸಬೇಕು. ಸಡಿಲವಾಗಿರುವ ಕಾಂಕ್ರೀಟ್ ಭಾಗಗಳನ್ನು ತೆರವುಗೊಳಿಸಿ ದುರಸ್ತಿ ಕಾರ್ಯ ಕೈಗೊಳ್ಳಬೇಕು. ತಾತ್ಕಾಲಿಕವಾಗಿ ಫ್ಲೈಓವರ್ ಕೆಳಭಾಗದಲ್ಲಿ ಜನರು ನಿಲ್ಲದಂತೆ ಎಚ್ಚರಿಕೆ ಫಲಕ ಅಳವಡಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಶಾಲಾ ಸುತ್ತ ಮಾದಕ ವಸ್ತು ವಿರುದ್ಧ ಕಾರ್ಯಾಚರಣೆ

ಬೀಳಲಿದೆ ದಂಡ!

ಕಾಸರಗೋಡಿನಲ್ಲಿ ರೈಡ್। ಅಂಗಡಿಗಳಿಗೆ ಎಚ್ಚರಿಕೆ

ಕಾಸರಗೋಡು: ಎಲ್ಲೆಡೆ ಶಾಲಾರಂಭವಾಗಿದೆ. ದಕ್ಷಿಣ ಕನ್ನಡ, ಉಡುಪಿ, ಕೊಡಗು, ಕಾಸರಗೋಡು ಸೇರಿದಂತೆ ಎಲ್ಲಾ ಜಿಲ್ಲೆಗಳ ಶಾಲೆಗಳಲ್ಲೂ ಕಳೆದ ಎರಡು ದಿನಗಳಿಂದ ಮಕ್ಕಳ ಕಲರವ ಕೇಳಿಬರುತ್ತಿದೆ. ಪ್ರತಿ ಬಾರಿ ಶಾಲಾರಂಭವಾದಾಗಲೂ ಶಾಲಾ ಸುತ್ತ ಮುತ್ತಲಿನ ಅಂಗಡಿ ಮುಂಗಟ್ಟುಗಳತ್ತ ಪೊಲೀಸರು ವಿಶೇಷ ನಿಗಾ ವಹಿಸುತ್ತಾರೆ. ಈ ಬಾರಿಯೂ ಅದು ಮುಂದುವರಿದಿದೆ.

ಕಾಸರಗೋಡಿನಲ್ಲಿ ಮಿಂಚಿನ ದಾಳಿ

ಕಾಸರಗೋಡಿನಲ್ಲಿ ಮಂಗಳವಾರ ಹಲವು ಶಾಲಾ ಸುತ್ತಮುತ್ತಲಿನ ಅಂಗಡಿಗಳಿಗೆ ಅಬಕಾರಿ ಇಲಾಖಾ ತಂಡದಿಂದ ದಿಢೀರ್ ದಾಳಿ ನಡೆದಿದೆ. ಆಪರೇಷನ್ ತಂಡರ್ ಯೋಜನೆಯಂತೆ ಅಬಕಾರಿ ಇಲಾಖೆ ಗುಪ್ತಚರ ವಿಭಾಗದವರು ಜಿಲ್ಲೆಯ ಎಲ್ಲಾ ಶಾಲಾ ಪರಿಸರಗಳ ಅಂಗಡಿಗಳಿಗೆ ಕ್ಷಿಪ್ರ ದಾಳಿ , ಸಮಗ್ರ ತಪಾಸಣೆ ನಡೆಸಿದರು. ಅಬಕಾರಿ ಗುಪ್ತಚರ ವಿಭಾಗ ಇನ್‌ಸ್ಪೆಕ್ಟರ್ ಸುಬಿನ್‌ರಾಜ್ ನೇತೃತ್ವದ ಅಬಕಾರಿ ತಂಡ



ಮಾದಕ ವಸ್ತುವಿನತ್ತ ನಿಗಾ!

ಶಾಲಾ ಸುತ್ತಮುತ್ತಲಿನ ಅಂಗಡಿ ಮುಂಗಟ್ಟುಗಳಲ್ಲಿ ಯಾವುದೇ ಮಾದಕ ವಸ್ತು, ಸಿಗರೇಟ್, ತಂಬಾಕು ಇತ್ಯಾದಿಗಳನ್ನು ಮಾರುವಂತಿಲ್ಲ. ಕೆಲವೆಡೆ ನಿಯಮಗಳ ಉಲ್ಲಂಘನೆ ಯಾಗುತ್ತಿರುವುದರಿಂದ ಪೊಲೀಸರು ವಿಶೇಷ ನಿಗಾವಹಿಸಿದ್ದು, ತಪಾಸಣೆ ಕೈಗೆತ್ತಿಕೊಂಡಿದ್ದಾರೆ.

ವ್ಯಾಪಕ ಕಾರ್ಯಾಚರಣೆ ನಡೆಸಲಾಗಿದ್ದು, ಯಾವುದೇ ಅಮಲು ಪದಾರ್ಥ ಸಿಕ್ಕಿಲ್ಲ. ದಾಳಿ ವೇಳೆ ಅಧಿಕಾರಿಗಳ ತಂಡ ನಿಯಮ ಕಟ್ಟುನಿಟ್ಟಾಗಿ ಪಾಲಿಸುವಂತೆ ಸ್ಪಷ್ಟ ಸೂಚನೆ ನೀಡಿದೆ. ಅಲ್ಲದೆ ಅಬಕಾರಿ ತಂಡ ಶಾಲೆಗಳ ಸಂದರ್ಶಿಸಿ ಅಮಲು ಪದಾರ್ಥ ವಿರುದ್ಧ ಶಾಲೆಗಳಲ್ಲಿ ರೂಪಿಸಲಾಗಿರುವ ವಿಮುಕ್ತಿ ಸಮಿತಿ ಹೊಣೆಗಾರಿಕೆ ಹೊಂದಿರುವ ಅಧ್ಯಾಪಕ ರೊಂದಿಗೆ ಚರ್ಚೆನಡೆಸಿತು.

ಎಲ್ಲೆಲ್ಲಿ ತಪಾಸಣೆ?

ಕಾಸರಗೋಡಿನ ನೀಲೇಶ್ವರ ಅಬಕಾರಿ ರೇಂಜ್ ಕಚೇರಿ ವ್ಯಾಪ್ತಿಗೊಳಪಟ್ಟ ಪ್ರದೇಶ ಶಾಲೆಗಳ ಪರಿಸರದ ಅಂಗಡಿಗಳಲ್ಲಿ ವಿಶೇಷ ತಪಾಸಣೆ ನಡೆಸಲಾಯಿತು. ಗುಪ್ತಚರ ವಿಭಾಗದ ಅಸಿಸ್ಟೆಂಟ್ ಇನ್‌ಸ್ಪೆಕ್ಟರ್ (ಗ್ರೇಡ್) ಮುರಳಿ ಕೆ.ವಿ., ನೀಲೇಶ್ವರ ರೇಂಜ್ ಅಸಿಸ್ಟೆಂಟ್ ಎಕ್ಸೈಸ್ ಇನ್‌ಸ್ಪೆಕ್ಟರ್ (ಗ್ರೇಡ್) ರಾಜನ್ , ರಮ್ಯಾ ಮತ್ತಿತರರು ಕಾರ್ಯಾಚರಣೆಯಲ್ಲಿದ್ದರು. ನಿಯಮ ಉಲ್ಲಂಘಿಸುವವರ ವಿರುದ್ಧ ದಂಡ ವಿಧಿಸುವ ಎಚ್ಚರಿಕೆಯನ್ನು ಅಬಕಾರಿ ಇಲಾಖೆ ಅಧಿಕಾರಿಗಳು ನೀಡಿದ್ದಾರೆ.

ನಿರಂತರ ಕಾರ್ಯಾಚರಣೆ

ಶಿಕ್ಷಣ ಸಂಸ್ಥೆಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ತಂಬಾಕು, ಸಿಗರೇಟ್ ಇತ್ಯಾದಿ ಮಾದಕ ವಸ್ತುಗಳ ಮಾರಾಟಕ್ಕೆ ನಿಷೇಧವಿದ್ದು, ಅಂಗಡಿ ಮಾಲಕರು ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಇಲಾಖಾ ಅಧಿಕಾರಿಗಳು ತಿಳಿಸಿದ್ದಾರೆ.

ರಸ್ತೆಯಲ್ಲೇ ಹರಿಯುತ್ತಿರುವ ಮಳೆ ನೀರು!

ಮಳೆಗಾಲಕ್ಕೆ ಇನ್ನೂ ಸಿದ್ಧಗೊಳ್ಳದ ಸುಳ್ಯ!

ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಆಕ್ರೋಶ

ಸುಳ್ಯ: ಮಳೆಗಾಲ ಹತ್ತಿರವಾದರೂ ಸುಳ್ಯ ನಗರ ಹಾಗೂ ಗ್ರಾಮೀಣ ಭಾಗದ ಚರಂಡಿ ವ್ಯವಸ್ಥೆ ಮಾತ್ರ ಇನ್ನೂ ಸರಿಯಾಗಿಲ್ಲ. ಮಂಗಳವಾರ ಸುರಿದ ಭಾರೀ ಮಳೆಗೆ ನೈಜತೆಯ ಅನಾವರಣವಾಗಿದೆ.

ಸುಳ್ಯ ಆಡೂರು ರಸ್ತೆಯ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಅಜ್ಜಾವರ ಶಾಲಾ ಬಳಿ ಮಳೆ ನೀರು ಸಂಪೂರ್ಣ ರಸ್ತೆಯಲ್ಲೇ ಹರಿಯುತ್ತಿದ್ದು, ಮುಂದೆ ಭಾರೀ ಮಳೆಯಾದರೆ ಪರಿಸ್ಥಿತಿ ಹೇಗಿದ್ದೀತು ಎಂಬ ಪ್ರಶ್ನೆ ಹುಟ್ಟು ಹಾಕಿದೆ.

ಅಧಿಕಾರಿಗಳು ಎಚ್ಚೆತ್ತುಕೊಂಡಿಲ್ಲ

ನಗರ ಹಾಗೂ ಗ್ರಾಮೀಣ ಭಾಗದ ಜಿಲ್ಲಾ ಪಂಚಾಯತ್ ರಸ್ತೆಗಳು, ಗ್ರಾಮೀಣ ಭಾಗದ ಗ್ರಾಮ ಪಂಚಾಯತ್ ರಸ್ತೆಗಳು, ಅಂತರ್ ರಾಜ್ಯ ಸಂಪರ್ಕಿಸುವ ಲೋಕೋಪಯೋಗಿ ರಸ್ತೆ ಗಳು ಸೇರಿದಂತೆ ಎಲ್ಲಾ ರಸ್ತೆಗಳಲ್ಲಿ ಮಳೆಗಾಲ ಪೂರ್ವ ಚರಂಡಿ ದುರಸ್ತಿ ಕಾರ್ಯ ಆಗಬೇಕಿತ್ತು. ಆದರೆ, ಮಳೆಗಾಲ ತಡವಾಗಿ ಆರಂಭವಾಗಿದ್ದರೂ ಅಧಿಕಾರಿಗಳು ಎಚ್ಚೆತ್ತುಕೊಂಡಂತೆ ಕಾಣಿಸುತ್ತಿಲ್ಲ.

ಚರಂಡಿ ಹೂಳೆತ್ತುವ ಕಾರ್ಯವಾಗಲಿ

ಮಳೆಗಾಲ ಆರಂಭಕ್ಕೆ ಕೇವಲ ಒಂದು ದಿನ ಬಾಕಿಯಿರು ವಂತೆ ಸುರಿದ ಮಳೆಯ ನೀರು ಸಂಪೂರ್ಣ ರಸ್ತೆಯಲ್ಲಿ ಹರಿಯುವ ದೃಶ್ಯಗಳು ಸುಳ್ಯ ತಾಲೂಕಿನ ಎಲ್ಲಾ ಕಡೆಗಳಲ್ಲಿ ಸಾಮಾನ್ಯವಾಗಿ ಕಾಣಿಸುತ್ತಿತ್ತು. ಈ ನಿಟ್ಟಿನಲ್ಲಿ ಆಡಳಿತ ಕೂಡಲೇ ಎಚ್ಚೆತ್ತು ಚರಂಡಿಗಳ ಹೂಳೆತ್ತುವಿಕೆ ಕಾರ್ಯವನ್ನು ನಡೆಸಿ ಮಳೆ ನೀರು ಸರಾಗವಾಗಿ ಚರಂಡಿಯಲ್ಲಿ ಹರಿಯುವಂತೆ ಮಾಡಬೇಕಿದೆ.



- ಸುಳ್ಯ ಆಡೂರು ರಸ್ತೆಯ ದಕ್ಷಿಣ ಕನ್ನಡ ಜಿ.ಪಂ.ಅಜ್ಜಾವರ ಶಾಲಾ ಬಳಿ ರಸ್ತೆಯಲ್ಲೇ ಹರಿಯುತ್ತಿರುವ ಮಳೆ ನೀರು
- ಚರಂಡಿ ದುರಸ್ತಿ ಕಾರ್ಯ ನಡೆಯದೆ ಸಮಸ್ಯೆ

ಸುತ್ತಮುತ್ತ

ಹೈದರಾಬಾದ್-ಮಂಗಳೂರು ನಡುವೆ ವಿಶೇಷ ರೈಲು ಓಡಾಟ

ಮಂಗಳೂರು: ಹೈದರಾಬಾದ್ –ಮಂಗಳೂರು ನಡುವೆ ವಿಶೇಷ ರೈಲು ಓಡಾಟ ನಡೆಸಲು ಭಾರತೀಯ ರೈಲ್ವೆ ಇಲಾಖೆ ನಿರ್ಧರಿಸಿದೆ. ಹೈದರಾಬಾದ್ ಮತ್ತು ಮಂಗಳೂರು ಸೆಂಟ್ರಲ್ ನಡುವೆ ಹೆಚ್ಚುವರಿ ಸೀಟುಗಳ ಬೇಡಿಕೆಯನ್ನು ಪೂರೈಸಲು ನಾಲ್ಕು ವಾರಗಳ ಕಾಲ 4 ರೌಂಡ್ ಟ್ರಿಪ್‌ಗಳ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಸೇವೆಯನ್ನು ಪ್ರಕಟಿಸಲಾಗಿದೆ. ಈ ರೈಲು ತೆಲಂಗಾಣ, ಕರ್ನಾಟಕ ಹಾಗೂ ಕೇರಳ ಮೂರೂ ರಾಜ್ಯಗಳ ಪ್ರಯಾಣಿಕರಿಗೆ ನೆರವಾಗಲಿದೆ. ಜೂನ್ ತಿಂಗಳಲ್ಲಿ ಪ್ರಯಾಣಿಕರ ದಟ್ಟನೆ ಇರುವುದರಿಂದ ಈ ವಿಶೇಷ ರೈಲಿನ ವ್ಯವಸ್ಥೆ ಮಾಡಲಾಗುತ್ತಿದೆ.

ರಸ್ತೆಯ ಇಕ್ಕೆಲಗಳಲ್ಲಿ ಕಸದ ರಾಶಿ। ಪುರಸಭೆ ಮೌನಕ್ಕೆ ಜನತೆಯ ಆಕ್ರೋಶ

ತ್ಯಾಜ್ಯ ರಾಶಿಯಿಂದ ಮುಕ್ತಿ ಕಾಣದ ಕಾರ್ಕಳ ನಗರ

■ ಗಣೇಶ್ ನಾಯಕ್, ಸಾಣೂರು

ಕಾರ್ಕಳ: ಸ್ವಚ್ಛ ಕಾರ್ಕಳ ಸ್ವರ್ಣ ಕಾರ್ಕಳ ಕನಸು ಕಾಣುತ್ತಿರುವ ಅಧಿಕಾರಿಗಳು ನಗರದಲ್ಲಿ ಕಸ ವಿಲೇವಾರಿ ಮಾಡುವುದನ್ನು ಮರೆತಂತೆ ಕಾಣುತ್ತಿದೆ. ಪರಿಣಾಮ ನಗರದ ವಿವಿಧ ವಾರ್ಡ್‌ನಲ್ಲಿ ತ್ಯಾಜ್ಯ ವಿಲೇವಾರಿಯಾಗದೆ ರಸ್ತೆಯುದ್ದಕ್ಕೂ ಕಸದ ರಾಶಿ ರಾರಾಜಿಸುತ್ತಿದೆ. ಇದು ಕಾಣುವುದು ಕಾರ್ಕಳ ಪುರಸಭೆ ವ್ಯಾಪ್ತಿಯ ರಸ್ತೆ ಬದಿ. ಇಂಥ ಅವ್ಯವಸ್ಥೆ ಸೃಷ್ಟಿಗೆ ಕಾರಣವಾದ ಸ್ಥಳೀಯ ಪುರಸಭೆಗೆ ಜನರು ಹಿಡಿಶಾಪ ಹಾಕುತ್ತಿದ್ದಾರೆ.

ಎಲ್ಲೆಲ್ಲೂ ಕಸದ ರಾಶಿ

ಕಾರ್ಕಳ ಪುರಸಭಾ ವ್ಯಾಪ್ತಿಯ ಫಿಷರಿಸ್ ರಸ್ತೆ, ತೆಳ್ಳರ್ ರಸ್ತೆ, ಮಾರ್ಕೆಟ್ ರಸ್ತೆ, ಎಸ್. ವಿ.ಟಿ. ಶಾಲಾ ಬಳಿ ಹೀಗೆ ಹಲವಾರು ಕಡೆಗಳಲ್ಲಿ ಮನೆಯ ಆವರಣ ಗೋಡೆ ಮೇಲೆ ಕಸದ ಚೀಲಗಳು ನೇತಾಡುವ , ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ದೃಶ್ಯಗಳು ಕಣ್ಣಿಗೆ ರಾಚುತ್ತಿವೆ. ಇದೀಗ ಆಗಾಗ ಸುರಿಯುತ್ತಿರುವ ಮಳೆಯಿಂದ ಈ ಮತಷ್ಟು ಸಮಸ್ಯೆ ಹೆಚ್ಚುವ ಸಾಧ್ಯತೆ ಇದೆ.



ಚರಂಡಿಗಳಲ್ಲೂ ತ್ಯಾಜ್ಯ

ಹಲವು ಕಡೆಗಳಲ್ಲಿ ಚರಂಡಿಗಳಲ್ಲೂ ಕಸದ ರಾಶಿ ಹೆಚ್ಚಿದೆ. ಚರಂಡಿಗಳಲ್ಲಿ ಪ್ಲಾಸ್ಟಿಕ್ ಕವರ್, ತ್ಯಾಜ್ಯ ಸುರಿಯುವುದರಿಂದ ನೀರು ಸರಾಗವಾಗಿ ಹರಿಯುತ್ತಿಲ್ಲ. ಪರಿಣಾಮ ನೀರು ಅಲ್ಲೇ ಮಡುಗಟ್ಟಿ ಸೊಳ್ಳೆಗಳ ಹಾವಳಿಗಳು ಹೆಚ್ಚುತ್ತಿದೆ. ಇದರಿಂದ ರೋಗ ಹರಡುವ ಭೀತಿ ಜನತೆಯಲ್ಲಿ ಉಂಟಾಗಿದೆ.

> **ಕ್ರಮ ಕೈಗೊಳ್ಳಿ**
> ಪುರಸಭೆ ಅಧಿಕಾರಿಗಳು ಶೀಘ್ರ ಎಚ್ಚೆತ್ತುಕೊಂಡು ಕಸ ವಿಲೇವಾರಿ ನಿರ್ವಹಣೆಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಿದೆ.
> ● ಪ್ರಕಾಶ್ ರಾವ್ , ಕಾರ್ಕಳ ಪುರಸಭಾ ಮಾಜಿ ಸದಸ್ಯರು

ಇಲ್ಲಿ ಜನರ ಆರೋಗ್ಯಕ್ಕಿಲ್ಲ ರಕ್ಷಣೆ

ಬೀದಿಬೀದಿಗಳಲ್ಲಿ ಸುರಿಯುವ ಕಸ ಅಲ್ಲೇ ಕೊಳೆತು ದುರ್ವಾಸನೆ ಉಂಟಾಗುತ್ತಿದ್ದು, ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಅಧಿಕಾರಿಗಳ ಕರ್ತವ್ಯ ಲೋಪದಿಂದ ದಿನೇದಿನೆ ಕಸದ ಸಮಸ್ಯೆ ದ್ವಿಗುಣಗೊಳ್ಳುತ್ತಿದೆ. ಕಳೆದ ಒಂದು ವಾರದಿಂದ ನಗರದ ಹಲವೆಡೆ ಕಸ ವಿಲೇವಾರಿ ಸಮಸ್ಯೆ ಎದುರಾಗಿದೆ.

ಗಾಳಿ ಮಳೆಗೆ ಹಾರಿ ಹೋದ ಮನೆ ಮೇಲ್ಛಾವಣಿ



ಬೀಸಿದ ಭಾರೀ ಗಾಳಿಮಳೆಗೆ ಗೋಳಿತ್ತೊಟ್ಟು, ಬಜತ್ತೂರು, ಕೊಯಿಲ, ಉಪ್ಪಿನಂಗಡಿ ಗ್ರಾಮದ ಕೆಲವು ಪ್ರದೇಶಗಳಲ್ಲಿ 26 ವಿದ್ಯುತ್ ಕಂಬಗಳು, ಅಡಿಕೆ ಗಿಡಗಳು ಧರೆಗುರುಳಿವೆ. ಕೊಡಂಗೆನಿವಾಸಿ ಜಗದೀಶ್ ಅವರ ಮನೆ ಶೀಟಿನ ಮೇಲ್ಛಾವಣಿ ಗಾಳಿಗೆ ಹಾರಿ ಹೋದ ಘಟನೆಯೂ ನಡೆದಿದೆ.

1.90 ಕೋಟಿ ರೂ.ವೆಚ್ಚದಲ್ಲಿ ನಡೆಯಲಿದೆ ಅಭಿವೃದ್ಧಿ। ಇಲಾಖೆಯ ಆಡಳಿತಾತ್ಮಕ ಅನುಮೋದನೆ ದೊರೆತ ಬಳಿಕ ಕಾಮಗಾರಿ ಆರಂಭ

ಬಂಟ್ವಾಳ ಗಿರಿಗುಡ್ಡೆಯ ಕೆರೆಗೆ ಬೂಡಾದಿಂದ ಸಿಗಲಿದೆ ಶೀಘ್ರ ಕಾಯಕಲ್ಪದ ಭಾಗ್ಯ!

ಸಂಗಮ ವಿಶೇಷ

ಬಂಟ್ವಾಳ: ಇಲ್ಲಿನ ಪುರಸಭಾ ವ್ಯಾಪ್ತಿಯಲ್ಲಿ ನೀರು ತುಂಬಿದ್ದ ಬಳಕೆಗೆ ಆಗುವಂತ ಕೆರೆಗಳು, ಸರಕಾರಿ ಬಾವಿಗಳಿದ್ದರೂ, ಸದ್ಯ ಅವೆಲ್ಲವು ಪುರಸಭೆಯ ಕಡತಕ್ಕೆ ಸೀಮಿತವಾದಂತಿದ್ದು, ಇವುಗಳ ಪೈಕಿ ಬಹುತೇಕ ಬಾವಿಗಳು ಮುಚ್ಚಲ್ಪಟ್ಟರೆ, ಕೆರೆಗಳು ಅಜೀರ್ಣಾವಸ್ಥೆಯಲ್ಲಿದೆ. ಒಂದು ಕಾಲದಲ್ಲಿ ಗುಡ್ಡದ ತಪ್ಪಲಿನ ಜಲ ಸಂಪತ್ತಿನ ಆಗರವಾಗಿದ್ದ ಬಂಟ್ವಾಳ ಗಿರಿಗುಡ್ಡೆಯ ಕೆರೆಗೆ ಬಂಟ್ವಾಳ ನಗರ ಯೋಜನಾ ಪ್ರಾಧಿಕಾರದಿಂದ ಕಾಯಕಲ್ಪದ ಭಾಗ್ಯ ದೊರೆಯಲಿದೆ.


2.25 ಎಕ್ರೆ ವಿಸ್ತೀರ್ಣದ ಕೆರೆ

ಬಂಟ್ವಾಳ ನಗರ ಯೋಜನಾ ಪ್ರಾಧಿಕಾರ ಈ ಸಂಬಂಧ ದಕ್ಷಿಣ ಕನ್ನಡ ಜಿಲ್ಲಾ ನಿರ್ಮಿತಿ ಕೇಂದ್ರದ ನಿರ್ದೇಶ ಕರು ತಯಾರಿಸಿರುವ ಅಂದಾಜುಪಟ್ಟಿ ವಿಸ್ತ್ರತಾ ಯೋಜನಾ ವರದಿ (ಡಿಪಿಆರ್)ಗೆ ಸಂಬಂಧಿಸಿದ ಇಲಾಖೆ ಆಡಳಿತಾತ್ಮಕ ಮಂಜೂರಾತಿ ನೀಡಿದರೆ ಶೀಘ್ರ ಸುಮಾರು 1.90 ಕೋಟಿ ರೂಪಾಯಿ ವೆಚ್ಚದಲ್ಲಿ 2.25 ಎಕ್ರೆ ವಿಸ್ತೀರ್ಣ ಹೊಂದಿರುವ ಗಿರಿಗುಡ್ಡೆ ಕೆರೆ ಅಭಿವೃದ್ಧಿಯ ಭಾಗ್ಯ ಕಾಣಲಿದೆ.

ಮೇ ತಿಂಗಳಲ್ಲಿ ಪ್ರಾಧಿಕಾರದ ಅಧ್ಯಕ್ಷ ಬೇಬಿಕುಂದರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆರೆಯ ಅಭಿವೃದ್ಧಿ ಕಾರ್ಯಕ್ಕೆ ಪುನರುಜ್ಜೀವನ ಶುಲ್ಕವನ್ನು ಬಳಸಿಕೊಳ್ಳಲು ತೀರ್ಮಾನ ಕೈಗೊಂಡು ಬಳಿಕ ಜಿಲ್ಲಾಕಾರಿ ನೇತೃತ್ವದ ಸಮಿತಿ ಮುಂದೆ ಮಂಡಿಸಿ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದು ಪ್ರಸ್ತಾವನೆಯನ್ನು ಇಲಾಖೆಯ ಕಾರ್ಯದರ್ಶಿಯವರಿಗೆ ಕಳುಹಿಸಲಾಗಿದ್ದು, ಅಲ್ಲಿ ಅನುಮೋದನೆ ದೊರೆತ ಬಳಿಕ ಕಾಮಗಾರಿ ಆರಂಭಕ್ಕೆ ಅನುಮತಿ ಸಿಗಲಿದೆ. ಸದ್ಯ ಇಲಾಖೆಯ ಆಡಳಿತಾತ್ಮಕ ಅನುಮೋದನೆಗೆ ಕಾಯಲಾಗುತ್ತಿದೆ.

ಗಿಡ ಗಂಟಿಯಿಂದ ಆವೃತವಾಗಿದೆ

ಬಂಟ್ವಾಳ ಬೈಪಾಸ್ ಜಂಕ್ಷನ್‌ನಿಂದ ಕೇವಲ 200ರಿಂದ 300 ಮೀ. ದೂರದಲ್ಲಿರುವ ಗಿರಿಗುಡ್ಡದ ಕೆರೆ ಈಗ ಸಂಪೂರ್ಣ ದುಃಸ್ಥಿತಿಯಲ್ಲಿದ್ದು ,ಪ್ರಸ್ತುತ ಗಿಡ ಗಂಟಿಯಿಂದ ಆವೃತವಾದ ಪೊದೆಗಳ ರಾಶಿ ಮಧ್ಯದಲ್ಲಿದೆ. ಒಂದು ಕಾಲದಲ್ಲಿ ಜಲ ಸಂಪತ್ತಿನ ಆಗರವಾಗಿದ್ದ ಪ್ರದೇಶ ಈಗ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದ್ದು, ಬಂಟ್ವಾಳ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಬೇಬಿ ಕುಂದರ್ ಅವರನ್ನೊಳಗೊಂಡ ಸಮಿತಿ ಆದ್ಯತೆ ಮೇರೆ ಈ ಕೆರೆ ಅಭಿವೃದ್ಧಿ ಪಡಿಸುವ ಯೋಜನೆ ರೂಪಿಸಿ ಮುಂದಡಿ ಇಟ್ಟಿದೆ. »ಪುಟ 6



> **ಪ್ರಸ್ತಾವನೆ ಸಲ್ಲಿಸಲಾಗಿದೆ**
> ಗಿರಿಗುಡ್ಡೆ ಕೆರೆ ಅಭಿವೃದ್ಧಿಗೆ ಬಂಟ್ವಾಳ ನಗರ ಯೋಜನಾ ಪ್ರಾಕಾರದಿಂದ ತೀರ್ಮಾನೆ ಮಾಡಲಾಗಿದ್ದು, ಸುಮಾರು 1.95 ಕೋ.ರೂ. ವಿನ ಅಂದಾಜು ಪಟ್ಟಿಯ ಜೊತೆ ಡಿಪಿಆರ್ ತಯಾರಿಸಿ ಆಡಳಿತಾ ತ್ಮಕ ಅನುಮೋದನೆಗೆ ಸಂಬಂಧಿಸಿದ ಇಲಾಖೆಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮೋದನೆ ನೀಡಿದ ನಂತರ ಕಾಮಗಾರಿ ಆರಂಭಕ್ಕೆ ಅನುಮತಿ ಸಿಗಲಿದೆ.
> ● ಬೇಬಿ ಕುಂದರ್, ಅಧ್ಯಕ್ಷರು,ಬಂಟ್ವಾಳ ನಗರ ಯೋಜನಾ ಪ್ರಾಧಿಕಾರ

ಏನಿದು ಗಿರಿಗುಡ್ಡೆ ಕೆರೆ?

ಸಾಮಾನ್ಯವಾಗಿ ಎತ್ತರದ ಪ್ರದೇಶವೆಂದರೆ ಅಲ್ಲಿ ನೀರಿಲ್ಲ, ಬರೀ ಬೋಳು ಗುಡ್ಡೆ ಎಂಬುದು ಕೆಲವರ ಅಭಿಪ್ರಾಯ. ಆದರೆ ಬಂಟ್ವಾಳ ಪುರಸಭಾ ವ್ಯಾಪ್ತಿಯ ಗಿರಿಗುಡ್ಡೆಯ ಎತ್ತರದ ಪ್ರದೇಶದಲ್ಲಿ ಒಂದೊಮ್ಮೆ ನೀರಿಗೇನೂ ಕೊರತೆ ಇರಲಿಲ್ಲ, ಅದೆಷ್ಟೋ ವರ್ಷದ ಹಿಂದೆ ಈ ಪ್ರದೇಶದಲ್ಲೇ ಸುಮಾರು 2.25 ಎಕರೆ ವಿಸ್ತೀರ್ಣದಲ್ಲಿ ಗಿರಿಗುಡ್ಡೆ ಕೆರೆ ಇತ್ತು.ಈ ಕೆರೆಗೆ ಧಾರ್ಮಿಕ ಹಿನ್ನೆಲೆಯೂ ಇದ್ದು, ರಾಯರಬಾವಡಿ ದೈವಸ್ಥಾನದ ಜತೆಗೆ ಸ್ಥಳೀಯ ದೈವ ಸಾನಿಧ್ಯ ಗಳಿಗೂ ಈ ಕೆರೆ ಸಂಬಂಧ ಎಂಬುದು ಸ್ಥಳೀಯರ ನಂಬಿಕೆ.

ಸುತ್ತಮುತ್ತ

ಎಂಆರ್‌ಪಿಎಲ್ ಕಾರ್ಯನಿರ್ವಾಹಕ ನಿರ್ದೇಶಕರ ನೇಮಕ

ಮಂಗಳೂರು: ಎಂಆರ್‌ಪಿಎಲ್ ಕಾರ್ಯನಿರ್ವಾಹಕ ನಿರ್ದೇಶಕ (ಪ್ರಾಜೆಕ್ಟ್ಸ್) ಆಗಿ ಪತ್ತಾಥಿಲ್ ಸುಜಿತ್ ನೇಮಕಗೊಂಡಿದ್ದಾರೆ. ಈ ಹಿಂದೆ ಅವರು ಸಂಸ್ಥೆಯ ಕಾರ್ಪೊರೇಟ್ ಸ್ಟ್ರಾಟಜಿ ವಿಭಾಗದಲ್ಲಿ ಗ್ರೂಪ್ ಜನರಲ್ ಮ್ಯಾನೇಜರ್ ಆಗಿ ಸೇವೆ ಸಲ್ಲಿಸುತ್ತಿದ್ದು, ಸಂಸ್ಥೆಯ ದೀರ್ಘಕಾಲಿಕ ಯೋಜನೆಗಳು, ವ್ಯವಹಾರ ಅಭಿವೃದ್ಧಿ ಹಾಗೂ ತಂತ್ರಾತ್ಮಕ ನಿರ್ಧಾರಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರು.



ಕೇರಳದ ಪಾಲಕ್ಕಾಡ್ ಮೂಲದ ಸುಜಿತ್ ಅವರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರರಾಗಿದ್ದು, ಮೂರು ದಶಕಗಳಿಗಿಂತ ಹೆಚ್ಚು ಕೈಗಾರಿಕಾ ಅನುಭವ ಹೊಂದಿದ್ದಾರೆ. 1993ರಲ್ಲಿ ಎಂಆರ್ ಪಿಎಲ್ ಗೆ ಸೇರ್ಪಡೆಯಾದ ಬಳಿಕ ನಿರ್ವಹಣೆ, ವಿಶ್ವಾಸಾರ್ಹತೆ, ಇಂಜಿನಿಯರಿಂಗ್ ಮತ್ತು ಇನ್ಸ್ಪೆಕ್ಷನ್, ಪ್ರಾಜೆಕ್ಟ್ಸ್ ಹಾಗೂ ಕಾರ್ಪೊರೇಟ್ ಸ್ಟ್ರಾಟಜಿ ಸೇರಿದಂತೆ ಹಲವು ವಿಭಾಗಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ದತ್ತನಗರ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಬಿಕರ್ನಕಟ್ಟೆ, ಕಲಾಯಿ, ಕಂಡೆಟ್ಟು, ಜಯಶ್ರೀಗೇಟ್, ನಾಯ್ಗರಲೇನ್, ಪದವು, ಶರ್ಬತ್ ಕಟ್ಟೆ, ಯೆಯ್ಯಾಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.3 ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಕುಕ್ಕೆ ದೇವಳದಲ್ಲಿ ಭರತನಾಟ್ಯ ಪ್ರದರ್ಶನ

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ರಥಬೀದಿಯ ನೂತನ ಸಭಾಂಗಣದಲ್ಲಿ ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡ್ಯಾನ್ಸ್ ಆರ್ಟ್ ಆಂಡ್ ಮ್ಯೂಸಿಕ್ ಕೇಂದ್ರದ ವಿದ್ಯಾರ್ಥಿಗಳಿಂದ ಸಂಸ್ಥೆಯ ಗುರು ವಿದುಷಿ ಪೂರ್ಣಿಮಾ ರವಿ ನಿರ್ದೇಶನದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳಿಂದ ಭರತನಾಟ್ಯ ಮತ್ತು ಸಮೂಹ ನೃತ್ಯ ಪ್ರದರ್ಶಿತವಾಯಿತು. ಕಾರ್ಯಕ್ರಮ ಪುಷ್ಪಾಂಜಲಿಯಿಂದ ಆರಂಭವಾಯಿತು. ನಂತರ ಮಿಶ್ರ ಅಲ್ಲಾರಿಪ್ಪು, ಗಣಪತಿ ಸ್ತುತಿ, ಸುಬ್ರಹ್ಮಣ್ಯ ಸ್ತುತಿ, ನಾಗ ಸ್ತುತಿ, ಕಾವಡಿ ಚಿಂದು, ಏಕವ್ಯಕ್ತಿ ಪ್ರದರ್ಶನ, ಜಗದೋದ್ಧರಣ, ತಿಲ್ಲಾನ ಮೊದಲಾದ ಪ್ರಸ್ತುತಿಗಳನ್ನು ಕಲಾವಿದರು ಪ್ರಸ್ತುತಪಡಿಸಿದರು.



ಶ್ರೀ ರಾಮ ಮಹಿಳಾ ಮಂಡಳಿಗೆ ಆಯ್ಕೆ

ಮುಲ್ಕಿ: ಅಂಗರಗುಡ್ಡೆಯ ಶ್ರೀ ರಾಮ ಮಹಿಳಾ ಮಂಡಳಿಯ ಅಧ್ಯಕ್ಷರಾಗಿ ಮೋಹಿನಿ ಜೆ. ಆಯ್ಕೆಯಾಗಿದ್ದಾರೆ ಉಪಾಧ್ಯಕ್ಷರಾಗಿ ಪುಷ್ಪಾ ಶೆಟ್ಟಿ, ಕಾರ್ಯದರ್ಶಿಯಾಗಿ ಉಷಾ ಪರಮೇಶ್ವರ್, ಜೊತೆ ಕಾರ್ಯದರ್ಶಿಯಾಗಿ ಜಯಂತಿ ಎಸ್ ಹಾಗೂ ಕೋಶಾಧಿಕಾರಿ ಪುಷ್ಪಾ ಜೆ. ಸಾಲ್ಯಾನ್ ಆಯ್ಕೆಯಾಗಿದ್ದಾರೆ. ಸಭೆಯಲ್ಲಿ ಶ್ರೀರಾಮ ಭಜನಾ ಮಂದಿರದ ಅಧ್ಯಕ್ಷ ಸುಧೀರ್ ಶೆಟ್ಟಿ, ಉಪಾಧ್ಯಕ್ಷ ಹರೀಶ್ ಸಫಲಿಗ ಹಾಗೂ ಮಹಿಳಾ ಮಂಡಲದ ಸದಸ್ಯರು ಉಪಸ್ಥಿತರಿದ್ದರು.



ಕೊರಗಜ್ಜಗೆ ಶಾಸಕಿ ನಯನಾ ಮೋಟಮ್ಮ ವಿಶೇಷ ಸೇವೆ



ಮಂಗಳೂರು: ಡಿ.ಕೆ.ಶಿವಕುಮಾರ್ ಅವರು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಬುಧವಾರ ಅಧಿಕಾರ ಸ್ವೀಕರಿಸುವ ಹಿನ್ನೆಲೆಯಲ್ಲಿ ಮೂಡಿಗೆರೆ ಶಾಸಕಿ ನಯನಾ ಮೋಟಮ್ಮ ಅವರು ನಗರದ ಉರ್ವ ಮಾರಿಯಮ್ಮ ದೇವಸ್ಥಾನ ಹಾಗೂ ಉರ್ವ ಕೊರಗಜ್ಜನ ಗುಡಿಯಲ್ಲಿ ವಿಶೇಷ ಪೂಜೆ ನೆರವೇರಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಚಿತ್ತರಂಜನ್ ಶೆಟ್ಟಿ, ದೇವಸ್ಥಾನದ ಆಡಳಿತ ಮುಖ್ಯಸ್ಥರು ಹಾಗೂ ಸರ್ವ ಸದಸ್ಯರು, ಕಾಂಗ್ರೆಸ್ ಮುಖಂಡರಾದ ಪ್ರೇಮ್ ಕುಮಾರ್, ಅನಿಲ್ ಕಂಕನಾಡಿ, ಅಕ್ಮಲ್ ಮೊದಲಾದವರಿದ್ದರು.

ಕಾಶಿ ಶ್ರೀಗಳಿಂದ ವಿಶೇಷ ಪೂಜೆ

ಮುಲ್ಕಿ: ಇಲ್ಲಿನ ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಶ್ರೀ ಕಾಶಿ ಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರು ಸೋಮವಾರ ಮುಂಜಾನೆ ಸಂಸ್ಥಾನದ ಪಟ್ಟದ ದೇವರ ಸಮೇತ ದೇವಾಲಯಕ್ಕೆ ಚಿತ್ತೈಸಿ ಶ್ರೀದೇವರಿಗೆ ಉಷಾ ಪೂಜೆ, ಅಲಂಕಾರ ನಿತ್ಯಪೂಜೆ, ಪವಮಾನ ಅಭಿಷೇಕ, ಮಹಾ ನೈವೇದ್ಯ, ಭಕ್ತಾದಿಗಳಿಂದ ಶ್ರೀ ನರಸಿಂಹ ಸ್ತುತಿ ಮತ್ತು ನಮಸ್ಕಾರ, ಮುಲ್ಕಿ ಶ್ರೀ ವೆಂಕಟರಮಣ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ಬಳಿಕ ಶ್ರೀ ದೇವರಿಗೆ ಮತ್ತು ಸಂಸ್ಥಾನ ದೇವರಿಗೆ ಏಕಕಾಲದಲ್ಲಿ ಮಹಾ ಪೂಜೆ ನೆರವೇರಿತು.

ಕಡಬ ಸಂಚಾರಿ ನ್ಯಾಯಾಲಯ ಉದ್ಘಾಟಿಸಿ ಜಿಲ್ಲಾ ಸತ್ರ ನ್ಯಾಯಾಧೀಶ ಬಸವರಾಜ್ ಪ್ರತಿಪಾದನೆ

'ಶೀಘ್ರ ನ್ಯಾಯದಾನ' ನ್ಯಾಯಾಂಗ ವ್ಯವಸ್ಥೆಯ ಆಶಯ

ಕಡಬ: ತಾಲೂಕು ಮಟ್ಟದಲ್ಲಿ ನ್ಯಾಯಾಲಯಗಳನ್ನು ಪ್ರಾರಂಭಿಸಿ ಶೀಘ್ರ ನ್ಯಾಯದಾನ ನೀಡಬೇಕು ಎನ್ನುವುದು ನ್ಯಾಯಾಂಗ ವ್ಯವಸ್ಥೆಯ ಆಶಯವಾಗಿದೆ. ಈ ನಿಟ್ಟಿನಲ್ಲಿ ಕಕ್ಷಿದಾರರಿಗೆ ಶೀಘ್ರ ನ್ಯಾಯದಾನವಾಗಲು ಎಲ್ಲಾ ವಕೀಲರು ಹಾಗೂ ನಾವುಗಳು ಶ್ರಮಿಸುಬೇಕಾಗಿದೆ ಎಂದು ಜಿಲ್ಲಾ ಪ್ರಧಾನ ಸತ್ರ ನ್ಯಾಯಾಲಯದ ನ್ಯಾಯಾಧೀಶ ಬಸವರಾಜ್ ಹೇಳಿದರು.

ಅವರು ಮಂಗಳವಾರ ಕಡಬ ಗಣೇಶ್ ಬಿಲ್ಡಿಂಗ್ ನಲ್ಲಿ ಪ್ರಾರಂಭವಾದ ಪುತ್ತೂರು ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಕಡಬ ಸಂಚಾರಿ ನ್ಯಾಯಲಯ ಉದ್ಘಾಟಿಸಿ, ಗ್ರಾಮೀಣ ಪ್ರದೇಶವಾದ ಕಡಬದಿಂದ ಪುತ್ತೂರು ಹಾಗೂ ಸುಳ್ಯ ನ್ಯಾಯಾಲಯಗಳಿಗೆ 40ರಿಂದ 45 ಕಿ.ಮೀ. ದೂರವಿರುವುದರಿಂದ ಕಕ್ಷಿದಾರರಿಗೆ ಹಾಗೂ ವಕೀಲರಿಗೆ ತೊಂದರೆಯಾಗುತ್ತಿತ್ತು. ಇದನ್ನು ಮನಗಂಡು ಇಲ್ಲಿಯವರ ಬೇಡಿಕೆಗೆ ಅನುಸಾರ ಹೈ ಕೋರ್ಟ್‌ನ ನಿರ್ದೇಶನದಂತೆ ಕಡಬದಲ್ಲಿ ನ್ಯಾಯಾಲಯವನ್ನು ಪ್ರಾರಂಭಿಸಲಾಗಿದೆ ಎಂದರು.



ಪುತ್ತೂರು ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ನ್ಯಾಯಾಧೀಶೆ ಶ್ವೇತಾ ಜೆ. ಮಾತನಾಡಿ, ಎಲ್ಲಾ ಪ್ರಕರಣಗಳಿಗೂ ಶೀಘ್ರ ನ್ಯಾಯದಾನವಾಗಲು ನಾನು ಶ್ರಮಿಸುತ್ತೇನೆ. ಇದಕ್ಕೆ ಎಲ್ಲರ ಸಹಕಾರ ಅತ್ಯಗತ್ಯ ಎಂದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪುತ್ತೂರು ವಕೀಲರ ಸಂಘದ ಅಧ್ಯಕ್ಷ ಜಗನ್ನಾಥ ರೈ ಮಾತನಾಡಿ, ಕಡಬದಲ್ಲಿ ನ್ಯಾಯಾಲಯ ಸ್ಥಾಪನೆಯಾಗಿರುವುದು ಸಂತಸದ ವಿಚಾರ. ಇದಕ್ಕೆ ಹಲವರ ಶ್ರಮ ಇದೆ. ಕಡಬದ ಹಲವು ವರ್ಷಗಳ ಬೇಡಿಕೆ ಈಡೇರಿಸಿದ ನ್ಯಾಯಾಧೀಶರಿಗೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಸುಳ್ಯ ವಕೀಲರ ಸಂಘದ ಅಧ್ಯಕ್ಷ ಸುಕುಮಾರ ಕೊಡ್ತುಗುಳಿ ಅವರು ನೂತನವಾಗಿ ನೇಮಕಗೊಂಡ ನ್ಯಾಯಾಧೀಶರಿಗೆ ಮನವಿ ಮಾಡಿ, ಜಾಮೀನು ಮಂಜೂರು, ತಡೆಯಾಜ್ಞೆ, ಬಿಡುಗಡೆ ಮುಂತಾದ ವಿಚಾರಗಳಲ್ಲಿ ಕಾನೂನು ಚೌಕಟ್ಟಿನೊಳಗೆ ತ್ವರಿತ ಆದೇಶಗಳನ್ನು ನೀಡಿದರೆ, ಕಕ್ಷಿದಾರರಿಗೆ ಅನುಕೂಲವಾಗುತ್ತದೆ ಎಂದರು. ಕಟ್ಟಡ ಮಾಲೀಕ ಸುಂದರ ಗೌಡ ಮಂಡೆಕರ, ಲೋಕೋಪಯೋಗಿ ಇಲಾಖಾ ಇಂಜಿನಿಯರ್ ಪ್ರಮೋದ್ ಕುಮಾರ್ ಕೆ.ಕೆ. ಹಾಗೂ ನ್ಯಾಯಾಧೀಶರುಗಳನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಸರಕಾರಿ ಅಭಿಯೋಜಕಿ ಕವಿತಾ, ಹಿರಿಯ ನ್ಯಾಯವಾದಿಗಳಾದ ಶೀನಪ್ಪ ಗೌಡ ಬೈತಡ್ಕ, ವೆಂಕಪ್ಪ ಗೌಡ ಮಾಚಿಲ, ದುರ್ಗಾಪ್ರಸಾದ್ ರೈ ಕುಂಬ್ರ, ಭಾಸ್ಕರ ಗೌಡ ಕೋಡಿಂಬಾಳ, ಜಗದೀಶ್ ಹುದೇರಿ, ಆರಂತಡ್ಕ ಬಾಲಕೃಷ್ಣ ರೈ, ಸಂತೋಷ್ ಕುಂತೂರು, ನ್ಯಾಯವಾದಿಗಳಾದ ಮಹೇಶ್ ಕೆ. ಸವಣೂರು, ಕೃಷ್ಣಪ್ಪ ಗೌಡ ಕಕ್ವೆ, ಅಶ್ವಿತ್ ಕಂಡಿಗ, ಅವಿನಾಶ್ ಬೈತಡ್ಕ, ಪ್ರಶಾಂತ್ ಪಂಜೋಡಿ, ವಿಜಿತ್ ಮಾಚಿಲ, ಸುಮನಾ, ಅರ್ಪಿತಾ, ಕಡಬ ಆರಕ್ಷಕ ಉಪನಿರೀಕ್ಷಕ ಜಂಬೂರಾಜ್ ಮಹಾಜನ್, ಜಿಲ್ಲಾ ಪರಿಷತ್ ಮಾಜಿ ಸದಸ್ಯ ಸಯ್ಯದ್ ಮೀರಾ ಸಾಹೇಬ್, ಜಿ.ಪಂ. ಮಾಜಿ ಸದಸ್ಯ ಪಿ.ಪಿ. ವರ್ಗೀಸ್, ಕಡಬ ಉಪತಹಸೀಲ್ದಾರ್ ಗೋಪಾಲ್, ಸುಳ್ಯ ಹಾಗೂ ಪುತ್ತೂರು ವಕೀಲರ ಸಂಘದ ಪದಾಧಿಕಾರಿಗಳು, ಮತ್ತಿತರರು ಉಪಸ್ಥಿತರಿದ್ದರು. ನ್ಯಾಯವಾದಿ ಶಿವಪ್ರಸಾದ್ ಪುತ್ತಿಲ ಸ್ವಾಗತಿಸಿ, ನ್ಯಾಯವಾದಿ ಲೋಕೇಶ್ ಎಂ.ಜೆ. ವಂದಿಸಿದರು. ಬಳಿಕ ಕೋರ್ಟ್‌ನ ಪ್ರಥಮ ಕಲಾಪ ನಡೆಯಿತು.

> ಪ್ರಾರಂಭದಲ್ಲಿ ತಾತ್ಕಾಲಿಕವಾಗಿ ವಾರದಲ್ಲಿ 2 ದಿನ ನ್ಯಾಯಾಲಯ ಕಲಾಪಗಳು ನಡೆಯಲಿದೆ. ಕಡಬ ತಾಲೂಕಿಗೆ ಸಂಬಂಧಪಟ್ಟು ಸುಮಾರು 1200 ಪ್ರಕರಣಗಳ ಪೈಕಿ ಕೆಲವನ್ನು ಕಡಬ ನ್ಯಾಯಾಲಯಕ್ಕೆ ವರ್ಗಾಯಿಸಲಾಗುವುದು. ಇದರಿಂದ ಜನ ಸಾಮಾನ್ಯರಿಗೆ ಅನುಕೂಲವಾಗುತ್ತದೆ. ನ್ಯಾಯಾಲಯ ಕಟ್ಟಡ ನಿರ್ಮಾಣಕ್ಕೆ ಕಡಬ ಮಿನಿವಿಧಾನ ಸೌಧದ ಬಳಿ 3 ಎಕ್ರೆ ಕಾದಿರಿಸಲಾಗಿದ್ದು, ಮುಂದೆ ಕಟ್ಟಡ ನಿರ್ಮಾಣ ಮಾಡಲಾಗುವುದು.
> ● ಬಸವರಾಜ್

ಕಲ್ಲಡ್ಕ ಶ್ರೀರಾಮ ಪದವಿ ಮಹಾವಿದ್ಯಾಲಯದಲ್ಲಿ 'ದೀಪ ಪ್ರದಾನ'

ಭಾರತ ಜ್ಞಾನದ ಪ್ರತೀಕ: ಡಾ. ಪ್ರಭಾಕರ ಭಟ್

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪದವಿ ಮಹಾವಿದ್ಯಾಲಯದ 2025–26ನೇ ವರ್ಷದ ಅಂತಿಮ ಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ 'ದೀಪ ಪ್ರದಾನ' ಕಾರ್ಯಕ್ರಮವು ಮಂಗಳವಾರ ವಿದ್ಯಾಲಯದ ಆಜಾದ್ ಸಭಾಂಗಣದಲ್ಲಿ ನಡೆಯಿತು.

ದೀಪ ಪ್ರಜ್ವಲನ ಹಾಗೂ ಸರಸ್ವತಿ ವಂದನೆಯ ಮೂಲಕ ಕಾರ್ಯಕ್ರಮ ಚಾಲನೆಗೊಂಡಿತು. ಬಳಿಕ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಆರತಿ ಬೆಳಗಿ, ತಿಲಕ ಧಾರಣೆ ಮಾಡಿ ಸಿಹಿ ನೀಡಲಾಯಿತು. 2026ರಲ್ಲಿ ಗುಜರಾತಿನ ಸೋಮನಾಥೇಶ್ವರ ದೇವಸ್ಥಾನದ ಪುನರ್ ನಿರ್ಮಾಣಕ್ಕೆ 75 ವರ್ಷಗಳು ಪೂರ್ಣಗೊಂಡಿವೆ. 1951ರಲ್ಲಿ ಪುನಃ ಪ್ರತಿಷ್ಠಾಪನೆಗೊಂಡ ಈ ದೇವಸ್ಥಾನದ ಅಮೃತ ಮಹೋತ್ಸವವನ್ನು ವಿಶೇಷವಾಗಿ ಆಚರಿಸಲಾ ಗುತ್ತಿರುವ ಪ್ರಯುಕ್ತ ಅಂತಿಮ ವರ್ಷದ ವಿದ್ಯಾರ್ಥಿಗಳು ಶಿವಲಿಂಗಕ್ಕೆ ಹಣತೆ ಹಚ್ಚುವ ಮೂಲಕ ಧರ್ಮ, ಸಂಸ್ಕೃತಿ, ಆಧ್ಯಾತ್ಮಿಕ ಮೌಲ್ಯಗಳಿಗೆ ತಮ್ಮ ಗೌರವವನ್ನು ವ್ಯಕ್ತಪಡಿಸಿದರು.

ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರು ಮಾತನಾಡಿ, ಜಗತ್ತಿನಲ್ಲಿ ಭಾರತವು ಜ್ಞಾನದ ಅಗಾಧ ಪರಂಪರೆ ಹೊಂದಿರುವ ದೇಶವಾಗಿದ್ದು, ನಮ್ಮ ದೇಶಕ್ಕೆ ಋಣಿಯಾಗಿ ಇದರ ಸಂರಕ್ಷಣೆಯ ಪಣ ತೊಡಬೇಕು. ಸಮಾಜದ ಮಧ್ಯದಲ್ಲಿ ಕೆಟ್ಟ ವಿಚಾರಗಳು ಅನೇಕ ಇದ್ದರೂ, ಕೇವಲ ಒಳ್ಳೆಯ ವಿಚಾರಗಳನ್ನು ಮಾತ್ರ ಆಯ್ಕೆ ಮಾಡುವ ವಿವೇಕದೊಂದಿಗೆ, ಎಚ್ಚರಿಕೆ, ಧೀರತನದಿಂದ ಜೀವಿಸಿದರೆ ಯಶಸ್ಸು ಸಾಧ್ಯ ಎಂದು ಹೇಳಿದರು.



> **ಜವಾಬ್ದಾರಿ ಹಸ್ತಾಂತರ**
> ಕಾರ್ಯಕ್ರಮದಲ್ಲಿ ಅಂತಿಮ ಪದವಿ ವಿದ್ಯಾರ್ಥಿಗಳು ಭಾವೀ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಬೆಳಗುವ ದೀಪ ಕೊಡುವ ಮೂಲಕ ತಮ್ಮ ಜವಾಬ್ದಾರಿ ಹಸ್ತಾಂತರಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬೆಂಗಳೂರು ಜುವೆಲ್ಲರ್ಸ್ ಅಸೋಸಿಯೇಷನ್ ಅಧ್ಯಕ್ಷ ಡಾ. ಚೇತನ್ ಕುಮಾರ್ ಮೆಹ್ತಾ ಭಾಗವಹಿಸಿದರು. ಮಂಗಳೂರಿನ ಖ್ಯಾತ ವೈದ್ಯ ಡಾ. ಪ್ರಕಾಶ್ ಶೆಟ್ಟಿ, ಬೆಂಗಳೂರಿನ ಶೆಲ್ಟರ್ಸ್ ಮತ್ತು ಬಿಲ್ಡರ್ಸ್ ಪ್ರೈ. ಲಿ.ನ ಚೆಯರ್ ಮೆನ್ ರೂಪೇಶ್ ಕುಮಾರ್, ಇನ್‌ಸ್ಟಿಟ್ಯೂಶನ್ ಆಫ್ ಜ್ಯುವೆಲ್ಲರಿ ಸ್ಟಡೀಸ್ ನ ಪ್ರಾಂಶುಪಾಲ ಪ್ರೊ. ಡಾ. ಸೂರ್ಯ ಉಪಸ್ಥಿತರಿದ್ದರು.

ವಿದ್ಯಾಕೇಂದ್ರದ ಅಧ್ಯಕ್ಷ ನಾರಾಯಣ ಸೋಮಯಾಜಿ, ಸಂಚಾಲಕ ವಸಂತ ಮಾಧವ ಶ್ರೀಮಾನ್, ರಾಷ್ಟ್ರ ಸೇವಿಕಾ ಸಮಿತಿಯ ಹಿರಿಯ ಕಾರ್ಯಕರ್ತೆ ಡಾ. ಕಮಲಾ ಪ್ರಭಾಕರ ಭಟ್ ಇದ್ದರು. ಅಂತಿಮ ಪದವಿ ವಿದ್ಯಾರ್ಥಿಗಳು ತಮ್ಮ ಕೊಡುಗೆಯನ್ನು ವಿದ್ಯಾಸಂಸ್ಥೆಗೆ ನೀಡಿದರು. ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಪ್ರಸ್ತಾವಿಸಿ, ಸ್ವಾಗತಿಸಿ, ವಿದ್ಯಾರ್ಥಿ ಜಯಸೂರ್ಯ ನಿರ್ವಹಿಸಿ, ವಿದ್ಯಾರ್ಥಿನಿ ಪ್ರಣಮ್ಯಾ ವಂದಿಸಿದರು. ಅಕ್ಷತಾಲಕ್ಷ್ಮೀ ವೈಯಕ್ತಿಕ ಗೀತೆ ಹಾಡಿದರು.

ಕಿನ್ನಿಗೋಳಿ ಪಟ್ಟಣ ಪಂಚಾಯತ್ ಸಭೆಯಲ್ಲಿ ಸದಸ್ಯರಿಂದ ಕ್ರಮಕ್ಕೆ ಒತ್ತಾಯ

ಅಂಗಡಿಗಳ ಏಲಂ ಬಾಕಿ, ಅನುದಾನದ ಕೊರತೆ

ಕಿನ್ನಿಗೋಳಿ: ಪಟ್ಟಣ ಪಂಚಾಯತ್ ಮಾರುಕಟ್ಟೆ ಅಂಗಡಿಗಳನ್ನು ಏಲಂ ಮಾಡಬೇಕು. ಇದರಿಂದ ಪಂಚಾಯತ್ ಆದಾಯ ಹೆಚ್ಚಾಗುತ್ತದೆ ಎಂಬ ಆಗ್ರಹ ಮಂಗಳವಾರ ನಡೆದ ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ಕೇಳಿಬಂತು.

ಅಭಿವೃದ್ಧಿಗೆ ತೊಡಕು

ಪಟ್ಟಣ ಪಂಚಾಯತ್ ಆದ ಬಳಿಕ ಅನೇಕ ಬಿಲ್ಲುಗಳ ಪಾವತಿ ಆಗದಿರುವುದರಿಂದ ಈಗ ಅಭಿವೃದ್ಧಿಗೂ ತೊಡಕಾಗಿದೆ. ಅನುದಾನದ ಕೊರತೆ ಇರುವುದರಿಂದ ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಪಟ್ಟಣ ಪಂಚಾಯತ್ ಸದಸ್ಯರು ಈ ಸಭೆಯಲ್ಲಿ ತಮ್ಮ ಅಳಲನ್ನು ಹೊರಹಾಕಿದರು. ಉಪಾಧ್ಯಕ್ಷೆ ಪದ್ಮಲತಾ ಕೂಡ ಪಂಚಾಯತ್‌ಗೆ ಅನುದಾನ ಕೊರತೆ ಇದೆ ಎಂದರು. ಕಿನ್ನಿಗೋಳಿ ಮಾರುಕಟ್ಟೆ ಕಟ್ಟಡದ ಅಂಗಡಿ ಕೋಣೆಗಳು ಏಲಂ ಆಗದೆ ಹಲವು ವರ್ಷಗಳು ಕಳೆದಿದೆ. ಹೆಚ್ಚಿನವರು ಒಳ ಬಾಡಿಗೆಯಲ್ಲಿ ಕಾರ್ಯಾಚರಿಸುತ್ತಿದ್ದು 20 ಸಾವಿರದವರೆಗೆ ಬಾಡಿಗೆ ಕೊಡುತ್ತಿದ್ದಾರೆ. ಇದು ಪಂಚಾಯತ್‌ಗೆ ಬಂದರೆ ಪಂಚಾಯತ್‌ಗೆ ಉತ್ತಮ ಆದಾಯ ಬರಲಿದೆ ಎಂದು ಪಂಚಾಯತ್ ಸದಸ್ಯ ಪ್ರಕಾಶ್ ಆಚಾರ್ಯ ಹೇಳಿದರು. ಪಂಚಾಯತ್ ಮುಖ್ಯಾಧಿಕಾರಿ ಜಯಶಂಕರ್ ಈ ಬಗ್ಗೆ ಅನುಮೋದನೆಗಾಗಿ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮೋದನೆ ಸಿಕ್ಕಿದ ಕೂಡಲೇ ಏಲಂ ಮಾಡಲಾಗುವುದು ಎಂದರು. ಮಳೆಗಾಲದಲ್ಲಿ ಸರಾಗ ವಿದ್ಯುತ್ ಸರಬರಾಜಿಗೆ ವ್ಯವಸ್ಥೆ ಮಾಡುವಂತೆ ಮೆಸ್ಕಾಂ ಅಧಿಕಾರಿಯವರಿಗೆ ಪ.ಪಂ. ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ ಸೂಚಿಸಿದರು. ಕಿನ್ನಿಗೋಳಿಯ ದ್ರವ ತ್ಯಾಜ್ಯ ಘಟಕದಿಂದ ಸಮಸ್ಯೆ ಇದ್ದು ಇದಕ್ಕೆ ಬದಲಿ ವ್ಯವಸ್ಥೆ ಮಾಡಲಾಗಿದೆ. ಘನ ತ್ಯಾಜ್ಯ ಘಟಕದ ಬಳಿ ದ್ರವ ತ್ಯಾಜ್ಯ ಘಟಕ ಮಾಡಲಾಗಿದ್ದು, ಜೂ.5ರಂದು ಪ್ರಾರಂಭವಾಗಲಿದೆ ಎಂದು ಅಧ್ಯಕ್ಷರು ತಿಳಿಸಿದರು. ಕಿನ್ನಿಗೋಳಿ ಕಟ್ಟಡ ಮಾಲಿಕರು ಇದಕ್ಕೆ ಹೊಂದಿಕೊಳ್ಳಬೇಕು, ಕಟ್ಟಡ ಮಾಲಿಕರಿಗೆ ಈ ಬಗ್ಗೆ ತಿಳಿ ಹೇಳಬೇಕು, ಮತ್ತೂ ಮುಂದುವರಿದಲ್ಲಿ ಸಮಸ್ಯೆ ಮುಂದುವರಿಯಲಿದೆ, ಇದಕ್ಕೆ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕು ಎಂದು ಸದಸ್ಯ ಪ್ರಣೀಕ್ ಹೇಳಿದರು, ಏಕ ಬಳಕೆ ಪ್ಲಾಸ್ಟಿಕ್ ನಿಷೇಧ, ಉಚಿತ ರೇಬೀಸ್ ಲಸಿಕೆ ನೀಡುವಿಕೆ, ಕಿನ್ನಿಗೋಳಿ ಬಸ್ಸು ನಿಲ್ದಾಣದಲ್ಲಿ ಪಾರ್ಕಿಂಗ್ ಸಮಸ್ಯೆ ಬಗ್ಗೆ ಚರ್ಚಿಸಲಾಯಿತು.



ನಿರ್ಣಯ

ಪಟ್ಟಣ ಪಂಚಾಯತ್ ವ್ಯಾಪ್ತಿಯ ಬಲ್ಲಣದಲ್ಲಿ 3.10 ಎಕರೆ ಗೋಮಾಳ ಜಮೀನು ಕಟೀಲು ದೇವಸ್ಥಾನಕ್ಕೆ ನೀಡಿ ಎಂದು ದೇವಸ್ಥಾನದಿಂದ ಪತ್ರ ಬಂದಿದ್ದು, ನಿರಾಪೇಕ್ಷಣ ಪತ್ರ ನೀಡುವ ಬಗ್ಗೆ ನಿರ್ಣಯಿಸಲಾಯಿತು. ಸದಸ್ಯರಾದ ಸುನೀತಾ, ಸದಸ್ಯರಾದ ದಾಮೋದರ್ ಕೊಡೆತ್ತೂರು, ಶೈಲೇಶ್ ಅಂಚನ್, ಲೋಕಯ್ಯ ಸಾಲ್ಯಾನ್ ನೀರಿನ ಸಮಸ್ಯೆ ಬಗ್ಗೆ, ಪಂಚಾಯತ್ ವ್ಯಾಪ್ತಿಯ ನೀರಿನ ಬಿಲ್, ಟವರ್‌ಗಳಿಗೆ ಟ್ಯಾಕ್ಸ್ ನಿಗದಿ ಮತ್ತಿತರ ವಿಷಯಗಳ ಬಗ್ಗೆ ಚರ್ಚಿಸಿದರು.

ಸಿದ್ದಕಟ್ಟೆ ಶಾಖೆಯ ಶಾಖಾಧಿಕಾರಿ, ಸಿಬ್ಬಂದಿಗೆ ಬೀಳ್ಕೊಡುಗೆ ಸಮಾರಂಭ



ಬಂಟ್ವಾಳ: ಇತ್ತೀಚಿಗೆ ವರ್ಗಾವಣೆಗೊಂಡ ಕರ್ನಾಟಕ ಗ್ರಾಮೀಣ ಬ್ಯಾಂಕ್ ಸಿದ್ದಕಟ್ಟೆ ಶಾಖೆಯ ಶಾಖಾಧಿಕಾರಿ ರಘುಪ್ರಸಾದ್ ಹಾಗೂ ಬ್ಯಾಂಕ್ ಸಿಬ್ಬಂದಿ ಸ್ಮಿತಾ ಅವರನ್ನು ಬೀಳ್ಕೊಡುಗೆ ಸಮಾರಂಭ ನಡೆಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿ ಸಿದ್ದಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು ಮಾತನಾಡಿದರು.

ವರ್ಗಾವಣೆಗೊಂಡ ಬ್ಯಾಂಕ್ ಮೆನೇಜರ್ ರಘುಪ್ರಸಾದ್ ಮಾತನಾಡಿ, ಸಿದ್ದಕಟ್ಟೆ ಪರಿಸರದ ಗ್ರಾಹಕರು ಅತ್ಯಂತ ಪ್ರಾಮಾಣಿಕ ಮತ್ತು ವಿಶ್ವಾಸದಾಯಕರಾಗಿದ್ದು, ಸಿದ್ದಕಟ್ಟೆಯ ವಾತಾವರಣವು ಹಣಕಾಸು ಸಂಸ್ಥೆಗಳ ಅಭಿವೃದ್ಧಿಗೆ ಪೂರಕವಾಗಿವೆ ಎಂದರು.

ಸಿದ್ದಕಟ್ಟೆಯ ಸ್ವಾಗತ ಕಾಂಪ್ಲೆಕ್ಸ್ ಮಾಲಕರ ಹರೀಶ್ ಶೆಟ್ಟಿ, ಬ್ಯಾಂಕ್ ಸಿಬ್ಬಂದಿ ಮಂಜುನಾಥ್, ಪದ್ಮಾವತಿ, ಉದ್ಯಮಿಗಳಾದ ರಾಜೇಶ್ ಶೆಟ್ಟಿ ಕೊನೆರಬೆಟ್ಟು, ಯೋಗೀಶ್ ಶೆಟ್ಟಿಗಾರ್, ಪ್ರಮುಖರಾದ ಸಂತೋಷ, ಕೇಶವ ಶಭರೀಶ, ಪ್ರಕಾಶ್ ಶೆಟ್ಟಿ, ಗಣೇಶ್ ಹೊಳ್ಳ, ಸಂಧ್ಯಾ ವಾರಿಜ, ಮೀನಾಕ್ಷಿ ಮತ್ತಿತರರ ಗ್ರಾಹಕರು ಉಪಸ್ಥಿತರಿದ್ದರು.

> ಹಣಕಾಸು ವಹಿವಾಟು ನಡೆಸುವ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುವ ಸಿಬ್ಬಂದಿಗಳು ತಮ್ಮ ಗ್ರಾಹಕರಿಗೆ ನೀಡುವ ಪ್ರಾಮಾಣಿಕ ಸೇವೆಯಿಂದ ಆತ್ಮತೃಪ್ತಿ ಲಭಿಸಲಿದ್ದು ಇದರಿಂದಾಗಿ ಗ್ರಾಹಕರು ಮತ್ತು ಬ್ಯಾಂಕ್ ನಡುವಿನ ಸಂಬಂಧ ಮತ್ತಷ್ಟು ವೃದ್ಧಿಸಲು ಸಹಕಾರಿಯಾಗುತ್ತದೆ.
> ● ಪ್ರಭಾಕರ ಪ್ರಭು

ಸಂವಿಧಾನ ಅರ್ಥೈಸಿ ಅಳವಡಿಸಿದಾಗ ಬದುಕು ಸಾರ್ಥಕ್ಯ: ಶಾಸಕ ಅಶೋಕ್ ರೈ



ಪುತ್ತೂರು: ಸಂವಿಧಾನ ಅರ್ಥೈಸಿಕೊಂಡು ಪ್ರತಿಯೊಬ್ಬರೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಲ್ಲಿ ಬದುಕು ಸಾರ್ಥ್ಯಕ್ಯ ಕಾಣಲಿದೆ ಎಂದು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಅವರು ಸೋಮವಾರ ತಮ್ಮ ಕಚೇರಿಯಲ್ಲಿ ಸರಕಾರಿ ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಅಳವಡಿಸಿಕೊಳ್ಳಬೇಕಾದ 'ಸಂವಿಧಾನ ಪೀಠಿಕೆಯ ಫಲಕ' ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಸಂವಿಧಾನದ ಕೃಪೆ ಯಿಂದಾಗಿ ನಾವು ನೆಮ್ಮದಿಯಿಂದ ಬದುಕಿ ಬಾಳಲು ಅವಕಾಶವಾಗಿದೆ. ಸಂವಿಧಾನ ಎಷ್ಟು ಅರ್ಥ ಮಾಡಿಕೊಂಡಿದ್ದಾರೆ ಎಂಬುವು ದಕ್ಕಿಂತಲೂ ಸಂವಿಧಾನದ ಸಿದ್ಧಾಂತ ತಮ್ಮ ಜೀವನದಲ್ಲಿ ಪಾಲನೆ ಮಾಡಿಕೊಂಡಿದ್ದಾರೆ ಎಂಬುವುದು ಮುಖ್ಯವಾಗುತ್ತದೆ. ಸರ್ವರಿಗೂ ಸಮಾನ ಅವಕಾಶ ನೀಡಿದ ಸಂವಿಧಾನದ ಆಶಯದಂತೆ ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳಲ್ಲಿ ಬಡವರ ಸೇವೆ ಮಾಡುವ ವಾತಾವರಣ ಸೃಷ್ಟಿಸುವುದು ಈ ಫಲಕ ಅಳವಡಿಕೆಯ ಮುಖ್ಯ ಉದ್ದೇಶವಾಗಿದೆ. ಅಧಿಕಾರಿ ವರ್ಗದಲ್ಲಿ ಕರ್ತವ್ಯದ ಅರಿವು, ಮನಸ್ಸು ಪರಿವರ್ತನೆ ಮತ್ತು ಬಡವರ ಕಣ್ಣೀರು ಒರೆಸುವ ಕೆಲಸ ನಡೆಯಬೇಕು ಎಂದು ಅವರು ಹೇಳಿದರು.

ಪಂಚಾಯತ್‌ರಾಜ್ ತರಬೇತುದಾರ ಮಹಮ್ಮದ್ ಬಡಗನ್ನೂರು ಮಾತನಾಡಿ, ಸಂವಿಧಾನ ಪೀಠಿಕೆಯನ್ನು ಸರಕಾರದ ಸುತ್ತೋಲೆಯಂತೆ ಎಲ್ಲಾ ಕಡೆಗಳಲ್ಲಿ ಅಳವಡಿಸಲಾಗುತ್ತಿದೆ. ಈ ಕಾರ್ಯಕ್ಕೆ ಸರಕಾರಿ ಮತ್ತು ಸಹಕಾರಿ ಸಂಘಗಳ ಸಹಕಾರ ಅಗತ್ಯವಾಗಿದೆ ಎಂದರು.

ಈ ಸಂದರ್ಭ ಪಂಚಾಯತ್ ರಾಜ್ ತರಬೇತುದಾರ ಉಮಾನಾಥ ಶೆಟ್ಟಿ ಪೆರ್ನೆ, ಮೇಘಾ ಪಾಲೆತ್ತಾಡಿ, ಸಂಶುದ್ದೀನ್ ಸಂಪ್ಯ, ನಾರಾಯಣ ಕಿಲಂಗೋಡಿ, ಪ್ರತಿಮಾ ರೈ ಮತ್ತು ಸುಹಾಸ್ ಉಪಸ್ಥಿತರಿದ್ದರು.

ಅಂಬಿಕಾ ಪಿಯು ವಿದ್ಯಾರ್ಥಿಗಳ ಯೋಗ ತರಬೇತಿ ತರಗತಿ ಉದ್ಘಾಟನೆ



ಪುತ್ತೂರು: ನಿರಂತರ ಯೋಗಾಭ್ಯಾಸದಿಂದ ಮಾನಸಿಕ ಸಮತೋಲನ ಮತ್ತು ದೈಹಿಕ ಸದೃಢತೆಯನ್ನ ಸಾಧಿಸಬಹುದು. ಇದರಿಂದಾಗಿ ಒಬ್ಬ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆ ಸಾಧ್ಯ. ಯೋಗ ಎಂಬುದು ಭಾರತದ ಪರಿಕಲ್ಪನೆ. ಅದನ್ನು ವಿಶ್ವಕ್ಕೆ ಪಸರಿಸಿದ ಕೀರ್ತಿ ಭಾರತದ್ದು ಎಂದು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ ತಿಳಿಸಿದರು.

ಅವರು ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆಯಲ್ಲಿನ ಅಂಬಿಕಾ ಪದವಿ ಪೂರ್ವ ವಿದ್ಯಾಲಯದಲ್ಲಿ ಆರ್ಟ್ ಆಫ್ ಲಿವಿಂಗ್ ಸಹಯೋಗದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದ ಯೋಗತರಬೇತಿ ತರಗತಿಗಳನ್ನು ಉದ್ಘಾಟಿಸಿ ಸೋಮವಾರ ಮಾತನಾಡಿದರು.

ಪ್ರತಿಯೊಬ್ಬರೂ ಯೋಗದಂತಹ ಭಾರತೀಯ ಕಲೆಗಳನ್ನು ಮೈಗೂಡಿಸಿಕೊಂಡು ಮುಂದೊಂದು ದಿನ ಇಡೀ ವಿಶ್ವದ ಮೇಲೆ ಬೌದ್ಧಿಕ ವಿಜಯವನ್ನು ಸಾಧಿಸಿ ಭಾರತವು ಸದಾ ವಿಶ್ವಗುರು ಎಂಬುದನ್ನು ನಿರೂಪಿಸಬೇಕು ಎಂದರು.

ಆರ್ಟ್ ಆಫ್ ಲಿವಿಂಗ್‌ನ ಯೋಗ ಶಿಕ್ಷಕಿ ಶರಾವತಿ ರವಿನಾರಾಯಣ ಯೋಗ ತರಬೇತಿ ನೀಡಿದರು. ಯೋಗ ಶಿಕ್ಷಕಿ ದೀಪಿಕಾ ಸಹಕರಿಸಿದರು. ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ರಾಜಶ್ರೀ ನಟ್ಟೋಜಾ ಬಪ್ಪಳಿಗೆ ಅಂಬಿಕಾ ಪ.ಪೂ. ವಿದ್ಯಾಲಯದ ಪ್ರಾಂಶುಪಾಲ ಗಣೇಶ್ ಪ್ರಸಾದ್ ಡಿ.ಎಸ್. ಇದ್ದರು. ವಿದ್ಯಾರ್ಥಿನಿ ಪೃಥ್ವಿ ಬಿ.ಎಂ. ಹಾಗೂ ಧನ್ಯಶ್ರೀ ಪ್ರಾರ್ಥಿಸಿದರು. ರಸಾಯನ ಶಾಸ್ತ್ರ ಉಪನ್ಯಾಸಕಿ ಅಪರ್ಣಾ ಉಪಾಧ್ಯಾಯ ನಿರ್ವಹಿಸಿದರು.

ಕಲಾ ಕೇಂದ್ರದ ವಾರ್ಷಿಕೋತ್ಸವ, ತರಬೇತಿ ಪಡೆದ ವಿದ್ಯಾರ್ಥಿಗಳ ಯಕ್ಷಗಾನ ರಂಗ ಪ್ರವೇಶ 'ರಿಷಿ ಗೆಜ್ಜೆ ಸಂಭ್ರಮ'

ಕಾನೂನಿನ ಹೆಸರಿನಲ್ಲಿ ಕಲೆ, ಸಂಸ್ಕೃತಿಗೆ ಅಡ್ಡಿ ಸರಿಯಲ್ಲ: ಕಲ್ಕೂರ ಅಭಿಪ್ರಾಯ

ಮಂಗಳೂರು: ರಿಷಿ ಸಾಮಾಜಿಕ ಸಾಂಸ್ಕೃತಿಕ ಪ್ರತಿಷ್ಠಾನ ಬೆಳ್ತಂಗಡಿ ವತಿಯಿಂದ ರಿಷಿ ಕಲಾ ಕೇಂದ್ರದ ವಾರ್ಷಿಕೋತ್ಸವ ಹಾಗೂ ತರಬೇತಿ ಪಡೆದ ವಿದ್ಯಾರ್ಥಿಗಳ ಯಕ್ಷಗಾನ ರಂಗ ಪ್ರವೇಶ 'ರಿಷಿ ಗೆಜ್ಜೆ ಸಂಭ್ರಮ 2026' ಕಾರ್ಯಕ್ರಮ ನಗರದ ಉರ್ವಸ್ಟೋರ್ ತುಳು ಭವನದ ಸಿರಿ ಚಾವಡಿ ಸಭಾಂಗಣದಲ್ಲಿ ಶನಿವಾರ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ ಮಾತನಾಡಿ, ಮಕ್ಕಳು ಆಡಿತೋರಿಸಲಿರುವ ಯಕ್ಷಗಾನ ಪ್ರಸಂಗ ಮಹಿಷವಧೆಯ ಮೂಲಕ ವಿಕೃತ ಚಿಂತನೆಗಳು ಅಳಿದು ಸುಕೃತ ಚಿಂತನೆಯೊಂದಿಗೆ ಧರ್ಮತತ್ವಗಳು ಮೂಡಿಬರಲಿ. ನಮ್ಮ ಯಾವುದೇ ಕಲೆಯಲ್ಲಿ ವಿಕೃತಿ ಕಂಡು ಬಂದಲ್ಲಿ ಅದನ್ನು ದೂರ ಇಡೋಣ. ಆದರೆ ನಮ್ಮ ಕಲೆ, ಸಂಸ್ಕೃತಿಯನ್ನು ಕಾನೂನಿನ ಹೆಸರಿನಲ್ಲಿ ನಾಶ ಮಾಡುವ ಕೆಲಸ ಆಗುತ್ತಿದೆ. ಜನರಿಗೆ ಮನವರಿಕೆ ಮಾಡುವ ಮೂಲಕ ವಿಕೃತಿಯನ್ನು ಹೋಗಲಾಡಿಸಬೇಕೇ ವಿನಃ ಕಾನೂನು ಮೂಲಕ ಅಲ್ಲ ಎಂದು ಹೇಳಿದರು.

ಮುಖ್ಯ ಅತಿಥಿ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರನಾಥ ಗಟ್ಟಿ ಕಾಪಿಕಾಡ್ ಮಾತನಾಡಿ, ಯಕ್ಷಗಾನ ಕಲೆಯ ಆಸ್ವಾದನೆಗೆ ಸಭ್ಯ ಪ್ರೇಕ್ಷಕರ ಅಗತ್ಯ ಎಷ್ಟಿದೆಯೋ ಅಷ್ಟೇ ಸಭ್ಯ ಕಲಾವಿದರ ತುರ್ತು ಅಗತ್ಯ ಈ ಕಾಲಕ್ಕಿದೆ ಎಂದರು.

ಪ್ರತಿಷ್ಠಾನದ ಗೌರವಾಧ್ಯಕ್ಷ ಶ್ರೀಧರ್ ಎಂ. ಮಾತನಾಡಿರು. ಮುಖ್ಯ ಅತಿಥಿಗಳಾಗಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್, ಮನಪಾ ಮಾಜಿ ಸದಸ್ಯ ದೀಪಕ್ ಪೂಜಾರಿ, ಉರ್ವಸ್ಟೋರ್ ಮಹಾಗಣಪತಿ ದೇವಸ್ಥಾನದ ಅಧ್ಯಕ್ಷ ಸುರೇಂದ್ರ ರಾವ್, ದ.ಕ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಇಂಜಿನಿಯರ್ ವೇಣುಗೋಪಾಲ ಎಚ್., ಉದ್ಯಮಿಗಳಾದ ಶಿವಪ್ರಸಾದ್ ಪ್ರಭು, ರಾಜೇಶ್ ಶೆಟ್ಟಿ ಗೊಲ್ಲರಬೆಟ್ಟು, ಶಂಕರನಾರಾಯಣ ಮಂಗಳೂರು, ಸುರತ್ಕಲ್ ಗೋವಿಂದ ದಾಸ ಕಾಲೇಜಿನ ಉಪನ್ಯಾಸಕಿ ಡಾ. ಆಶಾಲತಾ, ಹಿಂದೂ ಯುವ ಸೇನೆ ಕೇಂದ್ರೀಯ ಮಂಡಳಿ ಉಪಾಧ್ಯಕ್ಷ ಕೊರಗಪ್ಪ ಶೆಟ್ಟಿ ಶುಭ ಹಾರೈಸಿದರು. ಪ್ರತಿಷ್ಠಾನದ ಸಂಸ್ಥಾಪಕ ದಿವಾಕರ್ ಪದ್ಮುಂಜ, ಅಧ್ಯಕ್ಷ ಅವಿನಾಶ್ ಕುಲಾಲ್, ಪತ್ರಕರ್ತ ಉಮೇಶ್ ಶೆಟ್ಟಿ, ಕಲಾ ಕೇಂದ್ರದ ಅಧ್ಯಕ್ಷೆ ವಸುಧಾ ಯು. ಶೆಟ್ಟಿ, ಕೀರ್ತನ ಕುಲಾಲ್, ಜಯಂತಿ, ಸಂಗೀತ ಸುವರ್ಣ, ಶುಭಲಕ್ಷ್ಮಿ, ರಾಧಾ ಶ್ರೀಧರ್, ಸುಜಾತ ಉಪಸ್ಥಿತರಿದ್ದರು. ವಸುಧ ಸ್ವಾಗತಿಸಿದರು. ನಯನ ಆಚಾರ್ಯ ವಂದಿಸಿದರು. ದೇವಿಕಾ ಸುಳ್ಯ ನಿರೂಪಿಸಿದರು. ಕಲಾಕೇಂದ್ರದ ವಿದ್ಯಾರ್ಥಿಗಳಿಂದ ಮಹಿಷ ವಧೆ ಯಕ್ಷಗಾನ ಪ್ರದರ್ಶನಗೊಂಡಿತು.



> **ಯಕ್ಷ ಗುರುಗಳಿಗೆ ಸನ್ಮಾನ**
> ಗೆಜ್ಜೆಗಿರಿ ಮೇಳದ ಯಕ್ಷಗಾನ ಸ್ತ್ರೀ ವೇಷಧಾರಿ ಜಗದೀಶ ಗೌಡ ಬೋಳಂತೂರು ಹಾಗೂ ಕಲಾಕೇಂದ್ರದ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ ಯಕ್ಷಗಾನ ಗುರು ವಿಶ್ವನಾಥ ಪದ್ಮುಂಜ, ಹಾಗೂ ಕಾರ್ಯಕ್ರಮಕ್ಕೆ ಸಹಕರಿಸಿದ ಹಿಂದೂ ಯುವ ಸೇನೆ ಕೇಂದ್ರೀಯ ಮಂಡಳಿ ಉಪಾಧ್ಯಕ್ಷ ಕೊರಗಪ್ಪ ಶೆಟ್ಟಿ, ಗ್ರಾಫಿಕ್ಸ್ ಡಿಸೈನರ್ ಸುಧಾಕರ್ ಆಚಾರ್ಯರನ್ನು ಗೌರವಿಸಲಾಯಿತು.

ಸುತ್ತಮುತ್ತ

ನಗರ ವಸತಿ ಯೋಜನೆ: ಅರ್ಜಿ ಸಲ್ಲಿಸಲು ಅವಕಾಶ

ಬೈಂದೂರು: ಭಾರತ ಸರ್ಕಾರವು ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0 ಯೋಜನೆಡಿ ಬೈಂದೂರೂ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಾಸಿಸುವ ವಸತಿ ರಹಿತರು ಮತ್ತು ನಿವೇಶನ ರಹಿತರಿಂದ ಅರ್ಹ ಫಲಾನುಭವಿಗಳು ಅರ್ಜಿಯನ್ನು ಸಲ್ಲಿಸಲು ಕಲ್ಪಿಸಲಾಗಿದೆ. ಅಲ್ಲದೇ ಬೈಂದೂರು ಪಟ್ಟಣ ಪಂಚಾಯತ್ ಕಚೇರಿಗೆ ಸೂಕ್ತ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸಲು ಸಹ ಅವಕಾಶವನ್ನು ಕಲ್ಪಿಸಲಾಗಿದೆ. ಅರ್ಜಿದಾರರು ಆಧಾರ್ ಕಾರ್ಡ್, ಕುಟುಂಬದ ಪಡಿತರ ಚೀಟಿ ಹಾಗೂ ಆ ಸದಸ್ಯರ ಆಧಾರ್ ಕಾರ್ಡ್, ವಸತಿ ರಹಿತರಾದಲ್ಲಿ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳು, ಆದಾಯ ಮತ್ತು ಜಾತಿ ಪ್ರಮಾಣಪತ್ರ, ಬ್ಯಾಂಕ್ ಖಾತೆಯ ವಿವರ, ಲಭ್ಯವಿದ್ದಲ್ಲಿ ಪ್ಯಾನ್ ಕಾರ್ಡ್ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಬೈಂದೂರು ಪಟ್ಟಣ ಪಂಚಾಯತ್‌ನ ವಸತಿ ಶಾಖೆಯಲ್ಲಿ ಕಚೇರಿ ಸಮಯ ಬೆಳಗ್ಗೆ 10ರಿಂದ ಸಂಜೆ 5.30ರೊಳಗೆ ಪಡೆದುಕೊಳ್ಳಬಹುದಾಗಿದೆ ಎಂದು ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಡುಪಿ ಜಿಲ್ಲಾ ಎಸ್‌ಟಿ ಮೋರ್ಚಾ ಪದಾಧಿಕಾರಿಗಳ ನಿಯುಕ್ತಿ

ಉಡುಪಿ: ಜಿಲ್ಲಾ ಬಿಜೆಪಿ ಎಸ್.ಟಿ. ಮೋರ್ಚಾದ ನೂತನ ಪದಾಧಿಕಾರಿಗಳನ್ನು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ಅನುಮೋದನೆ ಮೇರೆಗೆ ಜಿಲ್ಲಾ ಎಸ್.ಟಿ. ಮೋರ್ಚಾ ಅಧ್ಯಕ್ಷ ಭುಜಂಗ ನಾಯ್ಕ್ ಅವರು ನಿಯುಕ್ತಿಗೊಳಿಸಿ ಪಟ್ಟಿ ಬಿಡುಗಡೆಗೊಳಿಸಿದ್ದಾರೆ. ಉಪಾಧ್ಯಕ್ಷರುಗಳಾಗಿ ನಾರಾಯಣ ನಾಯ್ಕ್, ರಮೇಶ್ ನಾಯ್ಕ್, ರಾಮ ನಾಯ್ಕ್, ಸುಬೇದ ರವಿ, ರೇವತಿ, ಪ್ರಧಾನ ಕಾರ್ಯದರ್ಶಿಗಳಾಗಿ ಉಮೇಶ್ ನಾಯ್ಕ್, ಸುಭಾಷ್ ನಾಯ್ಕ್, ಕಾರ್ಯದರ್ಶಿಗಳಾಗಿ ನವೀನ್, ಸುದೀಪ್ ನಾಯ್ಕ್, ಸುರೇಶ ಕೊರಗ, ಸುಜಾತ ನಾಯ್ಕ್, ಸುಗಂಧಿ, ಕೋಶಾಧಿಕಾರಿಗಳಾಗಿ ನಾರಾಯಣ ನಾಯ್ಕ್, ಕಾರ್ಯಕಾರಿಣಿ ಸದಸ್ಯರಾಗಿ ಶರತ್ ನಾಯ್ಕ್ ಕರಂಬಳ್ಳಿ, ನಾಗೇಂದ್ರ ನಾಯ್ಕ್, ಶ್ರೀಧರ ಗೌಡ, ನಾಗೇಶ ನಾಯ್ಕ್, ದಯಾನಂದ ನಾಯ್ಕ್, ಸುರೇಂದ್ರ ನಾಯ್ಕ್, ಮಂಜುನಾಥ ನಾಯ್ಕ್, ಸತೀಶ್ ನಾಯ್ಕ್, ನಿತೀಶ್ ನಾಯ್ಕ್, ದಿನೇಶ್ ಗೌಡ, ಸುಬ್ರಮಣ್ಯ ನಾಯ್ಕ್, ಸಂದೀಪ್ ನಾಯ್ಕ್, ರಾಜ ನಾಯ್ಕ್, ಮಾಲತಿ ಬಿ. ನಾಯ್ಕ್, ಮನೋಜ್ ನಾಯ್ಕ್, ಸನ್ನಿ, ಗೀತಾ ನಾಯ್ಕ್ ಇವರುಗಳನ್ನು ನಿಯುಕ್ತಿಗೊಳಿಸಲಾಗಿದೆ ಎಂದು ಭುಜಂಗ ನಾಯ್ಕ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಲಿಗ್ರಾಮ ಪಟ್ಟಣ: ಮುಂಗಾರು ಸಹಾಯವಾಣಿ ಆರಂಭ

ಕೋಟ: ಸಾಲಿಗ್ರಾಮ ಪಟ್ಟಣ ಪಂಚಾಯತ್‌ನ ಮಳೆಗಾಲದ ತುರ್ತು ಸಂದರ್ಭದಲ್ಲಿ ಈ ಕೆಳಕಂಡ ದೂರವಾಣಿಗೆ ಸಂಪರ್ಕಿಸುವಂತೆ ಸಾಲಿಗ್ರಾಮ ಪಟ್ಟಣ ಪಂಚಾಯತ್ ಪ್ರಕಟಣೆ ತಿಳಿಸಿದೆ. ಕಿರಿಯ ಆರೋಗ್ಯ ನಿರೀಕ್ಷಕಿ ಮಮತಾ (ದೂರವಾಣಿ ಸಂಖ್ಯೆ:9035627273), ಸ್ಯಾನಿಟರಿ ಸೂಪರ್ ವೈಸರ್ ಶಿವರಾಜ್ ರಮೇಶ್ ನಾಯ್ಕ್ (ದೂರವಾಣಿ ಸಂಖ್ಯೆ:8618628500) ಅವರನ್ನು ಮತ್ತು ಕಚೇರಿ ದೂರವಾಣಿ ಸಂಖ್ಯೆ 7353449984ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯಲ್ಲಿ ಕೌಶಲಗಳ ತರಬೇತಿ

ಕುಂದಾಪುರ: ಹಟ್ಟಿಯಂಗಡಿಯ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯಲ್ಲಿ ಶಾಲೆಯ ಶಿಕ್ಷಕ-ಶಿಕ್ಷಕೇತರ ವೃಂದದವರಿಗೆ ಮೂರು ದಿನಗಳ ವಿವಿಧ ಕೌಶಲಗಳ ಬಗ್ಗೆ ತರಬೇತಿ ಕಾರ್ಯಕ್ರಮ ನಡೆಯಿತು. ಬೇಸ್‌ನ ನಿರ್ದೇಶಕ ಡಾ. ರಾಮಪ್ರಸಾದ್ ಎಚ್. ಎಸ್. ಅವರು ಇಂದಿನ ದಿನಗಳಲ್ಲಿ ಶಿಕ್ಷಕರು ಅಭಿವೃದ್ಧಿಪಡಿಸಿಕೊಳ್ಳಬೇಕಾದ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ನೀಡಿದರು. ಇಶಾ ಫೌಂಡೇಶನ್‌ನ ತರಬೇತುದಾರ ಪ್ರವೀಣ್ ಅವರು ಮನಸ್ಸಿನ ನಿಯಂತ್ರಣ, ಒತ್ತಡ ನಿವಾರಣೆ, ದೈಹಿಕ ಆರೋಗ್ಯ, ಮಾನಸಿಕ ನೆಮ್ಮದಿಗಳ ಸಂಪಾದನೆಯನ್ನು ಯೋಗಮಾರ್ಗದ ಮೂಲಕ ಹೇಗೆ ಸಾಧಿಸಿಕೊಳ್ಳಬಹುದೆಂದು ಮಾಹಿತಿ ನೀಡಿದರು. ಶಾಲೆಯ ಪ್ರಾಂಶುಪಾಲ, ಶ್ರೀ ಸಿದ್ಧಿ ಪ್ರತಿಷ್ಠಾನದ ಕಾರ್ಯದರ್ಶಿ ಶರಣ ಕುಮಾರ ಮಾತನಾಡಿ, ಪ್ರತಿವರ್ಷ ಒಂದೇ ರೀತಿಯ ಪಾಠಪ್ರವಚನಗಳು ಅವರಿಗೆ ರುಚಿಸುವುದಿಲ್ಲ, ಆದ್ದರಿಂದ ಶಿಕ್ಷಕರೂ ಸಹ ಮಕ್ಕಳ ಮನೋರಂಜನೆಗೊಳಿಸತಕ್ಕ ಕೌಶಲಗಳಿಂದ ಕೂಡಿರತಕ್ಕದ್ದು. ಕೆಲವಷ್ಟು ಯೋಗಾಸನಗಳ ಅಭ್ಯಾಸವನ್ನು ಶಿಕ್ಷಕ-ಶಿಕ್ಷಕೇತರ ವೃಂದದವರೂ ಹೊಂದಿರಬೇಕು. ಸರ್ವರೂ ಆರೋಗ್ಯದಿಂದಿರಬೇಕು ಮತ್ತು ವಿದ್ಯಾರ್ಥಿಗಳಿಗೆ ಯೋಗಾಸನಗಳ ಅಭ್ಯಾಸ ನಡೆಸುವ ಮೊದಲು ಪ್ರತಿಯೊಬ್ಬ ಶಿಕ್ಷಕನೂ ಅರಿತಿದ್ದರೆ ಕೆಲಸ ಸುಲಭ ಸಾಧ್ಯ. ಈ ಸದುದ್ದೇಶದಿಂದ ಕಾರ್ಯಾಗಾರಗಳನ್ನು ನಡೆಸಲಾಗಿದೆ ಎಂದು ಹೇಳಿದರು. ಶಾಲಾ ಆಡಳಿತಾಧಿಕಾರಿ ವೀಣಾರಶ್ಮಿ ಎಂ., ಉಪ ಪ್ರಾಂಶುಪಾಲ ರಾಮ ದೇವಾಡಿಗ ಇದ್ದರು.

ನಾಳೆ ಕೋಟದಲ್ಲಿ ಶೈಕ್ಷಣಿಕ ಪರಿಕರ ವಿತರಣೆ

ಕೋಟ: ಇಲ್ಲಿನ ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ವತಿಯಿಂದ ಪುನಿತ್ ರಾಜ್‌ಕುಮಾರ್ ವಿದ್ಯಾನಿಧಿ ಯೋಜನೆಯಡಿ ಶೈಕ್ಷಣಿಕ ದತ್ತು ಪಡೆದ ಹಾಗೂ ಫಲಾನುಭವಿ ವಿದ್ಯಾರ್ಥಿಗಳಿಗೆ ವಿದ್ಯಾ ಪರಿಕರ ವಿತರಣೆ ಕಾರ್ಯಕ್ರಮ ಜೂ.4ರಂದು ಸಂಜೆ 5.45ಕ್ಕೆ ಕೋಟದ ಸಮುದ್ಯತಾ ಸಭಾಂಗಣದಲ್ಲಿ ಜರಗಲಿದೆ. ಸಂಸ್ಥೆ ಮಹಾಪೋಷಕ ಆನಂದ್ ಸಿ. ಕುಂದರ್ ಹಾಗೂ ಕೃಷ್ಣಪ್ರಸಾದ್ ಕ್ಯಾಶು, ಸ್ಟೀಲ್ ಇಂಡಸ್ಟ್ರೀಸ್ ಮಾಲಿಕ ಸಂಪತ್ ಕುಮಾರ್ ಶೆಟ್ಟಿ ಸ್ನೇಹಕೂಟದ ಅಧ್ಯಕ್ಷೆ, ಸಲಹಾ ಸಮಿತಿ ಸದಸ್ಯೆ ಭಾರತಿ ಮಯ್ಯ ಪಾಲ್ಗೊಳ್ಳುವರು.

ಪುತ್ತೂರು, ಸುಳ್ಯ, ಬೆಳ್ತಂಗಡಿ ಭಾಗಗಳಲ್ಲಿ ಮಳೆಗಾಲದಲ್ಲಿ ಪ್ರವಾಹದ ಭೀತಿ | ಎಚ್ಚೆತ್ತುಕೊಳ್ಳಬೇಕಿದೆ ಆಡಳಿತ

ಮಳೆಗಾಲದಲ್ಲಿ ಕಿಂಡಿ ಅಣೆಕಟ್ಟು ನಿರ್ವಹಣೆಯೇ ಸವಾಲು!

■ ರಾಜೇಶ್ ಪಟ್ಟೆ

ಪುತ್ತೂರು: ಕರಾವಳಿ ಭಾಗದಲ್ಲಿ ಸೇತುವೆ, ಕಿಂಡಿ ಅಣೆಕಟ್ಟುಗಳು ಹೆಚ್ಚಾಗಿವೆ. ಇವುಗಳಲ್ಲಿ ಮಳೆಗಾಲದಲ್ಲಿ ಮಳೆ ನೀರಿನ ಜತೆ ಬರುವ ತ್ಯಾಜ್ಯ, ಮರಮಟ್ಟುಗಳು ಸಿಲುಕಿ ಮುಂದಿನ ಮಳೆಗಾಲದಲ್ಲಿ ಸರಾಗ ನೀರಿನ ಹರಿವಿಗೆ ತಡೆಯೊಡ್ಡಿ ಕೃತಕ ಪ್ರವಾಹದ ಪರಿಸ್ಥಿತಿಗೆ ಕಾರಣವಾಗುತ್ತಿರುವುದು ಹಿಂದಿನ ವರ್ಷಗಳಲ್ಲಿ ಸಾಬೀತಾಗಿದೆ. ಆದರೆ ಆಡಳಿತ ವ್ಯವಸ್ಥೆಯು ಮಳೆಗಾಲಕ್ಕೆ ಮುನ್ನ ಈ ಮರಮುಟ್ಟು, ಹೂಳು ತೆರವುಗೊಳಿಸಲು ಪೂರಕ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸುವುದೂ ಮುಂದುವರೆದಿದೆ.



ಸಂಗಮ ವಿಶೇಷ

ಕೆಲವು ವರ್ಷಗಳ ಹಿಂದೆ ಪುತ್ತೂರು, ಸುಳ್ಯ, ಬೆಳ್ತಂಗಡಿ ಭಾಗಗಳಲ್ಲಿ ಮಳೆಗಾಲದಲ್ಲಿ ಪ್ರವಾಹದ ಸ್ಥಿತಿ ನಿರ್ಮಾಣವಾಗಿ ವ್ಯಾಪಕ ಪ್ರಮಾಣದ ಹಾನಿ ಉಂಟಾಗಿತ್ತು. ಇದಕ್ಕೆ ಅಣೆಕಟ್ಟು, ಸೇತುವೆಗಳಲ್ಲಿ ತುಂಬಿದ್ದ ಮರಮುಟ್ಟುಗಳನ್ನು ತೆರವುಗೊಳಿಸದೇ ನೀರಿನ ಸರಾಗ ಹರಿವಿಗೆ ತಡೆಯುಂಟಾಗಿರುವುದೂ ಒಂದು ಕಾರಣವಾಗಿತ್ತು. ಇದನ್ನು ಅಧ್ಯಯನಕಾರರ ಮೂಲಕ ಅರಿತ ಆಗಿನ ಸರ್ಕಾರ ಅಣೆಕಟ್ಟುಗಳಲ್ಲಿ ಮರ, ಕಸಗಳನ್ನು ಆದ್ಯತೆಯಲ್ಲಿ ತೆರವುಗೊಳಿಸಲು ಆದೇಶಿಸಿತ್ತು. ಆದರೆ ಇವತ್ತಿಗೂ ಅದು ಅನುಷ್ಠಾನದಲ್ಲಿ ಇಲ್ಲ. ಇಲ್ಲಿನ ಪರಿಸರಕ್ಕೆ ಪೂರಕವಾಗಿ ಪಿಲ್ಲರ್‌ಗಳ ಮೂಲಕ ನದಿ, ಸಣ್ಣ ಹೊಳೆ ಗಳಿಗೆ ನಿರ್ಮಿಸಲಾದ ಸೇತುವೆ, ಕಿಂಡಿ ಅಣೆಕಟ್ಟುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಬಹುತೇಕ ಕಿಂಡಿ ಅಣೆಕಟ್ಟುಗಳು ಸುಮಾರು 4 ದಶಕಗಳ ಹಿಂದೆ ನೀರಾವರಿ ಇಲಾಖೆಗಳ ಮೂಲಕ ನಿರ್ಮಾಣಗೊಂಡಿವೆ. ಬಹುತೇಕ ಕಡೆಗಳಲ್ಲಿ ಈಗಿನ ಪರಿಸ್ಥಿತಿಗೆ ಅವೈಜ್ಞಾನಿಕವಾಗಿಯೂ ಇವು ನಿರ್ಮಾಣಗೊಂಡಿವೆ. ಕೆಲವು ವರ್ಷಗಳಿಂದ ಕರಾವಳಿ ತಾಲೂಕುಗಳಲ್ಲಿ ಭಾರೀ ಪ್ರಮಾಣದ ಮಳೆಯಾಗುತ್ತಿದ್ದು, ಹೆಚ್ಚಿನ ಹಾನಿಗಳು ಉಂಟಾಗುತ್ತಿವೆ. ಸೇತುವೆ, ಕಿಂಡಿ ಅಣೆಕಟ್ಟುಗಳಲ್ಲಿ ಪಿಲ್ಲರ್‌ಗಳ ಮಧ್ಯೆ ನೀರಿನೊಂದಿಗೆ ಸಾಗಿ ಬರುವ ಮರದ ತುಂಡುಗಳು, ತ್ಯಾಜ್ಯಗಳು ನಿಂತು ಆ ಮೂಲಕ ಸರಾಗ ನೀರಿನ ಹರಿವು ಸಾಧ್ಯವಾಗದೆ ಕೃಷಿ ಭೂಮಿ, ರಸ್ತೆ, ಸಾರ್ವಜನಿಕ ಸ್ಥಳಗಳಲ್ಲಿ ಪ್ರವಾಹದ ಸ್ಥಿತಿ ನಿರ್ಮಾಣಕ್ಕೆ ಕಾರಣವಾಗುತ್ತಿದೆ.

> **ನಿರ್ದೇಶನ ನೀಡಲಿ**
>
> ಜಿಲ್ಲೆಯಲ್ಲಿ 2 ವರ್ಷ ಉಂಟಾದ ಪ್ರವಾಹ ಪರಿಸ್ಥಿತಿ ಅವಲೋಕಿಸಿ ಆಗಿನ ಮುಖ್ಯಮಂತ್ರಿಗಳೇ ಅಣೆಕಟ್ಟುಗಳಲ್ಲಿ ಶೇಖರಣೆಗೊಳ್ಳುವ ಮರಮಟ್ಟುಗಳ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿ ಕಾರಿಗಳಿಗೆ ಸೂಚನೆ ನೀಡಿದ್ದರು. ಆದರೆ ಬಳಿಕ ಆಡಳಿತ ವ್ಯವಸ್ಥೆ ಇದನ್ನು ನಿರ್ಲಕ್ಷಿಸಿದೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಸ್ಥಳೀಯಾಡಳಿತಕ್ಕೆ ನಿರ್ದೇಶನ ನೀಡಬೇಕಾಗಿದೆ.
>
> ● ಶಿವಶಂಕರ್, ಕೃಷಿಕರು, ಪಾಣಾಜೆ

ಸೇತುವೆಗಳಿಗೆ ಹಾನಿ

2019ರಲ್ಲಿ ಸುಳ್ಯ ತಾಲೂಕಿನ ಕೊಲ್ಲಮೊಗ್ರ ಗ್ರಾ.ಪಂ. ವ್ಯಾಪ್ತಿಯಲ್ಲೇ ಮಳೆ ಹಾಗೂ ಪ್ರವಾಹದ ವೇಳೆ ಸುಮಾರು 7 ಸೇತುವೆಗಳಿಗೆ ಹಾನಿಯಾಗಿರುವ ಕುರಿತು ಕಂದಾಯ ಇಲಾಖೆ ವರದಿ ಮಾಡಿತ್ತು. ಬಳಿಕ ಸಂಘ ಸಂಸ್ಥೆಗಳು, ಸಾರ್ವಜನಿಕರು, ವಿಪತ್ತು ನಿರ್ವಹಣಾ ತಂಡಗಳು, ಸೇತುವೆಯಲ್ಲಿ ಬಂದು ನಿಂತ ಮರಗಳನ್ನು ತೆರವುಗೊಳಿಸುವ ಕೆಲಸ ಮಾಡಿದ್ದವು. ಬಳಿಕ ಸರ್ಕಾರವೇ ಆದೇಶ ಹೊರಡಿಸಿ ಇಲಾಖೆಗಳಿಗೆ ಸೂಚಿಸಿರುವುದು ಒಂದಷ್ಟು ಹಾನಿ ಪ್ರಮಾಣ ಕಡಿಮೆಗೊಳಿಸುವ ಪ್ರಯತ್ನದ ಭಾಗವಾಗಲಿದೆ ಎನ್ನುವುದು ಸಾರ್ವಜನಿಕ ಅಭಿಪ್ರಾಯ ವ್ಯಕ್ತವಾಗಿತ್ತು. ಆದರೆ ಈ ಕೆಲಸ ಒಂದೆರಡು ವರ್ಷಗಳಿಗಷ್ಟೇ ಸೀಮಿತವಾಗಿತ್ತು. 2024ರಲ್ಲಿ ದ.ಕ. ಜಿಲ್ಲಾಧಿಕಾರಿ ಕಿಂಡಿ ಅಣೆಕಟ್ಟುಗಳನ್ನು ಸ್ವಚ್ಛಗೊಳಿಸುವ ಕುರಿತು ಸೂಚನೆ ನೀಡಿದ್ದರೂ ಅದು ಪರಿಣಾಮಕಾರಿಯಾಗಿ ಅನುಷ್ಠಾನವಾಗಿಲ್ಲ.

> **ಡಿಸಿ ಸೂಚನೆಗೂ ನಿರ್ಲಕ್ಷ್ಯ**
>
> ಬಡಗನ್ನೂರು ಗ್ರಾಮದ ಪಟ್ಟೆ-ಮುಂಡೋಳೆ-ಈಶ್ವರಮಂಗಲ ಸಂಪರ್ಕ ರಸ್ತೆಯಲ್ಲಿ ಕಿಂಡಿ ಅಣೆಕಟ್ಟು ಇದೆ. ಸೀರೆ ಹೊಳೆಯ ನಡುವೆ ಸಾಗುವ ಕಿರು ಸೇತುವೆಯ ಕೆಳಭಾಗದಲ್ಲಿ ಈ ಅಣೆಕಟ್ಟು ನಿರ್ಮಾಣಗೊಂಡಿದೆ. ಸದ್ಯ ನಿರುಪಯೋಗಿಯಾಗಿರುವ ಈ ಅಣೆಕಟ್ಟನ್ನು ಸಾರ್ವಜನಿಕ ದೂರಿನ ಮೇರೆಗೆ ತೆರವುಗೊಳಿಸುವಂತೆ ದ.ಕ. ಜಿಲ್ಲಾಧಿಕಾರಿ ಗ್ರಾಮವಾಸ್ತವ್ಯದಲ್ಲಿ ನೀಡಿದ ಸೂಚನೆಗೆ ಸುಮಾರು 6 ವರ್ಷ ಕಳೆದರೂ ಕಾರ್ಯರೂಪಕ್ಕೆ ಬಂದಿಲ್ಲ.

ಅಧಿಕ ಅಣೆಕಟ್ಟುಗಳು

ದ.ಕ. ಜಿಲ್ಲೆಯ ವಿವಿಧ ತಾಲೂಕುಗಳು ಸಹಿತ ಪುತ್ತೂರು, ಸುಳ್ಯ, ಕಡಬ ತಾಲೂಕುಗಳಲ್ಲಿ 100 ಕ್ಕೂ ಮಿಕ್ಕಿ ಕಿಂಡಿ ಅಣೆಕಟ್ಟುಗಳಿವೆ. ಬಹುತೇಕ ಹೊಳೆ, ತೋಡುಗಳಿಗೆ ಹಲಗೆ ಹಾಕಿ ನೀರು ಸಂರಕ್ಷಿಸಿ ಕೃಷಿಗೆ ಬಳಸುವ ಉದ್ದೇಶದಿಂದ ಇವುಗಳನ್ನು ನಿರ್ಮಿಸಲಾಗಿದೆ. ಆದರೆ ಕೆಲವಷ್ಟೇ ಮೂಲ ಉದ್ದೇಶದಿಂದ ಬಳಕೆಯಾಗುತ್ತಿವೆ. ಮಳೆಗಾಲದ ಆರಂಭದಲ್ಲಿ ಇವುಗಳಲ್ಲಿ ಸಿಲುಕಿರುವ ಮರಗಳನ್ನು ತೆರವುಗೊಳಿಸಿದರೂ, ಒಂದೆರಡು ಭಾರೀ ಮಳೆಗೆ ಅವು ಮೊದಲಿನಂತೆಯೇ ಆಗುತ್ತವೆ. ಅಲ್ಲದೇ ಇವುಗಳನ್ನು ಆಗಾಗ್ಗೆ ತೆರವುಗೊಳಿಸುವವರು ಯಾರು ಎನ್ನುವ ಪ್ರಶ್ನೆಯೂ ಇದೆ. ವಿಪತ್ತು ನಿರ್ವಹಣಾ ಸಮಿತಿಗಳು, ಸ್ಥಳೀಯಾಡಳಿತ, ನೀರಾವರಿ ಇಲಾಖೆ ಮಾತ್ರ ಇದರ ಗೋಡವೆಗೇ ಹೋಗುತ್ತಿಲ್ಲ.

ಅವೈಜ್ಞಾನಿಕ ವಿಧಾನ

ಹೆದ್ದಾರಿ-ನದಿ ಭಾಗದಿಂದ ತೀರಾ ಕೆಳ ಭಾಗಗಳಲ್ಲಿ ನಿರ್ಮಾಣವಾಗಿರುವ ಅಣೆಕಟ್ಟುಗಳಿಂದ ಕೆಲವು ಕಡೆ ರಸ್ತೆಗಳು ಕುಸಿಯುವ ಭೀತಿ ಇದೆ. ಅಂತಹ ಅಣೆಕಟ್ಟುಗಳ ಕುರಿತು ದ.ಕ. ಡಿಸಿಯವರಿಗೆ ದೂರು ಸಲ್ಲಿಕೆಯಾಗಿದ್ದು, ಈ ಬಗ್ಗೆ ಕ್ರಮಕ್ಕೆ ಸೂಚಿಸಿದ ಉದಾಹರಣೆಗಳೂ ಇವೆ.

ಕಲ್ಲಡ್ಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಾರಂಭೋತ್ಸವ ಸಂಭ್ರಮ



ಬಂಟ್ವಾಳ: ಕಲ್ಲಡ್ಕ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಾಲಾ ಪ್ರಾರಂಭೋತ್ಸವ ನೆರವೇರಿತು. ಎಸ್‌ಡಿಎಂಸಿ ಅಧ್ಯಕ್ಷ ಮಧುಸೂಧನ್ ಐತಾಳ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನೋಡಲ್ ಅಧಿಕಾರಿಯಾಗಿ ತೋಟಗಾರಿಕೆ ಇಲಾಖಾ ಜಂಟಿ ನಿರ್ದೇಶಕ ಐ.ಕೆ. ದೊಡ್ಡಮಣಿ ಮಂಗಳೂರು, ಗೋಳ್ತಮಜಲು ಗ್ರಾ.ಪಂ. ಪಿಡಿಒ ಸುನೀಲ್, ಶಾಲಾ ಹಿರಿಯ ವಿದ್ಯಾರ್ಥಿ ಕೆ. ಪದ್ಮನಾಭ ರೈ ಕಲ್ಲಡ್ಕ, ಎಸ್‌ಡಿಎಂಸಿ ಉಪಾಧ್ಯಕ್ಷ ಚಂದನ್ ಜೈನ್, ಸದಸ್ಯರಾದ ಸುರೇಶ್ ನಾಯ್ಕ್, ಹಮೀದ್ ಅಲಿ, ನವೀನ್, ನಝೀರ್, ಮಾಲಿನಿ, ಸುರೇಶ್ ಪೂಜಾರಿ, ಶಾಲಾ ಮುಖ್ಯ ಶಿಕ್ಷಕ ಅಬೂಬಕ್ಕರ್ ಅಶ್ರಫ್ ಮೊದಲಾದವರು ಭಾಗವಹಿಸಿದ್ದರು. ಶಾಲಾ ಮಕ್ಕಳಿಂದ ವೈಭವದ ಮೆರವಣಿಗೆ ನಡೆಯಿತು. ಬಳಿಕ ಮೆಗಾ ಪೋಷಕರ ಸಭೆ ನಡೆಸಲಾಯಿತು. ಹೊಟೇಲ್ ಲಕ್ಷ್ಮಿ ನಿವಾಸ (ಕೆಟಿ ಹೋಟೆಲ್) ಮಾಲಕ ಶಿವರಾಮ ಹೊಳ್ಳ ಅವರ ವತಿಯಿಂದ ಶಾಲೆಯ ಒಂದು ಸಾವಿರಕ್ಕೂ ಮಿಕ್ಕಿದ ವಿದ್ಯಾರ್ಥಿಗಳಿಗೆ ಸಿಹಿತಿಂಡಿ ವಿತರಿಸಲಾಯಿತು.

ಮಣೂರು ಪ್ರೌಢ ಮತ್ತು ಪ್ರಾಥಮಿಕ ಶಾಲೆಯಲ್ಲಿ ಶೈಕ್ಷಣಿಕ ಪ್ರಾರಂಭೋತ್ಸವ



ಕೋಟ: ಮಣೂರು ಪಡುಕರೆ ಸರಕಾರಿ ಪ್ರೌಢ ಮತ್ತು ಪ್ರಾಥಮಿಕ ಶಾಲೆಯಲ್ಲಿ ಹೊಸದಾಗಿ ದಾಖಲಾದ ಮಕ್ಕಳನ್ನು ಮೆರವಣಿಗೆ ಮೂಲಕ ಸ್ವಾಗತಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಮಣೂರು ಪಡುಕರೆ ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ ಸಿ. ಕುಂದರ್, ಮಕ್ಕಳ ಕಲಿಕೆ ಸಂತಸದಾಯಕವಾಗಿ ಸಾಗುವಂತೆ ಶಾಲಾ ಭೌತಿಕ ವ್ಯವಸ್ಥೆ, ಶಾಲಾ ವಾಹನ ವ್ಯವಸ್ಥೆ ಅಗತ್ಯತೆಗಳನ್ನು ಪೂರೈಸಿಕೊಂಡ ಬ್ರಹ್ಮಾವರ ವಲಯದಲ್ಲಿಯೇ 'ಎ' ಗ್ರೇಡ್ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಸಂಸ್ಥೆಯಾಗಿ ಮಣೂರು ಶಾಲೆ ಬಿಂಬಿತವಾಗಿದೆ ಎಂದರು. ಪ್ರೌಢಶಾಲಾ ಮುಖ್ಯೋಪಾಧ್ಯಾಯ ವಿವೇಕಾನಂದ ಗಾಂವಕಾರ ಮಾತನಾಡಿದರು. ಶಾಲಾ ವಾಹನದ ಬಳಕೆಯ ಕುರಿತಾಗಿ ಶೈಕ್ಷಣಿಕ ಪ್ರೋತ್ಸಾಹಕ ರಮೇಶ್ ಕುಂದರ್ ಇವರು ಮಾತನಾಡಿದರು. ಪ್ರೌಢ ಶಾಲಾ ವಿಭಾಗ ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ, ಪ್ರಾಥಮಿಕ ವಿಭಾಗದ ಅಧ್ಯಕ್ಷ ವಿನಯ್, ಕೋಟ ಪಂಚಾಯತ್ ಮಾಜಿ ಸದಸ್ಯ ಜಯರಾಮ ಶೆಟ್ಟಿ, ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕಿ ವಿಜಯ ಇದ್ದರು. ಪ್ರೌಢವಿಭಾಗ ಹಿರಿಯ ಶಿಕ್ಷಕ ರಾಮ್‌ದಾಸ್ ನಾಯಕ್ ಸ್ವಾಗತಿಸಿದರು. ಶಿಕ್ಷಕಿ ನಾಗರತ್ನ ಜಿ ಶಾಲಾ ಚಟುವಟಿಕೆಯ ಕುರಿತು ಮಾತನಾಡಿದರು. ಲಲಿತಾ ವಂದಿಸಿದರು.

ಬಂಟಕಲ್ಲು ಶ್ರೀ ದುರ್ಗಾಪರಮೇಶ್ವರೀ ಹಿರಿಯ ಪ್ರಾಥಮಿಕ ಶಾಲೆ ಪುಟಾಣಿಗಳಿಗೆ ಸ್ವಾಗತ



ಶಿರ್ವ: ಬಂಟಕಲ್ಲು ಶ್ರೀ ದುರ್ಗಾಪರಮೇಶ್ವರೀ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ನೆರವೇರಿತು. ಶ್ರೀಕ್ಷೇತ್ರ ಬಂಟಕಲ್ಲು ದೇವೀ ಸನ್ನಿಧಿಯಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ವಿದ್ಯಾರ್ಥಿಗಳನ್ನು ಶ್ರೀದೇವಳದಿಂದ ಶಾಲೆಯವರೆಗೆ ಮೆರವಣಿಗೆಯಲ್ಲಿ ಶಾಲೆಗೆ ಬರ ಮಾಡಿಕೊಳ್ಳಲಾಯಿತು. ಒಂದನೇ ತರಗತಿಗೆ ಪ್ರವೇಶ ಪಡೆಯುತ್ತಿರುವ 9 ವಿದ್ಯಾರ್ಥಿಗಳನ್ನು ಶ್ರೀದೇವಳದ ಆಡಳಿತ ಮೊಕ್ತೇಸರ ಗಂಪದಬೈಲು ಜಯರಾಮ ಪ್ರಭು, ಆಡಳಿತ ಮಂಡಳಿ ಅಧ್ಯಕ್ಷ ಉಮೇಶ ಪ್ರಭು ಪಾಲಮೆ, ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಶಶಿಧರ ವಾಗ್ಲೆ, ಶಾಲಾ ಸಂಚಾಲಕ ರಾಮದಾಸ್ ಪ್ರಭು, ಮುಖ್ಯ ಶಿಕ್ಷಕಿ ಸಂಗೀತಾ ಆರ್. ಪಾಟ್ಕರ್, ಶಾಲಾ ಶತಮಾನೋತ್ಸವ ಸಮಿತಿ ಅಧ್ಯಕ್ಷ ಮಾಧವ ಕಾಮತ್, ಕಾರ್ಯದರ್ಶಿ ಕೆ.ಆರ್. ಪಾಟ್ಕರ್, ಕೋಶಾಧಿಕಾರಿ ವಿಶ್ವನಾಥ್ ಬಾಂದೇಲ್ಕರ್, ಹಳೆವಿದ್ಯಾರ್ಥಿ ಹಾಗೂ ಕೊಡುಗೈದಾನಿ ರಾಮಚಂದ್ರ ನಾಯಕ್ ಪಡುಬೆಳ್ಳೆ, ಪ್ರಶಾಂತ್ ನಾಯಕ್ (ಪಚ್ಚು), ದಿನೇಶ್ ನಾಯಕ್, ರಾಜೇಶ್ ನಾಯಕ್, ಪ್ರೀತಮ್ ಪ್ರಭು ಮತ್ತಿತರರು ಸ್ವಾಗತಿಸಿದರು.

ಕೊಡ್ಲಮೊಗರು: ಶ್ರೀ ವಾಣಿ ವಿಜಯ ಶಾಲೆ ಪ್ರವೇಶೋತ್ಸವ



ಮಂಜೇಶ್ವರ: ಕೊಡ್ಲಮೊಗರು ಶ್ರೀ ವಾಣಿ ವಿಜಯ ಹೈಯರ್ ಸೆಕೆಂಡರಿ ಶಾಲೆಯ ಶಾಲಾ ಪ್ರವೇಶೋತ್ಸವ ನಡೆಯಿತು. ವರ್ಕಾಡಿ ಗ್ರಾ.ಪಂ. ಸದಸ್ಯ ಗೋಪಾಲಕೃಷ್ಣ ಪಜ್ವ ಉದ್ಘಾಟಿಸಿದರು. ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಅಬ್ದುಲ್ ಮಜೀದ್ ಶುಭಹಾರೈಸಿದರು. ರಕ್ಷಕ ಶಿಕ್ಷಕ ಸಂಘದ ಉಪಾಧ್ಯಕ್ಷ ಮೋಹನ ಮಾಸ್ಟರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಹೈಯರ್ ಸೆಕೆಂಡರಿ ಶಾಲೆಯ ಪ್ರಾಂಶುಪಾಲ ವಿಜಯಕುಮಾರ್, ರಕ್ಷಕ ಶಿಕ್ಷಕ ಸಂಘದ ಪದಾಧಿಕಾರಿಗಳಾದ ಉಸ್ಮಾನ, ಹಮೀದ್ ಕಣಿಯೂರು, ಮಾತೃ ಸಂಘದ ಉಪಾಧ್ಯಕ್ಷೆ ರೇಷ್ಮಾ, ಸದಸ್ಯೆ ವಿಶಾಲಾಕ್ಷಿ ಇದ್ದರು. ಪೂರ್ಣಿಮಾ ಸೈಬರ್ ಸುರಕ್ಷತೆಯ ಬಗ್ಗೆ ಪ್ರತಿಜ್ಞೆ ಬೋಧಿಸಿದರು. ಮುಖ್ಯೋಪಾಧ್ಯಾಯಿನಿ ಕೃಷ್ಣವೇಣಿ ಬಿ. ಸ್ವಾಗತಿಸಿದರು. ಸ್ವಾತಿ ಟೀಚರ್ ಕಾರ್ಯಕ್ರಮ ನಿರೂಪಿಸಿದರು.



ಕರ್ನಾಟಕ ಪಬ್ಲಿಕ್ ಸ್ಕೂಲ್, ಪಡುಬಿದ್ರಿ ಇದರ ಶಾಲಾ ಪ್ರಾರಂಭೋತ್ಸವದಲ್ಲಿ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಭಾಗವಹಿಸಿದರು. ಹಳೆ ವಿದ್ಯಾರ್ಥಿ ಸಂಘದ ಕೃಷ್ಣ ಬಂಗೇರ, ಕ್ಷೇತ್ರ ಶಿಕ್ಷಣಾಧಿಕಾರಿ ಯಲ್ಲಮ್ಮ, ಶಾಲಾ ಮುಖ್ಯ ಶಿಕ್ಷಕಿ ಸುಮಾ ಹಾಗೂ ಸಹ ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಕಾರ್ಕಡ ಹೊಸ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 26-27 ನೇ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವ ಜೂನ್ 1 ರಂದು ನಡೆಯಿತು. ಕಾರ್ಕಡ ಗೆಳೆಯರ ಬಳಗದ ಅಧ್ಯಕ್ಷ ಕೆ. ತಾರಾನಾಥ ಹೊಳ್ಳ ಶಾಲಾ ಎಸ್ ಡಿ ಎಂ ಸಿ ಅಧ್ಯಕ್ಷ ಗುರುರಾಜ ಉಪಾಧ್ಯ, ಶಾಲಾ ಮುಖ್ಯೋಪಾಧ್ಯಾಯ ಸತ್ಯನಾರಾಯಣ ಇದ್ದರು.



ಕೋಟೇಶ್ವರದ ಕರ್ನಾಟಕ ಪಬ್ಲಿಕ್ ಸ್ಕೂಲ್ ಪ್ರೌಢಶಾಲಾ ವಿಭಾಗದಲ್ಲಿ ಹೊಸದಾಗಿ ದಾಖಲಾದ ಸುಮಾರು 125ಕ್ಕೂ ಮೇಲ್ಪಟ್ಟ ಮಕ್ಕಳನ್ನು ಶಾಲೆಯ ಉಪ ಪ್ರಾಂಶುಪಾಲರು ಬರಮಾಡಿಕೊಂಡರು. ಈ ಸಂದರ್ಭದಲ್ಲಿ ಪ್ರಾಂಶುಪಾಲರು, ಅಧ್ಯಾಪಕರು, ಎಸ್‌ಡಿಎಂಸಿ ಸದಸ್ಯರು ಉಪಸ್ಥಿತರಿದ್ದರು.



ಕೋಟ ಬಲಿಯ ಗೋಳಿಬೆಟ್ಟು ಶಾಲೆ ಐರೋಡಿ ಸಾಸ್ತಾನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಪ್ರಾರಂಭೋತ್ಸವದಲ್ಲಿ ಪಠ್ಯ ಪುಸ್ತಕ, ದಾನಿಗಳು ನೀಡಿದ ನೋಟ್ ಪುಸ್ತಕ ಮತ್ತು ಬರವಣಿಗೆ ಸಾಮಗ್ರಿ ಕಿಟ್ ವಿತರಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷೆ ಚೈತ್ರಾ ಸುಧಾಕರ್, ರೋಟರಿ ಕ್ಲಬ್ ಹಂಗಾರಕಟ್ಟೆ ಸಾಸ್ತಾನ ನಿಯೋಜಿತ ಅಧ್ಯಕ್ಷೆ ಕುಸುಮಾ ಮನೋಜ್ ಕುಮಾರ್, ನಿವೃತ್ತ ಪೊಲೀಸ್ ಅಧಿಕಾರಿ ಲಕ್ಷ್ಮೀನಾರಾಯಣ, ಗ್ರಾ.ಪಂ. ಮಾಜಿ ಸದಸ್ಯ ಸುಧಾಕರ ಪೂಜಾರಿ, ಅನಲಾಡಿಮಠದ ಆಡಳಿತ ಮಂಡಳಿ ಸದಸ್ಯ ವಿಜಯ್ ಪೂಜಾರಿ ಇದ್ದರು.



ಕೋಟ ಮಾಬುಕಳ ಚೇತನ ಪ್ರೌಢಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಶಾಲಾ ಪ್ರೋತ್ಸಾಹಕರಾದ ರಾಘವೇಂದ್ರ ಭಟ್, ಶುಭದ ವೇದವ್ಯಾಸ ಆಚಾರ್ಯ ಇವರನ್ನು ಶಾಲಾ ವತಿಯಿಂದ ಸನ್ಮಾನಿಸಲಾಯಿತು. ಫಾರ್ಚೂನ್ ಅಕಾಡೆಮಿ ಆಫ್ ಹೆಲ್ತ್ ಸೈನ್ಸ್ ಚೇರ್ಮೆನ್ ತಾರಾನಾಥ ಶೆಟ್ಟಿ, ರಾಮದೇವ ಹಂದೆ, ವಿಶ್ವೇಶ್ವರ ಅಡಿಗ, , ಹಂಗಾರಕಟ್ಟೆ ಕ್ಲಸ್ಟರ್‌ನ ಮಾಲಿನಿ, , ವಿಶ್ರಾಂತ ಮುಖ್ಯೋಪಾಧ್ಯಾಯ ಗಣೇಶ ಜಿ ಇದ್ದರು.

ಸುಳ್ಯ ತಾ.ಪಂ. ಸಾಮಾನ್ಯಸಭೆ | ಸಿಮೆಂಟ್ ಕಾರ್ಖಾನೆ ಜೊತೆ ಚರ್ಚೆ: ಆಡಳಿತಾಧಿಕಾರಿ ಸಂತೋಷ್‌ಕುಮಾರ್ ಮಾಹಿತಿ

ಕಲ್ಚರ್ಪೆಯಲ್ಲಿ ರಾಶಿಬಿದ್ದಿರುವ ಕಸ ಸಾಗಾಟ ಮಾಡಲು ವಾರದೊಳಗೆ ಸೂಕ್ತ ಕ್ರಮ

ಸುಳ್ಯ: ಕಸದ ಸಮಸ್ಯೆಯಿಂದ ನಗರದ ಸೌಂದರ್ಯ ಹಾಳಾಗುತ್ತದೆ. ಸುಳ್ಯ ನಗರದ ಕಲ್ಚರ್ಪೆಯಲ್ಲಿ ರಾಶಿ ಬಿದ್ದಿರುವ ಕಸ ಸಾಗಾಟಕ್ಕೆ ಮತ್ತು ಹೊಸ ಜಾಗದ ವಿಷಯವಾಗಿ ಒಂದು ವಾರದೊಳಗೆ ಕ್ರಮ ಕೈಗೊಳ್ಳಲಾಗುವುದು ಎಂದು ದಕ್ಷಿಣ ಕನ್ನಡ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ, ಸುಳ್ಯ ತಾಲೂಕು ಪಂಚಾಯತ್ ಆಡಳಿತಾಧಿಕಾರಿ ಡಾ. ಸಂತೋಷ್ ಕುಮಾರ್ ಹೇಳಿದ್ದಾರೆ.

ಸುಳ್ಯ ತಾ.ಪಂ. ಸಾಮಾನ್ಯ ಸಭೆಯಲ್ಲಿ ಮಾಹಿತಿ ನೀಡಿದ ಅವರು, ಸುಳ್ಯದ ನಗರದಲ್ಲಿ ಸಂಗ್ರಹವಾದ ಕಸ ಕಲ್ಚರ್ಪೆಯಲ್ಲಿ ತುಂಬಿದೆ. ಅದನ್ನು ಸಾಗಿಸುವುದು ಮೊದಲ ಆದ್ಯತೆ. ಅದಕ್ಕಾಗಿ ಈಗಾಗಲೇ ಸಿಮೆಂಟ್ ಫ್ಯಾಕ್ಟರಿಯವರೊಂದಿಗೆ ಮಾತನಾಡಲಾಗಿದೆ ಎಂದು ತಿಳಿಸಿದರು.



ಅಪಾಯಕಾರಿ ಮರದ ಕುರಿತು ದೂರುಗಳು ಬಂದರೆ ಅರಣ್ಯ ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ ಕ್ರಮ ಕೈಗೊಳ್ಳಿ. ದೂರು ಬಂದ ಕೂಡಲೇ ಸ್ಥಳ ಪರಿಶೀಲನೆ ಮಾಡದೇ ಮರ ಕಡಿಯಬೇಡಿ. ಮರವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿ. ಇಲ್ಲವೇ ಬೇರೆಡೆ ಸ್ಥಳಾಂತರ ಮಾಡುಕೊಂಡು ನೆಟ್ಟು ಬದುಕಿಸಲು ನೋಡಿ. ಆಗುವುದೇ ಇಲ್ಲವಾದರೆ ಮಾತ್ರ ತೆರವು ಮಾಡಿ ಎಂದು ಅವರು ಸೂಚಿಸಿದರು.

ಮುಂಗಾರು ಆರಂಭಗೊಂಡಿದೆ. ಮಳೆಗೆ ಯಾವುದೇ ಆಸ್ತಿ ಪಾಸ್ತಿ ಹಾನಿ ಉಂಟಾಗದಂತೆ ಎಲ್ಲಾ ಇಲಾಖೆಗಳು ಜಾಗರೂಕರಾಗಿರಬೇಕು. ನಗರದಲ್ಲಿ ಬ್ಲಾಕ್ ಆದ ಚರಂಡಿಗಳನ್ನು ವಾರದೊಳಗೆ ಸರಿಪಡಿಸಿ, ಅಲ್ಲದೇ ನಗರದಲ್ಲಿ ಹದಗೆಟ್ಟು ಗುಂಡಿ ಬಿದ್ದ ರಸ್ತೆಗಳನ್ನು ಸರಿಪಡಿಸುವ ಕೆಲಸ ವಾರದೊಳಗೆ ಮುಗಿಸುವಂತೆ ನ.ಪಂ. ಮುಖ್ಯಾಧಿಕಾರಿಗೆ ಸೂಚನೆ ನೀಡಿದರು.

> **2400 ಮಲೆನಾಡು ಗಿಡ್ಡ ತಳಿ ಹಸು**
>
> ತಾಲೂಕಿನಲ್ಲಿ 5 ವರ್ಷದ ಹಿಂದೆ 8 ಸಾವಿರ ಇದ್ದ ಮಲೆನಾಡು ಗಿಡ್ಡ ತಳಿ ಹಸುಗಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಈಗ ತಾಲೂಕಿನಲ್ಲಿ 2400 ಹಸು ಮಾತ್ರ ಇದೆ. ಜೆರ್ಸಿ, ಎಚ್‌ಎಫ್ ಹಸು ಸೇರಿ ಒಟ್ಟು 20 ಸಾವಿರ ಇದೆ ಎಂದು ಪಶು ಇಲಾಖೆಯ ಡಾ. ನಿತಿನ್ ಪ್ರಭು ಹೇಳಿದರು.

> **ಶಾಲೆಯಲ್ಲಿ ಮಕ್ಕಳು ವಿದ್ಯುತ್ ಸ್ವಿಚ್ ಮುಟ್ಟುವಂತಿಲ್ಲ**
>
> ಶಾಲಾ ದಾಖಲಾತಿ, ಕಟ್ಟಡ ಸುರಕ್ಷತೆಯ ಕುರಿತು ಮಾಹಿತಿ ಪಡೆದ ಆಡಳಿತಾಧಿಕಾರಿಗಳು, ಶಾಲೆಗಳಲ್ಲಿ ಮಕ್ಕಳು ವಿದ್ಯುತ್ ಸ್ವಿಚ್ ಮುಟ್ಟುವಂತಿಲ್ಲ, ಮಳೆಗಾಲ ಕೂಡಾ ಆರಂಭವಾಗುತ್ತಿದೆ. ಆದ್ದರಿಂದ ಆದಷ್ಟು ಎಚ್ಚರಿಕೆಯಿಂದ ಇರಬೇಕು. ಶಾಲೆಗಳ ವಿದ್ಯುತ್ ಬೋರ್ಡ್‌ಗಳನ್ನು ಪರಿಶೀಲನೆ ನಡೆಸಬೇಕು. ಮಕ್ಕಳು ಕಡ್ಡಾಯವಾಗಿ ಸ್ವಿಚ್ ಮುಟ್ಟದಂತೆ ನೋಡಿಕೊಳ್ಳಬೇಕು. ಮಕ್ಕಳು ವಿದ್ಯುತ್ ಸ್ವಿಚ್ ಮುಟ್ಟುತ್ತಾರೆಂಬ ದೂರು ಬರಬಾರದು ಎಂದು ಬಿಇಒಗೆ ಆಡಳಿತಾಧಿಕಾರಿ ಸೂಚನೆ ನೀಡಿದರು.

ತಾಲೂಕಿನಲ್ಲಿ ಕಾರ್ಯ ನಿರ್ವಹಿಸುವ ಹಿಂದುಳಿದ ವರ್ಗಗಳ ಮತ್ತು ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಕುಡಿಯುವ ನೀರು ಮತ್ತು ಮತ್ತು ಸ್ವಚ್ಛತೆಯ ಬಗ್ಗೆ ಗಮನ ಹರಿಸಬೇಕು. ಲೋಕಲ್ ಉಪ್ಪುಗಳನ್ನು ಬಳಸಬಾರದು. ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಅವರು ಸೂಚಿಸಿದರು. ವೇದಿಕೆಯಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ರಾಜಣ್ಣ ಇದ್ದರು.

ಸುತ್ತಮುತ್ತ

ಕಟೀಲು ಕನ್ನಡ, ಇಂಗ್ಲಿಷ್ ಪ್ರೌಢಶಾಲೆಗಳಲ್ಲಿ ಪ್ರಾರಂಭೋತ್ಸವ

ಕಟೀಲು: ಶ್ರೀ ದುರ್ಗಾಪರಮೇಶ್ವರಿ ದೇವಳ ಕನ್ನಡ ಹಾಗೂ ಇಂಗ್ಲಿಷ್ ಪ್ರೌಢಶಾಲೆಗಳ ಪ್ರಾರಂಭೋತ್ಸವದಲ್ಲಿ ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿಗಳು 8ನೇ ತರಗತಿಗೆ ದಾಖಲಾತಿಯನ್ನು ಪಡೆದುಕೊಂಡು ಆಗಮಿಸಿದ ವಿದ್ಯಾರ್ಥಿಗಳಿಗೆ ತಾವೇ ತಯಾರಿಸಿದ ಹೂಗುಚ್ಚವನ್ನು ನೀಡಿ, ಹಣೆಗೆ ತಿಲಕವನ್ನಿಟ್ಟು ಸ್ವಾಗತಿಸಿದರು. ಕಟೀಲು ದೇಗುಲದ ಅರ್ಚಕ ಶ್ರೀಕರ ಆಸ್ರಣ್ಣ, ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ, ಕಟೀಲು ಸ್ಪೋರ್ಟ್ಸ್ ಅಂಡ್ ಗೇಮ್ಸ್ ಕ್ಲಬ್‌ನ ಕೇಶವ, ರಾಜಾರಾಮ್, ಕಟೀಲು ಸಮೂಹ ವಿದ್ಯಾ ಸಂಸ್ಥೆಯ ಸಂಯೋಜನಾಧಿಕಾರಿ ದಯಾನಂದ ಮಾಡ, ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಮಿಥುನ್ ಉಡುಪ, ಉಪಪ್ರಾಚಾರ್ಯ ರಾಜಶೇಖರ್ ಎನ್., ಗಿರೀಶ್ ತಂತ್ರಿ, ಪುಂಡಲೀಕ ಕೊಠಾರಿ, ಶ್ರೀವತ್ಸ, ರೋಹಿಣಿ ಶೆಟ್ಟಿ ಮುಂತಾದವರಿದ್ದರು. ಕ್ಯಾಪ್ಸ್ ಫೌಂಡೇಶನ್ ವತಿಯಿಂದ ನೀಡಲಾದ ನೀರಿನ ಬಾಟಲಿ ಹಾಗೂ ಕೈಚೀಲವನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು.

ಕುಪ್ಪೆಪದವು ಶಾಲಾರಂಭ, ಸಾಧಕ ಮಕ್ಕಳಿಗೆ ಸನ್ಮಾನ

ಕೈಕಂಬ: ಕುಪ್ಪೆಪದವಿನ ಕಿಲೆಂಜಾರು ಅರಮನೆ ಸರಕಾರಿ ಪ್ರೌಢಶಾಲೆಯ 2026–27ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ಮತ್ತು ಅಭಿನಂದನಾ ಕಾರ್ಯಕ್ರಮಕ್ಕೆ ವಿದ್ಯಾ ವರ್ಧಕ ಸಂಘದ ಅಧ್ಯಕ್ಷರ ಅಜಿತ್ ಕುಮಾರ್ ಜೈನ್ ಚಾಲನೆ ನೀಡಿದರು. ಎಸ್.ಡಿ.ಎಂ.ಸಿ ಅಧ್ಯಕ್ಷ ಸುಧೀರ್ ಜೈನ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿದ್ದ ಶಿಕ್ಷಣ ತಜ್ಞ ಹಾಗೂ ದಾನಿ ಭೋಜರಾಜ್ ಜೈನ್ ಮಾತನಾಡಿದರು.ಸಾಧಕ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಎಸ್.ಡಿ.ಎಂ.ಸಿ ಮಾಜಿ ಅಧ್ಯಕ್ಷ ಶೇಖ್ ಅಬ್ದುಲ್ಲಾ, ಸಮಿತಿಯ ಸದಸ್ಯರಾದ ತಿಮ್ಮಪ್ಪ ಶೆಟ್ಟಿ ಅಗರಿ, ಶಶಿಧರ್ ಶೆಟ್ಟಿ, ಸುಂದರ ಶಾಂತಿ, ಬೇಬಿ, ರೈತ ಮುಖಂಡರ ಮನೋಹರ ಶೆಟ್ಟಿ, ಶಿಕ್ಷಕರಾದ ತುಳಸಿ, ಉದಯಕುಮಾರ್, ನೇತ್ರಾ ಉಪಸ್ಥಿತರಿದ್ದರು. ವಿದ್ಯಾರ್ಥಿ ಪೋಷಕರು ಭಾಗವಹಿಸಿದ್ದರು. ಮುಖ್ಯ ಶಿಕ್ಷಕ ಬಾಬು ಪಿ.ಎಂ. ಪ್ರಾಸ್ತಾವಿಕ ನುಡಿಗಳನ್ನಾಡಿದರು. ಹಿರಿಯ ಶಿಕ್ಷಕ ಮಾರ್ಕ್ ಮೆಂಡೋನ್ಸಾ ಸ್ವಾಗತಿಸಿದರು. ವಿಮಲ ಶೆಟ್ಟಿ ನಿರೂಪಿಸಿ, ಉಷಾ ವಂದಿಸಿದರು.

ಹರೇಕಳ: ಶಾಲಾ ಪ್ರಾರಂಭೋತ್ಸವ

ಕೊಣಾಜೆ: ಹರೇಕಳ ಶ್ರೀ ರಾಮಕೃಷ್ಣ ಅನುದಾನಿತ ಪ್ರೌಢಶಾಲೆಯಲ್ಲಿ ಸೋಮವಾರ ಶಾಲಾ ಪ್ರಾರಂಭೋತ್ಸವ ನಡೆಯಿತು. ಬಳಿಕ ಪುಸ್ತಕ ವಿತರಣಾ ಕಾರ್ಯಕ್ರಮ ನಡೆಯಿತು. ಮಾತನಾಡಿದರು.

ಮಾಜಿ ತಾಲೂಕು ಪಂಚಾಯತ್ ಸದಸ್ಯ ಮಹಮ್ಮದ್ ಮುಸ್ತಫಾ ಹರೇಕಳ ಭಾಗವಹಿಸಿ, ಶುಭ ಹಾರೈಸಿದರು. ಶಾಲಾ ಪ್ರಾರಂಭೋತ್ಸವವನ್ನು ಪಾವೂರು ಹರೇಕಳ ತ್ರಿಶಕ್ತಿ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ರಾಜಕುಮಾರ್ ಶೆಟ್ಟಿ ಉದ್ಘಾಟಿಸಿದರು ಶಾಲಾ ಮುಖ್ಯ ಶಿಕ್ಷಕಿ ಮೋಹಿನಿ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಈ ಸಂದರ್ಭ ನೂತನವಾಗಿ ಶಾಲೆಗೆ ದಾಖಲಾದ 80 ಮಕ್ಕಳನ್ನು ಬ್ಯಾಂಡ್ ಸೆಟ್ ವಾದ್ಯದೊಂದಿಗೆ ಆರತಿ ಬೆಳಗಿ ಶಿಕ್ಷಕ ವೃಂದದವರು ಸ್ವಾಗತಿಸಿದರು. ಸಮಾಜ ಸೇವಕರಾದ ಅನ್ವರ್ ಮಲಾರ್, ಶಿಕ್ಷಕರುಗಳಾದ ತ್ಯಾಗಂ ಹರೇಕಳ, ಕೃಷ್ಣ ಶಾಸ್ತ್ರಿ ಶಿವಣ್ಣ, ಸ್ಮಿತಾ, ಭವ್ಯ ಮುಂತಾದವರು ಉಪಸ್ಥಿತರಿದ್ದರು.ಶಿಕ್ಷಕರಾದ ಶಿವಣ್ಣ ಸ್ವಾಗತಿಸಿ, ದೈಹಿಕ ಶಿಕ್ಷಣ ಶಿಕ್ಷಕರಾದ ತ್ಯಾಗಂ ಹರೇಕಳ ಕಾರ್ಯಕ್ರಮ ನಿರೂಪಿಸಿದರು

ಪಂಜ: ಸ.ಪ್ರಾ. ಶಾಲೆಗೆ ಪೋಡಿಯಂ ಕೊಡುಗೆ

ಸುಬ್ರಹ್ಮಣ್ಯ: ಸುಬ್ರಹ್ಮಣ್ಯದ ಹೊಸ ಬೆಳಕು ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪಂಜ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಪೋಡಿಯಮ್(ಸ್ಪೀಚ್ ಸ್ಟ್ಯಾಂಡ್) ಅನ್ನು ಶಾಲಾ ಆರಂಭೋತ್ಸವದಂದು ಹಸ್ತಾಂತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹೊಸ ಬೆಳಕು ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಡಾ.ಎ.ಎ. ತಿಲಕ್ ಮಾತನಾಡಿ, ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕಾಗಿ ಹಾಗೂ ತೀರ ಅನಾರೋಗ್ಯದಿಂದ ಇರುವ ವ್ಯಕ್ತಿಗಳಿಗೆ ನಮ್ಮ ಹೊಸ ಬೆಳಕು ಚಾರಿಟೇಬಲ್ ಟ್ರಸ್ಟ್ ಸದಾ ನೆರವು ನೀಡುತ್ತಾ ಬಂದಿದೆ ಎಂದರು. ಟ್ರಸ್ಟಿನ ನಿರ್ದೇಶಕಿ ಗಾಯತ್ರಿ ತಿಲಕ್, ಹಿರಿಯ ಸಹಕಾರಿ ಜಾಕೆ ಮಾಧವ ಗೌಡ, ಎಸ್‌ಡಿಎಂಸಿ ಅಧ್ಯಕ್ಷ ಲಿಗೋದರ ಆಚಾರ್ಯ, ನಿವೃತ್ತ ಉಪನ್ಯಾಸಕ ವಿಶ್ವನಾಥ ನಡುತೋಟ, ಶಾಲಾ ಮುಖ್ಯ ಶಿಕ್ಷಕಿ ಲೀಲಾ ಕುಮಾರಿ ಟಿ. ಇದ್ದರು.

ಫಂಡಿಜೆ ವಾಳ್ಯದ ಸರಕಾರಿ ಶಾಲೆಯಲ್ಲಿ ಪ್ರಾರಂಭೋತ್ಸವಕ್ಕೆ ಈ ಬಾರಿ ಮೆರುಗು

2 ಮಕ್ಕಳಿದ್ದ ಶಾಲೆಯಲ್ಲಿ ದಾಖಲಾತಿ 22ಕ್ಕೆ ಏರಿಕೆ!



ಬೆಳ್ತಂಗಡಿ: 2 ವರ್ಷದ ಮುಚ್ಚುವ ಹಂತದಲ್ಲಿದ್ದ ಈ ಶಾಲೆಯಲ್ಲಿ ಈ ಬಾರಿಯ ಶೈಕ್ಷಣಿಕ ವರ್ಷದಲ್ಲಿ ಬರೋಬ್ಬರಿ 22 ವಿದ್ಯಾರ್ಥಿಗಳು ಸೇರ್ಪಡೆಗೊಳ್ಳುವ ಮೂಲಕ ಶಾಲಾ ಪ್ರಾರಂಭೋತ್ಸವಕ್ಕೆ ಮೆರುಗೆ ನೀಡಿದ್ದಾರೆ.

ಶಾಲಾ ಹಳೆ ವಿದ್ಯಾರ್ಥಿ ಸಂಘ, ಎಸ್.ಡಿ.ಎಂ.ಸಿ. ಹಾಗೂ ಶಿಕ್ಷಕರ ಶ್ರಮದಿಂದ ನಿಟ್ಟಡೆ ಗ್ರಾಮದ ಫಂಡಿಜೆ ವಾಳ್ಯದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಈ ಬಾರಿ ಸಂಭ್ರಮದ ಕಳೆ ಹೆಚ್ಚಿದೆ. ಈ ಹಿಂದೆ ಕೇವಲ 9 ಮಕ್ಕಳು ಮಾತ್ರ ಇದ್ದಾಗ ಶಾಲೆ ಮುಚ್ಚುವ ಪರಿಸ್ಥಿತಿಗೆ ಹೋಗಿತ್ತು.

2025–26ರಲ್ಲಿ ಮಕ್ಕಳ ಸಂಖ್ಯೆ 22ಕ್ಕೆ ಏರಿದ್ದು,ಇದರಲ್ಲಿ ಐದು ವಿದ್ಯಾರ್ಥಿಗಳು ಎಂಟನೇ ತರಗತಿಗೆ ಹೋದರೆ ಇದೀಗ 2026–27ರಲ್ಲಿ 12 ವಿದ್ಯಾರ್ಥಿಗಳು ದಾಖಲಾತಿ ಮಾಡಿಕೊಂಡಿದ್ದು, ದಾಖಲಾತಿ ಪ್ರಮಾಣದಲ್ಲಿ ಗಮನಾರ್ಹ ಏರಿಕೆ ಕಂಡು ಬಂದಿದೆ. ಮಕ್ಕಳ ಸಂಖ್ಯೆ 29ಕ್ಕೆ ಏರಿದೆ. ಖಾಸಗಿ ಶಾಲೆಗಳ ಪ್ರಭಾವದ ಮತ್ತು ಆಂಗ್ಲ ಮಾಧ್ಯಮದ ಆಮಿಷದ ನಡುವೆಯೂ 1 ನೇ ತರಗತಿಗೆ ಪ್ರಪ್ರಥಮ ಬಾರಿಗೆ ಏಳು ವಿದ್ಯಾರ್ಥಿಗಳು ದಾಖಲಾಗಿರುವುದು ವಿಶೇಷವಾಗಿದೆ. 2ನೇ ತರಗತಿಯಲ್ಲಿ 4, 3ನೇ ಯಲ್ಲಿ 3, 4ನೇ ತರಗತಿಯಲ್ಲಿ 2, 5ನೇ ತರಗತಿಯಲ್ಲಿ 6, 6ನೇ ತರಗತಿ 2 ಹಾಗೂ 7ನೇ ತರಗತಿಯಲ್ಲಿ 5 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಹಳೆ ವಿದ್ಯಾರ್ಥಿ ಸಂಘದವರು ಮಕ್ಕಳನ್ನು ಕರೆತರಲು ವಾಹನದ ವ್ಯವಸ್ಥೆ ಮಾಡಿದ್ದಾರೆ.

ಸಂತಸ ತಂದಿದೆ

ಉಚಿತ ವಾಹನ ಸೌಲಭ್ಯ ಹಾಗೂ ಗುಣ ಮಟ್ಟದ ಶಿಕ್ಷಣದ ಪರಿಣಾಮವಾಗಿ ಈ ವರ್ಷ ವಿದ್ಯಾರ್ಥಿಗಳ ದಾಖಲಾತಿ ಗಣನೀಯವಾಗಿ ಹೆಚ್ಚಿದೆ ಎಂದು ಶಾಲಾ ಎಸ್‌ಡಿಎಂಸಿ ಅಧ್ಯಕ್ಷೆ ಸ್ವಾತಿ ಅವರು ಶಾಲಾ ಪ್ರಾರಂಭೋತ್ಸವ ಉದ್ಘಾಟಿಸಿ, ಸಂತಸ ವ್ಯಕ್ತಪಡಿಸಿದರು. ಎಲ್ಲರ ಶ್ರಮದಿಂದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ, ಶಿಸ್ತುಬದ್ಧ ವಾತಾವರಣ ಮತ್ತು ವಿವಿಧ ಶೈಕ್ಷಣಿಕ ಚಟುವಟಿಕೆ ಒದಗಿಸಲಾಗುತ್ತಿದೆ. ಜೊತೆಗೆ ಸ್ಪೋಕನ್ ಇಂಗ್ಲಿಷ್ ತರಗತಿಗಳಿರುವುದರಿಂದ ಪೋಷಕರಲ್ಲಿ ಸರ್ಕಾರಿ ಶಾಲೆಗಳ ಬಗ್ಗೆ ವಿಶ್ವಾಸ ಹೆಚ್ಚಾಗಿದೆ ಎಂದರು.

ಶಾಲಾ ಮುಖ್ಯಶಿಕ್ಷಕಿ ಫ್ಲೇವಿಯಾ ಡಿಸೋಜಾ ಅವರು, ವಿಶೇಷವಾಗಿ ಶಾಲೆಯಿಂದ ದೂರವಿರುವ ವಿದ್ಯಾರ್ಥಿಗಳಿಗೆ ಉಚಿತ ವಾಹನ ಸೌಲಭ್ಯ ಕಲ್ಪಿಸಿರುವುದರಿಂದ ಶಾಲೆಗೆ ಆಗಮಿಸುವುದು ಸುಲಭವಾಗಿದೆ. ಈ ಸೌಲಭ್ಯದಿಂದ ಅನೇಕ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಂದ ಸರ್ಕಾರಿ ಶಾಲೆಗೆ ವರ್ಗಾಯಿಸಿದ್ದಾರೆ.

ಉಜಿರೆಯ ವಿಶಾಲ್ ಸೇವಾ ಟ್ರಸ್ಟ್ ಪ್ರತಿ ವರ್ಷ ಮಕ್ಕಳಿಗೆ ಉಚಿತ ನೋಟ್ ಪುಸ್ತಕಗಳನ್ನು ಒದಗಿಸಿ ಕೊಡುತ್ತಿದ್ದಾರೆ. ಜೊತೆಗೆ ಈ ವರ್ಷ ಶಾಲೆಗೆ ಪೇಂಟಿಂಗ್ ಮಾಡುತ್ತೇವೆ ಎಂದು ಟ್ರಸ್ಟಿನ ಮ್ಯಾನೇಜಿಂಗ್ ಟ್ರಸ್ಟಿ ವಲೇರಿಯನ್ ಡಿಸೋಜ ಭರವಸೆ ನೀಡಿದ್ದಾರೆ ಎಂದರು. ಉತ್ತಮ ಗುಣಮಟ್ಟದ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ಒದಗಿಸುವ ಮೂಲಕ ಇನ್ನಷ್ಟು ಮಕ್ಕಳನ್ನು ಸರ್ಕಾರಿ ಶಾಲಾ ಶಿಕ್ಷಣದತ್ತ ಆಕರ್ಷಿಸುವ ಪ್ರಯತ್ನ ಮುಂದುವರಿಯಲಿದೆ. ಈ ಸಾಧನೆಗೆ ಬೆನ್ನೆಲುಬಾಗಿ ನಿಂತ ಹಳೆ ವಿದ್ಯಾರ್ಥಿ ಸಂಘ ಹಾಗೂ ಎಸ್.ಡಿ.ಎಂ.ಸಿಗೆ ಕೃತಜ್ಞತೆಗಳನ್ನು ತಿಳಿಸಿದರು.

ಖಾಯಂ ಶಿಕ್ಷಕರ ಕೊರತೆ

ಶಾಲೆಯಲ್ಲಿ 1 ರಿಂದ 7 ನೇ ತರಗತಿ ಯವರೆಗೆ ಒಬ್ಬರೇ ಖಾಯಂ ಶಿಕ್ಷಕರಿದ್ದು ಇನ್ನಿಬ್ಬರು ಶಿಕ್ಷಕರ ಅನಿವಾರ್ಯತೆಯಿದ್ದು ಶಿಕ್ಷಣ ಇಲಾಖೆ ಗಮನಹರಿಸಬೇಕಾಗಿದೆ.

ಮಜಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 'ಅಕ್ಷಯ ಬುಟ್ಟಿಗೆ' ಆರತಿ



ಬಂಟ್ವಾಳ: ವೀರಕಂಭ ಗ್ರಾಮದ ಮಜಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ನಡೆಯಿತು.

ವೀರಕಂಭ ಗ್ರಾಮ ಪಂಚಾಯತ್ ಆಡಳಿತ ಅಧಿಕಾರಿ ದಿನೇಶ್ ಕಾರ್ಯಕ್ರಮ ಉದ್ಘಾಟಿಸಿ, ಶುಭ ಕೋರಿದರು.

ಕಾರ್ಯಕ್ರಮದ ಮೊದಲು ಶಾಲೆಯ ಎಲ್ಲಾ ಮಕ್ಕಳನ್ನು ಮೆರವಣಿಗೆ ಮೂಲಕ ಸ್ವಾಗತಿಸಿ ಹೂ ಸಿಂಪಡಿಸಿ ಬರಮಾಡಿಕೊಳ್ಳಲಾಯಿತು. ನಂತರ ಶಾಲಾ 'ಅಕ್ಷಯ ಬುಟ್ಟಿಗೆ'' ಆರತಿ ಮಾಡಿ ಗಣ್ಯರು ಹಾಗೂ ಮಕ್ಕಳ ಪೋಷಕರು ತಾವು ತಂದ ಅಕ್ಷರ ದಾಸೋಹ ಸಾಮಗ್ರಿಗಳನ್ನು ತುಂಬಿಸಿದರು. ಶಾಲಾ ಶಿಕ್ಷಕರು ವಿಶೇಷವಾಗಿ ಈ ಸಾಲಿನಲ್ಲಿ ನೂತನವಾಗಿ ಶಾಲೆಗೆ ದಾಖಲಾತಿ ಪಡೆದ ಮಕ್ಕಳು ಹಾಗೂ ಮಕ್ಕಳ ಪೋಷಕರಿಗೆ ಪನ್ನೀರು ಸಿಂಪಡಿಸಿ, ಹೂ ಸಮರ್ಪಿಸಿ, ಆರತಿ ಬೆಳಗಿ ತರಗತಿಗಳಿಗೆ ಬರಮಾಡಿಕೊಂಡರು. ರೋಟರಿ ಕ್ಲಬ್ ಬಿ.ಸಿ.ರೋಡ್ ಸಿಟಿ ಇದರ ವಲಯ ಸೇನಾನಿ ಗಣೇಶ್ ಶೆಟ್ಟಿ, ಜೆಸಿಐ ಬಿ.ಸಿ.ರೋಡು ಇದರ ಅಧ್ಯಕ್ಷ ಕಿಶೋರ್ ಆಚಾರ್ಯ, ವೀರ ಕಂಬ ಗ್ರಾ.ಪಂ.ನ ನಿಕಟಪೂರ್ವ ಉಪಾಧ್ಯಕ್ಷ ಜನಾರ್ದನ ಪೂಜಾರಿ, ಹಿರಿಯ ವಿದ್ಯಾರ್ಥಿ ಪ್ರಗತಿಪರ ಕೃಷಿಕ ಜಯಪ್ರಕಾಶ್ ತೆಕ್ಕಿಪಾಪು, ಶಾಲೆಗೆ ಉಚಿತವಾಗಿ ತರಕಾರಿ ಪೂರೈಸುವ ಚಂದ್ರಿಕಾ ವೆಜಿಟೇಬಲ್ಸ್ ಮೆಲ್ಕಾರ್ ಇದರ ಮಾಲಕ ಮಹಮದ್ ಶರೀಫ್, ಯುವ ವಾಹಿನಿ ಮಾಣಿ ಘಟಕ ಅಧ್ಯಕ್ಷ ಗಣೇಶ್, ಎಸ್.ಡಿ.ಎಂ.ಸಿ ಅಧ್ಯಕ್ಷ ಕೊರಗಪ್ಪ ನಾಯ್ಕ ಉಪಸ್ಥಿತರಿದ್ದರು. ಶಾಲಾ ಮಕ್ಕಳು ಪ್ರಾರ್ಥಿಸಿ, ಶಾಲಾ ಮುಖ್ಯ ಶಿಕ್ಷಕಿ ಬೆನಡಿಕ್ಟಾ ಆಗ್ನೇಸ್ ಮಂಡೋನ್ಸ ಪ್ರಸ್ತಾವನೆಗೈದು, ಸ್ವಾಗತಿಸಿದರು, ಶಿಕ್ಷಕ ತೌಸೀಫ್ ಅಹ್ಮದ್‌ಶಾಲಾ ನೀತಿ ನಿಯಮಗಳ ಬಗ್ಗೆ ಮಾಹಿತಿ ನೀಡಿದರು. ದೈಹಿಕ ಶಿಕ್ಷಣ ಶಿಕ್ಷಕ ಇಂದುಶೇಖರ್ ವಂದಿಸಿ, ಹಿರಿಯ ಶಿಕ್ಷಕಿ ಸಂಗೀತ ಶರ್ಮ ಪಿ.ಜಿ. ನಿರೂಪಿಸಿದರು.

ಮಾಡೂರಿನಲ್ಲಿ ಶಾಲಾ ಪ್ರಾರಂಭೋತ್ಸವ, ಕೊಠಡಿ ಉದ್ಘಾಟನೆ



ಉಳ್ಳಾಲ: ನಮ್ಮ ವ್ಯಕ್ತಿತ್ವವನ್ನು ರೂಪಿಸಲು ವಿದ್ಯಾಭ್ಯಾಸವು ಅತ್ಯಂತ ಮುಖ್ಯವಾಗಿರುತ್ತದೆ. ತಾಯಿಯು ವಿದ್ಯಾರಂಭ ಮಾಡಿದರೆ, ಗುರುಗಳು ವ್ಯಕ್ತಿತ್ವ ರೂಪಿಸುತ್ತಾರೆಂದು ಕೋಟೆಕಾರು ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಮಾಲಿನಿ ಅಭಿಪ್ರಾಯಪಟ್ಟರು.

ಮಾಡೂರಿನ ದ.ಕ.ಜಿ.ಪಂ.ಹಿ. ಪ್ರಾಥಮಿಕ ಶಾಲೆಯಲ್ಲಿ ಜರಗಿದ ಆರಂಭೋತ್ಸವ, ನೂತನ ಕೊಠಡಿಗಳ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ನಡಾರು,ಸಾಯಿನಗರದ ಕೊರಗಜ್ಜ ಸೇವಾ ಸಮಿತಿಯ ಅಧ್ಯಕ್ಷ ಕೃಷ್ಣಕಾಂತ್ ಆರಂಭೋತ್ಸವಕ್ಕೆ ಚಾಲನೆ ನೀಡಿದರು.ಎರಡನೇ ತರಗತಿಯ ನೂತನ ಕೊಠಡಿಯನ್ನು ಕೋಟೆಕಾರು ಪಟ್ಟಣ ಪಂಚಾಯತ್ ಸದಸ್ಯ ಕಿರಣ್.ಬಿ.ಕುಮಾರ್ ಉದ್ಘಾಟಿಸಿದರು. ನಿವೃತ್ತಿ ಹೊಂದಿದ ಅಡುಗೆ ಸಿಬ್ಬಂದಿ ನಳಿನಿ ಶೆಟ್ಟಿ ಮಾಡೂರು ಅವರನ್ನು ಸನ್ಮಾನಿಸಲಾಯಿತು. ಕೋಟೆಕಾರು ಪ.ಪಂ. ಆರೋಗ್ಯ ಅಧಿಕಾರಿ ವಿಕ್ರಮ್, ಸ್ಥಳೀಯ ಕೌನ್ಸಿಲರ್ ಸುಜಿತ್ ಮಾಡೂರು,ಶಾಲಾ ಪಿಟಿಎ ಅಧ್ಯಕ್ಷ ಭಾಸ್ಕರ್ ಮಡ್ಯಾರ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಅರ್ಶೀರ್ಝ್ ಮಾಡೂರು, ಶಾಲಾಭಿವೃದ್ಧಿ ಸಮಿತಿ ಸದಸ್ಯ ಶಶಿಧರ್, ಹರೀಶ್ ಕುಂಪಲ, ಹರೀಶ್ ಮಡ್ಯಾರ್, ವಿಶ್ವರಾಜ್, ಮೋಹನ್ ಪೂಜಾರಿ, ರಫೀಕ್ ಮಾಡೂರು, ಪುರುಷೋತ್ತಮ್ ಗಟ್ಟಿ, ಗಫೂರ್ ಮಾಡೂರು, ಸುನಿಲ್ ಮಾಡೂರು, ಶೇಖರ್ ಪೂಜಾರಿ ದೆಂಬಲೆ, ಫರ್ಝಾನ, ಎಸ್‌ಡಿಎಂಸಿ ಅಧ್ಯಕ್ಷೆ ಝೊಹರಾ, ಅಬ್ದುಲ್ ರೆಹಮಾನ್ ಮೊದಲಾದವರಿದ್ದರು.

ಶಾಲಾ ಮುಖ್ಯೋಪಾಧ್ಯಾಯಿನಿ ಪುಷ್ಪಾ ಯು.ಸ್ವಾಗತಿಸಿ,ಸುಪ್ರಿತಾ ನಿರೂಪಿಸಿದರು. ಜೀವಿತಾ ವಂದಿಸಿದರು.

ಪನ್ಯಗುರಿಯಡ್ಕ ಶಾಲೆಯಲ್ಲಿ ಮಕ್ಕಳಿಗೆ ಒಂದು ವರ್ಷ ಉಚಿತ ಆಟೋ ಸೇವೆ!



ಕಡಬ: ಕಡಬ ತಾಲೂಕಿನಾದ್ಯಂತ ಸೋಮವಾರ ಸಂಭ್ರಮದ ಶಾಲಾ ಪ್ರಾರಂಭೋತ್ಸವ ನಡೆಯಿತು. ಕಡಬ ಸಮೀಪದ ಕೋಡಿಂಬಾಳ ಗ್ರಾಮದ ಪನ್ಯಗುರಿಯಡ್ಕ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಆಟೋ ಸೇವೆ ಒದಗಿಸುವ ಮೂಲಕ ವಿಶಿಷ್ಟ ಯೋಜನೆ ಜಾರಿಗೊಳಿಸಲಾಯಿತು.

ತಾಲೂಕಿನಾದ್ಯಂತ ಸಂಭ್ರಮ

ತಾಲೂಕಿನ ಎಲ್ಲಾ ಸರಕಾರಿ ಹಾಗೂ ಖಾಸಗಿ ಶಾಲೆಗಳು ಮದುವಣಗಿತ್ತಿಯಂತೆ, ತಳಿರು ತೋರಣಗಳಿಂದ ಶೃಂಗಾರಗೊಂಡಿದ್ದವು. ವಿದ್ಯಾರ್ಥಿಗಳನ್ನು ಬ್ಯಾಂಡ್ ವಾಲಗಗಳೊಂದಿಗೆ ಮೆರವಣಿಗೆಯಲ್ಲಿ ತರಗತಿಗೆ ಕರೆತರಲಾಯಿತು. ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಆರತಿ ಎತ್ತಿ, ತಿಲಕವಿಟ್ಟು ಸಿಹಿ ನೀಡಿ ಬರಮಾಡಿಕೊಳ್ಳಲಾಯಿತು. ಈ ಉಚಿತ

ಆಟೋ ಸೇವೆ

ಕಡಬ ಸಮೀಪದ ಕೋಡಿಂಬಾಳ ಗ್ರಾಮದ ಪನ್ಯಗುರಿಯಡ್ಕ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದರಿಂದ ವಿದ್ಯಾರ್ಥಿಗಳನ್ನು ಸೆಳೆಯುವ ದೃಷ್ಟಿಯಿಂದ ಉಚಿತ ಆಟೋ ಸೇವೆಯನ್ನು ಪ್ರಾರಂಭಿಸಿದ್ದಾರೆ. ಕಡಬ ಪ.ಪಂ. ಸದಸ್ಯ ಫೈಝಲ್ ಹಾಗೂ ಹಳೆ ವಿದ್ಯಾರ್ಥಿ ಸಂಘದವರು ಸೇರಿಕೊಂಡು ಒಂದು ವರ್ಷದ ಮಟ್ಟಿಗೆ ಎರಡು ಆಟೋಗಳನ್ನು ಬಾಡಿಗೆಗೆ ನಿಗದಿಪಡಿಸಿ, ಬೆಳಗ್ಗೆ ಆಟೋದಲ್ಲಿ ವಿದ್ಯಾರ್ಥಿಗಳನ್ನು ಕರೆ ತಂದು ಸಂಜೆ ಮನೆಗಳಿಗೆ ಬಿಡುವ ಕಾರ್ಯ ವ್ಯವಸ್ಥೆಗೊಳಿಸಿದ್ದಾರೆ. ಇದು ವಿದ್ಯಾರ್ಥಿಗಳಿಗೆ ಉಚಿತವಾಗಿರುತ್ತದೆ. ಇದರಿಂದಾಗಿ ಶಾಲೆಗೆ 11 ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಸೇರ್ಪಡೆಯಾಗಿದ್ದು ಈ ವಿನೂತನ ಪ್ರಯೋಗ ಫಲ ನೀಡಿದೆ.

ನೆತ್ತರಕೆರೆ ಶಾಲಾ ವಿದ್ಯಾರ್ಥಿಗಳಿಗೆ ಆರತಿ ಬೆಳಗಿ ಪುಷ್ಪವೃಷ್ಟಿ ಮೂಲಕ ಭರ್ಜರಿ ಸ್ವಾಗತ



ಬಂಟ್ವಾಳ: ಕಳ್ಳಿಗೆ ಗ್ರಾಮದ ನೆತ್ತರಕೆರೆದ ಕ ಜಿ.ಪಂ. ಹಿ.ಪ್ರಾ. ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ನಡೆಯಿತು.

ವಿದ್ಯಾರ್ಥಿಗಳನ್ನು ಮೆರವಣಿಗೆಯ ಮೂಲಕ ಕರೆ ತರಲಾಯಿತು. ನೂತನವಾಗಿ ದಾಖಲಾದ ವಿದ್ಯಾರ್ಥಿಗಳಿಗೆ ಆರತಿ ಬೆಳಗಿಸಿ ಪುಷ್ಪ ವೃಷ್ಟಿಯೊಂದಿಗೆ ಸ್ವಾಗತಿಸಲಾಯಿತು. ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ದ್ವಿಭಾಷಾ ಮಾಧ್ಯಮದ ಉದ್ಘಾಟನೆಯನ್ನು ಶಾಲಾ ಹಳಿ ವಿದ್ಯಾರ್ಥಿ ಸಂಘದ ಅಧ್ಯಕ್ಷ ಮುಂಡಾಜೆಗುತ್ತು ಜ್ಯೋತಿಂದ್ರ ಶೆಟ್ಟಿ ಅವರು ನೆರವೇರಿಸಿದರು. ವಾಗ್ಮಿ ದಾಮೋದರ ಶರ್ಮಾ ಅವರು ಮಾತೃ ವಂದನ ಕಾರ್ಯಕ್ರಮದ ಮೂಲಕ ಪೋಷಕರೊಂದಿಗೆ ಸಂವಾದ ನಡೆಸಿದರು. ಪೊಳಲಿ ಶ್ರೀ ರಾಮಕೃಷ್ಣ ತಪೋವನದಿಂದ ನೀಡಲಾಗುವ ಉಚಿತ ನೋಟ್ ಪುಸ್ತಕಗಳನ್ನು ಪೊಳಲಿ ಶ್ರೀ ರಾಮಕೃಷ್ಣ ತಪೋವನದ ಶ್ರೀ ವಿವೇಕ ಚೈತನ್ಯಾನಂದ ಸ್ವಾಮೀಜಿ ವಿತರಿಸಿದರು. ಪ್ರಮುಖರಾದ ಬಿ. ಸುರೇಶ್ ಭಂಡಾರಿ ಅರ್ಬಿ, ಪಿ . ಸುಬ್ರಹ್ಮಣ್ಯರಾವ್, ಜಗದೀಶ್ ಎನ್, ಶಾಲಾ ಮುಖ್ಯ ಶಿಕ್ಷಕಿ ಸಿಲ್ವಿಯ ಬ್ರೆಕ್ಸ್ ನಿವೃತ್ತ ಮುಖ್ಯ ಶಿಕ್ಷಕಿ ಗುಣರತ್ನ, ಸರಿತಾ ಮಹೇಶ್, ಕಳ್ಳಿಗೆ ಗ್ರಾಮ ಪಂಚಾಯತ್ ಪಿಡಿಓ ಚಂದ್ರಾವತಿ, ಎಸ್ ಡಿ ಎಂ ಸಿ ಅಧ್ಯಕ್ಷ ದಾಮೋದರ ನೆತ್ತರಕೆರೆ, ಉಪಾಧ್ಯಕ್ಷೆ ಸೌಮ್ಯ ಜಗದೀಶ್ ಇದ್ದರು. ಶಿಕ್ಷಕಿ ಕೆ.ಜೆ ಮರಿಯ ಸಲೀಂ ಸೆಲಿನ್ ಪ್ರಾರ್ಥಿಸಿ, ಮೋಹಿನಿ ನಿರೂಪಿಸಿದರು. ಶಿಕ್ಷಕ ಅಭಿನಾಶ್ ಡ್ಯಾನಿಯಲ್ ಡಿಸೋಜಾ ವಂದಿಸಿ, ಶಾಲಾ ಶಿಕ್ಷಕರಾದ ಜಸಿಂತ ರೊಡ್ರಿಗಸ್ ಭಾನುಮತಿರಾಜೀವಿ, ಹನಮಂತಪ್ಪ ಗುತ್ತಲ, ಚೇತನ, ಆಶಿಕ, ನಿಶಾ ಹಾಗೂ ಮನಿಷಾ ಸಹಕರಿಸಿದರು.

ಪುಣ್ಚಪ್ಪಾಡಿ ವಿನೂತನವಾಗಿ ಶಾಲಾ ಆರಂಭೋತ್ಸವ ಆಚರಣೆ | ಪಠ್ಯಪುಸ್ತಕ, ಸಮವಸ್ತ್ರ ಲೇಖನ ಸಾಮಗ್ರಿ ವಿತರಣೆ

ಶಾಲೆಗೆ ಸೇರಿದ ಪ್ರತಿ ವಿದ್ಯಾರ್ಥಿ ಖಾತೆಗೆ 1000 ರೂ. ನಿಶ್ಚಿತ ಠೇವಣಿ!



ದ್ವಿಗುಣಗೊಂಡ ಶಾಲಾ ಆರಂಭದ ಸಂಭ್ರಮದ ದೃಶ್ಯ. ಇದು ಕರ್ನಾಟಕ ಸರಕಾರ ಶಾಲಾ ಶಿಕ್ಷಣ ಇಲಾಖೆ ಕಡಬ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪುಣ್ಚಪ್ಪಾಡಿಯ ಶಾಲಾ ಆರಂಭೋತ್ಸವದ ಸಂಭ್ರಮದ ದೃಶ್ಯ.

ಸವಣೂರು: ಬಣ್ಣ ಬಣ್ಣದ ಕಾಗದಗಳಿಂದ ಶೃಂಗರಿಸಿದ ಶಾಲಾ ದ್ವಾರ, ಶಾಲೆಯಂಗಳದಲ್ಲಿ ಬಣ್ಣದ ಕಾಗದ, ಬಣ್ಣದ ಬಟ್ಟೆಗಳಿಂದ ತಯಾರಿಸಿದ ಕನ್ನಡ ಭಾಷೆಯ 49 ಅಕ್ಷರಗಳು ಮತ್ತು ಇಂಗ್ಲಿಷ್ ಭಾಷೆಯ 26 ಅಕ್ಷರಗಳ ಚಪ್ಪರ, ಕನ್ನಡದ ಕವಿಗಳು ಮಹಾ ನಾಯಕರ ಚಿತ್ರಪಟಗಳು, ವಿವಿಧ ಕಲಿಕಾ ಸಾಮಗ್ರಿಗಳು, ಈ ಅಕ್ಷರಗಳ ತೋಟದ ನಡುವೆ ಬಣ್ಣದ ಕಲಿಕಾ ಉಯ್ಯಾಲೆ. ಹೊಸದಾಗಿ ಸೇರಿದ 10 ಮಕ್ಕಳನ್ನು ಈ ಕಲಿಕಾ ಉಯ್ಯಾಲೆಯಲ್ಲಿ ಕುಳ್ಳಿರಿಸಿ ಪಠ್ಯಪುಸ್ತಕ, ಸಮವಸ್ತ್ರ, ಲೇಖನ ಸಾಮಗ್ರಿಗಳು ಮತ್ತು ರೂ.1 ಸಾವಿರ ನಿಶ್ಚಿತ ಠೇವಣಿಯನ್ನು ನೀಡಿ ಶಾಲೆಗೆ ದಾಖಲಿಸಿದ ಸಂಭ್ರಮ. ಮಕ್ಕಳ ಖುಷಿಯ ನಡುವೆ ಪೋಷಕರ ಖುಷಿಯೂ ಸೇರಿ ಅಕ್ಷರ ರಥ, ಕಲಿಕಾ ಪಲ್ಲಕ್ಕಿ, ಕಲಿಕಾ ಮಂಟಪ, ಪುಸ್ತಕ ಜೋಳಿಗೆ, ಕಲಿಕಾ ಚೀಲ ಹಂಚೋಣ, ಕಲಿಕಾ ಹುಂಡಿ, ಸ್ವಚ್ಛ ಕಲಿಕಾರಂಭ, ಕಲಿಕಾ ಸಿಂಹಾಸನ ಹೀಗೆ ಪ್ರತಿ ವರ್ಷ ವಿಶಿಷ್ಟವಾಗಿ ಶಾಲಾ ಪ್ರಾರಂಭೋತ್ಸವವನ್ನು ಆಚರಿಸಿಕೊಳ್ಳುವುದು ಪುಣ್ಚಪ್ಪಾಡಿ ಶಾಲೆಯ ವಿಶೇಷತೆ.

ಶಾಲಾ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೃಷ್ಣಕುಮಾರ್ ರೈ ಪಿ.ಡಿ. ದೇವಸ್ಯ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಶತಮಾನೋತ್ಸವದ ಅಂಚಿನಲ್ಲಿರುವ ನಮ್ಮ ಶಾಲೆಯನ್ನು ನಾವೆಲ್ಲರೂ ಸೇರಿ ಪರಿಶ್ರಮದಿಂದ ಇಷ್ಟು ವರ್ಷ ಉಳಿಸಿಕೊಂಡು ಬಂದಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕೆಲಸಗಳನ್ನು ಜೊತೆ ಸೇರಿ ಮಾಡೋಣ ನಮ್ಮೂರಿನ ಮಕ್ಕಳ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದರು. ಮಾಜಿ ಗ್ರಾ.ಪಂ. ಸದಸ್ಯ ಗಿರಿಶಂಕರ ಸುಲಾಯ ಮಾತನಾಡಿ, ಶಿಕ್ಷಣ ಬದುಕಿಗೆ ಆಧಾರ. ಯಾರೂ ಶಿಕ್ಷಣದಿಂದ ವಂಚಿತರಾಗಬಾರದು. ಎಲ್ಲ ಮಕ್ಕಳು ಉನ್ನತ ವಿದ್ಯಾಭ್ಯಾಸ ಹೊಂದಿ ಉನ್ನತ ಸ್ಥಾನಕ್ಕೇರುವಂತಾಗಲಿ ಎಂದು ಹಾರೈಸಿದರು.

ಪೋಷಕರಾದ ಪ್ರದೀಪ್ ನೆಕ್ಕರೆ ಶೃಂಗರಿಸಿದ ಕಲಿಕಾ ಉಯ್ಯಾಲೆಯಲ್ಲಿ ಮಕ್ಕಳನ್ನು ತೂಗಿ ಆರಂಭೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ ದಾನಿಗಳಾದ ಹರೀಶ್ ತೋಟತ್ತಡ್ಕ, ಸುಹಾಸ್ ಕಾರಂತ್, ಶಾಲಾ ಶಿಕ್ಷಕರು ನೀಡಿದ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಮಾಜಿ ಗ್ರಾ.ಪಂ. ಉಪಾಧ್ಯಕ್ಷೆ ಜಯಶ್ರೀ ಕುಚ್ಚೆಜಾಲು, ಎಸ್.ಡಿ.ಎಂ.ಸಿ. ಅಧ್ಯಕ್ಷ ವಿಜಯ ಕುಚ್ಚೆಜಾಲು, ಉಪಾಧ್ಯಕ್ಷೆ ಯಮುನಾ, ಅಡುಗೆ ಸಿಬ್ಬಂದಿಗಳಾದ ನಳಿನಿ, ವಾರಿಜ ಮತ್ತಿತರರು ಇದ್ದರು. ಶಾಲಾ ಮುಖ್ಯ ಶಿಕ್ಷಕಿ ರಶ್ಮಿತಾ ಜೈನ್ ನರಿಮೊಗರು ಸ್ವಾಗತಿಸಿ, ವಂದಿಸಿದರು. ಪದವೀಧರ ಶಿಕ್ಷಕಿ ಶೋಭಾ ಕೆ. ನಿರ್ವಹಿಸಿದರು.

ಅಲ್ಲಲ್ಲಿ ಶಾಲಾ ಪ್ರಾರಂಭೋತ್ಸವದ ಸಂಭ್ರಮ



ಕಾಸರಗೋಡು ನಗರದ ಬಿಇಎಂ ಎಚ್‌ಎಸ್ ಪ್ರೌಢಶಾಲೆಯಲ್ಲಿ ಪ್ರವೇಶೋತ್ಸವ ನಡೆಯಿತು. ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಡಾ.ಕೆ. ಎನ್.ವೆಂಕಟ್ರಮಣ ಹೊಳ್ಳ, ಕೌನ್ಸಿಲರ್ ಕೆ.ಎನ್.ರಾಮಕೃಷ್ಣ ಹೊಳ್ಳ, ಶಾಲಾ ಪ್ರಾಂಶುಪಾಲ ರಾಜೀಶ್ಚಂದ್ರ ಕೆ.ಪಿ., ಮುಖ್ಯೋಪಾಧ್ಯಾಯ ಗಣೇಶ್ ಕೆ., ಪಿಟಿಎ ಅಧ್ಯಕ್ಷ ಹರೀಶ್, ಉಪಾಧ್ಯಕ್ಷ ಕಿಶೋರ್, ಎಂಪಿಟಿಎ ಅಧ್ಯಕ್ಷೆ ಉಷಾಕಿರಣ್ ಮೊದಲಾದವರು ಉಪಸ್ಥಿತರಿದ್ದರು.



ಕಾಸರಗೋಡು ಅಶ್ವಿನಿ ನಗರದಲ್ಲಿರುವ ಬಾಲ ಭವನ ಆಂಗ್ಲ ಮಾಧ್ಯಮ ಶಾಲೆಯ ಪ್ರವೇಶೋತ್ಸವವು ಜರಗಿತು. ಕಾರ್ಯಕ್ರಮದ ನೇತೃತ್ವವನ್ನು ಶಾಲಾ ಅಕಾಡೆಮಿಯ ಮಾರ್ಗದರ್ಶಕ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ಮುಖ್ಯೋಪಾಧ್ಯಾಯಿನಿ ಲೀಲಾವತಿ ನಾಯರ್, ಪಿಟಿಎ ಅಧ್ಯಕ್ಷ ಗುರುದತ್ ಪೈ, ಪದಾಧಿಕಾರಿಗಳು ಮೊದಲಾದವರು ಭಾಗವಹಿಸಿದ್ದರು.



ಕುಂಬಳೆಯ ಕಿದೂರು ಸರಕಾರಿ ಕಿರಿಯ ಪ್ರಾಥಮಿಕ ಶಾಲಾ ಪ್ರವೇಶೋತ್ಸವವು ಜರಗಿತು. ಕುಂಬಳೆ ಗ್ರಾ.ಪಂ. ಸದಸ್ಯ ಸುಖೇಶ್ ಭಂಡಾರಿ, ನಿವೃತ್ತ ಮುಖ್ಯ ಶಿಕ್ಷಕಿ ವೀಣಾಕುಮಾರಿ, ನಿವೃತ್ತ ಮುಖ್ಯ ಶಿಕ್ಷಕ ರಾಮ ಯು., ಚಂದ್ರ ಕಾಜೂರು, ಪಿಟಿಎ ಅಧ್ಯಕ್ಷ ಜಯಕುಮಾರ್, ಉಪಾಧ್ಯಕ್ಷೆ ರಮ್ಯಾ ಶೆಟ್ಟಿ ಇದ್ದರು. ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಅಂಕ ಪಡೆದ ಅಪೇಕ್ಷಾ ಕಿದೂರು ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಿವಶಕ್ತಿ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಮಕ್ಕಳಿಗೆ ಕಲಿಕೋಪಕರಣಗಳನ್ನು ವಿತರಿಸಲಾಯಿತು. ಕ್ಲಬ್‌ನ ಅಧ್ಯಕ್ಷ ಮಹೇಶ್ ಶೆಟ್ಟಿ ಕಾಜೂರು ಹಾಗೂ ಸದಸ್ಯರು ಪಾಲ್ಗೊಂಡಿದ್ದರು. ಶಾಲಾ ಇನ್‌ಚಾರ್ಜ್ ಜಯಶ್ರೀ, ವಸಂತ ಮಾಸ್ತರ್ ಸಹಕರಿಸಿದರು.



ಕುಂದಾಪುರ ತಾಲೂಕಿನ ಬೈಂದೂರು ವಲಯದ ಬಗ್ವಾಡಿಯ ಸರಕಾರಿ ಹಿರಿಯ ಪ್ರಾಥಮಿಕ ನೂಜಾಡಿ -2 ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ನಡೆಯಿತು. ಎಸ್‌ಡಿಎಂಸಿ ಅಧ್ಯಕ್ಷ ರಾಧಾಕೃಷ್ಣ ಗಾಣಿಗ, ಪ್ರಮುಖರಾದ ಬಿ. ರಾಜೀವ ಶೆಟ್ಟಿ, ಅಧ್ಯಕ್ಷ ಪ್ರಕಾಶ್ ಆಚಾರ್ಯ, ಯಶೋದ ಪೂಜಾರಿ, ಗೋಪಾಲ ಪೂಜಾರಿ , ಮುಖ್ಯೋಪಾಧ್ಯಾಯನಿ ಶೈಲಜಾ ಶೆಟ್ಟಿ, ಸಹ ಶಿಕ್ಷಕಿ ಸತ್ಯವತಿ, ಗೌರವ ಶಿಕ್ಷಕಿ ಸ್ವಾತಿ ಮತ್ತಿತರರು ಉಪಸ್ಥಿತರಿದ್ದರು.

ಕರಂಬಾರು ಶಾಲಾ ಪ್ರಾರಂಭೋತ್ಸವ



ಮಂಗಳೂರು: ಕರಂಬಾರು ದ. ಕ. ಜಿ. ಪಂ. ಹಿ. ಪ್ರಾ. ಶಾಲೆಯ ಪ್ರಾರಂಭೋತ್ಸವ ಸೋಮವಾರ ಅದ್ದೂರಿಯಿಂದ ನಡೆಯಿತು.

ಕರಂಬಾರು ಜಂಕ್ಷನ್ ನಿಂದ ಕರಂಬಾರು ಶಾಲೆಯವರೆಗೆ ಬ್ಯಾಂಡ್ ಘೋಷಣೆಯೊಂದಿಗೆ ಶಾಲಾ ವಿದ್ಯಾರ್ಥಿಗಳು, ಪೋಷಕರು, ಎಸ್.ಡಿ.ಎಂ.ಸಿ ಪದಾಧಿಕಾರಿಗಳು, ಹಳೆ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ಮೆರವಣಿಗೆ ನಡೆಸಿದರು.

ಶಾಲೆಯನ್ನು ತಳಿರು ತೋರಣವನ್ನು ಕಟ್ಟಿ ಶೃಂಗಾರಿಸಲಾಗಿತ್ತು. ಹೂಗಳಿಂದ ಸ್ವಾಗತಿಸಲಾಯಿತು. ಸಿಹಿ ತಿಂಡಿ ವಿತರಿಸಲಾಯಿತು. ಶಾಲಾ ಎಸ್. ಡಿ. ಎಂ. ಸಿ ಅಧ್ಯಕ್ಷ ಗುಣಪಾಲ್ ದೇವಾಡಿಗ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪಟ್ಟಣ ಪಂಚಾಯತ್ ಸದಸ್ಯರಾದ ಸುಪ್ರಿತಾ ಶೆಟ್ಟಿ, ದಿನೇಶ್ ಶೆಟ್ಟಿ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸತೀಶ್ ದೇವಾಡಿಗ, ಉಪಾಧ್ಯಕ್ಷ ರಾಕೇಶ್ ಕುಂದರ್, ಪ್ರಧಾನ ಕಾರ್ಯದರ್ಶಿ ಪ್ರವೀಣ್ ಆಚಾರ್ಯ, ಎಸ್‌ಡಿಎಂಸಿ ಉಪಾಧ್ಯಕ್ಷೆ ಲಾವಣ್ಯ ಮುಂತಾದವರು ಉಪಸ್ಥಿತರಿದ್ದರು.

ಶಾಲಾ ಮುಖ್ಯ ಶಿಕ್ಷಕಿ ಸೀತಮ್ಮ ಜೆ. ಸ್ವಾಗತಿಸಿದರು. ದೈಹಿಕ ಶಿಕ್ಷಣ ಶಿಕ್ಷಕಿ ನವೀನ ಕುಮಾರಿ ಕಾರ್ಯಕ್ರಮ ನಿರೂಪಿಸಿದರು. ಮಾಲಾಶ್ರೀ ಪ್ರಾಸ್ತವಿಕ ಮಾತನಾಡಿದರು. ಗುಣವತಿ ವಂದಿಸಿದರು.

ಕುತ್ಯಾರು: ಶಾಲಾ ಪ್ರಾರಂಭೋತ್ಸವ



ಶಿರ್ವ: ಸಮೀಪದ ಕುತ್ಯಾರು ವಿದ್ಯಾದಾಯಿನಿ ಹಿ.ಪ್ರಾ.ಶಾಲಾ ಶತಮಾನೋತ್ತರದ ಪ್ರಥಮ ವರ್ಷದ ಶಾಲಾ ಪ್ರಾರಂಭೋತ್ಸವ ಸೋಮವಾರ ಶತಮಾನೋತ್ಸವ ಸಮಿತಿಯ ಅಧ್ಯಕ್ಷರಾದ ವೇ.ಮೂ.ಕೇಂಜ ಶ್ರೀಧರ ತಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿತು. ಶಾಲಾ ಮುಂಬೈ ಸಮಿತಿ ಸಂಚಾಲಕ ಕುತ್ಯಾರು ಕಿಶೋರ್ ಕುಮಾರ್ ಶೆಟ್ಟಿ , ಸದಸ್ಯ ವಿಶ್ವನಾಥ್ ಭಂಡಾರಿ, ಉಡುಪಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಶಿರ್ವ ಸಿ.ಎ.ಬ್ಯಾಂಕ್ ಅಧ್ಯಕ್ಷ ಕುತ್ಯಾರು ಪ್ರಸಾದ್ ಶೆಟ್ಟಿ ಪಂಚಾಯತ್ ಸದಸ್ಯರಾದ ಸಂಪತ್, ನಿವೃತ್ತ ಮುಖ್ಯ ಶಿಕ್ಷಕರುಗಳಾದ ಕೆ.ಶ್ರೀನಿವಾಸ ರಾವ್, ಪಾಂಡುರಂಗ ಹೆಗ್ಡೆ ಶಿಕ್ಷಣ ಪರಿಕರಗಳ ದಾನಿಗಳಾದ ಸಾಯಿನಾಥ್ ಶೆಟ್ಟಿ ಸದ್ಯೋಜಾತ ಆಚಾರ್ಯ ಅವರುಗಳಿಗೆ ಕೃತಜ್ಞತೆ ಸಲ್ಲಿಸಲಾಯಿತು. ಪಟೇಲ್ ಕಿಶೋರ್ ಕುಮಾರ್, ಜಯ ಶೆಟ್ಟಿ ಕಿಶೋರ್ ಪಿಲಾರು, ರವಿ ಶೆಟ್ಟಿ ಮತ್ತು ಮಕ್ಕಳ ಪೋಷಕರು, ಇದ್ದರು. ಮುಖ್ಯ ಶಿಕ್ಷಕಿ ಶರ್ಮಿಳಾ ಭಂಡಾರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಹಿರಿಯ ಶಿಕ್ಷಕಿ ಸುನೀತಾ ಸ್ವಾಗತಿಸಿ, ನಿರೂಪಿಸಿದರು. ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷ ದಿನೇಶ್ ಕುಲಾಲ್ ವಂದಿಸಿದರು.

ಸುತ್ತಮುತ್ತ

ಯೂನಿಟ್‌ಗೆ 2 ಪೈಸೆ ಇಂಧನ ಸರ್‌ಚಾರ್ಜ್: ಕೆಎಸ್‌ಇಬಿ ನಿರ್ಧಾರ

ಕಾಸರಗೋಡು: ಪೆಟ್ರೋಲಿಯಂ ಉತ್ಪನ್ನ, ಗ್ಯಾಸ್ ಸಿಲಿಂಡರ್, ದಿನಬಳಕೆ ವಸ್ತುಗಳ ಜೊತೆಗೆ ಇದೀಗ ಕೇರಳದಲ್ಲಿ ಕೆಎಸ್‌ಇಬಿ ಕೂಡಾ ಜನರಿಗೆ ಶಾಕ್ ನೀಡಲು ಮುಂದಾಗಿದೆ. ಅದರಂತೆ ಕೇರಳ ರಾಜ್ಯ ವಿದ್ಯುತ್ ಮಂಡಳಿಯು ಜೂನ್ ತಿಂಗಳಿನಿಂದ ಪ್ರತಿ ಯೂನಿಟ್‌ಗೆ 2 ಪೈಸೆ ಇಂಧನ ಸರ್‌ಚಾರ್ಜ್ ವಿಧಿಸಲು ನಿರ್ಧರಿಸಿದೆ. ರಾಜ್ಯದ ವಿದ್ಯುತ್ ಗ್ರಾಹಕರ ಮೇಲೆ ಹೆಚ್ಚುವರಿ ಹೊರೆ ಹೇರಲು ಯೋಜನೆ ರೂಪಿಸಲಾಗಿದೆ. ಮಾಸಿಕ ಬಿಲ್‌ಗಳನ್ನು ಪಡೆಯುವವರಿಗೆ ಮತ್ತು ದ್ವೈಮಾಸಿಕ ಬಿಲ್‌ಗಳನ್ನು ಹೊಂದಿರುವವರಿಗೆ ಸರ್‌ಚಾರ್ಜ್ ಒಂದೇ ದರದಲ್ಲಿ ಅನ್ವಯವಾಗುತ್ತದೆ. ಕಳೆದ ತಿಂಗಳು ಪ್ರತಿ ಯೂನಿಟ್‌ಗೆ ಒಂದು ಪೈಸೆಯಂತೆ ಸರ್‌ಚಾರ್ಜ್ ವಿಧಿಸಲಾಗಿತ್ತು. ಕಳೆದ ಏಪ್ರಿಲ್‌ನಲ್ಲಿ ಕೆಎಸ್‌ಇಬಿ ರಾಜ್ಯದ ಹೊರಗಿನ ವಿವಿಧ ಕೇಂದ್ರಗಳು ಮತ್ತು ಐಪಿಪಿಗಳಿಂದ ವಿದ್ಯುತ್ ಪೂರೈಕೆಯಿಂದಾಗಿ ಹೆಚ್ಚುವರಿ ಹೊರೆಯನ್ನು ಅನುಭವಿಸಿದೆ. ಅಧಿಕೃತ ಅಂಕಿ ಅಂಶಗಳ ಪ್ರಕಾರ ವಿದ್ಯುತ್ ಖರೀದಿಯಿಂದಾಗಿ ವಿದ್ಯುತ್ ಮಂಡಳಿಯು ಏಪ್ರಿಲ್ ತಿಂಗಳಿನಲ್ಲಿ 5.48 ಕೋಟಿ ರೂ.ಗಳ ಹೆಚ್ಚುವರಿ ವೆಚ್ಚವನ್ನು ಭರಿಸಿದೆ. ಮಂಡಳಿ ಗ್ರಾಹಕರಿಂದ ಈ ಹೆಚ್ಚುವರಿ ಹೊರೆಯನ್ನು ಇಂಧನ ಸರ್‌ಚಾರ್ಜ್ ಆಗಿ ವಶಪಡಿಸಿಕೊಳ್ಳಲು ಮುಂದಾಗಿದೆ. ಹಿಂದಿನ ತಿಂಗಳುಗಳ ದರಗಳನ್ನು ಗಣನೆಗೆ ತೆಗೆದುಕೊಂಡು ಜೂನ್ ತಿಂಗಳ ಬಿಲ್‌ಗಳಲ್ಲಿ ದ್ವೈಮಾಸಿಕ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ 2 ಪೈಸೆ ವಿಧಿಸಲು ತೀರ್ಮಾನಿಸಲಾಗಿದೆ.

ಅರ್ಜಿ ಸಲ್ಲಿಸುವ ದಿನಾಂಕ ವಿಸ್ತರಣೆ

ಕಾಸರಗೋಡು: ತೃಕ್ಕರೀಪ್ಪುರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಟೆಕ್ ಎನ್‌ಆರ್‌ಐ ಸೀಟುಗಳಿಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಜೂನ್ 5ರ ವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ವಿವರಗಳಿಗೆ 9400324549, 8330850377, 04672250377 ಕರೆ ಮಾಡಬಹುದು.

ಅಂಗನವಾಡಿ ಪ್ರವೇಶೋತ್ಸವ

ಕಾಸರಗೋಡು: ನೀಲೇಶ್ವರ ನಗರಸಭೆಯು ಕಣಿಚಿರ ಅಂಗನವಾಡಿಯಲ್ಲಿ ಪ್ರವೇಶೋತ್ಸವವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ನಗರಸಭಾ ಅಧ್ಯಕ್ಷ ಪಿ.ಪಿ.ಮುಹಮ್ಮದ್ ರಫಿ ಉದ್ಘಾಟಿಸಿದರು. ನಗರಸಭಾ ಉಪಾಧ್ಯಕ್ಷೆ ಪಿ.ಎಂ. ಸಂಧ್ಯಾ ಅಧ್ಯಕ್ಷತೆ ವಹಿಸಿದ್ದರು. ಸ್ಥಾಯೀ ಸಮಿತಿ ಅಧ್ಯಕ್ಷೆ ಶಮೀನಾ ಮುಹಮ್ಮದ್, ಸಿಡಿಪಿಒ ಶೈಲಜಾ ಮತ್ತು ಐಸಿಡಿಎಸ್ ಮೇಲ್ವಿಚಾರಕಿ ಗೀತಾ ಉಪಸ್ಥಿತರಿದ್ದರು.


ಕಂಪ್ಯೂಟರ್ ತರಬೇತಿ

ಕಾಸರಗೋಡು: ತಿರುವನಂತಪುರದ ರಾಷ್ಟ್ರೀಯ ಉದ್ಯೋಗ ಸೇವಾ ಕೇಂದ್ರದ ಆಶ್ರಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಉಚಿತ ಕಂಪ್ಯೂಟರ್ ತರಬೇತಿ ಕೋರ್ಸ್‌ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೇಂದ್ರ ಸರಕಾರದ ಅಧೀನದಲ್ಲಿರುವ ಎನ್‌ಐಇಎಲ್‌ಐಟಿ ನಡೆಸುವ ಒಂದು ವರ್ಷದ ಸೈಬರ್ ಸೆಕ್ಯೂರ್ಡ್ ವೆಬ್ ಡೆವಲಪ್‌ಮೆಂಟ್ ಅಸೋಸಿಯೇಟ್ ಕಂಪ್ಯೂಟರ್ ಕೋರ್ಸ್‌ಗೆ ಪ್ರವೇಶ ಮುಕ್ತವಾಗಿದೆ. ಈ ಕೋರ್ಸ್‌ನ್ನು ಕೋಝಿಕ್ಕೋಡ್‌ನಲ್ಲಿರುವ ಕೇರಳ ಸರಕಾರಿ ಸಂಸ್ಥೆಯಾದ ಕೆಲ್ಟ್ರಾನ್‌ನ ಜ್ಞಾನ ಕೇಂದ್ರದಲ್ಲಿ ನಡೆಸಲಾಗುತ್ತಿದೆ. 30 ವರ್ಷಕ್ಕಿಂತ ಕಡಿಮೆ ವಯಸ್ಸಿನ, ಮೂರು ಲಕ್ಷ ರೂ.ಗಿಂತ ಕಡಿಮೆ ವಾರ್ಷಿಕ ಆದಾಯ ಮತ್ತು ಪ್ಲಸ್ ಟು ಪಾಸ್ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಕಾಸರಗೋಡು ಜಿಲ್ಲೆಯವರು ಹೆಚ್ಚಿನ ಮಾಹಿತಿಗೆ 0495-2301772, 8590605275 ಕರೆ ಮಾಡಬಹುದು.

ಅರ್ಜಿಗಳ ಆಹ್ವಾನ

ಕಾಸರಗೋಡು: ಜಿಲ್ಲಾ ಕೈಗಾರಿಕಾ ಕೇಂದ್ರದ ವ್ಯಾಪ್ತಿಗೆ ಬರುವ ಜಿಲ್ಲಾ ಮಿನಿ ಕೈಗಾರಿಕಾ ಎಸ್ಟೇಟ್ ಸಹಕಾರ ಸಂಘದ ಅಧೀನದಲ್ಲಿ ಬರುವ ಕುಂಬಳೆ ಮಿನಿ ಕೈಗಾರಿಕಾ ಎಸ್ಟೇಟ್‌ನಲ್ಲಿ ಪರಿಶಿಷ್ಟ ಪಂಗಡದ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಲಾಗಿದೆ. ಖಾಲಿ ಇರುವ ಶೆಡ್‌ಗಾಗಿ ಹೊಸ ಉದ್ಯಮಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಿನಿ ಇಂಡಸ್ಟ್ರಿಯಲ್ ಎಸ್ಟೇಟ್, ಕುಂಬಳೆ 600 ಚದರ ಅಡಿ ಶೆಡ್ - ಒಂದು (ಪರಿಶಿಷ್ಟ ಜಾತಿಯ ಜನರಿಗೆ ಮಾತ್ರ). ಆಸಕ್ತ ಹೊಸ ಇಂಡಸ್ಟ್ರಿಯಲ್ ಉದ್ಯಮಿಗಳು 10 ದಿನಗಳ ಒಳಗೆ ವಿವರವಾದ ಯೋಜನಾ ವರದಿಯೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು. ವ್ಯವಸ್ಥಾಪಕ ನಿರ್ದೇಶಕರು, ಮಿನಿ ಇಂಡಸ್ಟ್ರಿಯಲ್ ಎಸ್ಟೇಟ್ ಸಹಕಾರಿ ಸಂಘ, ಜಿಲ್ಲಾ ಕೈಗಾರಿಕಾ ಕೇಂದ್ರ, ಕಾಸರಗೋಡು ಈ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 9447772638 ಕರೆ ಮಾಡಬಹುದು.

ಪಿಆರ್‌ಡಿ ಪ್ರಾದೇಶಿಕ ಉಪ ನಿರ್ದೇಶಕರಾಗಿ ಎ.ಅರುಣ್ ಕುಮಾರ್ ಅಧಿಕಾರ ಸ್ವೀಕಾರ



ಕಾಸರಗೋಡು: ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಣ್ಣೂರು ಪ್ರಾದೇಶಿಕ ಉಪನಿರ್ದೇಶಕರಾಗಿ ಎ.ಅರುಣ್ ಕುಮಾರ್ ಅಧಿಕಾರ ವಹಿಸಿಕೊಂಡಿದ್ದಾರೆ. ಅವರು ಕ್ಷೇತ್ರ ಪ್ರಚಾರ ಸಾಂಸ್ಕೃತಿಕ ವ್ಯವಹಾರಗಳ ಉಪನಿರ್ದೇಶಕರಾಗಿ, ತಿರುವನಂತಪುರ, ಆಲಪ್ಪುಳ ಮತ್ತು ಕೋಟ್ಟಾಯಂ ಜಿಲ್ಲೆಗಳಲ್ಲಿ ಜಿಲ್ಲಾ ಮಾಹಿತಿ ಅಧಿಕಾರಿಯಾಗಿ, ಮಹಾತ್ಮ ಗಾಂಧಿ ವಿಶ್ವವಿದ್ಯಾಲಯದ ಪಿಆರ್‌ಒ ಮತ್ತು ಸಿಎಂನ ವಿಶೇಷ ಕರ್ತವ್ಯ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಾದೇಶಿಕ ಉಪನಿರ್ದೇಶಕರು ಕಾಸರಗೋಡು, ಕಣ್ಣೂರು ಮತ್ತು ವಯನಾಡು ಜಿಲ್ಲೆಗಳಿಗೆ ಜವಾಬ್ದಾರರಾಗಿರುತ್ತಾರೆ.

ಮುಳಿಯಾರು-ಚೆಮ್ನಾಡು ಸಂಪರ್ಕ ರಸ್ತೆ | ವಿವಿಧ ಸಂಘಟನೆಗಳಿಂದ ಮನವಿ ಸಲ್ಲಿಕೆ

ಪಯಸ್ವಿನಿ ಹೊಳೆಗೆ ಹೊಸ ಸೇತುವೆ ನಿರ್ಮಿಸಲು ಆಗ್ರಹ

ಕಾಸರಗೋಡು: ಕಾಸರಗೋಡು ಜಿಲ್ಲೆಯ ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿರುವ ಮುಳಿಯಾರು - ಚೆಮ್ನಾಡು ಗ್ರಾಮ ಪಂಚಾಯತ್‌ಗಳನ್ನು ಸಂಪರ್ಕಿಸುವ ನಿಟ್ಟಿನಲ್ಲಿ ಪಯಸ್ವಿನಿ ಹೊಳೆಗೆ ನೂತನ ಸೇತುವೆ ನಿರ್ಮಿಸಬೇಕು ಎಂಬ ಆಗ್ರಹ ತೀವ್ರಗೊಳ್ಳುತ್ತಿದೆ.

ಈ ನಿಟ್ಟಿನಲ್ಲಿ ಬಾವಿಕ್ಕೆರೆ ಅಣೆಕಟ್ಟಿಗೆ ಸಮಾನಂತರವಾಗಿ ಆಲೂರು ಮುಂಡಕ್ಕೈಯಿಂದ ಶ್ರೀ ಮಹಾಲಕ್ಷ್ಮೀಪುರ ಕ್ಷೇತ್ರಕ್ಕೆ ಜೋಡಿಸಿಕೊಂಡು ಅತ್ಯಾಧುನಿಕ ಮಾದರಿಯಲ್ಲಿ ಸೇತುವೆ ನಿರ್ಮಿಸಬೇಕು ಎಂದು ನಾಗರಿಕರು ಒತ್ತಾಯಿಸಿದ್ದಾರೆ. ಈ ಭಾಗದಲ್ಲಿ ಸೇತುವೆ ನಿರ್ಮಾಣವಾಗಬೇಕೆಂದು ಸಾರ್ವಜನಿಕರು ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ಬೇಡಿಕೆಯಿರಿಸಿದ್ದಾರೆ. ವರ್ಷಗಳ ಹಿಂದೆ ಕಿಂಡಿ ಅಣೆಕಟ್ಟಿನ ಕಾಮಗಾರಿಯನ್ನು ಪೂರ್ತಿಗೊಳಿಸುವ ಸಂದರ್ಭ ಸೇತುವೆ ನಿರ್ಮಾಣಕ್ಕಾಗಿ ಸಂಬಂಧಪಟ್ಟ ಇಲಾಖೆಗಳು ಒಗ್ಗೂಡಿ ಸಂಭಾವ್ಯ ಅಧ್ಯಯನ ನಡೆಸಿ ಅಂಗೀಕರಿಸಿದ್ದವು. ಅಲ್ಲದೆ ಈ ಪ್ರದೇಶದಲ್ಲಿ ಸೇತುವೆ ಸ್ಥಾಪಿಸಿದರೆ ನೂರಾರು ಮಂದಿಗೆ ದಿನನಿತ್ಯ



ಪ್ರಯೋಜನವಾಗಬಹುದು ಎಂಬುದನ್ನು ಸಮೀಕ್ಷೆ ಸಂದರ್ಭ ತಿಳಿದುಕೊಳ್ಳಲಾಗಿತ್ತು.

ಯೋಜನೆ ಸಿದ್ಧಪಡಿಸಲು ತೀರ್ಮಾನ

ಆದರೆ ಬಳಿಕ ಮುಂದಿನ ಯಾವುದೇ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ. ಬಾವಿಕ್ಕೆರೆ ಅಣೆಕಟ್ಟಿನ ಪ್ರದೇಶದಲ್ಲಿ ಪ್ರವಾಸೋದ್ಯಮ ಯೋಜನೆ ಆರಂಭಿಸಲು ನಿರ್ಧರಿಸಲಾಗಿದೆ. ಪ್ರವಾಸೋದ್ಯಮ ಯೋಜನೆ ಕಾರ್ಯಗತಗೊಳಿಸುವ ಹಿನ್ನೆಲೆಯಲ್ಲಿ ಅದಕ್ಕೆ ಹೊಂದಿಕೊಂಡು ಸೇತುವೆ ನಿರ್ಮಿಸಿದಲ್ಲಿ ಪ್ರವಾಸಿಗರನ್ನು ಆಕರ್ಷಿಸಬಹುದು ಎಂದು ವಿಶ್ಲೇಷಿಸಲಾಗಿದೆ. ಇದಕ್ಕಾಗಿ ಅನೇಕ ಕಾರ್ಯ ಯೋಜನೆ ಸಿದ್ಧಪಡಿಸಲು ತೀರ್ಮಾನಿಸಲಾಗಿತ್ತು.

ಅಧಿಕಾರಿಗಳಿಗೆ ಮನವಿ ಸಲ್ಲಿಕೆ

ಆದರೆ ಈ ಎಲ್ಲಾ ಕಾರ್ಯಚಟುವಟಿಕೆಗಳು ಅರ್ಧದಲ್ಲೇ ಸ್ಥಗಿತಗೊಂಡಿದ್ದು, ಉಳಿದ ಯೋಜನೆಗಳು ಘೋಷಣೆಗೆ ಮಾತ್ರ ಸೀಮಿತವಾಗಿವೆ. ಬಾವಿಕ್ಕೆರೆ ಅಣೆಕಟ್ಟಿಗೆ ಸಮಾನಂತರವಾಗಿ ಸೇತುವೆ ಬೇಕು ಎಂದು ಒತ್ತಾಯಿಸಿ ಆಲೂರು ಸಾಂಸ್ಕೃತಿಕ ಕ್ಲಬ್ ವತಿಯಿಂದ ಉದುಮ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ನೀಲಕಂಠನ್ ಅವರಿಗೆ ಮನವಿ ಸಲ್ಲಿಸಲಾಗಿದೆ. ಮಾತ್ರವಲ್ಲದೆ ಈ ಹಿನ್ನೆಲೆಯಲ್ಲಿ ವಿವಿಧ ಸಂಘ ಸಂಸ್ಥೆಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರಗಳನ್ನು ನೀಡಿವೆ.

ಪ್ರಯೋಜನಕಾರಿ

ಸೇತುವೆ ನಿರ್ಮಾಣಗೊಂಡರೆ ಮುಳಿಯಾರು, ಕಾರಡ್ಕ, ಬೆಳ್ಳೂರು, ದೇಲಂಪಾಡಿ ಮೊದಲಾದ ಗ್ರಾಮ ಪಂಚಾಯತ್‌ಗಳ ನಿವಾಸಿಗಳಿಗೆ, ಮಡಿಕೇರಿ, ಸುಳ್ಯ ಭಾಗದಿಂದ ಬರುವ ಪ್ರಯಾಣಿಕರಿಗೆ ಸುತ್ತುವರಿದು ಚೆರ್ಕಳದ ಮೂಲಕ ಕಾಸರಗೋಡಿಗೆ ಹೋಗದೆ ನಿರ್ದಿಷ್ಟ ಸೇತುವೆ ಮೂಲಕ ಸುಲಭ ವಾಗಿ ಚಟ್ಟಂಚಾಲ್ ರಾಷ್ಟ್ರೀಯ ಹೆದ್ದಾರಿಗೆ ತಲುಪಬಹುದು. ಕಾಞಂಗಾಡು ಭಾಗದಿಂದ ಮುಳ್ಳೇರಿಯ, ಬೋವಿಕ್ಕಾನ ಭಾಗಕ್ಕೆ ಬರುವವ ರಿಗೆ ಸೇತುವೆ ಹೆಚ್ಚು ಪ್ರಯೋಜನಕಾರಿಯಾಗಲಿದೆ.

ಮುಳಿಯಾರು ಬಾವಿಕೆರೆಯಲ್ಲಿ ಪ್ರವಾಸೋದ್ಯಮಕ್ಕೆ ಯೋಜನೆ

ಮುಳಿಯಾರು ಗ್ರಾ.ಪಂ.ವ್ಯಾಪ್ತಿಯ ಬಾವಿಕ್ಕೆರೆಯಲ್ಲಿ ಹೊಸದಾದ ಸೇತುವೆ ನಿರ್ಮಿಸಿ ಪ್ರವಾಸಿಗರನ್ನು ಆ ಭಾಗಕ್ಕೆ ಹೆಚ್ಚೆಚ್ಚು ಸೆಳೆಯುವ ನಿಟ್ಟಿನಲ್ಲಿ ಯೋಜನೆ ರೂಪಿಸಬೇಕು ಎಂದು ಪ್ರವಾಸೋದ್ಯಮ ಇಲಾಖೆ ತಿಳಿಸಿತ್ತು. ಇದಕ್ಕಾಗಿ ಇಲಾಖೆ ಅಧಿಕಾರಿಗಳು ಸಾಕಷ್ಟು ಕಾರ್ಯಚಟುವಟಿಕೆ ರೂಪಿಸಿದ್ದರು. ಆದರೆ ಯೋಜನೆ ಅನುಷ್ಠಾನಕ್ಕೆ ಆರ್ಥಿಕ ಅನುದಾನ ಅಂಗೀಕಾರ ಮತ್ತು ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆ ಎದ್ದುಕಾಣುತ್ತಿದೆ. ಈ ವಿಷಯದಲ್ಲಿ ಸಮಗ್ರ ಯೋಜನೆ ಕೇರಳ ಸರಕಾರಕ್ಕೆ ಸಮರ್ಪಿಸಿ ಸರಕಾರದ ವತಿಯಿಂದ ಅನುದಾನ ಒದಗಿಸಿದರೆ ಮಾತ್ರ ಕಾರ್ಯಗತಗೊಳ್ಳಬಹುದು. ಇಲ್ಲದಿದ್ದಲ್ಲಿ ಜನರ ಬಹುವರ್ಷಗಳ ಬೇಡಿಕೆಯು ಮೂಲೆಗುಂಪಾಗುವ ಸಾಧ್ಯತೆಯಿದೆ.

ಕೂಟ ಮಹಾಜಗತ್ತು ಸಾಲಿಗ್ರಾಮ ಕಾಸರಗೋಡು ಅಂಗಸಂಸ್ಥೆಯ ವಾರ್ಷಿಕ ಸಭೆ

ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಬೇಕು

ಕಾಸರಗೋಡು: ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಜೀವನದ ಗುಣಮಟ್ಟವನ್ನು ಸುಧಾರಿಸುವುದು, ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸುವುದು ಮತ್ತು ಸಮಾಜದಲ್ಲಿನ ಬಡತನ, ಅಸಮಾನತೆ ನಿರ್ಮೂಲನೆ ಮಾಡುವುದು ಮೊದಲಾದ ಕಾರ್ಯವನ್ನು ಸಂಘ ಸಂಸ್ಥೆಗಳು ನೆರವೇರಿಸಬೇಕು ಎಂಬುದಾಗಿ ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಪ್ರಕಾಶ್ ಕಾರಂತ ಅಭಿಪ್ರಾಯ ವ್ಯಕ್ತಪಡಿಸಿದರು.

ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ನಡೆದ ಕೂಟ ಮಹಾಜಗತ್ತು ಸಾಲಿಗ್ರಾಮ ಇದರ ಕಾಸರಗೋಡು ಅಂಗಸಂಸ್ಥೆಯ ವಾರ್ಷಿಕ ಮಹಾಸಭೆಯನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಇದು ಕೇವಲ ಆರ್ಥಿಕ ಬೆಳವಣಿಗೆಯಷ್ಟೇ ಅಲ್ಲದೆ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ರಂಗಗಳಲ್ಲೂ ಆಗಬೇಕು ಎಂದು ಅವರು ಹೇಳಿದರು.

ಮಹಾಸಭೆಯ ಅಧ್ಯಕ್ಷತೆಯನ್ನು ಅಂಗಸಂಸ್ಥೆಯ ಅಧ್ಯಕ್ಷ ಶಂಕರನಾರಾಯಣ ಮಯ್ಯ ಬದಿಯಡ್ಕ ವಹಿಸಿದ್ದರು. ಕೇಂದ್ರ ಸಂಸ್ಥೆಯ ಅಧ್ಯಕ್ಷ ಎಚ್ ಸತೀಶ್ ಹಂದೆ ಮಾತನಾಡಿ, ಕೂಟ ಬಂಧುಗಳು ಅಭಿವೃದ್ಧಿಗಾಗಿ ಕಾಸರಗೋಡು ಅಂಗಸಂಸ್ಥೆಯ ವತಿಯಿಂದ ನಡೆಸಲ್ಪಡುವ ವಿವಿಧ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ಅಭಿವೃದ್ಧಿಗೆ ಶ್ರಮಿಸಬೇಕು

ಸಂಘಟನೆಗಳು ಸಮಾಜಮುಖಿಯಾಗಿರಬೇಕು ಸಂಘ ಸಂಸ್ಥೆಗಳು ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು. ಜನರ ಕಣ್ಣೀರೊರೆಸುವ ನಿಟ್ಟಿನಲ್ಲಿ ಸಮರ್ಥ ಸೇವೆಒದಗಿಸಬೇಕು. ಸಮಾಜಮುಖಿ ಚಟುವಟಿಕೆಗಳನ್ನು ನಿರ್ವಹಿಸಬೇಕು. ಸಮಾಜದ ಬೆಳವಣಿಯಾದಾಗ ಮಾತ್ರ ಉದ್ದೇಶಿತ ಗುರಿ ಸಫಲತೆ ಹೊಂದುತ್ತದೆ.

- **ಪ್ರಕಾಶ್ ಕಾರಂತ, ಅಧ್ಯಕ್ಷರು, ಸಾಲಿಗ್ರಾಮ ಶ್ರೀ ದೇವಳ ಆಡಳಿತ ಮಂಡಳಿ**

ಈ ಸಂದರ್ಭ ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಸ್ಥಾನದ ಆಡಳಿತ ಮಂಡಳಿ ಕೋಶಾಧಿಕಾರಿ ಲಕ್ಷ್ಮೀನಾರಾಯಣ ಹೊಳ್ಳ ವರ್ಕಾಡಿ, ಮಂಗಳೂರು ಅಂಗಸಂಸ್ಥೆಯ ಅಧ್ಯಕ್ಷ ಶ್ರೀಧರ ಹೊಳ್ಳ ಮತ್ತು ಮಧೂರು ಶ್ರೀ ದೇವಳ ವ್ಯವಸ್ಥಾಪಕ ಸುಬ್ರಹ್ಮಣ್ಯ ರಂಗಾ ಭಟ್ ಮತ್ತಿತರರಿದ್ದರು. ಸಮಾರಂಭದಲ್ಲಿ ಕಳೆದ ಸಾಲಿನ ವಾರ್ಷಿಕ ವರದಿಯನ್ನು ಕಾರ್ಯದರ್ಶಿ ನರಸಿಂಹ ಮಯ್ಯ ಎಂ. ಮಧೂರು, ಲೆಕ್ಕಪತ್ರಗಳನ್ನು ಕೋಶಾಧಿಕಾರಿ ಕೃಷ್ಣ ಕಾರಂತ ಬನ್ನೂರು ಮಂಡಿಸಿದರು. ಕಳೆದ ಸಾಲಿನಲ್ಲಿ ಸಂಪರ್ಕ ಸಭೆ ನಡೆಸಿದ ಕೂಟ ಬಂಧುಗಳಿಗೆ ಸ್ಮರಣಿಕೆ ನೀಡಿ ಗೌರವಾರ್ಪಣೆ ಸಲ್ಲಿಸಲಾಯಿತು. ಮಹಾಸಭೆಯ ಪ್ರಯುಕ್ತ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳು ನಡೆದಿದ್ದು ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಸಭೆಯ ಅಂಗವಾಗಿ ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಭಜನಾ ಸಂಕೀರ್ತನೆ ನಡೆಯಿತು.

ನೀರ್ಚಾಲಿನಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಸಮ್ಮೇಳನ ಸಮಾರೋಪ

ಡಾ.ರಮಾನಂದ ಬನಾರಿ ದಂಪತಿಗೆ ಗೌರವ

ಬದಿಯಡ್ಕ: ಕಾಸರಗೋಡು ಸಹಿತ ಕರಾವಳಿ ಕರ್ನಾಟಕದ ಸಾಧಕ ಶ್ರೇಷ್ಠರ ಯಶೋಗಾಥೆಗಳ ಮರು ಓದುವಿಕೆ ಸ್ಫೂರ್ತಿದಾಯಕ. ಕಾಸರಗೋಡು ಗಡಿನಾಡನ್ನು ಸಾಂಸ್ಕೃತಿಕವಾಗಿ ಕರ್ನಾಟಕದೊಂದಿಗೆ ಬೆಸೆಯುವ ಪರಿಕಲ್ಪನೆ ಪ್ರತಿಪಾದಿಸಿದವರಲ್ಲಿ ಡಾ.ರಮಾನಂದ ಬನಾರಿ ಪ್ರಮುಖರು ಎಂದು ಹಂಪಿ ಕನ್ನಡ ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ಮೋಹನ ಕುಂಟಾರು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘದ ನೇತೃತ್ವ ಕನ್ನಡ ಸಾಹಿತ್ಯ ಪರಿಷತ್ ಕೇರಳ ಗಡಿನಾಡ ಘಟಕ, ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಸಂಘ, ಕೀರಿಕ್ಕಾಡು ಸ್ಮಾರಕ ಸಾಂಸ್ಕೃತಿಕ ಅಧ್ಯಯನ ಕೇಂದ್ರ ದೇಲಂಪಾಡಿ, ಕಲಾಕುಂಚ ಕಾಸರಗೋಡು, ಗಿಳಿವಿಂಡು ಮಂಜೇಶ್ವರ, ಸ್ನೇಹರಂಗ ಕಾಸರಗೋಡು ಸಹಿತ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ನೀರ್ಚಾಲು ಮಹಾಜನ ವಿದ್ಯಾಸಂಸ್ಥೆಗಳ ಆವರಣದಲ್ಲಿ ಕವಿ, ಸಾಹಿತಿ, ವೈದ್ಯ, ಅರ್ಥದಾರಿ ಡಾ.ರಮಾನಂದ ಬನಾರಿ 85ರ ಅಂಗವಾಗಿ ಕನ್ನಡ ಸಾಹಿತ್ಯ ಸಂಸ್ಕೃತಿ ಸಮ್ಮೇಳನದ ಅಂಗವಾಗಿ ಭಾನುವಾರ ಸಂಜೆ ನಡೆದ ಸಮಾರೋಪದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗೌರವಾಭಿನಂದನೆ ಸ್ವೀಕರಿಸಿ ಡಾ. ರಮಾನಂದ ಬನಾರಿ ಮಾತನಾಡಿದರು.



ಪರೋಪಕಾರವಿರಲಿ

ನಾಡಿನ ವಿದ್ವತ್ ಪರಂಪರೆಗೆ ಚಾಲನೆ ಕೊಟ್ಟ ಕೇಂದ್ರ ನೀರ್ಚಾಲು. ನಾವೆಲ್ಲಾ ಋಣ ತ್ರಯ , ಗುಣ ತ್ರಯ ನಂಬಿಕೊಂಡು ಬಂದವರು. ಗುಣ ತ್ರಯಗಳು ನಮ್ಮ ಸ್ವಭಾವ, ಸಂಸ್ಕಾರ ನಿರೂಪಿಸುತ್ತವೆ. ಋಣ ತ್ರಯಗಳು ನಮ್ಮ ಕರ್ತವ್ಯ ನಿರ್ದೇಶಿಸುತ್ತವೆ. ಗಳಿಕೆಗಳನ್ನು ಸಮಾಜಕ್ಕೆ ಮರಳಿ ನೀಡುವ ಪ್ರವೃತ್ತಿಯೇ ಬದುಕಿನ ಸಂತೃಪ್ತಿಗೆ ಕಾರಣ.

- **ಡಾ. ರಮಾನಂದ ಬನಾರಿ**

ಸಮಾರಂಭದ ಉದ್ಘಾಟಕ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಉಪಸ್ಥಿತರಿದ್ದು, ಡಾ.ರಮಾನಂದ ಬನಾರಿ ಸಂಪಾದಕತ್ವದಲ್ಲಿ ಹೊರತಂದ ಕನ್ನಡಿಯಲ್ಲಿ ಕನ್ನಡಿಗ ಕೃತಿಯ 7ನೇ ಸಂಚಿಕೆ ಬಿಡುಗಡೆಗೊಳಿಸಿದರು.

ನಿವೃತ್ತ ಪ್ರಾಧ್ಯಾಪಿಕೆ ಡಾ.ಪ್ರಮೀಳಾ ಮಾಧವ್ ಕೃತಿ ಪರಿಚಯಿಸಿದರು. ಕನ್ನಡ ಲೇಖಕರ ಸಂಘದ ಕಾರ್ಯದರ್ಶಿ ಡಾ. ಕಿಶೋರ್ ಕುಮಾರ್ ರೈ ಶೇಣಿ, ಶಾಲಾ ಪ್ರಬಂಧಕ ಜಯದೇವ ಖಂಡಿಗೆ, ನಿವೃತ್ತ ಪ್ರಾಂಶುಪಾಲ ಪ್ರೊ.ಎ.ಶ್ರೀನಾಥ್, ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಜಿಲ್ಲಾಧ್ಯಕ್ಷ ಸುಕೇಶ್ ಕೆ., ಪ್ರೊ.ಪಿ. ಎನ್. ಮೂಡಿತ್ತಾಯ ಶುಭಹಾರೈಸಿದರು.

ಕೃತಿಯೊಳಗೆ ಸೇರಿದ ಸಾಧಕರಿಗೆ ಗೌರವ

ಕೃತಿಯೊಳಗೆ ಸೇರಿದ ಸಾಧಕರಾದ ಡಾ.ಎಸ್. ಆರ್. ನರಹರಿ, ನೆಟ್ಟಣಿಗೆ ಪುರುಷೋತ್ತಮ ಆಚಾರ್ಯ ಅವರನ್ನು ಗೌರವಿಸ ಲಾಯಿತು. ಜೊತೆಗೆ ಸಾಧಕರೊಂ ದಿಗೆ ಸಂವಾದ, ಕಥೆ, ಕವಿತಾ ರಚನೆ ಸಹಭಾಗಿಗಳಿಗೆ ಸಂಭಾವನೆ, ಸಾಹಿತಿ ಕಲಾವಿದರಿಗೆ, ಅತಿಥಿ ಸಾಧಕರಿಗೆ ಗೌರವಾರ್ಪಣೆ ನಡೆಯಿತು. ಡಾ.ಬನಾರಿ ದಂಪತಿಯನ್ನು ಗೌರವಿಸಲಾಯಿತು. ವಿಶಾಲಾಕ್ಷ ಪುತ್ರಕಳ ಸ್ವಾಗತಿಸಿ, ಚಂದ್ರಶೇಖರ ಏತಡ್ಕ ವಂದಿಸಿದರು. ಕವಿತಾ ಕೂಡ್ಲು, ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ನಿರೂಪಿಸಿದರು.

ಯುಗಪುರುಷ ನರೇಂದ್ರ ಮೋದಿ ವಿದ್ಯಾಲಯದಲ್ಲಿ ಪ್ರವೇಶೋತ್ಸವ



ಕಾಸರಗೋಡು: ಕಾಸರಗೋಡು ಜಿಲ್ಲೆಯ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಒಂದಾದ ಅಡ್ಕತ್ತಬೈಲು ಗುಡ್ಡೆ ದೇವಸ್ಥಾನ ರಸ್ತೆ ಸಮೀಪದ ಯುಗಪುರುಷ ನರೇಂದ್ರ ಮೋದಿ ವಿದ್ಯಾಲಯದಲ್ಲಿ ಶಾಲಾ ಪ್ರವೇಶೋತ್ಸವ ಕಾರ್ಯಕ್ರಮವು ಸಂಭ್ರಮ ಸಡಗರದಿಂದ ಜರಗಿತು.

ಅದ್ದೂರಿ ಮೆರವಣಿಗೆ

ಕಾರ್ಯಕ್ರಮದ ಅಂಗವಾಗಿ ಶಾಲಾ ಮಕ್ಕಳ ಪಾಲ್ಗೊಳ್ಳುವಿಕೆಯೊಂದಿಗೆ ವರ್ಣರಂಜಿತವಾಗಿ ಅದ್ದೂರಿ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು.

ಮಕ್ಕಳಿಗೆ ಆರತಿ ಬೆಳಗಿ ಸ್ವಾಗತ

ಬಳಿಕ ನವಾಗತ ಮಕ್ಕಳನ್ನು ಮುಖ್ಯ ಶಿಕ್ಷಕಿ ಮತ್ತು ಸಹ ಶಿಕ್ಷಕಿಯರ ನೇತೃತ್ವದಲ್ಲಿ ಆರತಿ ಬೆಳಗಿ ಹಣೆಗೆ ಕುಂಕುಮವಿಟ್ಟು ಸ್ವಾಗತಿಸಿ ಬರಮಾಡಿಕೊಳ್ಳಲಾಯಿತು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿಎ ವೃಂದಾ ಕೊನ್ನಾರ್ ಶುಭಹಾರೈಸಿ ಮಾತನಾಡಿದರು. ಇದೇ ವೇಳೆ ವಿದ್ಯಾಲಯದ ವತಿಯಿಂದ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯಿನಿ ಶ್ರೀವಲ್ಲಿ, ಕೋ ಓರ್ಡಿನೇಟರ್ ಉಷಾ ನಾಯರ್, ಅಕಾಡೆಮಿಕ್ ಇನ್ ಚಾರ್ಜ್ ದೇವಿಕಾ ಶೆಣೈ, ಸಹಪಠ್ಯ ಇನ್ ಚಾರ್ಜ್ ಶಾಹಿರತ್ನ, ಮೆನೇಜ್‌ಮೆಂಟ್ ಸಮಿತಿ ಸದಸ್ಯರಾದ ಕೆ.ಎನ್.ರಾಮಕೃಷ್ಣ ಹೊಳ್ಳ, ಸತೀಶ್ ಕಾಮತ್ ಮುಂತಾದವರು ಭಾಗವಹಿಸಿ ಶುಭಕೋರಿದರು.

ಸಿಮಿ ಎಸ್.ಪಂಡಿತ್ ಸ್ವಾಗತಿಸಿ, ಮಾಲಾಶ್ರೀ ವಂದಿಸಿದರು. ಸುಜಾತ ಕಾರ್ಯಕ್ರಮ ನಿರೂಪಿಸಿದರು. ವಿದ್ಯಾಲಯದ ಶಿಕ್ಷಕ ವೃಂದದವರು, ಸಿಬ್ಬಂದಿಗಳು, ಪೋಷಕರು, ಮಕ್ಕಳು ಭಾಗವಹಿಸಿದ್ದರು.

ಜೂ.4ರಂದು ಶೇಷವನ ಕ್ಷೇತ್ರದಲ್ಲಿ ಲಕ್ಷ ನಾಮಾರ್ಚನೆ, ಗೋಪುರ ಲೋಕಾರ್ಪಣೆ

ಕಾಸರಗೋಡು: ಕೂಡ್ಲು ಬಾದಾರ ಶೇಷವನ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ದೇವರಿಗೆ ಲಕ್ಷನಾಮಾರ್ಚನೆ ಹಾಗೂ ನೂತನವಾಗಿ ನಿರ್ಮಿಸಿದ ತೆಂಕು ಭಾಗದ ಸುತ್ತುಗೋಪುರದ ಲೋಕಾರ್ಪಣೆ ಕಾರ್ಯಕ್ರಮ ಜೂ.4ರಂದು ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಕಾರ್ಯಕ್ರಮದ ಅಂಗವಾಗಿ ಗಣಪತಿ ಹೋಮ, ಲಕ್ಷನಾಮಾರ್ಚನೆ ನಡೆಯಲಿವೆ.

ನೂತನ ಗೋಪುರ ಲೋಕಾರ್ಪಣೆ

ಮಧ್ಯಾಹ್ನ 12 ಗಂಟೆಗೆ ಜರಗುವ ಸಭಾ ಕಾರ್ಯಕ್ರಮದಲ್ಲಿ ದೇವಸ್ಥಾನದ ತಂತ್ರಿವರ್ಯರಾದ ಬ್ರಹ್ಮಶ್ರೀ ಅರವತ್ ಕೆ.ಯು.ಪದ್ಮನಾಭ ತಂತ್ರಿ ನೂತನ ಗೋಪುರವನ್ನು ಲೋಕಾರ್ಪಣೆ ಮಾಡಲಿದ್ದಾರೆ. ಶ್ರೀ ಶೇಷವನ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ವೇಣುಗೋಪಾಲ ಅಧ್ಯಕ್ಷತೆ ವಹಿಸುವರು. ಖ್ಯಾತವೈದ್ಯ ಡಾ.ಅನಂತಕಾಮತ್, ಧಾರ್ಮಿಕ ಮುಂದಾಳು, ಉದ್ಯಮಿ ಬಿ.ವಸಂತ ಪೈ ಬದಿಯಡ್ಕ ಅತಿಥಿಗಳಾಗಿರುವರು.

ಶ್ರೀ ಕ್ಷೇತ್ರದ ಶಿಲ್ಪಿ ರಮೇಶ ಕಾರಂತ ಬೆದ್ರಡ್ಕ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾಸರಗೋಡು ಯೋಜನಾಧಿಕಾರಿ ದಿನೇಶ್ ಬಿ., ಮಧೂರು ಕ್ಷೇತ್ರದ ನಿವೃತ್ತ ಅರ್ಚಕ ಶ್ರೀಕೃಷ್ಣ ಉಪಾಧ್ಯಾಯ, ಶಿವಮಂಗಿಲ ಕ್ಷೇತ್ರದ ಅರ್ಚಕ ನಾಗೇಂದ್ರ ಭಟ್, ಶ್ರೀ ಕ್ಷೇತ್ರ ಕುತ್ಯಾಳದ ಅನುವಂಶಿಕ ಮೊಕ್ತೇಸರ ಕೆ.ಜಿ.ಶ್ಯಾನುಭೋಗ್, ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ರಾಮಕೃಷ್ಣ ಮಯ್ಯ ಸಿರಿಬಾಗಿಲು, ಬ್ರಹ್ಮವಾಹಕ ಕೃಷ್ಣಪ್ರಸಾದ ಅಡಿಗ, ಶೇಷವನ ದೇವಸ್ಥಾನ ಟ್ರಸ್ಟ್‌ನ ಅನುವಂಶಿಕ ಮೊಕ್ತೇಸರ ಸದಾಶಿವ, ಮಧೂರು ಗ್ರಾ.ಪಂ.ಉಪಾಧ್ಯಕ್ಷ ಭಾನುಪ್ರಕಾಶ್, ಮೊಗ್ರಾಲ್ ಪುತ್ತೂರು ಪಂ. ಸದಸ್ಯೆ ವಸಂತಿ, ಶೇಷವನ ಟ್ರಸ್ಟ್‌ನ ಮಾಜಿ ಅಧ್ಯಕ್ಷ ಕಿರಣ್‌ಪ್ರಸಾದ್ ಕೂಡ್ಲು, ಜಯರಾಮ ರೈ ತ್ರಿನೇತ್ರ ಸಿರಿಬಾಗಿಲು, ಶೇಷವನ ಟ್ರಸ್ಟ್‌ನ ಕಾರ್ಯದರ್ಶಿ ಗೋಪಾಲ ಪಾಯಿಚ್ಚಾಲು, ಕೋಶಾಧಿಕಾರಿ ಪ್ರಕಾಶ್ ಶೆಟ್ಟಿ, ಟ್ರಸ್ಟ್‌ನ ಸದಸ್ಯರಾದ ರಮೇಶ್ ರೈ, ಸುರೇಶ್ ಮಣಿಯಾಣಿ, ರಮೇಶ್, ಸುನಂದಾ, ಶೇಷವನ ಯುವಕ ಸಮಿತಿ ಅಧ್ಯಕ್ಷ ಅಮೃತ್ ಪಾಯಿಚ್ಚಾಲು, ಶೇಷವನ ಮಹಿಳಾ ಸಮಿತಿ ಅಧ್ಯಕ್ಷೆ ರೋಹಿಣಿ ಪಾಯಿಚ್ಚಾಲು ಮತ್ತಿತರರು ಭಾಗವಹಿಸುವರು.

ಸಾಂಸ್ಕೃತಿಕ ಕಾರ್ಯಕ್ರಮ

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ತರಬೇತಿ ಕೇಂದ್ರ ಇವರಿಂದ ರಜತರಂಗದ ಅಂಗವಾಗಿ ಯಕ್ಷಗಾನ ಪ್ರದರ್ಶನ , ಸಂಸ್ಮರಣೆ, ವೈಶಾಲಿ ಐತಾಳ್ ಮಂಗಳಾದೇವಿ ಇವರಿಂದ ಭರತನಾಟ್ಯ, ಅಮೃತ ಕಲಾಕ್ಷೇತ್ರ ಕೂಡ್ಲು ಇವರಿಂದ ನೃತ್ಯ ವೈವಿಧ್ಯ ಜರಗಲಿವೆ.

ಹಾಸ್ಟೆಲ್ ಸೌಕರ್ಯ ಕಲ್ಪಿಸಲು ಒತ್ತಾಯಿಸಿ ನರ್ಸಿಂಗ್ ವಿದ್ಯಾರ್ಥಿಗಳಿಂದ ಮುಷ್ಕರ



ಪೆರ್ಲ: ಉಕ್ಕಿನಡ್ಕದಲ್ಲಿರುವ ಕಾಸರಗೋಡು ಸರಕಾರಿ ನರ್ಸಿಂಗ್ ಕಾಲೇಜಿನ ಹೊಸ ವಿದ್ಯಾರ್ಥಿಗಳ ಹಾಸ್ಟೆಲ್‌ನಲ್ಲಿ ವಸತಿ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಅನಿರ್ದಿಷ್ಟಾವಧಿ ಹಗಲು ರಾತ್ರಿ ಮುಷ್ಕರ ಸೋಮವಾರದಿಂದ ಆರಂಭಗೊಂಡಿದೆ.

ಜೂನ್ ಮೊದಲ ವಾರದಲ್ಲಿ ಹೊಸ ವೈದ್ಯಕೀಯ ಕಾಲೇಜು ಹಾಸ್ಟೆಲ್ ಕಟ್ಟಡ ವೈದ್ಯಕೀಯ ವಿದ್ಯಾರ್ಥಿಗಳಿಗೆ ತೆರೆದು ಕೊಡಲಾಗುವುದೆಂದು ತಿಳಿಸಿ ಹೊಸ ಬ್ಯಾಚ್‌ಗೆ ವಿದ್ಯಾರ್ಥಿಗಳ ಸೇರ್ಪಡೆಗೊಳಿಸುವ ಪ್ರಕ್ರಿಯೆ ನಡೆದಿತ್ತು. ಆದರೆ ಅದರಲ್ಲಿ 3 ವರ್ಷಗಳಿಂದ ಕಾಲೇಜಿನ ಹೊರಗೆ ಖಾಸಗಿ ಕಟ್ಟಡಗಳಲ್ಲಿ ವಾಸಿಸುತ್ತಿರುವ ನರ್ಸಿಂಗ್ ವಿದ್ಯಾರ್ಥಿಗಳನ್ನು ಪರಿಗಣಿಸದಿರುವುದು ವಿದ್ಯಾರ್ಥಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಈ ಹಿಂದೆ ವೈದ್ಯಕೀಯ ಕಾಲೇಜಿನ ಸೌಲಭ್ಯ ಸ್ವಂತ ಕಟ್ಟಡ ವ್ಯವಸ್ಥೆಗಳು, ಹಾಸ್ಟೆಲ್ ಸೌಲಭ್ಯ ಸಿದ್ಧಪಡಿಸುವವರೆಗೆ ನರ್ಸಿಂಗ್ ವಿದ್ಯಾರ್ಥಿಗಳಿಗೆ ಒದಗಿಸಲಾಗುವು ದೆಂದು ಭರವಸೆ ನೀಡಲಾಗಿತ್ತು. ಇದನ್ನು ಪಾಲಿಸಬೇಕೆಂದು ಒತ್ತಾಯಿಸಿ ನರ್ಸಿಂಗ್ ವಿದ್ಯಾರ್ಥಿಗಳು ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಆದರೆ ಅದರು ಕಾರ್ಯಗತಗೊಂಡಿಲ್ಲ. ವೈದ್ಯಕೀಯ ಕಾಲೇಜು ಹಾಸ್ಟೆಲ್‌ನಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯವಿದೆ. ಪ್ರಸ್ತುತ ವೈದ್ಯಕೀಯ ಕಾಲೇಜಿನಲ್ಲಿ ಕೇವಲ 50 ಮಂದಿ ವಿದ್ಯಾರ್ಥಿಗಳಿದ್ದಾರೆ. ಇನ್ನೂ ಒಂದು, 2 ಬ್ಯಾಚ್‌ಗಳು ಪ್ರಾರಂಭವಾದರೂ ನರ್ಸಿಂಗ್ ವಿದ್ಯಾರ್ಥಿಗಳಿಗೆ ಇಲ್ಲಿಯೇ ವಸತಿ ಕಲ್ಪಿಸಬಹುದು. ಆದ್ದರಿಂದ ನಮ್ಮ ಬೇಡಿಕೆ ಈಡೇ ರುವರೆಗೂ ಪ್ರತಿಭಟನೆಯಿಂದ ನಾವು ಹಿಂದೆ ಸರಿಯುವುದಿಲ್ಲ ಎಂದು ಮುಷ್ಕರ ಸಮಿತಿ ತಿಳಿಸಿದೆ.

ಸಂಪೂರ್ಣ ಹದೆಗೆಟ್ಟ ಶಂಕರಸದನ, ಕೇದಾರ ಮೂಲಕ ಪಳ್ಳಕ್ಕಾನ, ಬಜಕೂಡ್ಲು ಸಂಪರ್ಕ ರಸ್ತೆ

ವಾಹನ ಸವಾರರಿಗೆ ಸಂಚಾರ ಸಂಚಕಾರ, ದುರಸ್ತಿಗೆ ನಾಗರಿಕರ ಆಗ್ರಹ

ಪೆರ್ಲ: ಎಣ್ಮಕಜೆ ಗ್ರಾ.ಪಂ. ವ್ಯಾಪ್ತಿಯ ಶಂಕರಸದನ, ಕೇದಾರ ಮೂಲಕ ಪಳ್ಳಕ್ಕಾನ, ಬಜಕೂಡ್ಲು ಸಂಚರಿಸುವ ರಸ್ತೆಯು ಸಂಪೂರ್ಣ ಹದೆಗೆಟ್ಟಿದ್ದು, ವಾಹನ ಸವಾರರು ಸಂಕಷ್ಟ ಎದುರಿಸುತ್ತಿದ್ದಾರೆ. ಚೆರ್ಕಳ - ಕಲ್ಲಡ್ಕ ರಾಜ್ಯ ಹೆದ್ದಾರಿಯ ಪೆರ್ಲ ಪೇಟೆಯಿಂದ ಅಂಚೆ ಕಚೇರಿ ಮೂಲಕ ಸಾಗುವ ಪ್ರಸಕ್ತ ರಸ್ತೆ ಅಗಲ ಕಿರಿದಾಗಿರುವುದಲ್ಲದೆ ಒಂದು ಪಾರ್ಶ್ವ ಹೊಂಡದಿಂದ ಕೂಡಿದ್ದು ಅಪಾಯ ಆಹ್ವಾನಿಸುತ್ತಿದೆ. ರಸ್ತೆಯ ಒಂದು ಪಾರ್ಶ್ವದಲ್ಲಿ ಅಂಚೆ ಕಚೇರಿ ಕಟ್ಟಡವಿದ್ದರೆ, ಇನ್ನೊಂದು ಬದಿಯಲ್ಲಿ ವ್ಯಾಪಾರಿ ಸಂಸ್ಥೆ ಕಾರ್ಯಾಚರಿಸುತ್ತಿದ್ದು, ರಸ್ತೆ ಅಗಲಗೊಳಿಸಲು ಸಮಸ್ಯೆಯುಂಟಾಗಿದೆ. ನೂರಾರು ವಾಹನ ಸಂಚರಿಸುವ ರಸ್ತೆ ಶೋಚನೀಯಾವಸ್ಥೆ ಬಗ್ಗೆ ನಾಗರಿಕರು ಧ್ವನಿಯೆತ್ತಿದ್ದಾರೆ.



ಪೆರ್ಲ ಶ್ರೀ ಶಂಕರಸದನ, ಭಾರತೀ ಸದನ, ಪಡ್ರೆ ಚಂದು ಯಕ್ಷಗಾನ ನಾಟ್ಯ ತರಬೇತಿ ಕೇಂದ್ರ, ಕೇದಾರ ಸೇರಿದಂತೆ ವಿವಿಧ ಕೇಂದ್ರಗಳಿಗೆ ತೆರಳಲು ಇದೇ ಹಾದಿ ಬಳಸಬೇಕಾಗಿದೆ. ಎರಡು ಸಮುದಾಯ ಭವನಗಳಲ್ಲಿ ವಿವಾಹಾದಿ ಸಮಾರಂಭಗಳಿದ್ದಲ್ಲಿ ನೂರಾರು ವಾಹನಗಳು ಈ ಹಾದಿಯಾಗಿ ಸಂಚರಿಸುತ್ತಿವೆ. ಸಾರ್ವಜನಿಕ ಹಿಂದು ಸ್ಮಶಾನಕ್ಕೂ ಇದೇ ಹಾದಿಯಾಗಿ ಸಂಚರಿಸಬೇಕು.

ಈಗಾಗಲೇ ಪೆರ್ಲ ಶ್ರೀ ಶಂಕರಸದನ ಸಮಿತಿ ಪದಾಧಿಕಾರಿಗಳು ಮಂಜೇಶ್ವರ ಶಾಸಕ, ಎಣ್ಮಕಜೆ ಗ್ರಾ.ಪಂ. ಅಧ್ಯಕ್ಷೆಗೆ ಮನವಿ ಸಲ್ಲಿಸಿ ರಸ್ತೆಯ ಶಿಥಿಲಾವಸ್ಥೆ ಪರಿಹರಿಸುವಂತೆ ಒತ್ತಾಯಿಸಿದ್ದಾರೆ.

ರಸ್ತೆ ಅಭಿವೃದ್ಧಿಗೊಳಿಸಿ

ಬಜಕೂಡ್ಲು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಅಮೆಕ್ಕಳ, ಪಳ್ಳಕ್ಕಾನ ಪ್ರದೇಶಕ್ಕೆ ತೆರಳಲೂ ಇದೇ ರಸ್ತೆ ಬಳಸಬೇಕಾಗುತ್ತಿದೆ. ಅಂಚೆ ಕಚೇರಿಯಲ್ಲಿನ ಏರು ರಸ್ತೆಯಲ್ಲಿನ ಶಿಥಿಲಾವಸ್ಥೆಯಿಂದ ಅಲ್ಪ ಎಚ್ಚರ ತಪ್ಪಿದರೂ ವಾಹನ ಹೊಂಡದಲ್ಲಿ ಸಿಲುಕಿಕೊಳ್ಳುವ ಅಪಾಯವಿದೆ. ಏಕಕಾಲಕ್ಕೆ ವಿರುದ್ಧ ದಿಕ್ಕಿನಿಂದ ಆಗಮಿಸುವ ಎರಡು ವಾಹನಗಳಿಗೆ ಸಂಚರಿಸಲಾ ಗದ ಸ್ಥಿತಿಯಿದೆ. ಮುಖ್ಯ ರಸ್ತೆಯಿಂದ ಸುಮಾರು 50 ಮೀ.ವರೆಗೆ ಇಲ್ಲಿನ ರಸ್ತೆ ಇಕ್ಕಟ್ಟಾಗಿದ್ದು, ಎರಡು ವಾಹನಗಳಿಗೆ ಸಂಚರಿಸುವ ರೀತಿಯಲ್ಲಿ ಅಗಲಗೊಳಿಸಿ ಅಭಿವೃದ್ಧಿಪಡಿಸುವಂತೆ ನಾಗರಿಕರು ಆಗ್ರಹಿಸಿದ್ದಾರೆ.

ಮನವಿ ಸಲ್ಲಿಸಲಾಗಿದೆ

ಅಂಚೆ ಕಚೇರಿ ಸನಿಹದಿಂದ ಹಾದು ಹೋಗುವ ರಸ್ತೆ ಒಂದು ಪಾರ್ಶ್ವದಲ್ಲಿ ಹೊಂಡದಿಂದ ಕೂಡಿದ್ದು, ವಾಹನ ಚಾಲಕರ ಪಾಲಿಗೆ ಸಮಸ್ಯೆ ಎದುರಾಗುತ್ತಿದೆ. ಎಣ್ಮಕಜೆ ಗ್ರಾ.ಪಂ.ಹಾಗೂ ಶಾಸಕರಿಗೆ ಈಗಾಗಲೇ ಮನವಿ ನೀಡಲಾಗಿದ್ದು, ತಕ್ಷಣ ಈ ಬಗ್ಗೆ ಗಮನಹರಿಸಿ ರಸ್ತೆ ಅಗಲಗೊಳಿಸಿ ಸಂಭಾವ್ಯ ಅಪಾಯ ದೂರ ಮಾಡುವಂತೆ ಮನವಿ ಮೂಲಕ ಕೇಳಿಕೊಳ್ಳಲಾಗಿದೆ.

- **ಕೆ. ಶಂಕರನಾರಾಯಣ ಭಟ್, ಅಧ್ಯಕ್ಷರು, ಶ್ರೀ ಶಂಕ ರಸದನ ಸೇವಾ ಸಮಿತಿ, ಪೆರ್ಲ**

ಮಳೆಗಾಲದಲ್ಲಿ ಪ್ರಾಕೃತಿಕ ವಿಕೋಪ ತಡೆಗೆ ಸಂಬಂಧಿಸಿ ಸಭೆ | ಬೈಂದೂರು ಶಾಸಕ ಗಂಟಿಹೊಳೆ ಸೂಚನೆ

ಮಾನವೀಯ ಅಂಶಗಳನ್ನು ಗಮನದಲ್ಲಿಟ್ಟು ಕರ್ತವ್ಯ ನಿರ್ವಹಿಸಿ



ಕುಂದಾಪುರ: ಬೈಂದೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ಪ್ರಾಕೃತಿಕ ವಿಕೋಪದಿಂದ ಉಂಟಾಗಬಹುದಾದ ಸಂಭಾವ್ಯ ಅಪಾಯಗಳನ್ನು ತಡೆಯುವ ನಿಟ್ಟಿನಲ್ಲಿ ಹಾಗೂ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಗ್ರಾಮ ಆಡಳಿತ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ಬೈಂದೂರು ಕ್ಷೇತ್ರದ ಶಾಸಕ ಗುರುರಾಜ್ ಗಂಟಿಹೊಳೆ ಅಧ್ಯಕ್ಷತೆಯಲ್ಲಿ ಕುಂದಾಪುರ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಿತು.

ಪ್ರಕೃತಿಯ ಮುಂದೆ ಯಾವ ವ್ಯವಸ್ಥೆಯು ದೊಡ್ಡದಲ್ಲ, ಆದರೆ ಕೆಲವೊಂದು ಬಾರಿ ಅಧಿಕಾರಿಗಳು ಮಳೆಗಾಲದ ಅಪಾಯಗಳನ್ನು ಅರಿತು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳದೆ ಇರುವ ಸಂದರ್ಭಗಳಲ್ಲಿ ಸಾರ್ವಜನಿಕರು ಪರದಾಡುವಂತಾಗುತ್ತದೆ. ಹಾಗಾಗಿ ಇಂತಹ ಮಳೆಗಾಲದ ಅನಿಶ್ಚಿತತೆಯ ಸಮಯದಲ್ಲಿ ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸುವುದರ ಜೊತೆಗೆ ಕಾನೂನಿನ ವ್ಯಾಪ್ತಿಯೊಳಗೆ ಮಾನವೀಯತೆಯನ್ನು ಹೆಚ್ಚು ಪ್ರದರ್ಶಿಸಿ ಕೆಲಸ ಮಾಡುವಂತೆ ಶಾಸಕ ಗುರುರಾಜ್ ಗಂಟಿಹೊಳೆ ಸೂಚನೆ ನೀಡಿದರು.

ಆಡಳಿತಾಧಿಕಾರಿಗಳ ನಿರಾಸಕ್ತಿ

ಪ್ರಸ್ತುತ ಗ್ರಾಮ ಪಂಚಾಯತ್ ಆಡಳಿತ ಮಂಡಳಿ ಇಲ್ಲದೇ ಅಧ್ಯಕ್ಷರ ಜವಾಬ್ದಾರಿಗಳು ಅನ್ಯ ಇಲಾಖೆಗಳ ಅಧಿಕಾರಿಗಳಿಗೆ ವರ್ಗಾವಣೆ ಆಗಿದ್ದರೂ ಬಹುತೇಕ ಆಡಳಿತಾಧಿಕಾರಿಗಳು ಗ್ರಾಮ ಪಂಚಾಯತ್ ಆಡಳಿತದ ಬಗ್ಗೆ ಸಂಪೂರ್ಣ ನಿರಾಸಕ್ತಿ ಹೊಂದಿದ್ದಾರೆ. ಅಧಿಕಾರಿಗಳ ಇಂತಹ ಧೋರಣೆ ಮಳೆಗಾಲದ ಸಮಯವೂ ಸೇರಿದಂತೆ ಇನ್ನಿತರ ಕೆಲಸ ಕಾರ್ಯಗಳಿಗೂ ಸಾರ್ವಜನಿಕರಿಗೆ ಸಮಸ್ಯೆಯನ್ನು ಉಂಟು ಮಾಡುತ್ತದೆ. ಈ ಬಗ್ಗೆ ಆತಂಕ ವ್ಯಕ್ತಪಡಿಸಿದ ಶಾಸಕರು ಗ್ರಾಮ ಆಡಳಿತದ ಮೇಲುಸ್ತುವಾರಿ ವಹಿಸಿಕೊಂಡಿರುವ ತಾಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಒಳಗೊಂಡಂತೆ ಇಡೀ ಜಿಲ್ಲಾಡಳಿತ ಈ ವಿಚಾರದ ಬಗ್ಗೆ ಗಂಭೀರವಾದ ಪುನರ್ ವಿಮರ್ಶೆ ಮಾಡಬೇಕೆಂದರು . ಆರೋಗ್ಯ ಮತ್ತು ಶಿಕ್ಷಣ ಇಲಾಖೆಯ ಹೆಚ್ಚಿನ ಅಧಿಕಾರಿಗಳನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಿಸಿರುವ ಔಚಿತ್ಯದ ಬಗ್ಗೆಯೂ ಶಾಸಕರು ಸಭೆಯಲ್ಲಿ ಪ್ರಸ್ತಾಪಿಸಿದರು.

ಸಮನ್ವತೆ ಕೊರತೆಗೆ ಶಾಸಕರು ಗರಂ

ನಾಡ ಗ್ರಾಮದಲ್ಲಿ ಕಿಂಡಿ ಅಣೆಕಟ್ಟುವಿನ ಹಲಗೆ ತೆಗೆದ ವಿಚಾರವಾಗಿ ಸಣ್ಣ ನೀರಾವರಿ ಇಲಾಖೆ ಅಧಿಕಾರಿಯು ಗ್ರಾಮ ಪಂಚಾಯತ್‌ನಿಂದ ಪತ್ರ ಬಂದಿಲ್ಲ ಎಂದು ಹೇಳಿದಾಗ, ಕೆಂಡಾ ಮಂಡಲರಾದ ಶಾಸಕರು ಪ್ರಸ್ತುತ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇನ್ನೂ ಕಡಿಮೆ ಆಗಿಲ್ಲ, ಇಂತಹ ಪರಿಸ್ಥಿತಿಯನ್ನು ಬಹಳ ನಾಜೂಕಾಗಿ ನಿಭಾಯಿಸಿಕೊಂಡು ಹೋಗುವುದು ಇಲಾಖೆಗಳ ಜವಾಬ್ದಾರಿ. ಅಂತಹುದರಲ್ಲಿ ಗ್ರಾಮ ಪಂಚಾಯತ್‌ನಿಂದ ಪತ್ರ ಬಂದಿಲ್ಲ ಎಂಬ ಕಾರಣ ನೀಡಿ ಸರಿಯಾದ ಸಮನ್ವಯ ಇಲ್ಲದೇ ಕಿಂಡಿ ಅಣೆಕಟ್ಟುಗಳ ಅಸಮರ್ಪಕ ಹಾಗೂ ಸಮಯೋಚಿತವಲ್ಲದ ನಿರ್ವಹಣೆಗಳಿಂದಾಗಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟು ಮಾಡಿರುವುದನ್ನು ಸಹಿಸಲು ಸಾಧ್ಯವಿಲ್ಲವೆಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಇಂತಹ ಸನ್ನಿವೇಶಗಳು ಇತರೆ ಗ್ರಾಮದಲ್ಲಿ ಸಂಭವಿಸಿದ್ದರೂ ಸಂಪೂರ್ಣ ಮಳೆ ಬರುವವರೆಗೆ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಉಂಟಾಗದಂತೆ ಅಗತ್ಯ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕುಂದಾಪುರ ತಾಲೂಕು ತಹಶೀಲ್ದಾರ್ ಪ್ರದೀಪ್ ಕುರುಡೇಕರ್, ಬೈಂದೂರು ತಹಶೀಲ್ದಾರ್ ಡಿ. ಜಿ. ಮಹತ್, ಕುಂದಾಪುರ ತಾಲೂಕು ಪಂಚಾಯತ್ ಇಒ ಮಹೇಶ್, ಬೈಂದೂರು ತಾಲೂಕು ಪಂಚಾಯತ್ ಇಒ ರಾಮದಾಸ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ರಾಷ್ಟ್ರೀಯ ಪುರಸ್ಕಾರ: ಸಿಬ್ಬಂದಿ, ಅಧಿಕಾರಿಗಳಿಗೆ ಅಭಿನಂದನೆ

ದೀನ ದಯಾಳ್ ಪಂಚಾಯತ್ ಸತತ ವಿಕಾಸ ರಾಷ್ಟ್ರೀಯ ಪುರಸ್ಕಾರ ಪಡೆದ ಉಡುಪಿ ಜಿಲ್ಲೆಯ 5 ಪಂಚಾಯತ್‌ಗಳಾದ ಬೈಂದೂರು ಕ್ಷೇತ್ರದ ಹಕ್ಲಾಡಿ ಹಾಗೂ ವಂಡ್ಸೆ ಪಂಚಾಯತ್ ಮತ್ತು ಜಿಲ್ಲೆಯ ಉಳಿದ ಗ್ರಾಮ ಪಂಚಾಯತ್‌ಗಳಾದ ಸಾಣೂರು, ಮಡಾಮಕ್ಕಿ, ಮುದ್ರಾಡಿಯ ಅಮೋಘ ಸಾಧನೆಯನ್ನು ಪ್ರಶಂಸಿಸಿದ ಶಾಸಕರು, ಇದಕ್ಕಾಗಿ ಶ್ರಮಿಸಿ ಜಿಲ್ಲೆಯ ಕೀರ್ತಿ ಹೆಚ್ಚಿಸಲು ಶ್ರಮಿಸಿದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಯನ್ನು ಸಲ್ಲಿಸಿದರು.

ಸುತ್ತಮುತ್ತ

ಬಿಜೆಪಿ ಉಡುಪಿ ಜಿಲ್ಲಾ ಮಹಿಳಾ ಮೋರ್ಚಾ ಪದಾಧಿಕಾರಿಗಳ ನಿಯುಕ್ತಿ

ಉಡುಪಿ: ಬಿಜೆಪಿ ಉಡುಪಿ ಜಿಲ್ಲಾ ಮಹಿಳಾ ಮೋರ್ಚಾದ ನೂತನ ಪದಾಧಿಕಾರಿಗಳನ್ನು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ಅನುಮೋದನೆ ಮೇರೆಗೆ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಸಂಧ್ಯಾ ರಮೇಶ್ ಅವರು ನಿಯುಕ್ತಿಗೊಳಿಸಿ ಪಟ್ಟಿ ಬಿಡುಗಡೆಗೊಳಿಸಿದ್ದಾರೆ. ಉಪಾಧ್ಯಕ್ಷರುಗಳಾಗಿ ಸುಮ ಯು. ಶೆಟ್ಟಿ ಮಾಲಿನಿ ಶೆಟ್ಟಿ ಶೋಭಾ ಜಿ. ಪುತ್ರನ್, ಪವಿತ್ರ ಆರ್. ಶೆಟ್ಟಿ ಸುಜಲ ಸತೀಶ್ ಸುವರ್ಣ, ಪ್ರಧಾನ ಕಾರ್ಯದರ್ಶಿಗಳಾಗಿ ಉಷಾ ಜಯಪ್ರಕಾಶ್ ಶೆಟ್ಟಿ ಲಕ್ಷ್ಮೀ ಮಂಜುನಾಥ್ ಸಾಲ್ಯಾನ್, ಕಾರ್ಯದರ್ಶಿಗಳಾಗಿ ನಿರ್ಮಲಾ ಶೆಟ್ಟಿ ವಿದ್ಯಾಶಾಮ್ ಸುಂದರ್, ಸುಗಂಧಿ ನಾಯ್ಕ್, ಎಂ.ಜ್ಯೋತಿ ರಮೇಶ್, ತಾರಾ ಸತೀಶ್ ಪೂಜಾರಿ, ಕೋಶಾಧಿಕಾರಿಗಳಾಗಿ ನಾಗವೇಣಿ ಗಾಣಿಗ, ಕಾರ್ಯಕಾರಿಣಿ ಸದಸ್ಯರಾಗಿ ನೀರಜಾ ಯು. ಶೆಟ್ಟಿ ಮಾಲಿನಿ ಶೆಟ್ಟಿ ಸುನೀತಾ ನಾಯ್ಕ್, ನಿರುಪಮಾ ಎಸ್. ಹೆಗ್ಡೆ ಸುಲತಾ ಎಸ್. ಹೆಗ್ಡೆ ಶಶಿಕಲಾ ಪೂಜಾರಿ, ಸುವರ್ಣ, ರೂಪಶ್ರೀ, ಸುಮನಾ ಪೂಜಾರಿ, ಬೇಬಿ ರಮೇಶ್, ಪದ್ಮಾವತಿ ನಾಯರಿ, ಶಾಂತಾ ಆರ್. ಪೂಜಾರಿ, ಕವಿತಾ ಪೂಜಾರಿ, ನಿರ್ಮಲಾ, ಸರೋಜ ಸುಂದರ ದೇವಾಡಿಗ, ಮುಕ್ತ ಶೆಣೈ, ಸೀಮಾ ನಾಗರಾಜ್ ಗಾಣಿಗ ಅವರನ್ನು ನಿಯುಕ್ತಿಗೊಳಿಸಲಾಗಿದೆ ಎಂದು ಸಂಧ್ಯಾ ರಮೇಶ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.6: ಪಂಚದುರ್ಗಾ ಹೋಮ, ವಿವಿಧ ಧಾರ್ಮಿಕ ಅನುಷ್ಠಾನ

ಶಿರ್ವ: ಶ್ರೀಕ್ಷೇತ್ರ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ದೇವಳದಲ್ಲಿ ಪುರುಷೋತ್ತಮ ಮಾಸದ ಪ್ರಯುಕ್ತ ಜೂ.6ರಂದು ಬೆಳಿಗ್ಗೆ 6ರಿಂದ ಶ್ರೀ ಪಂಚದುರ್ಗಾ ಹೋಮ ಸಹಿತ ವಿವಿಧ ಧಾರ್ಮಿಕ ಅನುಷ್ಠಾನಗಳು ಜರುಗಲಿವೆ. ಗಣಹೋಮ, ಶ್ರೀದೇವಿಗೆ ಪಂಚಾಮೃತಾಭಿಷೇಕ,ಸಿಯಾಳ ಅಭಿಷೇಕ, ಅಲಂಕಾರ, ಮಧ್ಯಾಹ್ನ ಮಹಾ ನೈವೇದ್ಯ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಸಂಜೆ 6.00ರಿಂದ ಭಜನಾ ಕಾರ್ಯಕ್ರಮ, ರಾತ್ರಿ ಶ್ರೀದೇವೀ ಸನ್ನಿಧಿಯಲ್ಲಿ ರಂಗಪೂಜೆ, ನೆರವೇರಲಿರುವುದು ಎಂದು ಶ್ರೀಕ್ಷೇತ್ರದ ಆಡಳಿತ ಮಂಡಳಿಯ ಪ್ರಕಟನೆ ತಿಳಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ಉಡುಪಿ: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಡಾ.ಬಿ.ಆರ್ ಅಂಬೇಡ್ಕರ್, ಇಂದಿರಾ ಗಾಂಧಿ ಹಾಗೂ ನಾರಾಯಣಗುರು ವಸತಿ ಶಾಲೆಗಳಲ್ಲಿ 7, 8, 9ನೇ ತರಗತಿಯಲ್ಲಿ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಿದ್ದು ಅಗತ್ಯ ದಾಖಲೆಗಳೊಂದಿಗೆ ಜೂ.10 ರೊಳಗೆ ವಸತಿ ಶಾಲೆಗಳ ಕಚೇರಿಗೆ ಸಲ್ಲಿಸಬಹುದಾಗಿದೆ. ಉಡುಪಿ ಜಿಲ್ಲೆಯ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂ.ಸಂ. 8277894199, 8970298710 ಅನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಕರಾವಳಿ ಮಹಿಳಾ ಕಥಾ ಸ್ಪರ್ಧೆ

ಕುಂದಾಪುರ: ಕುಂದಾಪುರದ 'ಸುರಗಂಗಾ ಕಲಾ–ಸಾಹಿತ್ಯ ಮಹಿಳಾ ವೇದಿಕೆ' ಕರಾವಳಿಯ ನಾಲ್ಕು ಜಿಲ್ಲೆ(ಉಡುಪಿ–ದಕ್ಷಿಣ ಕನ್ನಡ, ಉತ್ತರ ಕನ್ನಡ–ಕಾಸರಗೋಡು)ಗಳ ಮಹಿಳೆಯರಿಗಾಗಿ ಕಥಾ ಸ್ಪರ್ಧೆಯನ್ನು ಏರ್ಪಡಿಸಿದೆ. ಕಥೆಯು 1000 ಶಬ್ದಗಳ ಮಿತಿಯಲ್ಲಿರಬೇಕು, ವೇದಿಕೆಯ ಸದಸ್ಯರನ್ನು ಬಿಟ್ಟು ಹೇಳಿದ ಜಿಲ್ಲೆಗಳಲ್ಲಿ ಹುಟ್ಟಿ ಪ್ರಸ್ತುತ ಬೇರೆಡೆ ನೆಲೆಯಾದವರೂ ಬೇರೆಡೆ ಹುಟ್ಟಿ ಈಗ ಈ ಜಿಲ್ಲೆಗಳಲ್ಲಿ ನೆಲೆಯಾದವರೂ ಭಾಗವಹಿಸಬಹುದು. ವಸ್ತುವಿನ ಆಯ್ಕೆ ಕಥಾಗಾರರದ್ದು, ಆದರೆ ಅದರಲ್ಲಿ ಮಹಿಳಾಪರ ಚಿಂತನೆಯಿರಬೇಕು. ಕಥೆ ಸ್ವತಂತ್ರವಾಗಿರಬೇಕು. ಇದುವರೆಗೆ ಬೇರೆಲ್ಲಿಯೂ ಪ್ರಕಟವಾಗಿರಬಾರದು. ಪ್ರಥಮ ಬಹುಮಾನ ರೂ. 4000, ದ್ವಿತೀಯ ರೂ.3000 ಮತ್ತುತೃತೀಯ ರೂ.2000 ನೀಡಲಾಗುವುದು. ಕಥೆಯನ್ನು ಟೈಪ್ ಮಾಡಿ ನಿಮ್ಮ ಆಧಾರ ಕಾರ್ಡ್ ಪ್ರತಿಯೊಂದಿಗೆಜುಲೈ 7 ರೊಳಗೆ ಇ–ಮೇಲ್ suragangaksmv@gmail.com ಗೆ ಮಾಡಬೇಕು. ಅನಂತರ ಬಂದ ಕಥೆಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವೃತ್ತಿ ಮೇಳದ ಯುವ ಕಲಾವಿದರಿಗೆ ಯಕ್ಷಗಾನ ಮಾರ್ಗದರ್ಶಿ ಶಿಬಿರ



ಉಡುಪಿ: ಯಕ್ಷಗಾನ ಕಲಾರಂಗ ವೃತ್ತಿ ಮೇಳದ ಯುವ ಕಲಾವಿದರಿಗೆ ಆಯೋಜಿಸಿದ ಯಕ್ಷಗಾನ ಮಾರ್ಗದರ್ಶಿ ಶಿಬಿರದ ಉದ್ಘಾಟನೆ ಯಕ್ಷಗಾನ ಕಲಾರಂಗದ ಐವೈಸಿ ಸಭಾಭವನದಲ್ಲಿ ಜರುಗಿತು.

ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಹಿರಿಯ ಯಕ್ಷಗಾನ ವಿದ್ವಾಂಸ ಡಾ.ಎಂ. ಪ್ರಭಾಕರ ಜೋಶಿ ಮಾತನಾಡಿ, ಯಕ್ಷಗಾನದಂತಹ ಶೈಲೀಕೃತ ಕಲೆ ಪರಂಪರೆಯೊಂದಿಗೆ ಔಚಿತ್ಯವರಿತು ಹೊಸತನ್ನು ಸೇರಿಸಿಕೊಳ್ಳುತ್ತಾ ಬೆಳೆಯಬೇಕಾಗಿದೆ. ಪ್ರಜ್ಞಾವಂತ ಕಲಾವಿದ ಇದನ್ನು ಮಾಡಲು ಸಾಧ್ಯ. ಇದಕ್ಕೆ ಇಂತಹ ಶಿಬಿರಗಳು ಪೂರಕವಾಗುತ್ತವೆ. ಯಕ್ಷಗಾನ ಕಲಾರಂಗ ಕಲಾವಿದರ ಕ್ಷೇಮ ಚಿಂತನೆಯೊಂದಿಗೆ ಕಲೆಯನ್ನು ಬೆಳೆಸುವ ಕೆಲಸ ಮಾಡುತ್ತಿರುವುದು ಅಭಿನಂದನಾರ್ಹ ಎಂದು ಹೇಳಿದರು.

ಅಭ್ಯಾಗತರಾಗಿ ಭಾಗವಹಿಸಿದ್ದ ಬಹುಶ್ರುತ ವಿದ್ವಾಂಸ ದಿವಾಕರ ಹೆಗಡೆ ಕೆರೆಹೊಂಡ ಯಕ್ಷಗಾನದಲ್ಲಿ ಹಲವು ಸಾಧ್ಯತೆಗಳಿವೆ, ಅಧ್ಯಯನಶೀಲ ಕಲಾವಿದರು ಪ್ರತಿಭೆಯಿಂದ ಹೊಸ ಆಯಾಮ ನಿರ್ಮಿಸಲು ಸಾಧ್ಯವಿದೆ ಎಂದರು.

ವೇದಿಕೆಯಲ್ಲಿ ಹಿರಿಯ ಕಲಾವಿದರಾದ ಕೊಂಡದಕುಳಿ ರಾಮಚಂದ್ರ ಹೆಗಡೆ, ಎ.ಪಿ. ಪಾಠಕ್, ಸಂಸ್ಥೆಯ ಸದಸ್ಯರಾದ ಪ್ರೊ. ಕೆ. ಸದಾಶಿವ ರಾವ್, ಪ್ರೊ. ಎಂ. ಎಲ್. ಸಾಮಗ ಇದ್ದರು. ಸಂಸ್ಥೆಯ ಅಧ್ಯಕ್ಷರೂ, ಶಿಬಿರದ ಪ್ರಾಯೋಜಕರೂ ಆದ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ಶಿಬಿರದ ನಿರ್ದೇಶಕ ಪವನ್ ಕಿರಣ್ಕೆರೆ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ಸಂಯೋಜಿಸಿದರು. ಜತೆ ಕಾರ್ಯದರ್ಶಿ ವಿದ್ಯಾಪ್ರಸಾದ್ ವಂದಿಸಿದರು. ನಾರಾಯಣ ಎಂ. ಹೆಗಡೆ ಕಾರ್ಯಕ್ರಮ ನಿರೂಪಿಸಿದರು.

ಉದ್ಯೋಗ ಮೇಳ ಯುವ ಸಮುದಾಯಗಳ ಜೀವನಾಡಿ: ಕುಂದರ್



ಕೋಟ: ಪ್ರಸ್ತುತ ದಿನಗಳಲ್ಲಿ ಯುವ ಸಮುದಾಯ ಉದ್ಯೋಗ ಅರಸಿ ಸಿಟಿಗಳತ್ತ ಮುಖ ಮಾಡುವ ವ್ಯವಸ್ಥೆಯನ್ನು ನಾವುಗಳು ಕಾಣುತ್ತಿದ್ದೇವೆ. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗಗಳಲ್ಲಿ ವಿದ್ಯಾಭ್ಯಾಸ ಮುಗಿಸಿದ ಯುವ ಆಸಕ್ತರಿಗೆ ಚೈತನ್ಯ ತುಂಬುವ ಕಾರ್ಯ ಕೋಟ ಪಡುಕರೆ ಡಿಗ್ರಿ ಕಾಲೇಜಿನಲ್ಲಿ ಹಮ್ಮಿಕೊಂಡಿರುವುದು ಅತ್ಯಂತ ಶ್ಲಾಘನೀಯ ಕಾರ್ಯ ಎಂದು ಕೋಟದ ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ. ಕುಂದರ್ ಅಭಿಪ್ರಾಯಪಟ್ಟರು.

ಕೋಟ ಪಡುಕರೆ ಲಕ್ಷ್ಮೀ ಸೋಮಬಂಗೇರ ಸರಕಾರಿ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ಮಣೂರು ಗೀತಾನಂದ ಫೌಂಡೇಶನ್ ಸಹಯೋಗದೊಂದಿಗೆ ಉದ್ಯೋಗ ಮೇಳವನ್ನು ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲ ಡಾ.ರಾಜೇಂದ್ರ ಎಸ್ ನಾಯಕ ಮಾತನಾಡಿ, ಯುವ ಜನತೆಗೆ ಶೈಕ್ಷಣಿಕ ವ್ಯವಸ್ಥೆಯ ನಡುವೆ ಉದ್ಯೋಗ ಎಂಬುವುದು ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ. ಸುತ್ತಮುತ್ತಲಿನ ವಿದ್ಯಾರ್ಥಿಗಳಿಗೆ ಅದರಲ್ಲೂ ಕರಾವಳಿ ಭಾಗದ ಯುವ ಸಮುದಾಯಕ್ಕೆ ಉದ್ಯೋಗ ಮೇಳ ಸುವರ್ಣಾವಕಾಶ ಕಲ್ಪಿಸುವ ಮೇಳವಾಗಿ ರೂಪುಗೊಂಡು ಭದ್ರ ಭವಿಷ್ಯ ನಿರ್ಮಾಣಕ್ಕೆ ಸಹಕಾರಿ ಎಂದರು.

ಕಾರ್ಯಕ್ರಮದಲ್ಲಿ 15 ಕ್ಕೂ ಅಧಿಕ ರಾಜ್ಯದ ಪ್ರಸಿದ್ಧ ಕಂಪನಿಗಳು ಭಾಗಿಯಾಗಿದವು. ಸಭೆಯಲ್ಲಿ ಐಕ್ಯೂಎಸಿ ವಿಭಾಗದ ಸುಬ್ರಹ್ಮಣ್ಯ ಎ., ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಡಾ. ರಮೇಶ್ ಆಚಾರ್,ವಿದ್ಯಾರ್ಥಿ ಪ್ಲೇಸ್ ಮೆಂಟ್ ಸೇಲ್ ಸಂಯೋಜಕಿ ಪ್ರೀತಿಕಾ ಇದ್ದರು. ಉಪನ್ಯಾಸಕ ರಾಮಚಂದ್ರ ಭಟ್ ಸ್ವಾಗತಿಸಿ ನಿರೂಪಿಸಿ ವಂದಿಸಿದರು.

ಕೋಟ: ನಿವೃತ್ತಿ ಹೊಂದಿದ ಪ್ರಭಾರ ಕಂದಾಯ ನಿರೀಕ್ಷಕರಿಗೆ ಬೀಳ್ಕೊಡುಗೆ



ಕೋಟ: ಸಾಲಿಗ್ರಾಮ ಪಟ್ಟಣ ಪಂಚಾಯತ್ ನಲ್ಲಿ ಸತತ 35 ವರ್ಷಗಳ ಸುದೀರ್ಘ ಅವಧಿಯಲ್ಲಿ ಸೇವೆ ಸಲ್ಲಿಸಿದ ಪ್ರಭಾರ ಕಂದಾಯ ನಿರೀಕ್ಷಕ ಕಾರ್ಕಡ ಚಂದ್ರಶೇಖರ ಸೋಮಯಾಜಿ ಇವರ ಸೇವಾ ಬಿಳ್ಕೊಡುಗೆ ಕಾರ್ಯಕ್ರಮ ಮಂಗಳವಾರ ಸಾಲಿಗ್ರಾಮ ಪಟ್ಟಣಪಂಚಾಯತ್ ಸಭಾಂಗಣದಲ್ಲಿ ಜರಗಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಮಾಜಿ ಮುಖ್ಯಾಧಿಕಾರಿ ಗೋಪಾಲಕೃಷ್ಣ ಶೆಟ್ಟಿ, ಪಟ್ಟಣ ಪಂಚಾಯತ್‌ನಲ್ಲಿ ಸೋಮಯಾಜಿ ಅವರ ಕಾರ್ಯನಿರ್ವಹಣೆ ಎಲ್ಲರಿಗೂ ಮಾದರಿಯಾಗಿದೆ. ವೃತ್ತಿ ಕಾಯಕದ ಜತೆ ಸಾಮಾಜಿಕ ಕಾರ್ಯ ಅತ್ಯಂತ ಶ್ರೇಷ್ಠತೆ ಪಡೆದುಕೊಂಡಿದೆ ಎಂದರು.

ಇದೇ ವೇಳೆ ಪಟ್ಟಣಪಂಚಾಯತ್ ವತಿಯಿಂದ ಸೇವಾ ನಿವೃತ್ತಿಯ ಚಂದ್ರಶೇಖರ ಸೋಮಯಾಜಿ ದಂಪತಿಗಳಿಗೆ ಗೌರವಾಭಿನಂದನ 'ಯನ್ನು ಸಲ್ಲಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಅಜೇಯ್ ಭಂಡಾರ್ಕರ್ ವಹಿಸಿ, ಸೋಮಯಾಜಿಯವರಿಗೆ ವಿಶೇಷ ಕೃತಜ್ಞತೆ ಸಲ್ಲಿಸಿ ಬಿಳ್ಕೊಡುಗೆ ನೀಡಿದರು. ಮುಖ್ಯ ಅತಿಥಿಗಳಾಗಿ ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷೆ ಸುಕನ್ಯಾ ಜೆ. ಶೆಟ್ಟಿ ಜಿಲ್ಲಾ ಪೌರ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಹೇಶ್ ಶೆಟ್ಟಿ ಪಟ್ಟಣ ಪಂಚಾಯತ್ ಹಿರಿಯ ಗ್ರಾಮಸ್ಥ ಶ್ರೀನಿವಾಸ್ ಉಪಾಧ್ಯಾ, ಚಂದ್ರಶೇಖರ ಸೋಮಯಾಜಿ ಪತ್ನಿ ಪವಿತ್ರ ಸೋಮಯಾಜಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಪಟ್ಟಣ ಪಂಚಾಯತ್ ಸಿಬ್ಬಂದಿ ಸುಮಿತ ಸ್ವಾಗತಿಸಿದರು.

ಉಪ್ಪುಂದ ಕೆಪಿಎಸ್: ಮುಖಮಂಟಪ, ಬಾಯ್ಲರ್ ಕೊಠಡಿಗಳ ಉದ್ಘಾಟನೆ



ಬೈಂದೂರು: ಉಪ್ಪುಂದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಪ್ರಾರಂಭೋತ್ಸವದಲ್ಲಿ ನೂತನ ನಿರ್ಮಾಣದ ಶಾಲಾ ಮುಖಮಂಟಪ, ಗೇಟ್, ನೂತನ ಕೊಠಡಿಗಳನ್ನು ಹಾಗೂ ಅಕ್ಷರ ದಾಸೋಹದ ಬಾಯ್ಲರ್ ಸೇರಿದಂತೆ ಹಲವು ಕಾಮಗಾರಿಗಳನ್ನು ಉದ್ಘಾಟಿಸಲಾಯಿತು.

ನಂತರ ಪೋಷಕರ ಶಿಕ್ಷಕರ ಸಭೆಯಲ್ಲಿ ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಮಾತನಾಡಿದರು. ನಿವೃತ್ತ ಯೋಧ ಹಕ್ಲಮನೆ ದಿ. ನಾರಾಯಣ ಮಯ್ಯ ಮತ್ತು ಗಿರಿಜಾಬಾಯಿ ದಂಪತಿ ಸ್ಮರಣಾರ್ಥ ಅವರ ಪುತ್ರ ಸುಬ್ರಹ್ಮಣ್ಯ ಮಯ್ಯ ಕೊಡುಗೆಯಾಗಿ ನೀಡಿದ ಸುಮಾರು ನಾಲ್ಕೂವರೆ ಲಕ್ಷ ರೂ.ವೆಚ್ಚದಲ್ಲಿ ಶಾಲಾ ಮುಖಮಂಟಪ, ವರದಾ ಮತ್ತು ಬಿ. ನಾಗಪ್ಪಯ್ಯ ಪ್ರಭುಗಳ ಸ್ಮರಣಾರ್ಥ ಪ್ರಭು ಸಹೋದರರು ನೀಡಿದ ಒಂದು ಲಕ್ಷ ರೂ. ವೆಚ್ಚದ ಗೇಟ್ ಉದ್ಘಾಟಿಸಲಾಯಿತು. ಕೆರ್ಗಾಲು ಗ್ರಾಮದ ಮಟ್ನಕಟ್ಟೆ ಧರ್ಮಶ್ರೀ ಫೌಂಡೇಶನ್ ವತಿಯಿಂದ ಶಾಲೆಗೆ 40 ಕುರ್ಚಿಗಳನ್ನು ಕೊಡುಗೆಯಾಗಿ ನೀಡಿದರು. ದಾನಿಗಳಾದ ವಾಣಿ ಮಯ್ಯ, ಬಿ. ಅಣ್ಣಪ್ಪಯ್ಯ ಪ್ರಭು, ಕ್ಷೇತ್ರ ಸಮನ್ವಯಾಧಿಕಾರಿ ಪ್ರದೀಪ್ ಕುಮಾರ್ ಶೆಟ್ಟಿ, ಧರ್ಮಶ್ರೀ ಫೌಂಡೇಶನ್‌ನ ವಿಶ್ವನಾಥ ಹೊಸ್ಕೋಟೆ, ಎಸ್‌ಡಿಎಂಸಿ ಅಧ್ಯಕ್ಷ ಭಾಸ್ಕರ ಖಾರ್ವಿ, ಮಾಜಿ ಅಧ್ಯಕ್ಷ ಉದಯಶಂಕರ್ ಪಡಿಯಾರ್, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಯು. ರಾಜಾರಾಮ ಭಟ್, ಇಂಜಿನಿಯರ್ ಚಂದ್ರ ಖಾರ್ವಿ, ಸಮೂಹ ಸಂಪನ್ಮೂಲ ವ್ಯಕ್ತಿ ರಾಮನಾಥ ಮೇಸ್ತ ಉಪಸ್ಥಿತರಿದ್ದರು. ಶಾಲಾ ಮುಖ್ಯ ಶಿಕ್ಷಕ ಸುಧಾಕರ ದೇವಾಡಿಗ ಪ್ರಾಸ್ತಾವಿಸಿದರು. ಶಿಕ್ಷಕರಾದ ಭಾರತಿ ಮಂಜುನಾಥ ಸ್ವಾಗತಿಸಿ, ಅರಂಧತಿ ವಂದಿಸಿದರು. ನಾಗರಾಜ್ ಕಾರ್ಯಕ್ರಮ ನಿರೂಪಿಸಿದರು.

ಪಡುಕುಡೂರು ಶಾಲೆಯಲ್ಲಿ ನಿವೃತ್ತ ಮುಖ್ಯ ಶಿಕ್ಷಕಿಗೆ ಬೀಳ್ಕೊಡುಗೆ



ಹೆಬ್ರಿ: ಪಡುಕುಡೂರು ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆಗೆ ಸೇರಿ 31 ವರ್ಷಗಳ ಕಾಲ ಶಿರ್ಲಾಲು ಸೂಡಿ, ಅಜೆಕಾರು ಕಿರೆಂಚಿಬೈಲು ಶಾಲೆಯಲ್ಲಿ ಸೇವೆ ಸಲ್ಲಿಸಿ ಇದೇ ಮೇ ತಿಂಗಳಿನಲ್ಲಿ ಭಡ್ತಿ ಹೊಂದಿ ಮುಖ್ಯ ಶಿಕ್ಷಕಿಯಾಗಿ ಪಡುಕುಡೂರು ಶಾಲೆ ವರ್ಗಾವಣೆಯಾಗಿ ಆಗಮಿಸಿರುವ ಊರ್ಮಿಳಾ ಕುಮಾರಿ ನಿವೃತ್ತಿ ಹೊಂದಿರುವ ಹಿನ್ನೆಲೆಯಲ್ಲಿ ಸೋಮವಾರ ಶಾಲೆಯ ವತಿಯಿಂದ ಗೌರವಿಸಿ ಬೀಳ್ಕೊಡಲಾಯಿತು.

ಎಲ್‌ಕೆಜಿ ಯುಕೆಜಿ ತರಗತಿಗಳು ಶುಭಾರಂಭ, ಶಿಕ್ಷಕರು, ಪೋಷಕರು, ಎಸ್‌ಡಿಎಂಸಿ ಸದಸ್ಯರ ಮಹಾಸಭೆ, ಸಂವಾದ ಹಾಗೂ ಶಾಲಾಭಿವೃದ್ಧಿಗಾಗಿ ಚರ್ಚೆ ನಡೆಯಿತು. ಸರ್ಕಾರ ಹಾಗೂ ದಾನಿಗಳು ನೀಡಿದ ಸಮವಸ್ತ್ರ ಪಠ್ಯಪುಸ್ತಕ, ಬಣ್ಣದ ಸಮವಸ್ತ್ರ ನೋಟ್ ಪುಸ್ತಕ ವಿತರಣೆ ನಡೆಯಿತು. ದಾನಿ ವಸಂತ ಶೆಟ್ಟಿ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ರವಿ ಶೆಟ್ಟಿ, ಶತಮಾನೋತ್ಸವ ಸಮಿತಿ ಅಧ್ಯಕ್ಷ ಭಾರವಿ ಶೆಟ್ಟಿ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪ್ರಸನ್ನ ಶೆಟ್ಟಿ ಮುಖ್ಯ ಶಿಕ್ಷಕ ಹರೀಶ ಪೂಜಾರಿ, ಶಾಲಾಭಿವೃದ್ಧಿ ಸಮಿತಿ ಉಪಾಧ್ಯಕ್ಷ ಹರೀಶ ಪೂಜಾರಿ, ಚಿಕ್ಕಮಾರಬೆಟ್ಟು ಚಂದ್ರಶೇಖರ ಶೆಟ್ಟಿ, ಧರ್ಮಸ್ಥಳ ಯೋಜನೆ ಒಕ್ಕೂಟದ ಅಧ್ಯಕ್ಷ ಹೃದಯ ಕುಮಾರ್ ಶೆಟ್ಟಿ ಸೇವಾ ಪ್ರತಿನಿಧಿ ಚಿತ್ರಾ, ಅಂಗನವಾಡಿ ಶಿಕ್ಷಕಿ ಸವಿತಾ ಶೆಟ್ಟಿ ಬಾಲ ವಿಕಾಸ ಸಮಿತಿ ಸರಿತಾ, ಪತ್ರಕರ್ತ ಸುಕುಮಾರ್ ಆಚಾರ್ ಖಿಜಾನೆ ಮತ್ತಿತರರು ಇದ್ದರು.

ಮುಖ್ಯ ಶಿಕ್ಷಕ ಹರೀಶ ಪೂಜಾರಿ ಅಭಿನಂದನಾ ಭಾಷಣ ಮಾಡಿದರು. ಶ್ರುತಿ ಸ್ವಾಗತಿಸಿ ಶ್ರುತಿ ಮೇಲ್ಮನೆ ಸನ್ಮಾನ ಪತ್ರ ವಾಚಿಸಿ ಶಾಲಿನಿ ಸುಕುಮಾರ್ ವಂದಿಸಿದರು. ಶಿಕ್ಷಕಿ ಶೋಭಾ ನಾಯ್ಕ್ ನಿರೂಪಿಸಿದರು.

ತಂಬಾಕು, ಇತರ ಮಾದಕ ವಸ್ತು ಸೇವನೆ ದುಶ್ಚಟದಿಂದ ದೂರವಿರಿ



ಕುಂದಾಪುರ: ಬದುಕನ್ನು ದುರ್ಬಲಗೊಳಿಸಿ, ಜೀವನದ ನೆಮ್ಮದಿಯನ್ನು ಕಸಿದುಕೊಳ್ಳುವ ತಂಬಾಕು ಹಾಗೂ ಇತರ ಮಾದಕ ವಸ್ತುಗಳ ಸೇವನೆಯ ದುಶ್ಚಟ ಹಾಗೂ ಮಾರಾಟದಿಂದ ವಿದ್ಯಾರ್ಥಿ ಸಮುದಾಯ ದೂರವಿರಬೇಕು ಎಂದು ಗಂಗೊಳ್ಳಿ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಚಂದ್ರ ಕೆ. ಹೇಳಿದರು.

ನಾಡಾ ವಂ.ಫಾ.ರೋಬರ್ಟ್ ಝುಡ್ ಎಂ ಡಿಸೋಜಾ ಸ್ಮಾರಕ ಐಟಿಐ ಸಂಸ್ಥೆಯಲ್ಲಿ ಸೋಮವಾರ ನಡೆದ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶ್ವ ತಂಬಾಕು ದಿನಾಚರಣೆಯ ಮೂಲಕ ತಂಬಾಕು ವ್ಯಸನಿಗಳಲ್ಲಿ ಜಾಗ್ರತೆ ಮೂಡಿಸುವ ಕೆಲಸ ಪೊಲೀಸ್ ಇಲಾಖೆಯಿಂದ ನಿರಂತರವಾಗಿ ನಡೆಯುತ್ತಿದೆ. ಮಾದಕ ವಸ್ತುಗಳ ಮಾರಾಟ ಹಾಗೂ ಸೇವನೆಯ ಕುರಿತು ಮಾಹಿತಿಗಳು ಇದ್ದಾಗ ನೇರವಾಗಿ ಪೊಲೀಸರು ಅಥವಾ ಠಾಣೆಯನ್ನು ಸಂಪರ್ಕಿಸಿ ಮಾಹಿತಿ ನೀಡುವ ಕೆಲಸ ವಿದ್ಯಾರ್ಥಿಗಳಿಂದ ಆಗಬೇಕು. ಇದರಿಂದಾಗಿ ಎಷ್ಟೋ ಕುಟುಂಬದ ನೆಮ್ಮದಿಯನ್ನು ಕಾಪಾಡಲು ಸಾಧ್ಯ ಎಂದರು.

ಸಂಸ್ಥೆಯ ಕಿರಿಯ ತರಬೇತು ಅಧಿಕಾರಿಗಳಾದ ಮೋಹನ್‌ಚಂದ್ರ ಪಿ. ನಾಯಕ್ ಹಾಗೂ ರಾಘವೇಂದ್ರ ಆಚಾರ್ ಕಟ್‌ಬೇಲ್ತೂರು ಇದ್ದರು. ಕಚೇರಿ ಸಿಬ್ಬಂದಿ ಕಿಶೋರ ಪೂಜಾರಿ ಸಸಿಹಿತ್ಲು ಬೈಂದೂರು ನಿರ್ವಹಿಸಿದರು.

ಮೊದಲನೇ ಪುಟದಿಂದ

ಕಾಯಕಲ್ಪದ ಭಾಗ್ಯ!

ಒಂದು ಕಾಲದಲ್ಲಿ ಪುರಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಗಿರಿಗುಡ್ಡೆ ಕೆರೆ ಸಹಿತ ಸರಕಾರಿ ಬಾವಿಗಳ ನೀರನ್ನು ಬಳಕೆ ಮಾಡಲಾಗುತಿತ್ತು. ಕ್ರಮೇಣ ಬಂಟ್ವಾಳದಲ್ಲಿ ಕುಡಿಯುವ ನೀರಿನ ಯೋಜನೆಗಳು ಅನುಷ್ಠಾನಗೊಂಡ ಬಳಿಕ ಗಿರಿಗುಡ್ಡೆ ಕೆರೆ ಸಹಿತ ಇಲ್ಲಿರುವ ಕೆರೆಗಳು,ಸರಕಾರಿ ಬಾವಿಗಳೆಲ್ಲವು ಆಡಳಿತ ವ್ಯವಸ್ಥೆ ಗಮನಹರಿಸದೆ ನಿರುಪಯುಕ್ತಕ್ಕೊಳಗಾಗಿವೆ. ಪುರಸಭೆಯ ಕಡತದಲ್ಲಿ ಬಾವಿಗಳು, ಕೆರೆಗಳಿವೆ ಆದರೂ ಅವೆಲ್ಲವು ಎಲ್ಲಿದೆ ಎಂಬುದನ್ನು ದುರ್ಬಿನ್ ಹಾಕಿದರೂ ಪತ್ತೆಹಚ್ಚಬೇಕಾಗಬಹುದು. ಬಂಟ್ವಾಳ ನಗರ ಯೋಜನಾ ಪ್ರಾಧಿಕಾರ ಗಿರಿಗುಡ್ಡೆ ಕೆರೆಯನ್ನು ಅಭಿವೃದ್ಧಿ ಪಡಿಸಲು ಯೋಜನೆ ರೂಪಿಸಿರುವುದು ಸಂತಸದ ವಿಚಾರವಾಗಿದೆ.

ಉಪ್ಪಿನಕುದ್ರು ಯಕ್ಷಗಾನ ಗೊಂಬೆಯಾಟ ರಂಗಭೂಮಿಗೆ ವಿದ್ಯಾರ್ಥಿಗಳ ಭೇಟಿ | ಭಾಸ್ಕರ ಕೊಗ್ಗ ಕಾಮತ್ ಅಭಿಪ್ರಾಯ

ಕರ್ನಾಟಕ ಜನಪದ ಪರಂಪರೆಯಲ್ಲಿ ಯಕ್ಷಗಾನ ಗೊಂಬೆಯಾಟಕ್ಕೆ ವಿಶಿಷ್ಟ ಸ್ಥಾನ

ಕುಂದಾಪುರ: ಕರ್ನಾಟಕದ ಜನಪದ ಕಲಾ ಪರಂಪರೆಯಲ್ಲಿ ಯಕ್ಷಗಾನ ಗೊಂಬೆಯಾಟವು ವಿಶಿಷ್ಟ ಹಾಗೂ ಅಪರೂಪದ ಸ್ಥಾನವನ್ನು ಪಡೆದಿದೆ ಎಂದು ಉಪ್ಪಿನಕುದ್ರು ಶ್ರೀ ದೇವಣ್ಣ ಪದ್ಮನಾಭ ಕಾಮತ್ ಮೆಮೋರಿಯಲ್ ಯಕ್ಷಗಾನ ಗೊಂಬೆಯಾಟ ಟ್ರಸ್ಟ್ ಅಧ್ಯಕ್ಷ ಭಾಸ್ಕರ ಕೊಗ್ಗ ಕಾಮತ್ ಹೇಳಿದರು.

ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಯಕ್ಷಗಾನ ಸಂಘ ಹಾಗೂ ಕನ್ನಡ ವಿಭಾಗದ ಆಶ್ರಯದಲ್ಲಿ ಉಪ್ಪಿನಕುದ್ರು ಯಕ್ಷಗಾನ ಗೊಂಬೆಯಾಟ ರಂಗಭೂಮಿಗೆ ವಿದ್ಯಾರ್ಥಿಗಳು ಬುಧವಾರ ಅಧ್ಯಯನ ಭೇಟಿ ನಡೆಸಿದ ಸಂದರ್ಭ ಅವರು ಗೊಂಬೆಯಾಟ ಮಾಹಿತಿ ನೀಡಿದರು.

12 ಶತಮಾನದಿಂದ ಆರಂಭ

ಸುಮಾರು 12ನೇ ಶತಮಾನದಿಂದಲೇ ಈ ಕಲೆ ಆರಂಭವಾಗಿದೆ ಎಂದು ಹೇಳಲಾಗುತ್ತದೆ. ಈ ಕಲೆ ಕೇವಲ ಮನರಂಜನೆಯ ಸಾಧನವಲ್ಲ, ನಮ್ಮ ಸಂಸ್ಕೃತಿ, ಪರಂಪರೆ ಹಾಗೂ ಜೀವನ ಸತ್ವವನ್ನು ಪ್ರತಿಬಿಂಬಿಸುವ ಅದ್ಭುತ ಕಲಾರೂಪವಾಗಿದೆ. ಕಳೆದ 350 ವರ್ಷಗಳಿಂದಲೂ ತೀರ ಅಳಿವಿನಂಚಿನಲ್ಲಿರುವ ಗೊಂಬೆಯಾಟ ಕಲೆಯನ್ನು ನಿರಂತರವಾಗಿ ಆರು ತಲೆಮಾರುಗಳಿಂದ ಮುನ್ನಡೆಸಿಕೊಂಡು ಬರಲಾಗುತ್ತಿದೆ. ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಳಿ ಹಾಗೂ ಉಪ್ಪಿನಕುದ್ರು ಶ್ರೀ ದೇವಣ್ಣ ಪದ್ಮನಾಭ ಕಾಮತ್ ಮೆಮೋರಿಯಲ್ ಯಕ್ಷಗಾನ ಗೊಂಬೆಯಾಟ ಟ್ರಸ್ಟ್ ಮೂಲಕ ಈ ಸತ್ಕಾರ್ಯದಲ್ಲಿ ತೊಡಗಿದ್ದೇವೆ ಎಂದು ಹೇಳಿದರು.



ಅಭಿನಯ ಪ್ರಾತ್ಯಕ್ಷಿಕೆ

ಯಕ್ಷಗಾನದ ಹೆಜ್ಜೆಗಳು, ನೃತ್ಯಭಂಗಿಗಳು ಹಾಗೂ ಅಭಿನಯವನ್ನು ಸೂತ್ರಗಳ ಆಧಾರದಲ್ಲಿ ಗೊಂಬೆಗಳ ಮೂಲಕ ಹೇಗೆ ಪ್ರದರ್ಶಿಸಬಹುದು ಎಂಬುದನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿದರು. ಉಪ್ಪಿನಕುದ್ರು ಗೊಂಬೆಮನೆಯಲ್ಲಿ ಮಾಹಿತಿ ಪಡೆದ ವಿದ್ಯಾರ್ಥಿಗಳು ನಂತರ ಮ್ಯೂಸಿಯಂಗೆ ಭೇಟಿ ನೀಡಿ ಅಲ್ಲಿ ಇರುವ ಹಳೆಯ ಕಾಲದ ಪಾರಂಪರಿಕ ಯಕ್ಷಗಾನ ಗೊಂಬೆಗಳು, ದೇಶ–ವಿದೇಶಗಳಲ್ಲಿ ಪಡೆದ ಪ್ರಶಸ್ತಿ ಹಾಗೂ ಸನ್ಮಾನಗಳನ್ನು ವೀಕ್ಷಿಸಿದರು.

ಪಾರಂಪರಿಕ ಮರದ ಗೊಂಬೆಗಳ ಜೊತೆಗೆ ಗಿಳಿ, ಮರಕುಟಿಗ, ನವಿಲು ಮೊದಲಾದ ಹೊಸ ವಿನ್ಯಾಸದ ಗೊಂಬೆಗಳನ್ನು ತಯಾರಿಸುತ್ತಿರುವ ಬಗ್ಗೆ ಹಾಗೂ ಗೊಂಬೆಗಳಿಗೆ ಬಳಸುವ ಬೇಗಡೆಗೆ ವಿಶೇಷ ಹೊಳಪು, ದೀರ್ಘಕಾಲಿಕ ಮೆರುಗು ಬರಲು ಜೇನು ಮೇಣ ಹಾಗೂ ಹಲಸಿನ ಮೇಣ ಮಿಶ್ರಣ ಮಾಡಿ ಬಳಸಲಾಗುತ್ತದೆ ಎಂದು ಹೇಳಿದ ಅವರು, ಸಾಮಾನ್ಯವಾಗಿ ಮರದಿಂದ ನಿರ್ಮಿಸಲ್ಪಟ್ಟ ಈ ಗೊಂಬೆಗಳು ಕಲಾವಿದರ ಕೈಚಳಕದಿಂದ ಜೀವಂತ ಪಾತ್ರಗಳಂತೆ ಕಾಣುತ್ತದೆ ಎಂದು ವಿವರಿಸಿದರು.

ಗೀತಾಂಜಲಿ ಭಾಸ್ಕರ್ ಕಾಮತ್, ಕಾಲೇಜಿನ ಉಪ ಪ್ರಾಂಶುಪಾಲ ಡಾ.ಚೇತನ ಶೆಟ್ಟಿ ಕೋವಾಡಿ, ಯಕ್ಷಗಾನ ಸಂಘದ ಸಂಯೋಜಕರಾದ ರಶ್ಮಿತಾ ಶೆಟ್ಟಿ ಮತ್ತು ಮಹೇಶ ಪೂಜಾರಿ ಇದ್ದರು.